ಒಂದು ಪ್ರಸ್ತಾವನೆ

‘ಅವಿಚ್ಛಿನ್ನ ಸೂರ್ಯನೇ ನನ್ನ ಕೃತಿಯ ಕೇಂದ್ರ’ ಎಂದು ಒಮ್ಮೆ ಘೋಷಿಸಿದ ಆಲ್ಬರ್ಟ್‌ಕಾಮೂ ತಾನೊಬ್ಬ ಶುದ್ಧಾಂಗವಾಗಿ ‘ಲೇಖನ ಕಲಾವಿದ ಮಾತ್ರ’ ಎಂದು ಪದೇ ಪದೇ ಹೇಳುತ್ತ ಬಂದ; ಆದರೂ, ಆತ ತನ್ನ ಶೈಕ್ಷಣಿಕ ವ್ಯಾಸಂಗದ ಉದ್ದಕ್ಕೂ ತತ್ವಜ್ಞಾನದ ವಿದ್ಯಾರ್ಥಿಯಾಗಿದ್ದಂತೆಯೇ, ನಲವತ್ತೇಳು ವರ್ಷಗಳ ಬಾಳಿನ ಉದ್ದ-ಅಗಲಕ್ಕೂ ಅದರ ಅನ್ವೇಷಕ ಹಾಗೂ ಸಂಶೋಧಕನಾಗಿದ್ದ.

ಅವನ ಸಮಕಾಲೀನರಾಗಲಿ, ಹಿಂದಿನವರಾಗಲಿ ಎಂದೂ ತಮ್ಮ ಬರವಣಿಗೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಆಗದೇ ಹೋಗಿದ್ದ ಹೊಚ್ಚ ಹೊಸ ಆಯಾಮಗಳನ್ನು ಕಾಮೂ ತನ್ನ ರಚನಾತ್ಮಕ ಬರಹಗಳ ಮೂಲಕ ಸಾಧ್ಯಗೊಳಿಸಿಕೊಂಡ ಧೀಮಂತ. ಈ ಶತಮಾನದ ಬುದ್ಧಿಜೀವಿಗಳ ಮೇಲೆ ಆತನ ಕೃತಿಗಳು ಮಾಡಿದ ಪ್ರಭಾವ ದಿಗ್ಭ್ರಮೆಗೊಳಿಸುವಷ್ಟು ಅನನ್ಯವಾಗಿದೆ. ಆದರೂ, ‘ನಾನು ಮಾಡಬೇಕಾಗಿರುವ ಕಾರ್ಯ ಇನ್ನೂ ಆರಂಭವಾಗಿಲ್ಲ!’ ಎಂದು ಕೊಳ್ಳುತ್ತಿರುವಾಗಲೇ ಆತ ಕಾರ್‌ನ ಅಪಘಾತ ಒಂದರಲ್ಲಿ ಸತ್ತ. ಪರಿಣಾಮವಾಗಿ, ಅವನ ಸಾವು ಅವನು ತನ್ನ ಕೃತಿಗಳ ರಚನೆಯ ಮೂಲಕ ಅನ್ವೇಷಿಸಿದ್ದ ಹೊಸ ರೂಪಗಳಿಗೆ ಒಂದು ವಿಚಿತ್ರ ರೀತಿಯ ಜಿಗಿತವನ್ನು ಹಾಗೂ ಪೂರ್ಣತೆಯನ್ನು ತಂದು ಕೊಟ್ಟಿತು.

‘ನನ್ನಲ್ಲಿನ ಅಂತಃಸತ್ವವೇನೆಂದು ನಾನು ಹುಡುಕುತ್ತಾ ಹೊರಟಾ ನನಗೆ ಆನಂದದಲ್ಲಿ ನಂಬಿಕೆ ಇದ್ದುದನ್ನು ಕಂಡುಕೊಂಡೆ.’ -- ಎನ್ನುತ್ತಿ ಕಾಮೂ, ತನ್ನ ಸಮಕಾಲೀನ ಹಾಗೂ ಪೂರ್ವಕಾಲೀನ ಪ... ಜೀವಿಗಳ ಸ್ವಭಾವಕ್ಕೆ ತದ್ವಿರುದ್ಧವಾಗಿ ಆತ ಜೀವನಾದ್ಯಂತ ... ಅನ್ವೇಷಕನಾಗಿದ್ದುದು ಮಾತ್ರವಲ್ಲದೆ, ಸದಾ ‘ತೃಪ್ತಿ’ ಯಿಂದ ಇರುತ್ತಿದ್ದ ಅಥವಾ ಇರಲು ಪ್ರಯತ್ನಿಸುತ್ತಿದ್ದ.

ಅವನ ಪಾಲಿಗೆ ‘ಸೂರ್ಯ’ ಮತ್ತು ‘ಆನಂದ’ ಪಾರಸ್ಪರಿಕ ಸಂಕೇತಗಳಾಗಿದ್ದುವು : ‘ಸೂರ್ಯನ ಬೆಳಕು, ಹಗಲಿನ ಪ್ರಭೆ ಹಾಗೂ ನಾನು ಬೆಳೆದ ವಾತಾವರಣದ ಸ್ವಚ್ಛಂದವಾದ ಸ್ವಾತಂತ್ರ್ಯಗಳನ್ನು ನನ್ನಿಂದ ಎಂದೂ ಮರೆಯಲು ಆಗಲೇ ಇಲ್ಲ!’-ಎಂದು ನೊಬೆಲ್ ಪಾರಿತೋಷಕ ಸ್ವೀಕರಿಸುತ್ತಾ ಹೇಳಿದ ಕಾಮೂನ ಜೀವನ ಬೇರೆ ಏನನ್ನೇ ಹೇಳಲಿ ಅಥವಾ ಬಿಡಲಿ, ಭೀಕರ ವ್ಯತಿರಿಕ್ತತೆಗಳ ವಿರುದ್ಧ ಸೆಣಸಾಡಿ ಗೆದ್ದ ಗೆಲುವ ನಂತೂ ಸಾರುತ್ತದೆ.

ಅಸ್ಥಿತ್ವವಾದಿ ತಾನಲ್ಲವೆಂದು ಮೇಲಿಂದ ಮೇಲೆ ಹೇಳುತ್ತಲೇ ಬಂದ ಆತ ತಾನು ಹುಟ್ಟಿದ, ಬೆಳೆದ ಹಾಗೂ ಬರೆದ ಸುತ್ತಾಲ ಜಗತ್ತನ್ನು ನಿರ್ಲಿಪ್ತ ವಿವೇಕದ ಪ್ರಯೋಗಶಾಲೆಯಾಗಿ ಮಾರ್ಪಡಿಸಿಯೇಬಿಟ್ಟ!

‘ಮನುಷ್ಯನನ್ನು ಇತಿಹಾಸದ ಚೌಕಟ್ಟಿಗೆ ಎರಕಹೊಯ್ದು ಬಿಟ್ಟ ಹೆಗಲ್‌ವಾದದ ಮೂಲಭೂತ ತಪ್ಪುಗಳನ್ನೆ ಅಸ್ತಿತ್ವವಾದವೂ ಎತ್ತಿ ಹಿಡಿ ಯಿತು. ಆದರೆ, ಅದು ತನ್ನ ವಾದದ ಪರಿಣಾಮಗಳನ್ನು ಅದರ ಬೆನ್ನನ್ನು ಹತ್ತಿ ಪರೀಕ್ಷಿಸುವ ಗೊಡವೆಗೇ ಹೋಗಲಿಲ್ಲ—ಇದರಿಂದಾಗಿ, ಅಸ್ತಿತ್ವವಾದ ವ್ಯಕ್ತಿಯ ಎಲ್ಲ ಮುಕ್ತಿಗಳನ್ನೂ ತಿರಸ್ಕರಿಸಿಬಿಟ್ಟಿದೆ’—ಎನ್ನುವುದೇ ಅವನು ಅಸ್ತಿತ್ವವಾದಿಯಾಗದಿರಲು ಕಾರಣವಾದಂತೆಯೇ, ಅವನ ತಾತ್ವಿಕ ಚಿಂತ ನೆಯ ಅನ್ವೇಷಣೆಯೂ ಆಯಿತು. ಕಾರ್ಯ-ಕಾರಣ ಸಂಬಂಧಗಳು ಹಾಗೂ ಸ್ವಂತದ ಅನುಭವಗಳು ಆತನ ಪಾಲಿಗೆ ‘ಪ್ರೇಮದ ದೈವ’ ಇಲ್ಲವೇ ಇಲ್ಲ ವೆಂದು ಸಾರಿಬಿಟ್ಟುವು ; ಆದರೂ, ಅವನ ಪಾಲಿಗೆ ಬಾಳು ತೀವ್ರತರವಾಗಿ ಬಾಳಲು ಯೋಗ್ಯವಾದುದಾಗಿಯೇ ಉಳಿಯಿತು! ದಟ್ಟದಾರಿದ್ರ್ಯದ ಜೀವನವನ್ನು ಅವನು ಬದ್ಧಿದ್ದರೂ, ಅವನ ಮುಖದ ಮೇಲೆ ಅದರ

ಛಾಯೆಯೇ ಇರಲಿಲ್ಲ! ಮೇಲಿಂದ ಮೇಲೆ ಅವನು ಕ್ಷಯಕ್ಕೆ ತುತ್ತಾಗುತ್ತಿದ್ದನಾದರೂ, ಸಾವು ಅವನ ಎದೆಯ ಬಾಗಿಲನ್ನು ಪದೇ ಪದೇ ತಟ್ಟುತ್ತಲೇ ಇತ್ತಾದರೂ, ಗೆಲ್ಲುತ್ತಲೇ ಸಾಗಿದ್ದ ಸಾವಿನಿಂದಾಗಿ ಬದುಕಿಗೆ ಹೊಸ ಅರ್ಥವನ್ನು ಹಾಗೂ ಮುಕ್ತಿಯನ್ನು ಆತ ತಂದುಕೊಂಡಿದ್ದ!

ಲೌಕಿಕ ಬಾಳ್ವೆಯ ತಾತ್ವಿಕ ಸುಖ ಅಥವಾ ಆನಂದ ಮತ್ತು ಅಸಾಂಗತ್ಯ ಅಥವಾ ವಿಪರ್ಯಾಸ ಅಥವಾ ಅಸಂಬದ್ಧತೆಯ ತೌಲನಿಕ ವಿಮರ್ಶೆಯೇ ಅವನ ಎಲ್ಲ ಕೃತಿಗಳ ಮೂಲಸತ್ವಗಳಾಗಿತ್ತಾಗಿ, ಸೂರ್ಯ ಅವನ ಪಾಲಿಗೆ ಆಧ್ಯಾತ್ಮಿಕ ಸುಖದ ಸಂಕೇತವಾದರೆ, ಚಂದ್ರ ತಾತ್ವಿಕ ಅಸಾಂಗತ್ಯದ ಅಥವಾ ವಿಪರ್ಯಾಸದ ಅಥವಾ ಅಸಂಬದ್ಧತೆಯ ಸಂಕೇತವಾಯಿತು :

'ಜಗತ್ತಿನ ಪಾಲಿಗೆ ಅಂತಿಮವಾದ ಅರ್ಥ ಇಲ್ಲವೇ ಇಲ್ಲವೆಂದು ನಾನು ನಂಬುತ್ತಲೇ ಸಾಗುತ್ತಿರುವಾತ. ಆದರೂ, ಜಗತ್ತಿನಲ್ಲಿ ಯಾವುದೋ ಒಂದಲ್ಲ ಒಂದಕ್ಕೆ ಅರ್ಥವಿದೆ ಎಂದೂ, ಅದು ಮನುಷ್ಯನೆಂದೂ ನಾನು ಬಲ್ಲೆ. ಏಕೆಂದರೆ, ಬದುಕಿಗೆ ಅರ್ಥ ಬೇಕೇಬೇಕೆನ್ನುವ ಪ್ರಾಣಿ ಈ ಮಾನವ ಜೀವಿ ಮಾತ್ರ. ಜಗತ್ತಿನ ಪಾಲಿಗೆ ಮನುಷ್ಯನ ಇರುವಿಕೆಯ ಸತ್ಯವಂತೂ ಇದ್ದೇ ಇದೆ ; ಹಾಗೂ, ನಮ್ಮ ಕರ್ತವ್ಯ ಈ ಮಾನವ ಪ್ರಾಣಿಯ ಅಸ್ತಿತ್ವಕ್ಕೆ ವಿಧಿಯ ವಿರುದ್ಧ ಹೋರಾಡುತ್ತಾ ನ್ಯಾಯ ದೊರಕಿಸಿಕೊಡುವುದೇ ಆಗಿದೆ : ವಿಧಿಗೆ ನ್ಯಾಯ ಅನ್ಯಾಯದ ಪರಿವೆಯಿಲ್ಲ; ಆದರೆ ಮನುಷ್ಯ ಮಾತ್ರ ಇದ್ದಾನೆ. ಆದ್ದರಿಂದ, ನಾವು ಜೀವಂತವಾಗಿದ್ದೇವೆ–ಎನ್ನುವ ಭಾವನೆಯನ್ನು ಕಾಪಾಡಿಕೊಳ್ಳುವುದೇ ಆದರೆ, ಈ ಸಲುವಾಗಿ ಮಾನವ ಪ್ರಾಣಿಯನ್ನು ಕಾಪಾಡಿಯೇ ತೀರಬೇಕಾಗುತ್ತದೆ.'

ವಿಧಿಯೇ ಒಂದು ಪೂರ್ಣಾರ್ಥದಲ್ಲಿ ಅಸಾಂಗತ್ಯವೆಂದು ತಿಳಿಯುತ್ತಾ ಹೊರಟ ಕಾಮೂನ ಮೇಲೆ ರಷ್ಯಾದ ಮಹಾನ್ ಲೇಖಕ ದಾಸ್ತೋವಸ್ಕಿಯ ಪ್ರಭಾವ ಅಗಾಧವಾಗಿಯೇ ಇತ್ತಾದರೂ, ಅವನ "ದೇವರು ಇಲ್ಲವಾಗಿರುವುದೇ ಆದರೆ ಏನನ್ನು ಬೇಕಾದರೂ ಮಾಡಬಹುದು."–ಎನ್ನುವ ಮಾತು ತೀರ ಅರ್ಥಹೀನವಾಗಿ ಕಾಣಿಸಿತಲ್ಲದೆ, "ದೇವರು ಇಲ್ಲದಿರುವುದೇನೋ ನಿಜ–ಆದರೂ, ಏನನ್ನು ಬೇಕಾದರೂ ಮಾಡಲಾಗುವುದಿಲ್ಲ"—ಎನಿಸಿತು.

ಅಲ್ಲದೆ, ಕಾಮೂ ಆಂತರಿಕವಾಗಿ ಆರಾಮವಾಗಿದ್ದ ವಿಹಾರ ಹಾಗೂ ವಿಕಾಸಗಳ ಜಗತ್ತೆಂದರೆ ಗ್ರೀಕರ ಪುರಾಣ ಜಗತ್ತು :

'ಗ್ರೀಕರಂತೆ ನಾನು ಪ್ರಕೃತಿಯಲ್ಲಿ ಅಚಲವಾದ ನಂಬಿಕೆಯನ್ನು ಹೊತ್ತವನು. ಗ್ರೀಕರಿಗೆ ಸೌಂದರ್ಯವೇ ಎಲ್ಲದರ ಮೂಲ; ಯೂರೋಪಿಯನ್ನರಿಗೆ ಸೌಂದರ್ಯ ಎಂದೂ ತಲುಪಲಸಾಧ್ಯವಾದ ಅಂತ್ಯ. ಈ ಅರ್ಥದಲ್ಲಿ ನಾನು ಆಧುನಿಕನೇನೂ ಅಲ್ಲ !'

ಎಂದು ಹೇಳುವ ಕಾಮು,

'ಸೃಷ್ಟಿಯ ತಪ್ಪುಗಳನ್ನು ತಿದ್ದುತ್ತಾ ಹೊರಟವನೇ ನಿಜಕ್ಕೂ ಮಾನವನಷ್ಟೇ ಪುರಾತನಿಯಾದ ಧಾರ್ಮಿಕ ಜೀವಿ : ಆದರೆ, ಪುನರ್ ಸೃಷ್ಟಿಯ ಈ ಪ್ರತಿನಿಧಿಯನ್ನು ಕೊಲ್ಲಲು ಎಲ್ಲ ಕಾಲ ಹಾಗೂ ಸ್ಥಳಗಳಲ್ಲೂ ಪ್ರಯತ್ನಗಳಾಗುತ್ತಲೇ ಇವೆ?'

ಎಂದು ಬಲವಾಗಿ ನಂಬಿಯೇ ತನ್ನ ತಾತ್ವಿಕ ಸಿದ್ಧಾಂತಗಳ ಅನ್ವೇಷಣೆಗೆ ತೊಡಗಿದಾತ !

ಇಂತಹ ಹಲವು ನೂರು ಚಿಂತನೆಗಳ ಫಲವಾಗಿ ಹಾಗೂ ಜೀವನದ ವೈಚಾರಿಕ ಸಂಕೀರ್ಣತೆಗೆ ಪ್ರತಿಶೃತಿಯಾಗಿ ಕಾಮೂ 'ಕ್ಯಾಲಿಗುಲ' ನಾಟಕವನ್ನು ಬರೆಯಲು ಹೊರಟ.

*

ತನ್ನ ಸಮಕಾಲೀನರಂತೆ ಅವನೂ ನಾಟಕ ರಚನೆಯ ಮೂಲಕ ಬದುಕಿನ ಅಪರಿಹಾರ್ಯವಾದ ಗಂಭೀರ ಸಮಸ್ಯೆಗಳನ್ನು ಕೆದಕಿ, ಬೆದಕಿ, ಶೋಧಿಸಿ ನೋಡಿಯೇ ತೀರಬೇಕಾಗಿದ್ದುದು ಅವನ ಪಾಲಿಗೆ ತೀರ ಅನಿವಾರ್ಯವಾಗಿದ್ದುದು ಮಾತ್ರವಲ್ಲದೆ, ಗ್ರೀಕರ ದುರಂತ ನಾಟಕಗಳು ಅವನ ಹೆಂಗರುಳಿನ ಮೇಲೆ ಎಬ್ಬಿಸಿದ್ದ ಅಲೆಗಳಿಂದಾಗಿ ಹುಟ್ಟಾಲೇಖಕನಾದ ಅವನ ಮಟ್ಟಿಗೆ ಅಷ್ಟೇ ರುದ್ರರಮಣೀಯವಾಗಿದ್ದುವು. ಈ ಅವಧಿಯಲ್ಲಿ ಕಾಮೂ ಆಂತರಿಕವಾಗಿ ನಿರಾಶಾವಾದಿಯಾಗಿದ್ದುದು ಮಾತ್ರವಲ್ಲದೆ, ಬದುಕಿನ ಅಧೋಮುಖದತ್ತ ಹೆಜ್ಜೆ ಹಾಕುತ್ತಿದ್ದವನೂ ಆಗಿದ್ದ. ಅವನ ಮೂಲ ಉದ್ದೇಶ 'ಕ್ಯಾಲಿಗುಲ'ನಂತಹ 'ರಾಕ್ಷಸೀ ಪ್ರವೃತ್ತಿ'ಯ ಮನೋವಿಶ್ಲೇಷಣೆ ಮಾಡುವುದಕ್ಕೂ ಹೆಚ್ಚಾಗಿ, ಅಸಂಗತ ಅಥವಾ ಅಸಂಬದ್ಧ ತತ್ವದಲ್ಲಿ

ನಂಬಿಕೆ ಹೊತ್ತ ಮಾನವನೊಬ್ಬನ ನಿರಾಶಾವಾದೀ ತಾರ್ಕಿಕ ತೀರ್ಮಾನದ ತುಟ್ಟತುದಿ ತಲುಪುವ ಸೋಲನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಆಗಿತ್ತು. ಆದರಿಂದಲೇ, ತಂಗಿಯನ್ನು ಉತ್ಕಟವಾಗಿ ಪ್ರೀತಿಸಿ, ಮೋಹಿಸಿ, ಕಾಮಿಸುತ್ತಿದ್ದ ಕ್ಯಾಲಿಗುಲನಿಗೆ ಅವಳ ಹಠಾತ್ತಾದ ಸಾವು ಬದುಕಿನ ಅಪರಿಹಾರ್ಯವಾದ ಅಸಾಂಗತ್ಯವನ್ನು ಅವನಿಗೆ ದರ್ಶಿಸುತ್ತದೆ: ಆ 'ಹುಚ್ಚ'ನಾದ ರುದ್ರ ನಾಯಕ 'ಕ್ಯಾಲಿಗುಲ' ನಲ್ಲಿ 'ನೈರ್ಮಾಲ್ಯ' ಹಾಗೂ ಶುದ್ಧ ಪ್ರಾಮಾಣಿಕತೆ ಉಳಿದೇ ಬಿಟ್ಟದ್ದರೂ, ಆತ ಒಂದು ವಿಶೇಷ ಅರ್ಥದಲ್ಲಿ ಈ ನಾಟಕದ 'ನಾಯಕ' ಅಲ್ಲವೇ ಅಲ್ಲ! ಕಾಮೂನ ಆಂತರ್ಯದ 'ಧ್ವನಿ' ಸಮಗ್ರವಾಗಿ ಕ್ಯಾಲಿಗುಲನನ್ನು ದ್ವೇಷಿಸುವ ವ್ಯಕ್ತಿಗಳಲ್ಲಿ, ಅದರಲ್ಲೂ ಚೆರಿಯಾನಲ್ಲಿ ಪ್ರತಿಧ್ವನಿಸುತ್ತದೆ: ವೈಚಾರಿಕ ವಾದ-ಪ್ರತಿವಾದಗಳಿಂದ ಕ್ಯಾಲಿಗುಲನನ್ನು ತಪ್ಪತಸ್ತನೆಂದು ಸಾಧಿಸುವುದು ಸಾಧ್ಯವಾಗುವುದಿಲ್ಲ; ಹಾಗಾಗಿ, ಅವನನ್ನು ಬಹಿಷ್ಕರಿಸುವುದೂ ಅಸಾಧ್ಯ; ಹೇಗೇ ಯೋಚಿಸಲಿ ಅಥವಾ ಬಿಡಲಿ, ಆ ಕ್ಯಾಲಿಗುಲನನ್ನು ಭರಿಸಿಯೇ ತೀರಬೇಕಾದುದು ಮಾತ್ರ ಅನಿವಾರ್ಯವಾದ ಹಾಗೂ ಅಪರಿಹಾರ್ಯವಾದ ಅಸಾಂಗತ್ಯ ಅಥವಾ ಅಸಂಬದ್ಧತೆ.

ಆದ್ದರಿಂದಲೇ 'ಕ್ಯಾಲಿಗುಲ' ಅಸಂಬದ್ಧ ನಾಯಕನಾಗಿರುವಂತೆಯೆ ಅಸ್ತಿತ್ವವಾದಿಯೂ ಆಗಿದ್ದಾನೆ.

ಈ ಶತಮಾನದ ಅತಿ ತೀಕ್ಷ್ಣ ಅಷ್ಟೇ ಸೂಕ್ಷ್ಮ ಹಾಗೂ ಪ್ರಖರವಾದ ಬುದ್ಧಿಜೀವಿ ಕಾಮೂ ಈ ಮಹಾನ್ ನಾಟಕದ ಮೂಲಕ ಕೇವಲ ಇಷ್ಟನ್ನೇ ಹೇಳುತ್ತಾನೆಂದರೆ ಅದು ಅಜ್ಞಾನದ ಪರಮಾವಧಿಯಾಗುತ್ತದೆ:

'ತನ್ನ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಕಮ್ಮಿ ಘೋಷಿಸುವುದೇ ನಿಜವಾದ ಕಲಾಕೃತಿ; ಅಂತಹ ಕೃತಿಯ ಕರ್ತನೇ ನಿಜವಾದ ಮಹಾನ್ ಲೇಖನ ಕಲಾವಿದ ಕೂಡ. ಇಡೀ ಮಾನವ ಜನಾಂಗದ ಹೃದಯ ಮಿಡಿತವನ್ನು ತನ್ನ ಸಮಸ್ತ ಅನುಭವಕ್ಕೆ ತಂದುಕೊಂಡ ಕಲಾವಿದ, ತಾನು ಬದ್ದ ಬಾಳು, ತಾನು ಮಥಿಸಿದ ವಿವೇಚನೆಗಳನ್ನು ತನ್ನ ಕೃತಿಯಲ್ಲಿ, ಅದು ತಾನು ಎರಕ ಹುಯ್ಯಲಿರುವ 'ಕೇವಲ ಕಲಾಕೃತಿ ಮಾತ್ರ'ವೆಂದು ನಂಬಿ ದಕ್ಕಿಸಿಕೊಂಡುದೇ ವಿಶ್ವ ಸಾಹಿತ್ಯದ ಮೇರು ಕೃತಿಯಾಗಲು ಸಾಧ್ಯ. ಅವನ ಸಮಗ್ರ ವ್ಯಕ್ತಿತ್ವದಿಂದ ಕಡೆಸಿಕೊಂಡ ವಜ್ರ, ತನ್ನ ಕಡೆತಗಳಲ್ಲಿ ಕೇವಲ

ಅಂತಃಸತ್ವವನ್ನು ಪ್ರತಿಫಲಿಸಬೇಕೇ ಹೊರತು ಇಡೀ ಬದುಕನ್ನು ಹೇಗಿದೆಯೊ ಹಾಗೆಯೇ ರಾಚಿ ಎಸೆದು ಬಿಡಬಾರದು. ಅಂತಹ ಕೃತಿ ಜೀವನದ ಅವಸ್ಥೆಯಾಗಿರದೆ, ಅದರ ಗರ್ಭದಿಂದ ಮೂಡಿ ಬಂದ ವಿಶೇಷ ಕಾಲ್ಪನಿಕ ಕೊಡುಗೆಯಾಗಿರುತ್ತದೆ; ಅಲ್ಲದೆ, ಅದರ ವೈಶಾಲ್ಯ ಹೊಚ್ಚ ಹೊಸ ದರ್ಶನದತ್ತ ಅಪರೋಕ್ಷವಾಗಿ ಬೆರಳು ಮಾಡಿಯೂ ಮಾಡದಂತೆ ತೋರಿಸುತ್ತಾ ಇರುತ್ತದೆ. ಅಂತಹ ಮಹಾನ್ ಕಲಾಕೃತಿಗಳಿಗೆ ಜನ್ಮಕೊಡುವ ಅತ್ಯದ್ಭುತ ಹಾಗೂ ಅತ್ಯಗಾಧ ಜೀವನದ ಅನುಭವಗಳನ್ನು ಸಾಧ್ಯಗೊಳಿಸಿಕೊಳ್ಳುವುದು ಕೃತಿಯೊಂದರ ರಚನೆಯ ಚಾತುರ್ಯಕ್ಕಿಂತಲೂ ಭಿನ್ನವಾದುದು ಹಾಗೂ ತೀರ ಕಷ್ಟಸಾಧ್ಯವಾದುದು.

'ಮಹಾನ್ ಕೃತಿಯ ಹಿಂಬದಿಯ ಕಲಾವಿದ ಅಂತಹ ಬೃಹತ್ ಹಾಗೂ ಮಹತ್ ಜೀವನವನ್ನು ತನ್ನ ಮನಸ್ಸು ಹಾಗೂ ಹೃದಯಗಳಿಂದ ದಕ್ಕಿಸಿಕೊಂಡು, ತಾನು ವಾಸಿಸುವ ಜಗತ್ತಿನಿಂದ ಮೇಲೇರಿ ತನ್ನ ಕೃತಿಯ ರಚನೆಯಲ್ಲಿ ತಾನೇ ಸ್ವಯಂ ಪ್ರಭುವಾಗಿ ಕಡೆಯಹೊರಟ ಅನನ್ಯ ಸಾಮಾನ್ಯ. ಅವನು ತನ್ನ ಕಾಲದವರೆಗಿನ ಸಾಹಿತ್ಯ ರಚನೆಯನ್ನು ಮೀರಿ ನಿಂತವನೇ ಆಗಿಬಿಟ್ಟರಂತೂ, ಆತ ಸಹಜವಾಗಿಯೇ ಮಹಾನ್ ಯುಗ ಒಂದರ ಮಹಾನ್ ಪ್ರವರ್ತಕನೂ ಆಗಿಬಿಡುತ್ತಾನೆ.

'ಸಮಗ್ರ ಮಾನವ ಸ್ಥಿತಿಯ ವಿರುದ್ಧ ಸಂಪೂರ್ಣವಾಗಿ ಸಿಡಿದೇಳುವುದೇ ನಿಜಕ್ರಾಂತಿಯ ಗರ್ಭಮೂಲ. ಈ ಕ್ರಾಂತಿ ತಳೆಯುವ ವಿವಿಧ ರೂಪಗಳು ಮಾತ್ರವೇ ಕಲೆ ಹಾಗೂ ಧರ್ಮದ ಚಿರವಸ್ತುಗಳು. ಯಾವುದೇ ನಿಜಕ್ರಾಂತಿ ದೇವರವಿರುದ್ಧ ಸಿಡಿದು ಎದ್ದುದೇ ಆಗಿದೆ- ಪ್ರೊಮಥ್ಯುಯಸ್‌ನ ಕಾಲದಿಂದ ಮೊದಲ್ಗೊಂಡು ಇಂದಿನವರೆಗೂ ....ಈ ಅರ್ಥದಲ್ಲೇ ಸುಖದ ಗೆಲುವಿನ ಹಾದಿಯನ್ನು ಮತ್ತೆ ಸಮರ್ಥವಾಗಿ ತುಳಿದ ಕಲಾಕೃತಿ ಸತ್ಯಕ್ಕೂ ಕ್ರಾಂತಿಕಾರಿಯಾದುದೇ ಆಗಿರುತ್ತದೆ.'

—ಇದು ನಿಜವೇ ಆಗಿರುವುದಾದರೆ ಪ್ರೊಮಥ್ಯುಯಸ್‌ನಂತಹವರು ಈ ಯುಗಕ್ಕೆಕೊಡುವ ಕಾಣಿಕೆಯಾದರೂ ಏನು? ಹಾಗೂ ಈ ಆಧುನಿಕನಿಗೆ ಆ ಕಾಣಿಕೆಯ ಅವಶ್ಯಕತೆಯಾದರೂ ಎಷ್ಟಿದೆ ?—ಆದರೆ, ಆಧುನಿಕ ಮಾನವ ಒಂದು ವಿಕ್ಷಿಪ್ತವಾದ ಭ್ರಮಾತ್ಮಕ ಜಗತ್ತಿನಲ್ಲಿದ್ದಾನೆ ; ಆಧುನಿಕ

ಮಾನವನ ಮಾನಸಿಕ ವಿಕಲ್ಪದ ಮೂಲ ಇರುವುದೇ ಕ್ರಿಶ್ಚಿಯನ್ ಧರ್ಮದಲ್ಲಿ : ಏಕೆಂದರೆ ಜಗತ್ತಿನಿಂದ ಮನುಷ್ಯನನ್ನು ದೂರಕ್ಕೆ ಕೊಂಡೊಯ್ದುದೇ ಕ್ರಿಶ್ಚಿಯನ್‌ಧರ್ಮ. ಅದು ಅವನನ್ನು ಅವನ ಮಟ್ಟಿಗೆ ಹಾಗೂ ಅವನ ಇತಿಹಾಸಕ್ಕೆ ಮಾತ್ರ ಸೀಮಿತಗೊಳಿಸಿಬಿಟ್ಟಿತು....ಶರೀರ ತನ್ನಿಂದ ತಾನು ಸಿಡಿದು ಮೇಲೆ ಏಳಲು ಎರಡು ಸಾವಿರ ವರ್ಷಗಳೇ ಆಗಿ ಹೋದುವು ! ನಾವು ಈಗ ಮಾಡಬೇಕಾಗಿರುವುದೆಲ್ಲಾ ನಮ್ಮ ಈ ಆಧುನಿಕ ಮನೋವಿಕಾರವನ್ನು ಮತ್ತೆ ತತ್ವಶಾಸ್ತ್ರ ಹಾಗೂ ಆಧ್ಯಾತ್ಮಿಕತೆ ಗಳತ್ತ ಕೊಂಡೊಯ್ಯುವುದೇ ಆಗಿದೆ. ಇದು ಮಾತ್ರವೇ ನಮ್ಮ ಆಧುನಿಕತೆಯ ಪಿಡುಗಿನಿಂದ ನಮ್ಮನ್ನು ನಾವು ಪುನಃ ಚೇತರಿಸಿಕೊಳ್ಳಲೆಂದೇ ಇರುವ ಹಲವಾರು ಅರ್ಥಸ್ತರಗಳಲ್ಲಿನ ಅನನ್ಯ ಸಾಧನ.

ಸಮಗ್ರ ಚಿಂತನೆಗೆ ಧಾರ್ಮಿಕ ಅಥವಾ ನೈತಿಕತೆಗಳ ವಿರೋಧವನ್ನು ಬಿಟ್ಟರೆ ಬೇರೆ ವಿರೋಧಗಳಿಲ್ಲ. ಈ ಜಗತ್ತಿಗೆ ಯಾವುದೇ ಅರ್ಥವೂ ಇಲ್ಲವೆಂದು ಈ ಧಾರ್ಮಿಕರು ಹಾಗೂ ನೈತಿಕರು ಹೇಳುತ್ತಿರುವುದು ಸರಿ. ಆದರೂ, ಅವರು ಸರಿಯೇ ಸರಿ ಎಂದು ನಾನು ಒಪ್ಪುವವನಲ್ಲ. ಆದ್ದರಿಂದ ದೇವರನ್ನು ಸೃಷ್ಟಿಸುವುದೇ ನಮ್ಮ ಕರ್ತವ್ಯವಾಗಿದೆ. ದೇವರು ಸೃಷ್ಟಿಕರ್ತ ನಲ್ಲ—ಇಷ್ಟೇ ಕ್ರೈಸ್ತ ಧರ್ಮದ ಸಂಪೂರ್ಣ ಇತಿಹಾಸ. ಆದ್ದರಿಂದ, ದೇವರನ್ನು ಸೃಷ್ಟಿಸುವ ಒಂದೇ ಒಂದು ದಾರಿ ಮಾತ್ರ ನಮಗಿದೆ—ಆ ದಾರಿ ನಾವೇ ಆ ದೇವನಾಗಿ ಬಿಡುವುದು ಅಥವಾ ಈ ಆಧುನಿಕ ಮಾನಸಿಕ ವೈಕಲ್ಯಗಳನ್ನು ಇದುವರೆಗೂ ಮನುಷ್ಯ ತುಳಿದಿರುವ ಆಧ್ಯಾತ್ಮಿಕ ಸ್ತರ ಗಳಿಂದ ಸಂಪೂರ್ಣವಾಗಿ ಕಿತ್ತು ಬೇರೆಲ್ಲೋ ನೆಟ್ಟು, ಹೊಸ ಅರ್ಥ ಪೂರ್ಣತೆಯ ವಿಶೇಷ ಸ್ತರಗಳನ್ನು ಅನ್ವೇಷಿಸಬೇಕಾಗಿದೆ.

*

ಅಂದರೆ ದೇವನ ಸಮಸ್ತಾಧಿಕಾರದ ವಿರುದ್ಧ ಬಂಡೇಳುವುದೇ ಆಧುನಿಕನ ಮುಂದಿರುವ ಏಕಮಾತ್ರ ಗುರಿ. ಸಾವಿರಾರು ವರ್ಷಗಳ ಹಿಂದೆಯೇ ಎದ್ದ ಈ ದೈವ ವಿರುದ್ಧ ಕ್ರಾಂತಿ, ಇಂದು ಅನನ್ಯ ರೀತಿಯಲ್ಲಿ ಪುನಃಚೇತನಗೊಳ್ಳುತ್ತಿದೆ. ತನ್ನ ಇರುವಿಕೆಗೆ ಕಾರಣವಾದ ಸಮಗ್ರ ಚೇತನದ ವಿರುದ್ಧ ಎದ್ದ ಮಾನವನ ಕ್ರಾಂತಿಯ ರೋಧನವನ್ನು ನಾವು

ಇನ್ನೂ ಅದರ ಪೂರ್ಣಾರ್ಥದಲ್ಲಿ ಗ್ರಹಿಸಲು ಸಿದ್ಧರಾಗಿಲ್ಲ. ಈ ಕ್ರಿಯೆ ಮೊದಲು ಆರಂಭಗೊಳ್ಳಬೇಕು!

ಸಮಗ್ರ ಬ್ರಹ್ಮಾಂಡದ ತುಚ್ಛತುಣುಕಾದ ಈ ಜಗತ್ತಿನಲ್ಲಿ ಮಾನವ ಅನ್ನ ಬಟ್ಟೆಗಳಿಂದ ಹಿಡಿದು ತನ್ನೆಲ್ಲಾ ಅದ್ವಿತೀಯ ಅನಂತ ಆಶೋತ್ತರಗಳನ್ನು ತನ್ನಲ್ಲಿ ತಾನೇ ಬಲವಂತವಾಗಿ ಅದುಮಿ ಹಿಡಿದುಕೊಂಡು, ತನಗೆ 'ಎಲ್ಲದರಿಂದ ಬೇಕಾದ ಮುಕ್ತಿಯನ್ನು' ತನಗಾಗಿ 'ಕಾದಿರುವ ವೈಭವ' ಎನ್ನುವ ಭ್ರಮೆಯಲ್ಲಿ ತೊಳಲಾಡುತ್ತಿದ್ದಾನೆ. ಅವನ ಈ ತೊಳಲಾಟದಿಂದ ಅವನ ಅದಮ್ಯ ತುಡಿತ ಮತ್ತೂ ಬಲಗೊಂಡು, ಅವನ ದುಃಖ ಮತ್ತಷ್ಟು ಮಗದಷ್ಟು ಹೆಚ್ಚಿ, ಆ ಪರಿಪೂರ್ಣ ಮುಕ್ತಿಯ ಕೊನೆಯ ಸಾಕ್ಷಿಯೂ ಮಾಯವಾಗಿಬಿಡುವ ಸ್ಥಿತಿಯಲ್ಲಿದೆ.

ಇಂತಹ ಕ್ಷುದ್ರ ಮಾನವನಿಗೆ ಅಗ್ನಿ ಹಾಗೂ ಮುಕ್ತಿಯನ್ನು-ತಾಂತ್ರಿಕತೆ ಹಾಗೂ ಕಲಾತ್ಮಕತೆಯನ್ನು-ಕೊಡುವಷ್ಟು ಪ್ರೊಮಥ್ಯುಯಸ್ ಮನುಷ್ಯನನ್ನು ಆಳವಾಗಿ ಪ್ರೀತಿಸಿದ. ಆದರೆ, ಇಂದು ಮಾನವ ಪ್ರಾಣಿ ತನ್ನ ಬದುಕಿನ ಅಂತಃಶಕ್ತಿಯಾದ ಕಲಾತ್ಮಕತೆಯನ್ನು ಮರೆತು, ಕೇವಲ ತಾಂತ್ರಿಕತೆಯೇ ತನ್ನೆಲ್ಲ ಹಸಿವಿನ ಉತ್ತರವೆಂದು ಭ್ರಮೆಗೊಳ್ಳುತ್ತಿದೆ. ತನ್ನ ತಾಂತ್ರಿಕ ಜ್ಞಾನದ ಮೂಲಕವೇ ಬಂಡಾಯ ಹೂಡಿದ ಈ ಮಾನವ ಕಲಾತ್ಮಕತೆಯನ್ನು ತನ್ನ ಗುಲಾಮ ಗುರಿಯ ಸಂಕೇತವೆಂದು, ತನ್ನ ಮುಕ್ತಿಯ ಹಾದಿಯಲ್ಲಿನ ಅಡೆತಡೆಯೆಂದು ನಂಬಿದೆ. ಆದರೆ, ಪ್ರೋಮಥ್ಯುಯಸ್ಸನ ಪಾಲಿಗೆ ತಾಂತ್ರಿಕತೆಯನ್ನು ಕಲಾತ್ಮಕತೆಯಿಂದ ಬೇರ್ಪಡಿಸುವುದು ಸಾಧ್ಯವೇ ಆಗಿರಲಿಲ್ಲ: ಅವನು ಶರೀರ ಹಾಗೂ ಆತನನ್ನು ಏಕಕಾಲಕ್ಕೆ ಮುಕ್ತಿಗೊಳಿಸಿಬಿಡುವುದೇ ಏಕಮಾತ್ರ ದಾರಿ ಎಂದು ನಂಬಿದ್ದ. ಆದರೆ, ಈ ಆಧುನಿಕ ಮೊದಲು ಶರೀರವನ್ನು-ಮನಸ್ಸು ಒಂದಲ್ಲ ಒಂದು ರೋಗಕ್ಕೆ ಬಲಿಯಾಗಿದ್ದರೂ ಸರಿಯೆ-ಮುಕ್ತಗೊಳಿಸಿ ಬಿಡಬೇಕೆಂದು ನಂಬಿದ್ದಾನೆ. ಇನ್ನೊಮ್ಮೆ ಪ್ರೊಮಥ್ಯುಯಸ್ ಮತ್ತೆ ಭೂಮಿಗೆ ಬಂದುದೇ ಆದರೆ, ಈ ಆಧುನಿಕ ಮಾನವ ಅಂದು ದೇವತೆಗಳು ಅವನಿಗೆ ಕೊಟ್ಟ ಶಿಕ್ಷೆಯನ್ನೇ 'ಪರಿಪೂರ್ಣ-ಮಾನವತೆಯ-ವಿಕಾಸದ' ಹೆಸರಿನಲ್ಲೇ ತಾನೂ ಕೊಟ್ಟುಬಿಡುತ್ತಾನೆ.

ಬೆಳಕಿನತ್ತಲ ಹೆಜ್ಜೆಗಳೇ ಮಾನವನ ನ್ಯಾಯಬದ್ಧ ಅಖಂಡ ಹೋರಾಟ.

ಮನುಷ್ಯ ಎಲ್ಲೆಲ್ಲೂ ತುಂಬಿಹೋಗಿದ್ದಾನೆ; ಎಲ್ಲೆಡೆಗಳಿಂದಲೂ ಅವನ ರೋಧನ ಕೇಳಿಬರುತ್ತಿದೆ; ಅವನ ಸಂಕಷ್ಟಗಳು ಹಾಗೂ ಭಯಗಳೇ ಎಲ್ಲಿ ಅಂದರೆ ಅಲ್ಲೆಲ್ಲಾ ಹಬ್ಬಿ, ಹರಡಿ, ಚೆಲ್ಲಿ ರಾಚಿಹೋಗುತ್ತಿವೆ. ಈ ಮಾನವ ರೋಧನದ ದಟ್ಟ ಅರಣ್ಯದಲ್ಲಿ ಬೆಳಕಿನ ಹಸಿರು ಬೆಳೆಯದಾಗಿ, ಇತಿಹಾಸವೆಂದರೆ ಯಾವ ಬೆಳಕೂ ಮೂಡದ ಬಂಜರು ಭೂಮಿಯಾಗಿದೆ. ಅಲ್ಲದೆ, ಆಧುನಿಕ ಮನುಷ್ಯ ಇಂದು ಇತಿಹಾಸದ ಆಳದಲ್ಲಿ ಎಲ್ಲೋ, ಅದರ ಗುಲಾಮನಾಗಿ, ಮೇಲೆ ಎದ್ದು ಬಾರದಷ್ಟು ಒಳಗೆಲ್ಲೋ ಹೂತು ಹೋಗಿಬಿಟ್ಟಿದ್ದಾನೆ. ಇತಿಹಾಸದ ಮೇಲೆ ಪ್ರಭುತ್ವ ಸಾಧಿಸುವ ಬದಲಿಗೆ ಆತ ತನ್ನ ಇತಿಹಾಸದ ಜ್ಞಾನವನ್ನು ಬಲಿಸಿಕೊಂಡಷ್ಟೂ ಅದರ ಮತ್ತಷ್ಟು ಹಾಗೂ ಮಗದಷ್ಟು ಮತ್ತೂ ಇನ್ನಷ್ಟು ಗುಲಾಮನಾಗಿ ಹೋಗಿ ಬಿಡುತ್ತಿದ್ದಾನೆ. ಇಲ್ಲೇ, ಈ ಇತಿಹಾಸದ ಗುಲಾಮಗಿರಿಯಿಂದಾಗಿಯೇ ಈ ಆಧುನಿಕ ಆ ಬೆಳಕಿನತ್ತ ಹೆಜ್ಜೆ ಇಟ್ಟ ವೈಚಾರಿಕತೆ ಹಾಗೂ ಹೃದಯವಂತಿಕೆಗಳಲ್ಲಿ ಧೀರೋದಾತ್ತನಾದ ಪ್ರೊಮಥ್ಯುಯಿಸ್‌ಗೆ ದ್ರೋಹ ಬಗೆಯುತ್ತಿರುವುದು; ಆ ದಿವ್ಯಾಗ್ನಿಯ ಪ್ರವಾದಿ ಪ್ರೊಮಥ್ಯುಯಸ್‌ನನ್ನು ಮರೆತು, ತನ್ನ ಗುಲಾಮಗಿರಿಯ ತುಚ್ಛತೆಯಲ್ಲೇ ಆಧುನಿಕ ತಲ್ಲೀನನಾಗಿ ಹೋಗಿರುವುದು.

'ನೋಡದೇ ಅವರು ಕಂಡರು ; ಆಲಿಸದೇ ಕೇಳಿಸಿಕೊಂಡರು —ಕನಸಿನ ಚಿತ್ರಗಳಂತೆ'.

ಹೌದು—

ನಾವು ಅಗ್ನಿಯನ್ನು ಮತ್ತೆ ಹುಡುಕಿ ತರಲೇಬೇಕಾಗಿದೆ – ಶರೀರದ ಎಲ್ಲ ಹಸಿವುಗಳನ್ನು ತಣಿಸುವ ಆ ಎಲ್ಲ ಕರಕೌಶಲಗಳನ್ನೂ ಸಿದ್ಧಿಸಿಕೊಳ್ಳಲು; ಆತ್ಮದ ಹಸಿವನ್ನು ತಣಿಸುವ ಸೋಮದ ಸಾಕ್ಷಾತ್ಕಾರವನ್ನು ತಂದುಕೊಳ್ಳುವುದು ಆ ನಂತರ ಮಾತ್ರ.

ನಮ್ಮಲ್ಲಿ ನಾವು ಅತ್ತುಕೊಳ್ಳದೇ ಬೇರೇನನ್ನು ತಾನೇ ಮಾಡಿಕೊಳ್ಳಬಲ್ಲೆವೋ ಗೊತ್ತಿಲ್ಲ :

‘ ಅವರು ಎಂದೂ ಹಿಂದಿರುಗರು ; ಹಾಗೂ ಹಿಂದಿರುಗಿದ್ದೇ ಆದರೆ ನಮಗಾಗಿಯಂತೂ ಅಲ್ಲ.’

—ಆಗ ನಮ್ಮ ಸ್ಥಿತಿ ಏನು? ಈ ಸ್ಥಿತಿಯ ಯಾತನೆಯ ಆಳ ತಟ್ಟುವುದು ಯಾರಿಗೆ? ಆ ಯಾತನೆಯನ್ನು ಕಹಿಯ ಸೋಂಕೇ ಇಲ್ಲದೆ ಭರಿಸಬಲ್ಲವರಾರು ?

ಪ್ರೊಮಥ್ಯುಯಸ್ ಉತ್ತರಿಸಿ ಸಹಸ್ರಾರು ವರ್ಷಗಳಾಗಿವೆ :

‘ ನಾನು ಭರವಸೆ ಕೊಡುವೆ, ಓ ಮರ್ತ್ಯರೇ, ನಿಮಗೆ ವೃದ್ಧಿ ಹಾಗೂ ಶುಶ್ರೂಷೆಗಳನ್ನು – ನಿಮ್ಮ ಕೈಗಳಿಂದಲೇ ರೂಢಿಸಿಕೊಳ್ಳುವಷ್ಟು ನೀವು ಕುಶಲಿಗಳು, ನಿಷ್ಠರೂ, ಧೀಮಂತರೂ ಆಗಿದ್ದರೆ.’

ಹಾಗಾದ ಮೇಲೆ –

ನಮ್ಮ ಕೈಗಳಲ್ಲೇ ನಮ್ಮ ಮುಕ್ತಿಯ ಸಾಧ್ಯತೆ ಇದೆ ಎನ್ನುವುದು ಸತ್ಯವೇ ಆಯಿತು! ಈ ಶತಮಾನದ ಮಾನವನ ಎಲ್ಲ ಪ್ರಶ್ನೆಗಳಿಗೂ ಉತ್ತರವಿದೆ, ಎಂದು ನಾನು ನನ್ನ ವಿವೇಕಮಯ ಶಕ್ತಿ ಹಾಗೂ ನನಗೆ ಗೊತ್ತಿರುವ ಕೆಲವಲ್ಲಿ ನಾನು ಅನುಭವಿಸಿ ತಿಳಿವಿಗೆ ತಂದುಕೊಂಡ ಧೈರ್ಯ ದಿಂದ ಹೇಳ ಹೊರಟಿದ್ದೇನೆ ; ಪ್ರೊಮಥ್ಯುಯಸ್‌ನ

‘ ಓ ಧರ್ಮವೇ, ಓ ತಾಯಿಯೇ, ನಾನು ಹೇಗೆ ಯಾತನೆಯನ್ನು ಅನುಭವಿಸಬೇಕಾಯಿತು, ನೋಡು !’

ಎನ್ನುವ ರೋಧನವನ್ನು ಅಣಕಿಸದೇ ಇರುವುದು ಸಾಧ್ಯವಿಲ್ಲ ! –

‘ ನೀನು ಅರೆದೇವನಾಗಿದ್ದೂ, ನೀನು ಈಗ ಅನುಭವಿಸುತ್ತಿರುವ ಯಾತನೆಯನ್ನು ಆಗಲೇ ಅರಿಯಲಾಗಲಿಲ್ಲವೇ ಎಂದು ಆಶ್ಚರ್ಯವಾಗು ತ್ತಿದೆ !’

ಊರ್ಧ್ವಮುಖ ಸಮಗ್ರ ಕ್ರಾಂತಿಗಾಗಿಯೇ ಹುಟ್ಟಿದವನ ಉತ್ತರ ಎಂದೋ ಸಿದ್ಧವಾಗಿತ್ತು:

‘ಆಗಲೇ ಅರಿವಾಗಿತ್ತು !’

ಸಮಸ್ತ ಮಾನವ ಕುಲದ ಅನಂತ ಯಾತನೆಯನ್ನು ತಮ್ಮದಾಗಿ ಮಾಡಿಕೊಂಡು, ಅತ್ಯದ್ಭುತವಾಗಿ ಅನುಭವಿಸುತ್ತಿರುವ ಮಾನವ್ಯದ ಕಂದಮ್ಮಗಳಿಗೆ ಕೊರತೆ ಇಲ್ಲ. ಈ ಕಂದಮ್ಮಗಳೇ ಪ್ರೊಮಥ್ಯುಯಸ್‌ನ ಎಲ್ಲ

ಯುಗಗಳ ಹಾದಿಯ ಪುನರಾವತಾರಗಳು :

ಪುರಾಣಗಳಿಗೆ ಅವುಗಳದೇ ಆದ ಜೀವವಿಲ್ಲ. ನಾವು ಅವುಗಳಿಗೆ ಮಾಂಸದ ಹೊಸ ಹೊದಿಕೆಗಳನ್ನು ತೊಡಿಸುವಂತಾಗಲೆಂದೇ ಅವು ಕಾದು ಕುಳಿತಿವೆ. ಅವುಗಳ ಕರೆಗೆ ಈ ಯುಗದ ಒಬ್ಬನೇ ಒಬ್ಬ ಮಾನವ ಓಗೊಟ್ಟರೂ ಸಾಕೇ – ಅವುಗಳು ತಮ್ಮೆಲ್ಲ ಶಕ್ತಿಗಳನ್ನು ಈ ಮಾನವ ಪ್ರಾಣಿಗೆ ಧಾರೆ ಎರೆದು ಕೊಡುತ್ತವೆ. ನಾವು ಈ ಎಲ್ಲ ಪುರಾಣಗಳನ್ನು ರಕ್ಷಿಸಿಕೊಂಡು ಹೋಗುತ್ತಾ, ಅವುಗಳ ಮೌನ ನಶ್ವರವಲ್ಲವೆಂದು ಮನಗಂಡು ಪೂರ್ಣ ಮುಕ್ತತೆಯ ಪುನರುತ್ಥಾನದ ಸಾಧ್ಯತೆಗಾಗಿ ಕಾದೇ ತೀರಬೇಕಾಗಿದೆ.

ಆಧುನಿಕ ಮಾನವನನ್ನು ರಕ್ಷಿಸುವುದು ಸಾಧ್ಯವೇ ಎನ್ನುವ ವಿಚಾರ ದಲ್ಲಿ ನನಗೆ ಮೇಲಿಂದ ಮೇಲೆ ಸಂಶಯಗಳು ಏಳುತ್ತಲೇ ಇರುತ್ತವೆ. ಆದರೂ, ಅವರನ್ನಲ್ಲವಾದರೂ ಅವರ ಮಕ್ಕಳನಂತೂ ಅವರುಗಳ ಶರೀರ ಹಾಗೂ ಮನುಸ್ಸನ್ನು ರಕ್ಷಿಸುವ ಮೂಲಕ ರಕ್ಷಿಸಿಯೇ ರಕ್ಷಿಸಿಬಿಡಬಹುದು —ಒಂದೇ ಕಾಲಕ್ಕೆ ಸುಖ ಹಾಗೂ ಸೌಂದರ್ಯದ ಅವಕಾಶಗಳನ್ನು ಅವರಿಗೆ ಕಲ್ಪಿಸುತ್ತಾ ಹೋಗುವ ಮೂಲಕ : ಸೌಂದರ್ಯದ ಅರಿವಿಲ್ಲದ, ಆ ಸೌಂದರ್ಯ ಕೊಡುವ ಸ್ವಾತಂತ್ರ್ಯವನ್ನು ನಾವು ಮುಕ್ತರಾಗಿ ಅನುಭವಿ ಸಲು ಸಾಧ್ಯವಾಗದ ಬಾಳನ್ನು ನಾವು ತಿರಸ್ಕರಿಸಲೇಬೇಕು. ಏಕೆಂದರೆ, ಪ್ರೊಮಥ್ಯುಯಸ್ಸನ ಬಾಳು ಮನುಷ್ಯನನ್ನು ಸಮಗ್ರನಾಗಿ ಬದಲಿಸದೇ ತಂದ ಯಾವುದೇ ಆಮೂಲಾಗ್ರ ಬದಲಾವಣೆ ಅಶಾಶ್ವತವೆಂದೂ ಅರ್ಥಹೀನ ವೆಂದೂ ಸಾರುತ್ತದೆ.

ಇತಿಹಾಸದ ಹೃದಯದಾಳದಲ್ಲಿನ ಕಾರ್ಗತ್ತಲ ಮಧ್ಯದಿಂದ ಪ್ರೊಮಥ್ಯುಯಸ್‌ನಂತಹ ಜನ ತಮ್ಮ ಎಲ್ಲ ಅಗ್ನಿ ಪಿಪಾಸೆಯ ರೋಧನ ವನ್ನು ಸಾಗಿಸುತ್ತಲೇ ಈ ಆಧುನಿಕರತ್ತ ದಿವ್ಯ ಆಸೆಹೊತ್ತು ನೋಡು ತ್ತಲೇ ಉಳಿದಿದ್ದಾರೆ. ಅನುದಿನವೂ – ಪ್ರೊಮಥ್ಯುಯಸ್ ವಿಧಿಯ ಸರಪಳಿಗಳಿಂದ ಬಿಗಿಸಿಕೊಂಡಿದ್ದರೂ, ಗುಡುಗು–ಮಿಂಚುಗಳ ಆರ್ಭಟದ ಮಧ್ಯೆ ಬಂದಿಯಾಗಿದ್ದರೂ, ತಾನು ಮಾನವನಲ್ಲಿ ಇಟ್ಟಿರುವ ಅಘೋಷಿತ ನಂಬಿಕೆಗಳನ್ನು ಮಾತ್ರ ಕೊಂಚವೂ ಕಳೆದುಕೊಂಡಿಲ್ಲ. ಈ ಅಘೋ

ಷಿತ ನಂಬಿಕೆಗಳ ಕಾರಣದಿಂದಾಗಿಯೇ ಆ ಅಗ್ನಿ ದಿವ್ಯದ ಪ್ರೊಮೆಥ್ಯುಯಸ್, ಅವನನ್ನು ಬಿಗಿಯಲ್ಪಟ್ಟಿರುವ ಬಂಡೆಗಳಿಗಿಂತಲೂ ಸ್ಥಿರನೂ ಹಾಗೂ ವಲ್ಚರ್‌ಗಿಂತಲೂ ತಾಳ್ಮೆಯುಳ್ಳವನೂ ಆಗಿದ್ದಾನೆ. ಅವನ ದೇವತೆಗಳ ಮೇಲಿನ ಬಂಡಾಯಕ್ಕಿಂತಲೂ, ಅವನ ಅನಂತ ಸ್ಥಿರಚಿತ್ತವೇ, ಅದರ ಅಗಾಧ ಯಾತನೆಯೇ, ಆಧುನಿಕನ ಪಾಲಿಗೆ ಹೆಚ್ಚು ಅರ್ಥಪೂರ್ಣವಾಗಿದೆ.

*

'ಕುತೂಲಹಕಾರಿಯಾದ ಯುಗದಲ್ಲಿ ಜೀವಿಸಲು ಅವಕಾಶವನ್ನು ದಯಪಾಲಿಸು'–ಎನ್ನುವುದು ಪೂರ್ವದ ಋಷಿಗಳ ಪ್ರಾರ್ಥನೆಗಳಲ್ಲಿ ಒಂದು ಅತಿ ಮುಖ್ಯವಾದ ಪ್ರಾರ್ಥನೆ! ನಮ್ಮದು ಒಂದು ಅತ್ಯಂತ ಕುತೂಹಲಕಾರಿಯಾದ ಯುಗ—ಅದು ದುರಂತಾತ್ಮಕವಾದುದು ಎನ್ನುವ ಅರ್ಥದಲ್ಲಿ! ನಮ್ಮೆಲ್ಲ ದುರಂತಾತ್ಮಕ ಯಾತನೆ ಹಾಗೂ ದುಃಖಗಳನ್ನು ಅಭಿವ್ಯಕ್ತಿಸುವ, ಅಂದರೆ ನಮ್ಮ ಯುಗವನ್ನು ಗುರ್ತಿಸುವ ರಂಗಭೂಮಿಯ ಸ್ಥಾಪನೆ ಸಾಧ್ಯವೆ—ಎಂದು ನಾವು ಬಯಸಬಹುದೋ ಏನೋ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆಧುನಿಕ ಗಂಭೀರ ಅಥವಾ ದುರಂತ ನಾಟಕಗಳು ಎಷ್ಟರ ಮಟ್ಟಿಗೆ ಸಾಧ್ಯ ಹಾಗೂ ಅವಶ್ಯಕ ಎನ್ನುವುದರ ವಿಶ್ಲೇಷಣೆಯ ಅಗತ್ಯ ಈ ಯುಗಕ್ಕೆ ಅಪರಿಹಾರ್ಯವಾದ ಒಂದು ಮಹಾನ್ ಅನಿವಾರ್ಯತೆ.

ಈ ಪ್ರಶ್ನೆಯನ್ನು ಎತ್ತಲೇಬೇಕಾದುದರ ಅವಶ್ಯಕತೆ ಆಧುನಿಕ ರಂಗಭೂಮಿಯನ್ನು ಕುರಿತು ತೀವ್ರತರವಾಗಿ ಚಿಂತಿಸುವವನ ಪಾಲಿಗೆ ಕಾನೂನುಬದ್ಧವಾದ ಆಂತರಿಕ ಒತ್ತಾಯವಾಗಿದೆ.

ಗಂಭೀರ ಅಥವಾ ದುರಂತ ನಾಟಕಗಳು ಇತಿಹಾಸದ ಆಮೂಲಾಗ್ರ ಬದಲಾವಣೆಯ ಯುಗಗಳಲ್ಲಿ ಮಾತ್ರ–ಅಂದರೆ, ಯುಗ ಒಂದು ತನ್ನ ವೈಭವ ಹಾಗೂ ಭಯಗಳಿಂದ ತುಂಬಿ ತೊನೆಯುತ್ತಿರುವ ಕಾರಣದಿಂದಾಗಿ ಭವಿಷ್ಯ ಅನಿಶ್ಚಿತವಾಗಿ, ವರ್ತಮಾನ ನಾಟಕೀಯವಾದಾಗ ಮಾತ್ರ—ಉದ್ಭವಿಸುತ್ತವೆ. ಎಸ್ಕಿಲಸ್ ಹಾಗೂ ಶೇಕ್ಸ್‌ಪಿಯರ್ ಇಂತಹುದೇ ಯುಗಧರ್ಮಗಳಲ್ಲಿನ ಭಯಾನಕ ಪರಂಪರೆಗಳ ಮಧ್ಯೆ ಆವಿರ್ಭವಿಸಿದ ಮಹಾನ್

ಲಾವಿದರು. ತಮ್ಮ ತಮ್ಮ ನಾಗರೀಕತೆ ಒಂದು ಆಮೂಲಾಗ್ರ ಬದಲಾವ ಣೆಗೆ ಸಿಕ್ಕಿಬಿದ್ದ ಕಾಲದಲ್ಲಿ ಹುಟ್ಟಿ ಆ ಕಾಲವನ್ನು ತಮ್ಮತಮ್ಮ ಕೃತಿಗಳಲ್ಲಿ ರುಹೋಜ್ವಲವಾಗಿ ದಕ್ಕಿಸಿಕೊಂಡವರು. ಜಗತ್ತಿನ ಮೂವತ್ತಕ್ಕೂ ಾರಿದ ಶತಮಾನಗಳ ಮಧ್ಯದ ರಂಗಭೂಮಿಯ ಚಟುವಟಿಕೆಗಳನ್ನು ಈ ಇಬ್ಬರು ಯುಗ ನಿರ್ಮಾಣದ ಮಹಾನ್ ಲೇಖಕರ ಸುತ್ತಮುತ್ತ ಎರಡು ಶ್ರೇಷ್ಠ ದುರಂತ ನಾಟಕ ಕಲೆಯ ಯುಗಗಳನ್ನಾಗಿ ಗುರ್ತಿಸಬಹುದು. ಈ ಎರಡೂ ಯುಗಗಳ ಮಧ್ಯೆ ಸುಮಾರು ಇಪ್ಪತ್ತು ಶತಮಾನಗಳ ಬೃಹದ್ ಕಂದಕವೇ ಇದೆ. ಈ ಬೃಹದ್ ಸತ್ವಹೀನ ಅಂತರ ದುರಂತ ನಾಟಕ ಕಲೆಯ ವಿಶೇಷತೆಯ ಬಗ್ಗೆ ಅಭ್ಯಾಸ ಮಾಡಬಯಸುವ ಸಂಶೋಧಕರಿಗೆ ಒಂದು ಕುತೂಹಲಪೂರ್ಣವಾದ ವಸ್ತು ಹಾಗೂ ಛಾಲೆಂಜ್ ಆಗಿದೆ.

ಈ ಎರಡೂ ಮಹಾನ್ ಯುಗಗಳು ಅಗೋಚರವನ್ನು ಸಾಕ್ಷಾತ್ಕರಿಸಿ ಕೊಳ್ಳುವ ವಿವಿಧ ರೂಪಗಳನ್ನು, ಆ ವಿವಿಧ ರೂಪಗಳು ಪರಿಶುದ್ಧತೆ ಹಾಗೂ ಪರಮ ಪವಿತ್ರತೆಗಳಿಂದ ತುಂಬಿ ತುಳುಕುವ ವಿವಿಧ ಸ್ತರಗಳನ್ನು ಹಾಗೂ ಇವುಗಳಿಗೆ ತದ್ವಿರುದ್ಧವಾದ ವೈಯಕ್ತಿಕ ಚಿಂತನೆ ಹಾಗೂ ವೈಚಾರಿಕ ವಿಶ್ಲೇಷಣೆಗಳನ್ನು ಗುರುತಿಸುವ ಅನನ್ಯ ಮನ್ವಂತರ ದ್ವಯಗಳಾಗಿವೆ.

ಎಸ್ಕಿಲಸ್‌ನಿಂದ ಯೂರಿಪಿಡೆಸ್‌ವರೆಗಿನ ದುರಂತ ನಾಟಕಗಳು ಪೂರ್ವ್ ಸಾಕ್ರಟಿಸ್ ಚಿಂತನೆಗಳಿಂದ ಸಾಕ್ರಟಿಸ್ ಚಿಂತನೆಗಳವರೆಗೆ ಹಬ್ಬಿದ್ದರೆ, ಶೇಕ್ಸ್‌ಪಿಯರ್‌ನಿಂದ ಕಾರ್ನೈಲ್‌ವರೆಗಿನ ದುರಂತ ನಾಟಕಗಳು ಮಧ್ಯ ಯುಗದ ಕಾರ್ಗತ್ತಲು ಹಾಗೂ ರಹಸ್ಯಮಯ ಒತ್ತಡಗಳಿಂದ ವೈಚಾರಿಕ ನೆಲೆಗಟ್ಟು ಹಾಗೂ ಮನೋ ನಿರ್ಧಾರಗಳ ತುಯಿತಗಳವರೆಗೆ ಹಬ್ಬಿ, ಎರಡೂ ಕಾಲಗಳು ತಮ್ಮ 'ಅಂತಃಸತ್ವವಾದ ಸತ್ವಹೀನತೆ'ಯನ್ನು ಅಥವಾ ಕಾಣಸಿಗದ ಹೊಸನೆಲೆಗಟ್ಟನ್ನು ಧ್ವನಿಸುತ್ತವೆ. ಈ ಎರಡೂ ಯುಗಗಳನ್ನು ವೈಚಾರಿಕತೆಯ ವಿಶ್ಲೇಷಣಾತ್ಮಕ ದೃಷ್ಟಿಯಿಂದಲೇ ದಿಟ್ಟಿಸಿ ನೋಡುವು ದಾದರೆ, ವ್ಯಕ್ತಿ ತನ್ನನ್ನು ತಾನು ಪವಿತ್ರ ನಂಬಿಕೆಗಳ ಅತ್ಯುತ್ಕಟ ಭಾರ ಗಳಿಂದ ಸ್ವಲ್ಪಸ್ವಲ್ಪವಾಗಿ ತಪ್ಪಿಸಿಕೊಂಡು, ಪುರಾತನ ಜಗತ್ತಿನ ಭಕ್ತಿ ಹಾಗೂ ಭಯದ ವಿರುದ್ಧ ಮುಖಕ್ಕೆ ಮುಖಕೊಟ್ಟು ನಿಲ್ಲುವುದನ್ನು ಮತ್ತು ಈ ಯುಗಗಳಲ್ಲಿನ ಕಲಾಕೃತಿಗಳಲ್ಲಿನ ವ್ಯಕ್ತಿ ದುರಂತಾತ್ಮಕ ವಿದ್ಯುಕ್ತ ಕ್ರಿಯೆ

ಹಾಗೂ ಧಾರ್ಮಿಕ ಆಚರಣೆಗಳಿಂದ ಮಾನಸಿಕ ದುರಂತಗಳತ್ತ ಸಾಗ
ವುದನ್ನು ಕಾಣುತ್ತೇವೆ.

ಈ ಎರಡು ಯುಗಗಳಲ್ಲಿಯೂ ವ್ಯಕ್ತಿಗತ ವೈಚಾರಿಕತೆಯ ಅಂತಿ
ವಿಜಯ ದುರಂತ ನಾಟಕಗಳ ರಚನೆಯನ್ನೇ ಶತಮಾನಗಳ ಕಾಲ ಅಸಾ
ಗೊಳಿಸಿಬಿಟ್ಟಿದೆ! ಇದರಿಂದ ಶುದ್ಧ ವೈಚಾರಿಕತೆಯಲ್ಲಿನ ಬರಡುತನ
ದುರಂತ ನಮಗೆ ನಿಚ್ಚಳವಾಗಿ ಸಾಕ್ಷಾತ್ಕಾರವಾಗುತ್ತದೆ; ಇದನ್ನೇ ಬೇರೆ
ಮಾತುಗಳಲ್ಲಿ ವಿವರಿಸುವುದಾದರೆ, ಮನುಷ್ಯ ಪ್ರಜ್ಞಾಪೂರ್ವವಾಗಿಯೋ
ಅಥವಾ ಪ್ರಜ್ಞಾರಹಿತವಾಗಿಯೋ ತನ್ನ ಹಿಂದಣ ನಾಗರಿಕತೆಯಿಂದ ಸಿ
ದೆದ್ದು, ತನ್ನನ್ನು ತಾನು ಮುಕ್ತನನ್ನಾಗಿಸಿಕೊಂಡು, ತಾನು ತನ್ನದಾಗಿ
ಕೊಳ್ಳಲು ಹೋರಾಡುತ್ತಿರುವ ಹೊಚ್ಚಹೊಸ ನಾಗರಿಕತೆಯೊಂದನ್ನು ತನ
ದಾಗಿ ದಕ್ಕಿಸಿಕೊಳ್ಳಲಾಗದೇ ಹೋದ ಬರಡು ಕಾಲವೇ ಈ ಎರಡು
ದುರಂತ ನಾಟಕಗಳ ಯುಗಕೇಂದ್ರಗಳಾಗಿವೆ.

ನಮ್ಮ ಈ ಆಧುನಿಕ ಯುಗ ಕೂಡ ಇಂತಹದೇ ಒಂದು ವಿಶಿ
ಸಂದಿಗ್ಧ ಸ್ಥಿತಿಯಲ್ಲಿ ಇದೆಯಾಗಿ, ದುರಂತ ನಾಟಕಗಳ ರಚನೆಯ ಸಾಧ
ಸಾಧ್ಯತೆಗಳನ್ನೂ ತೀವ್ರತರವಾಗಿ ವಿಶ್ಲೇಷಿಸಿ ನೋಡಿಕೊಳ್ಳಲೇಬೇಕಾಗಿ
ಹಾಗೂ ಈ ವಿಶ್ಲೇಷಣೆಗಳನ್ನೂ ಮೀರಿ ಈ ಎರಡೂ ಯುಗಗಳೇ ತಮ್ಮ
ಮೂರನೆಯ ಯುಗವನ್ನು ಮಾರ್ಗದರ್ಶಿಸಲೂಬೇಕಾಗಿದೆ.

ಈ ಎರಡೂ ಯುಗದ ದುರಂತ ನಾಟಕಗಳು ಮಾನವನ ರಚನ
ತ್ಮಕ ಬರವಣಿಗೆಯ ಎಲ್ಲ ಕಾಲದ ಸರ್ವಶ್ರೇಷ್ಠ ಸಾಧನೆಗಳಾಗಿರುವಂತೆಯೆ
ಮನುಷ್ಯ ತನ್ನನ್ನು ತಾನು ಅರ್ಥಮಾಡಿಕೊಳ್ಳುವತ್ತ ಬೇರಾವ ಅವ
ಸಾಧನೆಯೂ ಕೊಡಲಾರದಷ್ಟು ನೆರವನ್ನೂ ಕೊಟ್ಟಿವೆ.

*

ದುರಂತ ನಾಟಕಗಳಲ್ಲಿರುವ ಮತ್ತೊಂದು ಮಹಾನ್ ಶ್ರೇಷ್ಠ ಅ
ವೆಂದರೆ ಅಲ್ಲಿನ ಎಲ್ಲ ಪಾತ್ರಗಳೂ ಸಮಸಮವಾಗಿ ಮನುಷ್ಯನ ಸಮ
ಗೋಚರ ಹಾಗೂ ಆಗೋಚರ ಸ್ತರಗಳನ್ನು ಅಪ್ಪಿ, ಪ್ರತಿ ಪಾತ್ರವೂ ನ್ಯಾ
ಬದ್ಧವೂ ಅಷ್ಟೇ ಮಟ್ಟಿಗೆ ನ್ಯಾಯ ಬಾಹಿರವೂ ಆಗಿರುವುದು!—

ವಿಶೇಷ ಮಾನವೀಯ ಅಂಶದ ಪ್ರಜ್ಞೆಯಿಂದಾಗಿ – ಪ್ರೊಮೆಥ್ಯುಯಸ್ ಒಮ್ಮೆಲೆ ನ್ಯಾಯಬದ್ಧನೂ ಹಾಗೂ ನ್ಯಾಯ ಬಾಹಿರನೂ ಆಗಿರುವುದರಿಂದಾಗಿ – ರುದ್ರ ನಾಟಕಗಳು ಎಷ್ಟು ಸಂಕೀರ್ಣವೋ ಅಷ್ಟೇ ವೈಚಾರಿಕತೆಯ ಆಳತೆಗೋಲಿಗೆ ಸಿಗದಾಗಿ, ಸೃಷ್ಟಿಯ ರಹಸ್ಯದಷ್ಟೇ ನಿಗೂಢವೂ, ಅಲ್ಲದೆ, ವಿಶೇಷಾರ್ಥದಲ್ಲಿ ಮಾನವೀಯವೂ, ಇದಂ ಇತ್ಥಂ ಅಲ್ಲವಾದುವೂ ಆಗಿ, ಮಾನವನ ಅರಿವಿಗೆ ಮೀರಿನಿಂತ ಭವ್ಯ ಕಲಾಕೃತಿಗಳಾಗಿವೆ.

ಈ ದಿವ್ಯ ಮಾನವೀಯ ವಿವೇಕವನ್ನು ದುರಂತ ನಾಟಕಗಳ ಮೇಳಗಳೇ ಸಮರ್ಥಿಸುತ್ತವೆ : ಪ್ರತಿಯೊಬ್ಬನೂ ಒಂದು ವಿಶೇಷ ಮಜಲಿನವರೆಗೆ ಸಮಸಮನಾಗಿಯೇ ನ್ಯಾಯಬದ್ಧ ಹಾಗೂ ನ್ಯಾಯ ಬಾಹಿರನಾಗಿರುತ್ತಾನೆ; ಆ ಪ್ರಕೃತಿದತ್ತ ವಿಶೇಷ ಮಜಲನ್ನು ಆತ ತನ್ನ ಕುರುಡುತನದಿಂದಾಗಿಯೋ ಅಥವಾ ಆಶೋತ್ತರಗಳಿಂದಾಗಿಯೋ ಅಥವಾ ವೈಚಾರಿಕತೆಯಿಂದಾಗಿಯೋ ತನ್ನೊಬ್ಬನಿಗೆ ಮಾತ್ರ ಮೀಸಲಾದ ವಿಶೇಷ ಹಕ್ಕಿದೆ ಎಂದು ಭ್ರಮಿಸಿಯೋ ಏನೋ ದಾಟಿದ್ದೇ ಆದರೆ, ದುರಂತ ಶತಃಸಿದ್ಧವಾಗಿ ಆತನಿಗೆಂದೇ ಕಾದಿದೆ! ಈ ದಾಟಲಾಗದ ಮಜಲಿನ ಎರಡೂ ಬದಿಯಲ್ಲಿ ಉತ್ಕಟ ಕಂಪನಕ್ಕೆ ಒಳಗಾದ ಹಾಗೂ ಎಂದೂ ಮುಗಿಯದ, ಆದರೆ ಅಷ್ಟೇ ಎಲ್ಲಕ್ಕೂ ಮೀರಿದ ಮಾನವ ಸಹಜವಾದ ಹಾಗೂ ಅವನಿಂದ ಪ್ರತ್ಯೇಕಿಸಲಸಾಧ್ಯವಾದ ದ್ವಂದ್ವಗಳಿವೆ. ಈ ದ್ವಂದ್ವ ಒಮ್ಮೆಲೆ ಒಳ್ಳೆಯದೂ ಹಾಗೂ ಕೆಟ್ಟದ್ದಾದ ಎರಡು ವಿರುದ್ಧ ಭಾವನೆಗಳ ಮಧ್ಯೆ ತಲೆ ಎತ್ತಿದೆಯಾಗಿ, ಅದು ಎಷ್ಟು ಸಮರ್ಥವಾಗಿದ್ದರೂ ಅವರ್ಣನೀಯವಾದ, ಆದರೂ ಕ್ರಿಯಾತ್ಮಕವಾದ, ಅಷ್ಟೇ ಭ್ರಮಾತ್ಮಕವಾದ ಸ್ತಬ್ಧತೆಗೆ ಒಳಗಾಗಿಬಿಟ್ಟಿರುತ್ತದೆ–ತನ್ನಲ್ಲಿನ ಅತ್ಯುತ್ಕಟ ಉದ್ವೇಗಗಳಿಂದಾಗಿ!

ದುರಂತ ಪ್ರಾಪ್ತವಾಗುವುದೇ ಮನುಷ್ಯ ತನ್ನ ಅಹಂನಿಂದಾಗಿಯೋ ಅಥವಾ ಮೂರ್ಖತೆಯಿಂದಾಗಿಯೋ ಪವಿತ್ರಕಾಯಿದೆಯ ವಿರುದ್ಧ ಬಂಡೆದ್ದು, ಅದರೊಡನೆ ಮುಖಾಮುಖಿಯಾಗಿ ದ್ವಂದ್ವಕ್ಕೆ ನಿಂತಾಗ; ಅವನು ದೈವದ ಅಥವಾ ಎಲ್ಲಕ್ಕೂ ಅತೀತವಾದ ಪವಿತ್ರ ಕಾಯಿದೆಗಳ ವಿರುದ್ಧವಾಗಿ ತೊಟ್ಟ ಕ್ರಾಂತಿ ಹೆಚ್ಚೆಚ್ಚು ಅರ್ಥ ಪೂರ್ಣವಾಗುತ್ತಾ ಹೋದಂತೆಲ್ಲಾ, ಆ ಪವಿತ್ರ ತತ್ವ ಮತ್ತಷ್ಟು ಮಗದಷ್ಟು ಇನ್ನಷ್ಟು ಅಪರಿಹಾರ್ಯವಾದ ಅವಶ್ಯಕತೆ

ಯಾಗುತ್ತಾ ಹೋದಂತೆಲ್ಲಾ, ಈ ಎರಡರ ಮಧ್ಯದ ದ್ವಂದ್ವದಿಂದಾಗಿಯೇ ಸಿಡಿದೇಳುವ ದುರಂತದ ತೀವ್ರತೆಯೂ ಅಸದೃಶವಾಗುತ್ತದೆ; ದ್ವಂದ್ವದ ಈ ಸಮತೋಲನಕ್ಕೆ ಎಲ್ಲೇ ಚ್ಯುತಿಬಂದರೂ ಆ ಚ್ಯುತಿ ದುರಂತ ನಾಟಕದ ರುದ್ರರಮಣೀಯತೆಗೇ ಬಡಿದು, ಎಲ್ಲ ಕಾಲದ ಶ್ರೇಷ್ಠ ಕಲೆಗಳು ಮಾನವನ ಪಾಲಿಗೆ ಇಲ್ಲವೇ ಇಲ್ಲವಾಗಿ ಬಿಡುವಂತಾಗುತ್ತದೆ.

ಕ್ರಿಶ್ಚಿಯನ್ ಧರ್ಮ ಮನುಷ್ಯನನ್ನು ಪವಿತ್ರ ಕಾಯಿದೆಯೊಡನೆ ರಾಜಿಮಾಡಿಸಿದ ಕಾರಣದಿಂದಾಗಿ ಜಗತ್ತಿನ ಶ್ರೇಷ್ಠ ದುರಂತ ನಾಟಕ ಕಲಾಕೃತಿಗಳ ಬೆಳವಣಿಗೆಯೇ ನಿಂತುಹೋಗಿ, ಮಾನವ ತನ್ನ ಬದುಕಿನ ಆಳಕ್ಕೆ ರಾಚಿ ಬಿದ್ದಿರುವ ದುರಂತವನ್ನು ವಿಶ್ಲೇಷಿಸಿ, ಅದನ್ನು ಗೆಲ್ಲುವ ಸಾಧ್ಯತೆಗಳೇ ಈ ಅರ್ಥದಲ್ಲಿ ಇಲ್ಲವಾಗಿ ಹೋಯಿತು !

ಮನುಷ್ಯನನ್ನು ಎಲ್ಲ ಬಂಧನಗಳಿಂದ ಮುಕ್ತನನ್ನಾಗಿಸಿಬಿಡುವುದರಿಂದ, ಅದರಲ್ಲೂ ಅಸ್ತಿತ್ವದ ನಿಗೂಢ ರಹಸ್ಯದಿಂದ ಅವನನ್ನು ಪಾರುಮಾಡಿಬಿಟ್ಟು, ಬ್ರಹ್ಮಾಂಡವನ್ನು ಅವನು ಸಮಸ್ತ ಕಾಯಿದೆಗಳ ಬೇಡಿಕೆಯೊಡನೆ ವಿಲೀನಗೊಳಿಸಿಬಿಡುವುದರಿಂದ, ದುರಂತ ಕಲಾಕೃತಿಗಳ ಹುಟ್ಟೇ ಅಡಗಿಹೋಗಿಬಿಡುತ್ತದೆ. ಈ ಕಾರಣಕ್ಕೇ ನಿರೀಶ್ವರವಾದ ಹಾಗೂ ವೈಚಾರಿಕತೆಯ ನಂಬಿಕೆಗಳಿಂದಲೂ ಈ ಬಗೆಯ ತೀರ ತೀರ ಅಪರೂಪದ ಮಹಾನ್ ಕೃತಿಗಳ ರಚನೆ ಅಸಾಧ್ಯವಾಗಿಬಿಟ್ಟಿರುವುದು. ಹಾಗೆಯೇ,ಎಲ್ಲ ಭಾವನೆಗಳು ಸೃಷ್ಟಿಯ ರಹಸ್ಯವನ್ನೇ ಬಲವಾಗಿ ನಂಬಿಬಿಟ್ಟಾಗಲೂ ಇಂತಹದೇ ಸ್ಥಿತಿ ಪ್ರಾಪ್ತವಾಗಿಯೇ ತೀರುತ್ತದೆ.

ದುರಂತಾತ್ಮಕ ಕಲಾಕೃತಿಗಳ ಹುಟ್ಟು ಕತ್ತಲು ಮತ್ತು ಬೆಳಕಿನ ಮಧ್ಯದ ಸಂಘರ್ಷದಿಂದಲೇ ಹುಟ್ಟಿ, ಕತ್ತಲಲ್ಲಿರುವ ಬೆಳಕು ಹಾಗೂ ಬೆಳಕಿನಲ್ಲಿರುವ ಕತ್ತಲು ಮತ್ತೆ ಮತ್ತೆ ಮುಖಾಮುಖಿಯಾಗಿ ನಿಂತಾಗಲೇ ಸಾಧ್ಯವಾಗುವ ನಿಗೂಢತೆ!

ಶ್ರೇಷ್ಠ ದುರಂತ ಕಲಾಕೃತಿಯಲ್ಲಿನ ಚಿರಂತನ ಮೌಲ್ಯದ ಹಿಂಬದಿಯ ರಹಸ್ಯಗಳು ದಕ್ಕಿಯೂ ದಕ್ಕದೇ ಉಳಿಯುತ್ತವೆಯಾಗಿ. ಆ ಕಲಾಕೃತಿಗಳು ಅಷ್ಟೊಂದು ತೀವ್ರವಾಗಿ ಓದುಗನನ್ನು ಬೆಚ್ಚಿ ಬೀಳಿಸಿ, ಭಯಗೊಳಿಸಿ, ಮನೋಜ್ಞವಾಗಿ ನಿಲ್ಲುತ್ತವೆ.

ಕಥಾನಾಯಕ ತನ್ನನ್ನು ತುಳಿಯುತ್ತಿರುವ ಅನಂತಚೇತನದ ವಿರುದ್ಧ ಆಸ್ಫೋಟನಗೊಂಡು, ಆ ಚಿರ ಚೇತನವನ್ನು ತಿರಸ್ಕರಿಸುತ್ತಾ ಹೋಗುತ್ತಾನೆ : ಆತ ಆ ಚೇತನವನ್ನು ತಿರಸ್ಕರಿಸಿದಷ್ಟೂ, ಆ ಚೇತನ ಆತನನ್ನು ತುಳಿಯುತ್ತಾ ಹೋಗಿ, ತನ್ನ ಅಸ್ತಿತ್ವವನ್ನು ಹೆಚ್ಚೆಚ್ಚು ಖಚಿತಗೊಳಿಸುತ್ತಾ ಸಾಗುತ್ತದೆ! ಅಂದ ಮಾತ್ರಕ್ಕೆ ಕೇವಲ ಬಂಡಷ್ಟೇ ಅಷ್ಟು ದುರಂತ ಕೃತಿಯಾಗುವುದಿಲ್ಲ; ಹಾಗೆಯೇ ಚಿರ ಚೇತನದ ಸತತ ತುಳಿತವಷ್ಟೇ ಅಷ್ಟು ದುರಂತ ನಾಟಕವನ್ನು ಹಡೆಯುವುದಿಲ್ಲ : ಕ್ರಾಂತಿ ಹಾಗು ಚಿರ ವ್ಯವಸ್ಥೆಗಳೆರಡೂ ಇದ್ದು, ಒಂದನ್ನೊಂದು ಪ್ರತಿಭಟಿಸುತ್ತಾ, ಪ್ರತಿಭಟಿಸಿದಷ್ಟೂ ಒಂದನ್ನು ಇನ್ನೊಂದು ತನ್ನೆಲ್ಲಾ ಶಕ್ತಿಯಿಂದ ಬಲಗೊಳಿಸುತ್ತಾ ಸಾಗಿ, ಒಂದು ಮಾಂತ್ರಿಕ ಅಪೂರ್ವ ಅವಸ್ಥೆಯನ್ನು ತಲುಪಿದಾಗ ಮಾತ್ರ ಅಂತಹ ನಾಟಕ ರಚಿತವಾಗುತ್ತದೆ. ಇದರ ಹಿನ್ನೆಲೆಯ ಲೇಖಕ ತಾನು ಇವೆರಡರಷ್ಟೇ ಸಮರ್ಥನಿದ್ದು, ಇವೆರಡಕ್ಕೂ ಅತೀತನಾದ ಸ್ವಯಂ ಬ್ರಹ್ಮನಾಗಿ ಅಂತಹ ಕಲಾಕೃತಿಯನ್ನು ಆಗುಮಾಡಿಕೊಳ್ಳಬೇಕಾಗುತ್ತದೆ.

ವಿಧಿಯ ಕೈವಾಡವೇ ಇಲ್ಲದ ದೊರೆ ಈಡಿಪಸ್‌ನ ಕಥೆಯನ್ನು ದೈವವಾಣಿ ಒಂದೇ ಹೇಳಲು ಸಾಧ್ಯವಿಲ್ಲ; ಈಡಿಪಸ್ ವಿಧಿಯನ್ನು ತಿರಸ್ಕರಿಸದೇ ಹೋಗಿದ್ದರೂ ಅಷ್ಟೊಂದು ದುರದೃಷ್ಟದ ಮಹಾ ನಾಟಕ ಮೂಡಿ ಬರುತ್ತಲೂ ಇರಲಿಲ್ಲ.

ದುರಂತ ಒಂದು ಸಾವು ಅಥವಾ ಶಿಕ್ಷೆಯಲ್ಲಿ ಪರ್ಯವಸಾನವಾದ ಶ್ರೇಷ್ಠ ನಾಟಕದಲ್ಲಿ ಅಪರಾಧ ಶಿಕ್ಷೆಗೆ ಒಳಗಾಗದೆ, ಚಿರಸಮತೋಲನ ಹಾಗೂ ಅದರ ಮುಷ್ಟಿಯನ್ನು ತಿರಸ್ಕರಿಸಿದ ಕಥಾನಾಯಕನೇ ಶಿಕ್ಷಾರ್ಹನಾಗಿಬಿಡುತ್ತಾನೆ. ಈ ಅರ್ಥದಲ್ಲೇ ಎಸ್ಕಿಲಸ್‌ಗಿಂತಲೂ ಸೆಫೋಕ್ಲಿಸ್ ಶ್ರೇಷ್ಠ ದುರಂತ ನಾಟಕಕಾರ; ಶೇಕ್ಸ್‌ಪಿಯರ್‌ನಲ್ಲಿ ದುರಂತ ಇನ್ನೂ ಆಳವಾದ ಅನಂತದ ನಿಗೂಢ ರಹಸ್ಯಗಳಲ್ಲಿ ಮೈದಾಳಿ, ಪಾತ್ರ ಎಸೆಯುವ ಅರ್ಥಾತೀತ ದ್ವಂದ್ವದಲ್ಲಿ ಬೆಳೆದು, ಕೊನೆಗೆ ಒಂದು ಅವರ್ಣೀಯ ಇಂದ್ರಜಾಲದ ಅದ್ಭುತ ರಮ್ಯತೆಯಲ್ಲಿ ಅರಳಿ ಕಮನೀಯವಾಗುತ್ತದೆ. ಅವರ್ಣನೀಯವಾದ ಅತ್ಯದ್ಭುತತೆ ಮತ್ತು ಪರಿಹಾರರಹಿತ ಪರಮಾಶ್ಚರ್ಯತೆ ಹಾಗೂ ನಿಬ್ಬೆರಗಾಗಿಸುವ ಘಟಾಡಮಯತೆಯೇ ಕಲಾಕೃತಿಯ

ಅಂತಿಮ ಸೊಬಗಾಗುತ್ತದೆ. ಆ ಸೊಬಗಿನ ಅಪೌರುಷೇಯ ಪರವಶತೆಯ ಭವ್ಯತೆಯಲ್ಲಿ ಇಂದ್ರಿಯಗಳು ಕೇವಲ ಸಾಕ್ಷಿಪ್ರಜ್ಞೆಯಾಗಿ, ವಿಮರ್ಶಾತ್ಮಕ ಸಹೃದಯ ತನ್ನನ್ನು ತಾನೇ ಕಳೆದುಕೊಳ್ಳುತ್ತಾನೆ!

ನಾಯಕ ತನ್ನನ್ನು ತುಳಿಯುತ್ತಿರುವ ಪರಮ ಸತ್ಯವನ್ನು ತಿರಸ್ಕರಿಸುತ್ತಾನೆ—ತನ್ನ ಅಸ್ತಿತ್ವಕ್ಕೆ ಕುಂದು ಬಂದಿದೆ ಎಂದು; ಆಗ ಆ ಪರಮ ವ್ಯವಸ್ಥೆ ಅವನನ್ನು ಮತ್ತಷ್ಟು ಅಧಃಪತನಕ್ಕೆ ತುಳಿಯುತ್ತದೆ-ತನ್ನನ್ನು ಆತ ಪ್ರಶ್ನಿಸುತ್ತಿದ್ದಾನೆಂದು: ಮೇಳ ಈ ಎರಡೂ ದ್ವಂದ್ವಗಳ ಸ್ಥಿತಿಯನ್ನು 'ಪರಮ ವ್ಯವಸ್ಥೆ ಇರುವುದೇನೋ ನಿಜ, ಅದನ್ನು ಅನುಭವಿಸುವುದು ಅದರ ಇರುವಿಕೆಯನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಕಷ್ಟವಾಗಿಯೇ ಇರಬಹುದು; ಆದರೂ, ಅದರ ಇರುವಿಕೆಯನ್ನು ಒಪ್ಪಿಕೊಳ್ಳದೇ ಹೋಗುವುದು ಇವೆರಡಕ್ಕಿಂತಲೂ ಯಾತನಮಯ!' ಎಂದು ಸಾರುತ್ತದೆ; ಅಂದರೆ, ಮನುಷ್ಯ ತನ್ನ ಅಸ್ತಿತ್ವದ ರಹಸ್ಯಮಯತೆಯನ್ನು ಅದು ಇರುವಂತೆಯೇ ಸ್ವೀಕರಿಸಿ, ತನ್ನ ಶಕ್ತಿಯ ಇತಿಮಿತಿಯನ್ನು ಕಂಡುಕೊಂಡು, 'ಮನುಷ್ಯನ ಅರಿವು ಅರಿವಲ್ಲ'ವೆಂದು! ಕಂಡುಕೊಳ್ಳಲೇಬೇಕಾಗುತ್ತದೆ!

ತನ್ನ ದೃಷ್ಟಿಗಳನ್ನು ಕಳೆದುಕೊಂಡುಬಿಟ್ಟಿರುವ ಈಡಿಪಸ್ 'ಎಲ್ಲ ಒಳ್ಳೆಯದೆ ಆಗಿದೆ!' ಎನ್ನುತ್ತಿದ್ದಾನೆ! ಹಾಗಾದ ಮೇಲೆ ಅವನು ಏನನ್ನೂ ಕಾಣುವುದು ಸಾಧ್ಯವಿಲ್ಲವಾದರೂ, ಅವನಿಗೆ ಇನ್ನೇನೋ ಭೋಧ್ಯವಾಗುತ್ತಿದೆ: ಅವನ ಬಾಳಿನ ಅನುಪಮ ವ್ಯವಸ್ಥೆಯ ಕತ್ತಲನ್ನು ಬೇರಾವುದೋ ಕ್ರಾಂತಿಯ ಬೆಳಕು ಹೋಗಲಾಡಿಸಿದೆ; ಅವನ ಸತ್ತ ಕಣ್ಣುಗಳ ಮುಖ ದುರಂತ-ಬ್ರಹ್ಮಾಂಡದ ಮಹಾನ್ ಪಾಠ ಒಂದರಿಂದಾಗಿ ಬೆಳಗುತ್ತಿದೆ! ....ಏನು....? ಅಥವಾ ಅವನು ತನ್ನ ಅಜ್ಞಾನದ ಅಥವಾ ಪಾಪದ ವ್ರಣಗಳನ್ನು ತಾನೇ ನೆಕ್ಕುತ್ತಾ ಖುಷಿ ಪಡುತ್ತಿದ್ದಾನೇನು? ಅಥವಾ ಅನ್ಯರಾರೂ ಪ್ರಶ್ನಿಸದ ಮಹತ್ ಹಾಗೂ ಬೃಹತ್ ಅನ್ನು ಪ್ರಶ್ನಿಸಿದ ಸಂತೋಷದಲ್ಲಿ ತಾನು ದೊರಕಿಸಿಕೊಂಡಿದ್ದೇನೆ ಎಂದುಕೊಂಡ ಮಹಾನ್ ಜೀವನ 'ನನ್ನ ಬಾಳಿನ ಮಹಾನ್ ಉದ್ವೇಗದಿಂದ' ಮಾತ್ರ ಪ್ರಾಪ್ತವಾಯಿತು–ಎಂದು ಮನಗಂಡಿದ್ದಾನೇನು?

*

'ಶ್ರೇಷ್ಠ ಜೀವನ ನನ್ನ ಜೀವನದ ಮಹಾನ್ ಉದ್ವೇಗಗಳಿಂದ ಮಾತ್ರ ಪ್ರಾಪ್ತವಾಯಿತು.'

ಎಂದು ಘೋಷಿಸಿದ ಎರಡನೆಯ ದುರಂತ ನಾಟಕಯುಗದ ನಂತರದ ವಿಜ್ಞಾನ ಮತ್ತು ವೈಚಾರಿಕತೆಯ ಜೀವನ, ಎರಡು ಮಹಾಯುದ್ಧಗಳನ್ನು ಕಂಡು, ಎರಡೂ ಕೈಗಳಲ್ಲಿ ಊಟ ಮಾಡಿದ್ದರೂ ದುರಂತ ನಾಟಕವನ್ನು ಪುನರುಸ್ಥಾನಗೊಳಿಸುವಲ್ಲಿ ಸೋತಿತು.

ವೈಜ್ಞಾನಿಕ ಸಂಶೋಧನೆಗಳ ಮತ್ತಿನಲ್ಲಿದ್ದ ಮಾನವ ಪರಮ ವ್ಯವಸ್ಥೆಯನ್ನೂ ಹಾಗೂ ವಿಧಿಯನ್ನೂ ತಾನು ಇನ್ನೇನು ತನ್ನ ವೈಚಾರಿಕತೆಯಿಂದಾಗಿ ಗೆದ್ದು ಬಿಡುತ್ತಿದ್ದೇನೆ ಎಂದುಕೊಂಡು ಬಿಟ್ಟ. 'ಮನುಷ್ಯ ಏಕಾಕಿ, ಅವನನ್ನು ಆವರಿಸಿರುವುದು ಅವನು ಮಾತ್ರವಲ್ಲದೆ ಬೇರೇನೂ ಅಲ್ಲ.' ಎನ್ನುವ ಸ್ಥಿತಿಗೆ ಬಂದು, ಅವನು ಉತ್ಕಟ ದುರಂತ ಸ್ಥಿತಿಯ ಕಾರಣ-ಕೇಂದ್ರವಾಗುವುದರ ಬದಲಿಗೆ ಕನಸುಣಿಯಾದ ಹೋರಾಟಗಾರನಾದ. ಆದರೆ, ಅವನ ಅಷ್ಟೊಂದು ಆಸೆ ಹಾಗೂ ಭರವಸೆಗಳಿಂದ ನಂಬಿದ ವಿಜ್ಞಾನ ಹಾಗೂ ವೈಚಾರಿಕತೆಗಳು ಒಂದು ಅಮಾನವೀಯ ರಾಕ್ಷಸೀ ಜಗತ್ತನ್ನು ಸೃಷ್ಟಿಸಿ, ಅವನು ತಾನೇ ಅಷ್ಟೊಂದು ಪ್ರೀತಿಯಿಂದ ಸೃಷ್ಟಿಸಿದ ಜಗತ್ತಿಗೆ ತನ್ನ ಬೆನ್ನನ್ನು ತಿರುಗಿಸಲೇಬೇಕಾಯಿತು.

ಪ್ರಕೃತಿಯ ನಿಗೂಢ ರಹಸ್ಯಗಳನ್ನು ಅರಿಯುವಲ್ಲಿ ಮಾನವನ ಇಂದ್ರಿಯಗಳು ತೀರ ಅಸಮರ್ಥವಾದ ಉಪಕರಣಗಳಾಗಿರುವ ವಿಚಾರ ಅವನಿಗೆ ಅಣುವಿನ ವಿವಿಧ ವಿಭಜನೆಯ ನಂತರ ತಿಳಿದು, ಆತ ಮತ್ತೆ ಆಘಾತಕ್ಕೆ ಒಳಗಾಗಿದ್ದಾನೆ;ಅಲ್ಲದೆ, ತನ್ನ ವೈಚಾರಿಕತೆಯಿಂದಾಗಿ, ಅವನು ಕಟ್ಟಿದ್ದು ಕೇವಲ ಐತಿಹಾಸಿಕ ಜಗತ್ತನ್ನು ಮಾತ್ರ! ಈ ಇತಿಹಾಸ ಅವನನ್ನು ಮತ್ತೆ ಮೋಸಗೊಳಿಸಿ, ವಿಧಿಯ ಮುಖವಾಡವನ್ನೇ ಧರಿಸಿತು. ಇತಿಹಾಸವನ್ನು ಗೆಲ್ಲುವ ಹಂಬಲ ಸುಳ್ಳಾಗಿ, ಅಥವಾ ಒಂದು ಬಿಡಿಸಲಾಗದ ಸಮಸ್ಯೆಯಾಗಿ, ಮತ್ತೆ ಆತ ಅದರ ಕೈಗೊಂಬೆಯಾಗಿ, ಇತಿಹಾಸದ ಲಕ್ಷಣರೇಖೆಗಳ ಮಧ್ಯವೇ ಹೋರಾಡಬೇಕಾದ ನಿರಾಶಾಮಯ ಜಗತ್ತು ಅವನ ಮುಂದೆ ತೆರೆದು ನಿಂತಿತು. ಅವನೇ ಸಂಶೋಧಿಸಿದ ವೈಜ್ಞಾನಿಕ ಕೊಡುಗೆಗಳಿಂದಾಗಿ, ಈ ಜಗತ್ತು ಅವನ ವಾಸಕ್ಕೆ ಅಯೋಗ್ಯವಾದುದಾ

ಯಿತು. ಮನುಷ್ಯ ಆಳ್ವಿಕೆಯ ಸೋಲನ್ನು ಒಪ್ಪಿಕೊಂಡ ಆತ, ಈಗ ಮತ್ತೆ ದೈವದ ಇರುವಿಕೆಯನ್ನು ಪ್ರಶ್ನಿಸತೊಡಗಿದ್ದಾನೆ. ಈ ಬಾರಿ ಅವನು ಕೇವಲ ಹೋರಾಟಗಾರ ಪುತ್ರನಲ್ಲ; ನಿರಾಶ್ರಿತನೂ, ಏಕಾಂಗಿಯೂ ಆಗಿ ಬಿಟ್ಟಿದ್ದಾನೆ.–ತನ್ನ ಬುದ್ಧಿ ಹಾಗೂ ಭಾವನೆಗಳಿಗೆ ತಾನೇ ಗುಲಾಮನಾಗಿದ್ದಾನೆ! ಯಾವ ಶಕ್ತಿಯಿಂದ ವಿಧಿಯನ್ನು ಆತ ಗೆದ್ದೆನೆಂದುಕೊಂಡಿದ್ದನೋ ಅದೇ ಶಕ್ತಿಯಿಂದ ಆ ವಿಧಿಯನ್ನು ಮತ್ತೆ ಒಪ್ಪಿಕೊಳ್ಳಬೇಕಾಗಿಯೇ ಬಿಟ್ಟಿದೆ: ಅಲ್ಲದೇ, ವಿಧಿ ಈಗ ಅವನನ್ನು ಎಂದಿಗಿಂತಲೂ ಹೆಚ್ಚು ಉತ್ಕಟವಾಗಿ ಅಣಕಿಸತೊಡಗಿದೆ!

ಮತ್ತೀಗ ಅವನು ಅಪರಿಹಾರ್ಯ ಹಾಗೂ ದುರಂತಾತ್ಮಕವಾದ ಜಗತ್ತಿನಲ್ಲಿ ವಾಸಿಸುತ್ತ ಇದ್ದರೂ, ತಾನೂ ಎಬ್ಬಿಸುವ ಎಲ್ಲ ಕ್ರಾಂತಿಗೂ ಇತಿಮಿತಿಯ ಶೃಂಕಲೆ ಇದೆಯೆಂದು ಮನಗಂಡಿದ್ದರೂ, ಪೂರ್ಣ ಮುಕ್ತಿಗಾಗಿ ಚಡಪಡಿಸುತ್ತಿದ್ದಾನೆ—ಅದರ ಅವಶ್ಯಕತೆಯನ್ನು ಹಿಂದೆಂದೂ ಕಾಣದಷ್ಟು ದಟ್ಟವಾಗಿ ಅನುಭವಿಸುತ್ತಾ; ಹೀಗೆ ಹರಿದು ಹಂಚಿಹೋಗಿರುವ ವಿರೋಧಾಭಾಸಗಳ ಮಾನವ, ತನ್ನ ಹಾಗೂ ತನ್ನ ಇತಿಹಾಸದ ಸ್ಪಷ್ಟಾಸ್ಪಷ್ಟತೆಗಳಿಂದಾಗಿ ಜಗತ್ತು ಹಿಂದೆಂದೂ ಇಳಿಯದ ದುರಂತಾವಸ್ಥೆಗೆ ಸಂಪೂರ್ಣವಾಗಿ ಇಳಿದುಬಿಟ್ಟಿದ್ದಾನೆ. ಇದರಿಂದಾಗಿಯೇ, ಅವನೇ ತನ್ನ ಅಂತಿಮ ದುರಂತವನ್ನು ಅಸಾಧ್ಯ ವೇಗದಲ್ಲಿ ರಚಿಸಿಕೊಳ್ಳುತ್ತಲೂ ಇದ್ದಾನೆ! ಆ 'ಅಂತಿಮ ದುರಂತದ ರಚನೆ' 'ಎಲ್ಲ ಒಳ್ಳೆಯದಕ್ಕೇ' ಎನ್ನುವಂತೆ ಆದಾಗ ತನಗೆ ತಾನೇ ಪ್ರಾಪ್ತವಾಗಿಯೇ ತೀರುತ್ತದೆ.

*

ಆಧುನಿಕ ಶ್ರೇಷ್ಠ ದುರಂತ ನಾಟಕದ ರಚನೆ ಇನ್ನೂ ಆರಂಭವೇ ಆಗಿಲ್ಲ–ಆದರೂ, 'ಕ್ಯಾಲಿಗುಲ', 'ಮರ್ಡರ್ ಇನ್ ದಿ ಕೆಥೆಡ್ರಿಲ್' ಹಾಗೂ 'ವೆಯ್ಟಿಂಗ್ ಫಾರ್ ಗಾಡೋ' ಮೊದಲಾದ ನಾಟಕಗಳು ರಚಿತವಾಗಿ ಆ ಬರಲಿರುವ ಮಹಾಯುಗದ ಪೂರ್ವಸಿದ್ಧತೆಗಳನ್ನು ಮಾತ್ರ ಸಾರುತ್ತಿವೆ. ಶ್ರೇಷ್ಠ ದುರಂತ ನಾಟಕದ ರಚನೆಯ ವಿಳಂಬಕ್ಕೆ ಕಾರಣಗಳು ಹಲವಾರು; ಅವಕ್ಕೆ ಬೇಕಾದ ಸಿದ್ಧತೆ ಹಾಗೂ ಪರಿಕರಗಳೂ ಅನೇಕಾನೇಕವಾಗಿದೆ.

ಒಂದು ಅರ್ಥದಲ್ಲಿ ಮಾನವ ತಾನೇ ದೈವತ್ವದ ಪಟ್ಟವನ್ನು ಕಟ್ಟಿಕೊಂಡಿರುವುದರಿಂದಾಗಿ, ಆ ಬಗೆಯ ನಾಟಕಗಳ ಅವಶ್ಯಕತೆ ಎಷ್ಟೇ ಇದ್ದರೂ, ಅದಕ್ಕೆ ಇರುವ ಅಡೆತಡೆಗಳು ಮಿತಿಯನ್ನು ಮೀರಿವೆ!

ಮೂಲಭೂತ ಅವಶ್ಯಕತೆಯಾದ ಭಾಷೆಯನ್ನೇ ಆತ ಅಂತಹ ನಾಟಕಗಳ ಸಲುವಾಗಿ ರೂಢಿಸಿಕೊಳ್ಳಲು ಇನ್ನೂ ಆಗಿಲ್ಲ. ದುರಂತ ಸನ್ನಿವೇಶದ ವಿರೋಧಾಭಾಸಗಳನ್ನು ಒಟ್ಟೊಟ್ಟಿಗೇ ಮೈಗೂಡಿಸಿಕೊಂಡು, ಹೊಸ ಹೊಸ ನಿಗೂಢತೆಗಳತ್ತ ಬೆಳೆಯುತ್ತಾ, ಹಾಗೆ ಬೆಳೆಯುವಾಗ ವ್ಯಕ್ತಿಯಲ್ಲಿನ ಸಮಷ್ಟಿಯನ್ನೂ ಸಮಷ್ಟಿಯಲ್ಲಿನ ವ್ಯಕ್ತಿಯನ್ನೂ ಇವೆಲ್ಲಕ್ಕೂ ಅತೀತವಾದ ಶಕ್ತಿಯನ್ನೂ ಎಲ್ಲ ದ್ವಂದ್ವಗಳೊಡನೆ, ಮನುಷ್ಯ ಇಂದು ರೂಢಿಸಿಕೊಂಡಿರುವ ಎಲ್ಲ ಶಾಸ್ತ್ರಗಳ ಆಧಾರದ ಮೇಲೆ ಅವುಗಳನ್ನು ಸಂಪೂರ್ಣವಾಗಿ ಅಪ್ಪಿಯೋ ಇಲ್ಲ ತಿರಸ್ಕರಿಸಿಯೋ ರಚಿಸಿಕೊಳ್ಳಬೇಕಾಗಿದೆ. ಇಂತಹ ನೂರಾರು ಕಾರಣಗಳಿಂದಾಗಿಯೇ ದುರಂತ ನಾಟಕಗಳು ರಚಿತವಾಗಿದ್ದರೂ ಅವು ವೈಯಕ್ತಿಕತೆಯ ಸೀಮೆಯನ್ನು ಇನ್ನೂ ದಾಟಲಾಗಿಲ್ಲ! ಸಂಯಕ್ ಸಮಷ್ಟಿಯನ್ನಾಗಲಿ, ಅನಂತವನ್ನಾಗಲಿ ಅವು ತಲುಪುವ ಸಾಧ್ಯತೆ ಇನ್ನೂ ದೂರವೇ ಉಳಿದಿವೆ!

ಜವಾಬ್ದಾರಿಯನ್ನು ಹೊತ್ತ ಲೇಖಕರೊಡನೆ ಮಾನವ ಕೋಟಿಯೂ ಸಹಕರಿಸಲೇಬೇಕಾಗಿದೆ—ಏಕೆಂದರೆ, ಆಂತರಿಕ ಸ್ವಾತಂತ್ರ್ಯ ಹಾಗೂ ಅದರ ಅವಶ್ಯಕತೆಯ ಮಧ್ಯದ ಸಾಮರಸ್ಯದ ಅರಿವಿರುವ ಪ್ರತಿಯೊಬ್ಬನೂ ನಮ್ಮ ಮಾನಸಿಕ ತ್ರಿವಿಧಾವಸ್ಥೆಗಳಲ್ಲೂ ಸಾಧ್ಯವಿಲ್ಲವೆನ್ನುವ ಶಕ್ತಿಗೆ ನಾವು ಎಂದೂ ಮಣಿಯದಂತೆ, ನಮ್ಮ ಆಂತರಿಕ ಕ್ರಾಂತಿಯನ್ನೂ ಬಡಿದೆಬ್ಬಿಸಿ ಬಿಡುವಲ್ಲಿ ನಾವು ನಿಜಕ್ಕೂ ನೂತನ ಜಾಗೃತಾವಸ್ಥೆಯೊಂದರಲ್ಲಿ ಇರಲೇ ಬೇಕಾಗಿಬಿಟ್ಟಿದೆ.

ಇದಕ್ಕೆ ತೆರಲೇಬೇಕಾಗುವ ಬೆಲೆಯನ್ನು ನಾವು ತೆತ್ತುದೇ ಆದರೆ, ನಮ್ಮಲ್ಲಿ ಈಗಷ್ಟೇ ಬೆಳೆಯತೊಡಗಿರುವ ದುರಂತಾತ್ಮಕ ಸಂವೇದನೆಗಳು ಒಂದು ಅಭೂತಪೂರ್ವ ಸ್ಥಿತಿಯನ್ನು ಮುಟ್ಟಿ ಆ ನಂತರ ಅಭಿವ್ಯಕ್ತಗೊಳ್ಳ ತೊಡಗಬಹುದು.

–ಅಂತಹ ನಾಟಕ ರಚನೆಯನ್ನು ಆಗುಮಾಡಿಕೊಳ್ಳಲು ಅಗಾಧ

ವಾದ ತಾಳ್ಮೆ, ಪವಾಡಾತ್ಮಕ ಅಂತಃದೃಷ್ಟಿ ಹಾಗೂ ಪ್ರಚಂಡ ಮೇಧಾವಿತನದ ಉಗ್ರ ಅವಶ್ಯಕತೆ ಬೇರೆ ಇದೆ. ಅದಕ್ಕಾಗಿ ನಾವು ಗ್ರೀಸಿನತ್ತ ಒಮ್ಮೆಯಾದರೂ ತೀವ್ರ ದೃಷ್ಟಿಯನ್ನು ಹರಿಸಲೇಬೇಕಾಗಿದೆ; ಅಲ್ಲದೆ, ನಮ್ಮೆಲ್ಲ ತಾತ್ವಿಕ ಚಿಂತನೆಗಳನ್ನು ನಾವು ಆಮೂಲಾಗ್ರವಾಗಿ ಧಿಃಕರಿಸಿ, ಹೊಚ್ಚ ಹೊಸ ತಾತ್ವಿಕತೆಯನ್ನು ನಮ್ಮದಾಗಿಯೇ ತೀರಿಸಿಕೊಳ್ಳುವ ತುರ್ತುಪರಿಸ್ಥಿತಿ ಅನಿವಾರ್ಯವಾಗಿದೆ–ಇಲ್ಲವಾದರೆ, ನಾವು ಮತ್ತೆ ಪವಿತ್ರ ಸಮತೋಲನದ ಮತ್ತಿನಲ್ಲಿ ಸಿಕ್ಕಿಬಿದ್ದು, ನಶಿಸಿಯೇ ಹೋಗಿಬಿಡುವ ಸಾಧ್ಯತೆ ಸಹಿಸಲು ಅಸಾಧ್ಯವಾದಷ್ಟು ಅತ್ಯಗಾಧವಾಗಿದೆ; ಎಚ್ಚರಿಕೆ....!

* * *

ಸ್ವರ್ಗ ಮತ್ತು ತುಚ್ಛ ಶರಣ್ಯಭಾವ, ದೈವದಲ್ಲಿನ ಲೀನತೆ ಅಥವಾ ಅನಂತದತ್ತಲ ಒಲವು ಇತಿಹಾಸ ಪೂರ್ವದಿಂದ ಸಾಗಿಬಂದ ಮನುಷ್ಯನನ್ನು ಜಡಗೊಳಿಸಿದ ನೀಚ ದುರಂತ. ಈ ದುರಂತಾತ್ಮಕ 'ಮಹಾನಾಟಕ'ದಲ್ಲಿ ಪ್ರತಿಯೊಬ್ಬನೂ ಅವನವನ ಪಾತ್ರವನ್ನು ಬಯಸಿಯೋ ಬಯಸದೆಯೋ ಅಭಿನಯಿಸಲೇ ಬೇಕಾಗಿರುವುದಂತೂ ಮಾನವತೆಯ ಸಮಗ್ರ ದುರಂತವಾಗಿದೆ. ಈ ಹೀನ ಚಕ್ರವ್ಯೂಹದ ಮನಮೋಹಕ ಜಾಲದಿಂದ ಆತ ಪಾರಾದ ಹೊರತೂ ಅವನ ಚಿಂತನೆ ಹಾಗೂ ಕ್ರಿಯಾತ್ಮಕ ರಚನೆಗಳು ತಾವು ಪಡೆಯಲೆಳಸುತ್ತಿರುವ ವಿಶೇಷ ಮಾನವ್ಯದ ಹೊಸ ರೂಪರೇಖೆಗಳನ್ನು ಹೇಗೂ ಪಡೆದುಕೊಳ್ಳಲಾರವು!

ಮನುಷ್ಯ ಮಾತ್ರ ತಾನು ಏನಾಗಿದ್ದಾನೋ ಅದರ ವಿರುದ್ಧ ಕ್ರಾಂತಿಯ ನಂತರ ಕ್ರಾಂತಿಯನ್ನು ಸಾರುತ್ತಲೇ ಬಂದಿದ್ದಾನೆ. ಅವನ ಈ ಕ್ರಾಂತಿ ಇವನನ್ನು ಮತ್ತೆ ಮತ್ತೆ ದಾರ್ಶನಿಕ ಜಗತ್ತಿನ ಇಂದ್ರಿಯಾತೀತ ಮತ್ತಿಗೆ ಕರೆದೊಯ್ಯುವುದೇ ಆದರೆ, ಅವನು ಬಾಳಬಯಸಿದ್ದನ್ನು ಬದ್ದುದಾದರೂ ಎಲ್ಲಿ? ತನ್ನ ಇಂದ್ರಿಯಗಳಿಗೆ ಅವಶ್ಯವಾದ ತಿನಿಸುಗಳನ್ನು ತಿನ್ನಿಸಿ ತೇಗಿಸಿದ್ದಾದರೂ ಎಲ್ಲಿ? ಅದರ ಕಾಸ್ಸೆಯನ್ನು ಹೆಕ್ಕಿ ಹೊರತೆಗೆದು ಕಂಡುಕೊಂಡುದಾದರೂಎಲ್ಲಿ?

ಮನುಷ್ಯ ರಾಜ್ಯದ ಇರುವಿಕೆ ಸಾಧ್ಯವಿರುವುದು ಈ ಭೂಮಿಯ

ಮೇಲೆ ಮಾತ್ರ ! ವ್ಯಕ್ತಿ ತನ್ನ ವೈಯಕ್ತಿಕ ಬಾಳ್ವೆಯ ಪುಸ್ತಕ ಬಿಚ್ಚಿದ ಕೂಡಲೇ ಅವನು ಬಹಳವಾಗಿ ಪ್ರೀತಿಸುವ ಪುಟವೇನೋ ತನಗೆ ತಾನೇ ತೆರೆದುಕೊಳ್ಳುತ್ತದೆ–ನಿಜ. ಆದರೆ, ಜಾಗತಿಕ ಪುಸ್ತಕದ ಪುಟಗಳಿಗೆ ಈ ಪುಟಗಳನ್ನು ಹೋಲಿಸಿದಾಗ, ಇಲ್ಲಿನ ಸೌಂದರ್ಯ ಅದೆಷ್ಟು ಸತ್ಯಹೀನ ವಾಗಿದೆ ! ಹಾಗೆಯೇ, ಮನುಷ್ಯ ಯಾತನಾಮಯನಾಗಿದ್ದಾನೆ ಎನ್ನುವು ದೇನೋ ಪರಮಸತ್ಯ–ಆದರೆ, ಆತನ ಯಾತನೆಗಳಲ್ಲಿ ಸೌಂದರ್ಯವೇ ಇಲ್ಲ ವೆನ್ನುವ ಮಾತು ಬರಿಯ ಜೊಳ್ಳು. ಅವನ ಯಾತನೆಯ ಆಳದಲ್ಲಿರುವ ನಿಗೂಢವಾದ ಬೆಳಕನ್ನೇ ಆತ ಸಾಕ್ಷಾತ್ಕರಿಸಿಕೊಳ್ಳಲೇಬೇಕಾಗಿರುವುದು ! ಈ ಬೆಳಕಿನ ನಿಗೂಢತೆಯಲ್ಲೇ ಈ ಜಗತ್ತಿನ ಹಾಗೂ ಅದನ್ನು ಸುತ್ತುವರೆ ದಿರುವ ಬ್ರಹ್ಮಾಂಡದ ಅತ್ಯದ್ಭುತ ಅಮೃತತ್ವವಿರುವುದು !!

ಆದ್ದರಿಂದಲೇ ನಮಗೆ ಬೇಕಾಗಿರುವುದು ಸುಖವಲ್ಲ; ನಿರ್ಮಲವಾದ ಜಾಗೃದಾವಸ್ಥೆ.

ಅಂದರೆ, ಮನುಷ್ಯ ತಾನು ಖುದ್ದಾಗಿ ಹೊಣೆಗಾರನಾಗುವ ಸಾಧ್ಯಾ ಸಾಧ್ಯತೆಗಳ ಬಗ್ಗೆ ಮಾತ್ರ ಆತ ಕಾಲ ಎಲ್ಲದರಲ್ಲೂ ಜಾಗೃತನಾಗಿರಲೇ ಬೇಕು. ಆ ಜಾಗೃದಾವಸ್ಥೆಯಲ್ಲಿ ಜೀವಿಸುವ ಪ್ರತಿ ಕ್ಷಣವೂ ಆತ ಪವಾ ಡಾತ್ಮಕ ಮೌಲ್ಯಗಳ ಅನಂತ ಯೌವನಿ ; ಇದು ಸಾಧ್ಯವಿಲ್ಲವೆಂದವನ ಪಾಲಿಗೆ ಉಳಿದಿರುವುದು ಒಂದಲ್ಲ ಒಂದು ರೂಪದ ಕರುಣೆ ದಯಪಾಲಿಸಿದ ಆತ್ಮಹತ್ಯೆ ! ; ಸೆಲ್ಫ್ ಯುಥಿನೇಷಿಯಾ !

*

ಆಧುನಿಕ ಮಾನವನ ಮನಸ್ಸು ಒಂದು ಪೂರ್ಣ ಅವ್ಯವಸ್ಥೆ : ಬುದ್ಧಿ ಯಾಗಲಿ ಅಥವಾ ಜಗತ್ತಾಗಲಿ ಅವನ ಬದುಕನ್ನು ಅವನಿಗೆ ಕೊಡದಷ್ಟು ದೂರ ಆಧುನಿಕನ ಜ್ಞಾನ ಬೆಳೆದುಹೋಗಿದೆ. ಇಷ್ಟೇ ಪ್ರಚಂಡವಾಗಿ ಬೆಳೆಯುತ್ತಿರುವ ನಿರೀಶ್ವರವಾದವಂತೂ ಆತನನ್ನು ಹುಚ್ಚನನ್ನಾಗಿಸಿದೆ. ಇದಕ್ಕೂ ಅಗಾಧ ಪ್ರಮಾಣದಲ್ಲಿ ನಮ್ಮನ್ನು ಆಶ್ಚರ್ಯಗೊಳಿಸುವ ಮಾತೆಂದರೆ 'ಮತ್ತೆ ಪ್ರಾರ್ಥನೆಗೆ ಮರಳು'ವ ಪ್ರಯತ್ನಗಳು ! ಪ್ರಾರ್ಥನೆಗೆ ಮರಳುವುದೆಂದರೆ ಜಗತ್ತು ಇಷ್ಟು ಕಾಲವೂ ರೂಢಿಸಿಕೊಂಡು ಬಂದಿರುವ

ಸಮಸ್ತ ಜ್ಞಾನ ರಾಶಿಯನ್ನು- ತನ್ನ ಸಲುವಾಗಿಯೇ (ತನ್ನ ಮನರಂಜನೆಗಾಗಿಯೇ) ದುರಂತಗಳನ್ನು ಸೃಷ್ಟಿಸಿಕೊಳ್ಳುವುದೂ ಸೇರಿ, ಮನಸ್ಸಿನ ಅನೇಕ ಸ್ತರಗಳ ಸಿದ್ಧಿ ಸಾಧನೆಗಳನ್ನು–ಸುಟ್ಟುಬಿಡುವುದು. ಆದರೆ, ಇದು ಅಸಾಧ್ಯದ ಮಾತು–ಹಾಗಾದರೆ, ಇದಕ್ಕೆ ಇರುವ ಅನ್ಯ ಪರಿಹಾರವೇನು? ಬುದ್ಧಿಜೀವಿಗಳೇ ಅಷ್ಟೊಂದು ಪ್ರೀತಿಯಿಂದ ಅಪ್ಪುತ್ತಿರುವ ಅಷ್ಟೊಂದು ವೈವಿಧ್ಯಮಯವಾಗುತ್ತಿರುವ ಆತ್ಮಹತ್ಯೆ ಮಾತ್ರವೇನು ?

*

ನಿಜಕ್ಕೂ ಇರುವ ಏಕಮಾತ್ರ ದಾರ್ಶನಿಕ ಸಮಸ್ಯೆ ಹಾಗೂ ದಾರ್ಶನಿಕ ಪರಿಹಾರವೆಂದರೆ ಆತ್ಮಹತ್ಯೆ ಮಾತ್ರ. ಬದುಕು ಬಾಳಲು ಯೋಗ್ಯವಾದುದೆ ಅಥವಾ ಅಲ್ಲವೆ ಎನ್ನುವ ಪ್ರಶ್ನೆ ತತ್ವಶಾಸ್ತ್ರದ ಉತ್ತರಗಳತ್ತ ನಮ್ಮನ್ನು ಕರೆದೊಯ್ಯುವುದು ಸಹಜ.

ಎಷ್ಟೋ ಜನ ಜೀವನ ಅರ್ಥರಹಿತವೆಂದು ಮನಗಂಡು ಸಾಯುತ್ತಾರೆ; ತಮ್ಮ ಜೀವನದ ಅರ್ಥಪೂರ್ಣತೆಗಾಗಿ ಅನೇಕರು ಇತರರನ್ನು ಅಮಾನವೀಯವಾಗಿ ಕೊಲ್ಲುತ್ತಾರೆ : ತಮಾಷೆ ಎಂದರೆ – ಬದುಕಲು ಬೇಕಾದ ಅರ್ಥಪೂರ್ಣತೆಯೇ ಸಾವಿಗೂ ಬೇಕಾಗಿರುವುದು ! ಈ ಕಾರಣದಿಂದಾಗಿ ಬದುಕಿನ ಅರ್ಥಪೂರ್ಣತೆ ಒಂದು ತುರ್ತಾದ ಸಮಸ್ಯೆಯಾಗಿದೆ.

ಈ ಸಮಸ್ಯೆಗೆ ಉತ್ತರವನ್ನು ತಂದುಕೊಳ್ಳುವುದಾದರೂ ಹೇಗೋ ?

ಸಾಕ್ಷಿಚಿತ್ತ ಹಾಗೂ ಭಾವನಾಮಯತೆಯ ಮಧ್ಯದ ಸಮತೋಲನವೇ ಮನುಷ್ಯನನ್ನು ಒಮ್ಮೆಲೆ ಚಿತ್ತನೈರ್ಮಲ್ಯ ಹಾಗೂ ಕಾಮನೆಗಳತ್ತ ಎಳೆದುಹೊಯ್ಯುತ್ತದೆ. ಒಮ್ಮೆಲೆ ಅಷ್ಟೊಂದು ದೀನವಾದ ಹಾಗೂ ಅಷ್ಟೇ ತೀವ್ರವಾದ ವಸ್ತುಸ್ಥಿತಿಯನ್ನು ವಿಶ್ಲೇಷಿಸಿದಾಗ, ಜ್ಞಾನಿ ಹಾಗೂ ಸನಾತನಿ ತನ್ನ ಲೋಕ ಪ್ರಜ್ಞೆ ಹಾಗೂ ಅರಿವಿನ ಪ್ರಜ್ಞೆಗಳನ್ನು ವಿನಯದಿಂದ ಅನ್ವೇಷಿಸತೊಡಗಬೇಕಾಗುತ್ತದೆ :

ಆತ್ಮಹತ್ಯೆಯನ್ನು ಸಾಮಾನ್ಯವಾಗಿ ಸಾಮಾಜಿಕ ಸಮಸ್ಯೆಯಾಗಿ ಮಾತ್ರ ನೋಡಲಾಗುತ್ತಿದೆ. ಆದರೆ, ಇದಕ್ಕೆ ವಿರುದ್ಧವಾಗಿ ವೈಯಕ್ತಿಕ ಪ್ರತಿಕ್ರಿಯೆ ಹಾಗೂ ಆತ್ಮಹತ್ಯೆಯ ಮಧ್ಯದ ಸಂಬಂಧಗಳನ್ನು ವಿಶ್ಲೇಷಿಸು

ತ್ತಿದ್ದೇವೆ. ವ್ಯಕ್ತಿ ತನ್ನ ಹೃದಯದ ಮೌನದಲ್ಲಿ ಒಂದು ಕಲಾಕೃತಿಯನ್ನು ನಿರ್ಮಿಸುವಂತೆ ಆತ್ಮಹತ್ಯೆಯನ್ನೂ ನಿರ್ಮಿಸಿಬಿಟ್ಟಿರುತ್ತಾನೆ ! ಅವನಿಗೆ ತನ್ನ ಈ ಮಾನಸಿಕ ಕೃತ್ಯದ ಅರಿವೇ ಇರುವುದಿಲ್ಲ !- ಆ ವ್ಯಕ್ತಿ ಯೋಚಿಸಲು ಆರಂಭಿಸಿದನೆಂದರೆ ತನ್ನ ಗೋರಿಯನ್ನು ತಾನು ತೋಡಿಕೊಳ್ಳಲು ಆರಂಭಿಸಿದನೆಂದೇ ಅರ್ಥ : ಹೃದಯದ ಮೌನದಲ್ಲಿ ಕಂಡೂ ಕಾಣದಂತೆ ಇರುವ ಈ ಹುಳು ಅವ್ಯಕ್ತವಾಗಿ ಬೆಳೆಯತೊಡಗಿ, ವ್ಯಕ್ತಿ ತನ್ನ ಚಿತ್ತ ನೈರ್ಮಲ್ಯವನ್ನು ಕಳೆದುಕೊಂಡು ಬಾಳಿನ ಬೆಳಕಿನಿಂದಲೇ ಅಸ್ತಂಗಮಿಸು ವಂತೆ ಮಾಡಿಬಿಡುತ್ತದೆ. ಭಾವಶುದ್ಧಿಯಿಂದ ಆತ್ಮಹತ್ಯೆಯನ್ನು ಅಪ್ಪುವವರು ತೀರ ತೀರ ವಿರಳ. ಪತ್ರಿಕೆಗಳು 'ವೈಯಕ್ತಿಕ ದುಃಖ'ದಿಂದ ಅಥವಾ 'ವಾಸಿಯಾಗದ ಖಾಯಿಲೆ'ಯಿಂದ ಆತ್ಮಹತ್ಯೆ ನಡೆಯಿತೆನ್ನು ತ್ತಾರೆ. ಈ ವಿವರಣೆಗಳು ಅಪೂರ್ಣ; ಅರ್ಥಹೀನ.

ಒಂದು ಅರ್ಥದಲ್ಲಿ, ಮೆಲೋಡ್ರಾಮಾಗಳಲ್ಲಾಗುವಂತೆ ಆತ್ಮಹತ್ಯೆ ಎಂದರೆ ಆತ್ಮನಿವೇದನೆಯೇ. "ಬದುಕು ಭರಿಸಲು ಅಗಾಧವಾಯಿತು ಅಥವಾ ಅರ್ಥಾತೀತವಾಯಿತು" – ಎಂದು ಆ ಆತ್ಮನಿವೇದನೆ ಸಾರುತ್ತದೆ. ಸಹಜವಾಗಿಯೇ, ಬದುಕುವ ಕ್ರಿಯೆ ಇದೆಯಲ್ಲ, ಅದು ಸುಲಭಸಾಧ್ಯ ವಾದುದೇನೂ ಅಲ್ಲ : ಬದುಕುವುದು ಒಂದು ಮೂಲಭೂತವಾದ 'ಚಟ' ವಾಗಿರುವುದರಿಂದ ಮನುಷ್ಯ ಬದುಕುವ ಯಾಂತ್ರಿಕ ಕ್ರಿಯೆ ನಡೆಸು ತ್ತಾನೆಯೇ ಹೊರತು, ಅನ್ಯಕಾರಣಗಳಿಂದಲ್ಲ ; ಈ ಚಟದ ಅವಗುಣದ ಅರಿವಾದಾಗ, ಅಥವಾ ಬದುಕುವ ಕ್ರಿಯೆಗೆ ಇದ್ದ ಅಗಾಧ ಅರ್ಥಪೂರ್ಣತೆ ಗೈರುಹಾಜರಾಗಿ, ಯಾತನೆಯ ಅರ್ಥಹೀನತೆ ಹಾಗೂ ತೀವ್ರ ಕಿರಿಕಿರಿಯ ಪ್ರಜ್ಞೆ ಸಕತ್ತಾಗಿ ಮೂಡಿದಾಗ ಮನುಷ್ಯ ಸಾವಿನತ್ತ ಸಾಗುತ್ತಾನೆ. ಬದುಕಿನ ಭ್ರಮೆಗಳನ್ನು ಹಾಗೂ ಬೆಳಕನ್ನು ಕಳೆದುಕೊಂಡವನು ಈ ಜಗತ್ತಿನ ಪಾಲಿಗೆ ಅಪರಿಚಿತನೂ, ಅಷ್ಟೇ ಮಟ್ಟಿಗೆ ಹೊರಗಿನವನೂ ಆಗಿ ಬಿಡುತ್ತಾನೆ. ಅವನ ಈ ಭವ್ಯ ನಿಷ್ಕ್ರಮಣಕ್ಕೆ ಕಾರಣವೆಂದರೆ ಕಳೆದು ಹೋದ ತನ್ನ ಮನೆಯನ್ನು ಹುಡುಕುತ್ತಿದ್ದ ಸ್ಮೃತಿ ಅವನಿಗೆ ತಪ್ಪಿ ಹೋಗಿರುವುದು ಅಥವಾ ವಾಗ್ದಾನವಾಗಿದ್ದ ಭೂಮಿ ಅವನಿಗೆ ದಕ್ಕದೇ ಉಳಿದುಬಿಟ್ಟಿರುವುದೇ ಆಗಿರುತ್ತದೆ. ಈ ಮನುಷ್ಯ ಮತ್ತು ಅವನ ಬದುಕಿನ ವಿಚ್ಛೇದನವೇ ಅಸಾಂಗತ್ಯದ ಅಥವಾ ಅಸಂಬದ್ಧತೆಯ ಮೂಲಮಂತ್ರ.

ಬದುಕಿನಲ್ಲಿ ಹೀಗೆ ರಾಚಿಬಿದ್ದಿರುವ ಮೂಲ ಅಸಂಬದ್ಧತೆ ಹಾಗೂ ಆತ್ಮಹತ್ಯೆಯ ಸಂಬಂಧಗಳನ್ನೇ ಮನುಷ್ಯ ಅಭ್ಯಸಿಸಬೇಕಾಗಿರುವುದು· ಅಸಂಬದ್ಧತೆಯಲ್ಲಿನ ನಂಬಿಕೆಗಳೇ ಮನುಷ್ಯನ ಈ ನಡವಳಿಕೆಗಳ ಹಿಂದಿರುವ ಮೂಲ ಸೂತ್ರ ಆಗಿದ್ದೇ ತೀರಬೇಕು. ತಮ್ಮಲ್ಲಿ ತಮಗೆ ಇರಲೇಬೇಕಾದ ಸಾಮರಸ್ಯವನ್ನು ಕಳೆದುಕೊಂಡವರನ್ನು ಕುರಿತು ನಾವೀಗ ವಿಶ್ಲೇಷಿಸುತ್ತಿದ್ದೇವೆ. ಅಸಂಬದ್ಧ ಮಾನಸಿಕ ಸ್ಥಿತಿಗೆ ಇರುವ ಏಕಮಾತ್ರ ತಾತ್ವಿಕ ಪರಿಹಾರ : ಆತ್ಮಹತ್ಯೆ ಅಥವಾ ಬದುಕಿನೊಡನೆ ರಾಜಿ. ವಿಶ್ಲೇಷಣೆ ತೀರ ಸರಳೀಕೃತವಾಗಿ ಹೋಯ್ತಿತು! ಪರಿಹಾರರಹಿತವಾಗಿ ಪ್ರಶ್ನಿಸುತ್ತಲೇ ಹೋಗುವವರ ಪೈಕಿ ಕೂಡ, ಆತ್ಮಹತ್ಯೆಯನ್ನು ಸ್ವೀಕರಿಸಿದವರು ಬದುಕಿನೊಡನೆ ರಾಜಿಯಾದವರಂತೆ ಅಥವಾ ಅರ್ಥವನ್ನು ಕಂಡುಕೊಂಡವರಂತೆ ನಟಿಸುತ್ತಲೂ ಇರುತ್ತಾರೆ ಅಥವಾ ಅರ್ಥವನ್ನು ಕಂಡುಕೊಳ್ಳುತ್ತಿರುತ್ತಾರೆ; ಅಥವಾ ಅರ್ಥವನ್ನು ಕಂಡುಕೊಂಡು ಅದನ್ನು ದಕ್ಕಿಸಿಕೊಳ್ಳಲಾರದವರಾಗಿರುತ್ತಾರೆ.

ಜಗತ್ತಿನ ಎಲ್ಲ ವಾಸಿಮಾಡಲಾಗದ ಖಾಯಿಲೆಗಳನ್ನೂ ಮೀರಿಸಿದ್ದು ಏನೋ ಒಂದು ಮನುಷ್ಯನ ಇರುವಿಕೆಗೆ ಕಾರಣೀಭೂತವಾಗಿರಲೇಬೇಕು! ಚಿಂತಿಸುವ ಚಟ ನಮ್ಮದಾಗುವ ಮೊದಲಿಗೇ ಜೀವಿಸುವ ಚಟ ನಮ್ಮದಾಗಿ ಹೋಗಿರುತ್ತದೆ. ಶರೀರದ ನಿರ್ಧಾರಗಳು ಮನಸ್ಸಿನ ನಿರ್ಧಾರಗಳಷ್ಟೇ ಸತ್ವಪೂರ್ಣವಾಗಿದ್ದರೂ ಶರೀರ ಕೃಶವಾಗುತ್ತಾ ಸಾಗುತ್ತಿರುತ್ತದೆ.

ಆದ್ದರಿಂದಲೇ, ಬದುಕನ್ನು ಮೀರಿದ ಆಸೆಯೊಂದು, ಬದುಕಿಗೆ ಅರ್ಥಪೂರ್ಣತೆಯನ್ನು ತಂದುಕೊಡುತ್ತದೆಯಾದರೂ ಅಂತಿಮವಾಗಿ ಅದೂ ಮನುಷ್ಯನನ್ನು ಮೋಸಗೊಳಿಸಿಯೇ ತೀರುತ್ತದೆ. ಅಂದಮೇಲೆ ಮತ್ತೆ ಅಸ್ಪಷ್ಟತೆ ತಲೆ ಎತ್ತಿಯೇ ತೀರುತ್ತದೆ! ಅಸಂಬದ್ಧತೆ ರಾಚಿ ನಿಂತೇ ತೀರುತ್ತದೆ!! ಹಾಗಾದರೆ ಪರಿಹಾರ? ಅಸಂಬದ್ಧತೆ ಸಾವನ್ನು ವಿಧಿವತ್ತಾಗಿ ಆಜ್ಞಾಪಿಸುತ್ತದೆ ಏನು? ಹಾಗೆಂದುಕೊಳ್ಳುವುದು ನ್ಯಾಯಬಾಹಿರವಾದ ಶುದ್ಧ ತಾರ್ಕಿಕತೆ. ತಾರ್ಕಿಕವಾಗಿಯೇ ಉಳಿದು ಬಿಡುವುದು ತುಂಬಾ ಸುಲಭ. ಗರ್ಭಮೂಲದವರೆಗೂ ತರ್ಕವನ್ನು ಎಳೆದೊಯ್ಯುವುದು ಮಾತ್ರ ಅಸಾಧ್ಯದ ಅರ್ಥಹೀನ ಸಾಧ್ಯತೆ!

—ಇದೇ ಒಂದು ಅಸಂಬದ್ಧವಾದ ಚಿಂತನೆ: ಬುದ್ಧಿ ಸೋತು ಮುಂದೆ ನುಗ್ಗಲಾಗದ ನಿಗೂಢ ಸ್ತರಗಳನ್ನು ಎಲ್ಲರೂ ಅನುಭವಿಸಿಯೇ ತೀರುತ್ತಾರೆ. ಆ ಸ್ಥಿತಿ ಪ್ರಾಪ್ತವಾದಾಗ, ಸರ್ವ ಸಾಮಾನ್ಯವಾಗಿ ಎಲ್ಲರೂ ಬುದ್ಧಿಯನ್ನು ಕೈ ಬಿಟ್ಟು ಬದುಕಿನ ಮರೆಹೋಗಿಬಿಡುತ್ತಾರೆ ; ಉಳಿದ ಕೆಲವರು ಮಾತ್ರ ಆ ಬುದ್ಧಿಯ ವಿರುದ್ಧ ಬಂಡೆದ್ದು, ಆತ್ಮಹತ್ಯೆಯನ್ನು ಏಕಮಾತ್ರ ಪರಿಹಾರ ವಾಗಿ ಅಪ್ಪುತ್ತಾರೆ. ಆಧುನಿಕ ಬದುಕಿನ ದುರಂತ ಇರುವುದೇ ಈ ಅಸಂಬದ್ಧತೆಯಲ್ಲಿ-ಕಾರಣ, ಮನುಷ್ಯನ ಬದುಕು ನಾಗರಿಕತೆ ಬೆಳೆ ದಂತೆಲ್ಲಾ ಹೆಚ್ಚೆಚ್ಚು ಅಸಂಬದ್ಧ ಪ್ರಲಾಪವಾಗುತ್ತಿದೆ ; ಅವನು ಈ ಜಗತ್ತಿಗೆ ಅನ್ಯನೂ, ಅಪರಿಚಿತನೂ ಹಾಗೂ ಇಲ್ಲಿ ತನ್ನ ಬದುಕು ಇಲ್ಲದ ವನೂ ಆಗಿಬಿಡುತ್ತಾನೆ.

ಅತ್ಯುತ್ಕಟವಾದ ಚಿಂತನೆಗಳು—ಶ್ರೇಷ್ಠ ಕೃತಿಗಳಲ್ಲಿನಂತೆ- ತಾವು ಬಯ ಸಿದ್ದಕಿಂತಲೂ ಹೆಚ್ಚಿನದನ್ನು ಹೇಳುತ್ತವೆ; ಮನಸ್ಸಿನ ಅರಿವಿಗೆ ಅತೀತವಾದ ಸ್ತರಗಳಿಂದ ಮಾತನಾಡುತ್ತವೆ. ಅಂದರೆ, ಜಗತ್ತೆಂದರೆ ಒಂದು ಮಾನಸಿಕ ಪ್ರತಿಕ್ರಿಯೆಯಾಗಿರುವಂತೆಯೇ ಅಥವಾ ಅಸಂಬದ್ಧ ಪ್ರಲಾಪರಾಗಿರು ವಂತೆಯೆ ಒಂದು ಆಧ್ಯಾತ್ಮಿಕ ಅಥವಾ ತಾತ್ವಿಕ ಸತ್ಯವೂ ಆಗಿದೆ; ಅನ್ವೇಷಣೆಯೂ ಆಗಿಯೇ ತೀರಿದೆ.

ಜೀವನರಸ್ತೆಯ ಯಾವುದೇ ಮೂಲೆಯಲ್ಲಿ ಬೇಕಾದರೂ ಸರಿಯೆ ಈ ಅಸಂಬದ್ಧತೆಯ ಕರಾಳ ನಗ್ನತೆ ಮನುಷ್ಯನ ಮುಖಕ್ಕೆ ರಾಚಿ ಬಡಿದು ಬಹುದು.

ಮನುಷ್ಯ ನಮಗೆ ಎಂದೆಂದಿಗೂ ಅಪರಿಚಿತನಾಗಿಯೇ ಉಳಿದು ಬಿಡುತ್ತಾನೆ, ಎನ್ನುವುದು ನಿಜವಿರಲೇಬೇಕು— ಏಕೆಂದರೆ, ಆತನಲ್ಲಿ ಯಾವುದೋ ಅವಿನಾಶಿಯಾದ ಶಕ್ತಿಯೊಂದು ಇದ್ದು, ಅದು ಗ್ರಹ್ಯಾತೀತ ವಾಗಿ ಉಳಿದುಬಿಟ್ಟಿದೆ! ಆದರೂ, ಮನುಷ್ಯನನ್ನು ಅವನ ನಡಾವಳಿ, ಅವನು ಎಸಗುವ ಕೃತ್ಯಗಳು, ಹಾಗೂ ಅವನ ಬಾಳಿನ ಹಾಗುಹೋಗು ಗಳಿಂದ ನಿಖರವಾಗಿ ಅವನನ್ನು ಅಳೆಯುವ ರೀತಿಯಲ್ಲೇ, ಅವನ ಅಸಂಬದ್ಧ ಭಾವನೆಗಳನ್ನೂ ಗುರುತು ಹಚ್ಚಿಬಿಡಬಹುದು.

ಎಲ್ಲ ಶ್ರೇಷ್ಠ ಸಾಧನೆಗಳು ಹಾಗೂ ಚಿಂತನೆಗಳು ಆರಂಭದಲ್ಲಿ ತುಚ್ಛ

ವಾಗಿಯೇ ಇರುತ್ತವೆ–ಬಹುಮಟ್ಟಿಗೆ. ಹಾಗೆಯೇ ಈ ಅಸಂಬದ್ಧತೆ ಕೂಡ ತನ್ನ ಉಗಮವನ್ನು ಹೀನಗರ್ಭದಲ್ಲೇ ಸ್ವೀಕರಿಸಿದೆ. ಕೆಲವು ಸಂದರ್ಭಗಳಲ್ಲಿ ಆಳವಾಗಿ ಯೋಚಿಸುತ್ತಿರುವವನನ್ನು 'ಏನು ಯೋಚಿಸುತ್ತಿದ್ದಿ?' ಎಂದು ಕೇಳಿದರೆ 'ಏನೂ ಇಲ್ಲ!' ಎಂದು ಹೇಳುವುದು ನಟನೆಯೂ ಆಗಿರಬಹುದು. (ಪ್ರೇಮಿಸಲ್ಪಟ್ಟವರಿಗೆ ಇದರ ಅನುಭವ ಅಪಾರ.) ಆದರೆ, ಆತನ ಉತ್ತರ ಪ್ರಾಮಾಣಿಕವಾಗಿದ್ದು, ಆದು ಒಳಗಿನ ಶೂನ್ಯ ಹೆಚ್ಚು ಬಡಬಡಿಸುವಂತಾದ ಆತ್ಮನ ವಿಚಿತ್ರ ಸ್ಥಿತಿಯನ್ನು ಸಂಕೇತಿಸುತ್ತಿದ್ದರೆ, ಆದರಿಂದಾಗಿ ದೈನಂದಿನ ಸಂವೇದನಾ ಕ್ರಿಯೆಗಳ ಚಿನ್ಹೆಗಳ ಪರಂಪರೆ ಹರಿದೇ ಹೋಗಿದ್ದರೆ, ಅದೇ ಕಾರಣಕ್ಕೆ ಹೃದಯ ತನ್ನ ಸಂವಾದದ ತಂತನ್ನು ನಿರ್ಮಿಸಿಕೊಳ್ಳುವ ವ್ಯರ್ಥ ಪ್ರಯತ್ನದಲ್ಲಿದ್ದರೆ, ಅದೇ ಬದುಕಿನ ಆಳಕ್ಕೆ ನುಣಿಚಿಕೊಳ್ಳುತ್ತಿರುವ ಆ ಅಸಂಬದ್ಧತೆಯ ಮೊದಲ ಕುರುಹು.

ಬಾಳಿನ ರಂಗಸಜ್ಜಿಕೆ ಇದ್ದಕ್ಕಿದಂತೆಯೇ ಒಂದು ದಿನ ತನಗೆ ತಾನೇ ದಿಢೀರನೆ ಕಳಚಿಬಿದ್ದು ಹೋಗಿಬಿಡುತ್ತದೆ.

ಶತಮಾನಗಳಿಂದ, ಅಪ್ಪ ಅಜ್ಜ ಮುತ್ತಜ್ಜ ಅವರಜ್ಜರ ಮೂಳಜ್ಜರ ಕಾಲದಿಂದ ಎಡಬಿಡದೆ ನಡೆಸುತ್ತಾ ಬಂದ ಅದದೇ ಊಟ, ನಿದ್ದೆ, ಭಯಾದಿಗಳ ಕಾಟ, ಮೈಥುನ ಹಾಗೂ ಕೂಲಿ ಮತ್ತು ಕಂಬಳಗಳ ಯಾಂತ್ರಿಕ ಕ್ರಿಯೆಯಲ್ಲಿ ಸಿಕ್ಕಿ ಬಿದ್ದಿರುವ ಅಸಹಾಯಕತೆಯ ಸುಸ್ತು ಒಂದು ದಿನ ಥಟ್ಟನೆ ಸಾಕ್ಷಾತ್ಕಾರವಾಗುತ್ತದೆ; ಮೊಮ್ಮಗ ಮೂಳಮಗನ ಕಾಲಕ್ಕೂ ಈ ಅಪರಿಹಾರ್ಯ ಅಸಹಾಯಕ ಯಾಂತ್ರಿಕತೆ ಸಾಗಿಯೇ ತೀರುವುದರ ಅರಿವು ಇದೆಲ್ಲ 'ಏಕೆ ?' ಎನ್ನುವ ಪ್ರಶ್ನೆಯಾಗಿ ಸಿಡಿದು ಆ ಸುಸ್ತು ಆಶ್ಚರ್ಯ ಹಾಗೂ ದಿಗ್ಭ್ರಮೆಗೆ ಮನುಷ್ಯನನ್ನು ಕೊಂಡೊಯ್ಯುತ್ತದೆ. ಆಗ ಆ ಮನುಷ್ಯ ಜಾಗೃತನಾಗುತ್ತಾನೆ. ವರ್ಣರಹಿತ ಬದುಕನ್ನು ನಮಗೆ ಅರಿವಿಲ್ಲದಂತೆ ಕೊಂಡೊಯ್ಯುತ್ತಿದ್ದ ಕಾಲ ಆ ದಿನ ತಟಸ್ಥವಾಗುತ್ತದೆ. ಆಗ, ನಾವು ಅದನ್ನು, ಆ ಹೊರಲಾರದ ಜಾಗೃದಾವಸ್ಥೆಯನ್ನು, ಹೊತ್ತೇ ತೀರಬೇಕಾಗುತ್ತದೆ. ಬದುಕಿನೊಡನೆ ಲೀನವಾಗಿ ಬಿಡುವ ಅಥವಾ ಅದರ ವಿರುದ್ಧ ಆಂದೋಲನಕ್ಕೆ ನಿಲ್ಲಬೇಕಾದ ಕವಲು ದಾರಿ ಅದು. ಆ ಜಾಗೃದಾವಸ್ಥೆ ಹಾಗೆಯೇ ಉಳಿದೇ ಬಿಟ್ಟರೆ

ಆತನ ಪಾಲಿಗೆ 'ಆತ್ಮಹತ್ಯೆ ಮನುಷ್ಯನ ನ್ಯಾಯಬದ್ಧ ಅವಶ್ಯಕತೆ' ಎನ್ನಿಸುತ್ತದೆ.; ಆಗ, ಆತ ಈ ವಿಶೇಷ ಪ್ರಜ್ಞೆಯಿಂದ ಚೇತರಿಸಿಕೊಳ್ಳಬೇಕಾಗುತ್ತದೆ; ಇಲ್ಲವೆ, ತನ್ನ ಸಾವನ್ನು ಪ್ರೀತಿಯಿಂದ ತಾನಾಗಿಯೇ ಬೇಡಿ ಬೇಡಿ ಸ್ವೀಕರಿಸಬೇಕಾಗುತ್ತದೆ.

ತಾನು ಕಾಲನ ಗುಲಾಮನಾಗಿರುವ ದುರಂತ ತಂದ ದಿಗ್ಭ್ರಮೆಯಲ್ಲಿ ಆತ ತನ್ನ ಮಾಂಸಮಯವಾದ ಅಥವಾ ಕರ್ಮ ಬಂಧವಾದ ಶರೀರದ ವಿರುದ್ಧ ಕೈಗೊಂಡ ಕ್ರಾಂತಿಯೆ ಅಸಂಬದ್ಧವಾದ.

ಇಂತದೇ ಸ್ಥಿತಿ ನಾವು ಪ್ರಕೃತಿಯ ಸೌಂದರ್ಯವೆಂದು ಇಷ್ಟು ಕಾಲವೂ ಆರಾಧಿಸುತ್ತಿದ್ದ ಭ್ರಮಾತ್ಮಕ ಸ್ಥಿತಿ ಕಳಚಿಬಿದ್ದಾಗಲೂ, ಅಂದರೆ, ಜಗತ್ತು ಬೇರೆಯೇ ಆಗಿಬಿಟ್ಟು, ತನ್ನ ಮೂಲ ಸ್ಥಿತಿಗೆ ತಾನು ಮರಳಿ, ತನ್ನ ಕಂದನಾದ ಮನುಷ್ಯನನ್ನು ಅನಾಥನನ್ನಾಗಿ ಮಾಡಿದಾಗಲೂ ಪ್ರಾಪ್ತವಾಗುತ್ತದೆ.

ಗಾಜಿನ ತೆರೆಯ ಹಿಂದೆ ಫೋನಿನಲ್ಲಿ ಮಾತನಾಡುತ್ತಿರುವ ಮನುಷ್ಯನ ಧ್ವನಿ ಕೇಳಿಸದೇ ಹೋದ ಸ್ಥಿತಿಯಲ್ಲಿ, ಅವನ ಅರ್ಥಹೀನ ಮೂಕಾಭಿನಯದ ವಿಪರ್ಯಾಸ ಎದೆಯನ್ನು ಬಿರಿಸುತ್ತದೆ. ಬದುಕಿನಲ್ಲಿ ರಾಚಿಬಿದ್ದಿರುವ,ಈ ಅಸಂಬದ್ಧತೆಯ ಬಗ್ಗೆ ನಾವು ಮೈ ಮರೆತಿದ್ದ ಹೀನಸ್ಥಿತಿ ನೆನಪಾಗಿ ಬದುಕಿನ ತುಚ್ಛ ಸ್ಥಿತಿಯ ಬಗ್ಗೆ ವಾಕರಿಕೆ ಬರುತ್ತದೆ.

ಸುತ್ತಲವರು ಸತ್ತಾಗಲೂ ಇಂತಹದ್ದೇ ವಿಪರ್ಯಾಸ ಅಥವಾ ಆಭಾಸ ಪ್ರಾಪ್ತವಾಗಿ, ಎಲ್ಲದರ ಅಂತ್ಯವಾದ ಸಾವಿನ ಕಠೋರ ಸತ್ಯದ ಅರಿವೇ ಇಲ್ಲದಂತೆ ಬದುಕುತ್ತಿರುವ ಸುತ್ತಲವರನ್ನು ಕಂಡಾಗ, ತಾನೂ ಅವರಲ್ಲಿ ಒಬ್ಬನಾಗಿರುವುದರ ಜಾಗೃದಾವಸ್ಥೆ ಮೂಡಿ, ಮೂದಲಿಸತೊಡಗಿದಾಗ, ಮನುಷ್ಯನ ಬದುಕಿನ ಎರವಲುತನ ಅಥವಾ ಹಂಗು ಬೇಡವಾಗುತ್ತದೆ. ಆತ್ಮನ ಬಗೆಗಿನ ಎಲ್ಲ ಮಾತುಗಳೂ ಅದರ ಅವಹೇಳನಮಾತ್ರವಾಗಿರುತ್ತದೆ. ಎಲ್ಲ ಕಲಿಕೆ, ಪ್ರಯತ್ನ, ಆಶೋತ್ತರಗಳು ವ್ಯರ್ಥಮಾತ್ರವಾಗಿರುವ, ಯಾರೋ ಜೋಡಿಸಿಟ್ಟ ಅನ್ನಮಯ, ಪ್ರಾಣಮಯ, ಮನೋಮಯ ಹಾಗೂ ಬುದ್ಧಿಮಯ ಸ್ತರಗಳ ರೋಬೊಟ್‌ನಲ್ಲಿ ಅವು ನನ್ನದೆನ್ನುವ ಭ್ರಮೆಯಲ್ಲಿ ವಾಸಿಸುವುದು ಇನ್ನು ದುಃಸಾಧ್ಯವಾಗಿಬಿಡುತ್ತದೆ. •

–ಈ ಎಲ್ಲ ಅಸಂಬದ್ಧತೆಗಳ ಗೋಜಲು ಗೋಜಲಲ್ಲಿ ಬದುಕಬೇಕೆ? ಅಥವಾ ಇಚ್ಛೆಯಿಂದ ಮರಣದತ್ತ ಸರಿಯಬೇಕೆ?

ಮನಸ್ಸು ಹಾಗೂ ಬುದ್ಧಿಮಾತ್ರವೇ ಇವೆಲ್ಲದರ ಮೂಲಭೂತ ಸತ್ಯವಾಗಿರುವುದರಿಂದ, ಅವುಗಳ ಮೂಲಕವೇ ಅಸಂಬದ್ಧತೆಯನ್ನು ವಿಶ್ಲೇಷಿಸಿ, ಪರಿಣಾಮದಲ್ಲಿ ಮಾಯಾಜಾಲವಾಗಿರುವ ಈ ಬದುಕನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ನಿರ್ಧಾರದ ಅಂತಿಮ ನಿಲುವನ್ನು ಧರಿಸಿಯೇ ತೀರಬೇಕಾಗಿದೆ.

*

ಮನಸ್ಸಿನ ಆಚಲ ವಲಯಗಳಲ್ಲೆಲ್ಲೂ ಅಸಂಬದ್ಧತೆ ಇಲ್ಲವೇ ಇಲ್ಲ! ಈ ಗೋಳದ ಆಚೆಯಲ್ಲಿ ಎಲ್ಲೂ ಈ ವಿಪರ್ಯಾಸ ಇರುವ ಸಾಧ್ಯತೆ ಇಲ್ಲವೂ ಇಲ್ಲ!!—

ಪರಮ ಸತ್ಯ ಒಂದನ್ನು ಸಾಕ್ಷಾತ್ಕರಿಸಿಕೊಂಡಮೇಲೆ, ಅದನ್ನು ಮನಸಾ ನಂಬಿ ಅದಕ್ಕಾಗಿ ಸಾಯಬೇಕಾಗುತ್ತದೆ; ಅಂದರೆ, ಆ ನಂಬಿಕೆಯನ್ನೇ ಮನಸಾ ಬಾಳಿನ ಆಳ ಎತ್ತರ ಹಾಗೂ ಉದ್ದ ಅಗಲಕ್ಕೂ ಧಾರಣಮಾಡಿ ಕೊಳ್ಳಬೇಕಾಗುತ್ತದೆ.

ಅಸಂಬದ್ಧತೆಯು ನಂಬಿಕೆಗಳಿವೆಯಲ್ಲ, ಅವು ಅಸಂಬದ್ಧತೆಯ ಭ್ರಮೆ ಗಳೇನೂ ಅಲ್ಲ. ಅದು ಜಗತ್ತಿನ ಬಗ್ಗೆ ಕೊಡುವ ನಿರ್ಣಯಗಳ ಕೆಲವೇ ಕೆಲವು ಕ್ಷಣಗಳನ್ನು ಬಿಟ್ಟರೆ, ಆ ಅಸಂಬದ್ಧತೆ ತನ್ನ ಅನಿಸಿಕೆಗಳಿಗೆ ಮಾತ್ರವೇ ಸೀಮಿತವೂ ಅಲ್ಲ. ಆದ್ದರಿಂದಾಗಿಯೇ, ಅದು ಜೀವಂತವಾದ ಸತ್ಯವಾಗಿರುವ ಕಾರಣಕ್ಕಾಗಿಯೇ, ಅದು ನಶಿಸಿಹೋಗಲೇಬೇಕಾಗಿರುವ, ಅಥವಾ ಪುನರುಸ್ಥಾನಗೊಳ್ಳಬೇಕಾಗಿರುವ ಜೀವಂತತೆ. ಅಸಂಬದ್ಧತೆ ಎಂದರೆ ಅರ್ಥರಹಿತತೆಯಾದಕಾರಣ, ಈ ಅರ್ಥರಹಿತತೆಯಲ್ಲಿ ಎಷ್ಟು ಸ್ಪಷ್ಟತೆ ಅಥವಾ ಸುಸಂಬದ್ಧತೆ ಇದೆ ಹಾಗೂ ಅದರ ವಿಶ್ಲೇಷಣೆಯಿಂದಾಗಿ, ಹಾಗೊಮ್ಮೆ ಅದರಲ್ಲೂ ಒಂದು ವಿಶೇಷ ಅರ್ಥವಿರುವುದೇ ಆದರೆ, ಅದರ ಅರ್ಥವಂತಿಕೆಯಾದರೂ ಏನು ಹಾಗೂ ಅದು ಪರಿಣಮಿಸುವ ಸನ್ನಿವೇಷ ಗಳು ಎಂಥವು ಎಂದು ತಿಳಿದುಕೊಳ್ಳುವುದು ಅತಿ ತುರ್ತಾದ ಆವಶ್ಯಕತೆ

ಯಾಗಿದೆ. ಸಮಸ್ಯೆಯೊಂದಕ್ಕೆ ಪರಿಹಾರವನ್ನು ತಂದುಕೊಳ್ಳುವಾಗ, ಪರಿಹಾರದ ಕಾರಣಕ್ಕಾಗಿಯೇ ಸಮಸ್ಯೆಯ ಕಾಯಿದೆಗಳನ್ನು ಮೀರಿಯ ಬಾರದು. ಸಮಸ್ಯೆಯ ಮೂಲಪಾಯವೇ ಶುದ್ಧ ಅಸಂಬದ್ಧತೆ.

ತಾನು ಅನ್ವೇಷಿಸಿದ ಸೂತ್ರದ ಕೈಗೊಂಬೆ ಮಾತ್ರ ಮನುಷ್ಯ !–ಆ ಸೂತ್ರಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡ ಮೇಲೆ ಅದರಿಂದ ಆತನೆಂದೂ ಮುಕ್ತನಾಗುವಂತೆಯೇ ಇಲ್ಲ. ಅಸಂಬದ್ಧತೆಯನ್ನು ಪ್ರಜ್ಞಾಪೂರ್ವಕ ವಾಗಿ ಸ್ವೀಕರಿಸಿದಾತ, ಆಸೆಗಳಿಂದ ವಂಚಿತವಾಗಿ, ಭವಿಷ್ಯವೆಂದರೆ ಏನೆಂದೇ ಗೊತ್ತಿಲ್ಲದವನಾಗಿ ಬಾಳಬೇಕಾಗುತ್ತದೆ. ಇದು ಕಠೋರವಾದ ಸಹಜತೆ: ಆದರೆ, ಇಷ್ಟೇ ಸಹಜವಾದ ಕಠೋರ ಸತ್ಯವೆಂದರೆ, ಆತ ತಾನಾಗಿಯೇ ಸೃಷ್ಟಿಸಿರುವ ಅಸಂಬದ್ಧ ಜಗತ್ತಿನಿಂದ ಹೊರ ಜಿಗಿಯಲೇಬೇಕಾಗಿರುವ ಅನಿವಾರ್ಯತೆ. ಅಸಂಬದ್ಧ ಜಗತ್ತನ್ನು ಸೃಷ್ಟಿಸಿ, ಅದರ ಅರ್ಥಹೀನ ಸ್ಥಿತಿಯ ಆಳದಲ್ಲಿ ಮುಳುಗಿ, ಮೇಲೇರಿ ಬರುವ ಪ್ರಯತ್ನವನ್ನು ತಾನೇ ಸೃಷ್ಟಿಸಿದ ಅರ್ಥಹೀನತೆಯ ಕಾರಣಕ್ಕೆ ಕೈಬಿಟ್ಟಿರುವ ಈ ಮನುಷ್ಯನನ್ನು ತೀರ ಹಗುರವಾದ ಕನಿಕರದಿಂದ ನೋಡಬೇಕಾಗಿದೆ. ಅಲ್ಲದೆ, ಅಸಂಬದ್ಧ ಜಗತ್ತಿನ ಅರ್ಥಹೀನತೆಯ ಮಹಾನ್ ಸೋಲು, ಸಾಧ್ಯವಿರುವ ಎಲ್ಲ ಟೀಕೆ ಟಿಪ್ಪಣಿ ಹಾಗೂ ವಿವರಣೆಗಳನ್ನು ಮೀರಿ, ಮಾನವ್ಯದ ಊರ್ಧ್ವಮುಖ ನಡೆಯ ಇರುವಿಕೆಯನ್ನು ಮಾತ್ರವೇ ಸಾರುತ್ತಿಲ್ಲವೆ? ಈ ಕಾರಣದಿಂದಾ ಗಿಯೇ ಅಸಂಬದ್ಧವಾದಿ ತಾನೇ ದೇವನಾಗಿಬಿಡುತ್ತಾನೆ. ಅವನ ಅಸಂಬದ್ಧ ಪ್ರಜ್ಞೆಯಲ್ಲಿನ ಅರ್ಥಗ್ರಹಿಕೆಯ ಶಕ್ತಿಯೇ ಎಲ್ಲವನ್ನೂ ಗ್ರಹಿಸುವ ಅಗಾಧ ಬೆಳಕಿನತ್ತ ಆತನನ್ನು ದಬ್ಬಿ, ಆತನಿಗೆ ದೈವತ್ವದ ಪಟ್ಟವನ್ನು ಕಟ್ಟಿದೆ! ಈ ಸ್ವದೈವತ್ವವನ್ನು ಯಾವುದೇ ವೈಚಾರಿಕತೆಯ ತರ್ಕವೂ ಆತನ ಪಾಲಿಗೆ ಆಗುಮಾಡಿಕೊಡಲಾರದು. ಆ ದೈವತ್ವದ ಪ್ರಜ್ಞೆಯನ್ನು ಅವನು ಒಂದು ಬಗೆಯ ಊರ್ಧ್ವಮುಖ ಭಾವುಕತೆಯಲ್ಲಿನ ಕುರುಡು ನಂಬಿಕೆಯಿಂದಲೇ ಸ್ವೀಕರಿಸಬೇಕಾಗುತ್ತದೆ. ಈ ಊರ್ಧ್ವಮುಖ ಪ್ರಜ್ಞೆಯನ್ನು ಅವನು ಅತ್ಯುತ್ಕಟವಾಗಿಯೇ ಪ್ರೇಮಿಸಬೇಕಾಗುತ್ತದೆ. ಜಗತ್ತು ಹಾಗೂ ಅನು ಭವದಲ್ಲಿರುವ ಅಂತಿಮವಾದ ಅವೈಚಾರಿಕತೆ ಹಾಗೂ ಅವುಗಳ ವಿವರಣೆಯ ಮಧ್ಯೆದಿಂದಲೇ ಅವನು ಈ ದೈವತ್ವಕ್ಕೆ ಏರಬೇಕಾಗಿದೆ. ಈ ಮಾತ್ರ

ಒಂದು ವಿಶೇಷ ಅರ್ಥದಲ್ಲಿ ಒಬ್ಬ ಆಧುನಿಕ ಅಸ್ತಿತ್ವವಾದಿ ಹೇಳುವ ಮಾತು ಮಾತ್ರ!

—ಇದಿಷ್ಟೂ ಆಧ್ಯಾತ್ಮಿಕ ಮನೋಧರ್ಮದ ಮಾತು. ಯಾವುದೇ ಮನೋಧರ್ಮದಷ್ಟೇ ಈ ಮನೋಧರ್ಮವೂ ನ್ಯಾಯಬದ್ಧವೇ! ಈ ಜಿಗಿತವೇ, ವೈಚಾರಿಕ ಭ್ರಮೆಗಳಿಂದ ಮುಕ್ತನಾಗುವುದೇ ಅಸಂಗತವಾದಿಯ ಪಾಲಿನ ಏಕಮಾತ್ರ ಮುಕ್ತಿ ಅಥವಾ ಅಂತಿಮ ಸ್ವಾತಂತ್ರ್ಯ ಎಂದು ತಾತ್ವಿಕರು ಶತಶತಮಾನಗಳಿಂದಲೂ ಹೇಳುತ್ತಲೇ ಬಂದಿದ್ದಾರೆ.

ಅಸಾಂಗತ್ಯದ ಪ್ರಜ್ಞೆ ಅದರ ಸ್ವೀಕಾರವನ್ನು ಹೇಳುತ್ತದೆ. ಅಸಂಗತ ವಾದಿಯ ಎಲ್ಲ ವಿವರಣೆಗಳು ಅಸಂಬದ್ಧತೆಯನ್ನು ಸ್ಪಷ್ಟಪಡಿಸುವ ಉತ್ಕಟ ಅವಸ್ಥೆಯಲ್ಲಿ, ಅದೇ ಕಾಲಕ್ಕೆ ತನ್ನಲ್ಲಿನ ಹೀನ ಸ್ಥಿತಿಯ ಸಾಧನೆಯ ಅಗಾಧ ಆಸೆಯನ್ನೇ ಅದು ಅಭಿವ್ಯಕ್ತಪಡಿಸಿಯೂ ಬಿಡುತ್ತದೆ.

ಇಂತಹ ದೈವತ್ವವಿದೆಯಲ್ಲ, ಅದು ಬೌದ್ಧಿಕತೆಯ ಬಲಿಯಿಂದ ದೊರೆತದ್ದು. ಇಂತಹ ಆಧ್ಯಾತ್ಮಿಕ ಆತ್ಮಹತ್ಯೆಯಿಂದ ಹೊಸದೇನೂ ಸಾಧಿತವಾಗುವುದಿಲ್ಲ: ಇಂತಹವನು ತನ್ನ ಅನುಭವಗಳಿಂದ ನೂತನ ಮೌಲ್ಯವೇನನ್ನೂ ಕಂಡುಕೊಳ್ಳದೇ ಹೋದವನು; ತನ್ನ ನಿರ್ವೀಯತೆಯನ್ನು ಮಾತ್ರ ತೋಡಿಕೊಂಡವನೂ ಆಗುತ್ತಾನೆ.

ಆದಿಭೌತಿಕ ಸಾವನ್ನು ತಂದುಕೊಂಡವನಿಂದ ಈ ಆಧ್ಯಾತ್ಮಿಕ ಸಾವನ್ನು ತಂದುಕೊಂಡವನು ಎಲ್ಲೂ ಶ್ರೇಷ್ಠನಲ್ಲವೇ ಅಲ್ಲ.

ಅಸಂಬದ್ಧವಾದಿ ಅನಂತದ ಜಿಗಿಹಲಗೆಯನ್ನು ಆಶ್ರಯಿಸಿದ ಕೂಡಲೇ ತನ್ನ ಇಂದ್ರಿಯಗಳ ಸ್ಪಷ್ಟತೆಯನ್ನು, ನಿಚ್ಚಳತೆಯನ್ನು ಕಳೆದುಕೊಂಡವನಾಗುತ್ತಾನೆ. ಅವನ ಸಾಧಿತ ದೈವತ್ವವೂ ಕುರುಡು ದೈವತ್ವವಾಗುತ್ತದೆ. ಮನುಷ್ಯನ ಪವಿತ್ರ ಹೋರಾಟಗಳು ಅಂತ್ಯಗೊಳ್ಳುತ್ತವೆ. ಆಧ್ಯಾತ್ಮವಾದಿಯ ಪಾಲಿಗೆ ವೈಚಾರಿಕತೆ ಒಂದು ವ್ಯರ್ಥ–ಆದರೆ, ವೈಚಾರಿಕತೆಯ ಆಚೆಗೆ ಅವನ ಬೆಳಕಿನ, ಕೊಡಲ್ಪಟ್ಟ ಅವ್ಯಕ್ತ ಆಸೆಗಳ ಲೋಕಗಳಿವೆ; ಅಸಂಬದ್ಧವಾದಿಗೂ ವೈಚಾರಿಕತೆ ವ್ಯರ್ಥವೇ; ಆದರೆ, ವೈಚಾರಿಕತೆಯ ಆಚೆಯಲ್ಲಿ ಅವನ ಪಾಲಿನದಾಗಿ ಏನೇನೂ ಇಲ್ಲ!

ವೈಚಾರಿಕತೆಯನ್ನೇ ಸಂಪೂರ್ಣವಾಗಿ ಕೈಬಿಡುವುದು ಅಸಂಗತ

ವಾದಿಯ ಪಾಲಿಗೆ ಅರ್ಥಹೀನ–

ಆದ್ದರಿಂದಲೇ ಅಸಂಬದ್ಧವಾದಿ ಇಂದ್ರಿಯ ಬದ್ಧವಾದ ಹೋರಾಟವನ್ನು ಗೌರವಿಸಿ, ವೈಚಾರಿಕತೆಯನ್ನು ಸಂಪೂರ್ಣವಾಗಿ ಕಿತ್ತೆಸೆಯದೆ, ಅವೈಚಾರಿಕತೆಯ ಶ್ರೇಷ್ಠತೆಯನ್ನೂ ಗುರುತಿಸಿಕೊಳ್ಳುತ್ತಾನೆ. ಆ ವಿಶೇಷವಾದ ಎಚ್ಚರಿತ ಜಾಗೃದಾವಸ್ಥೆಯಲ್ಲಿ ಆಸೆಗಳ ಗೊಂದಲವಿಲ್ಲದಿರುವುದನ್ನು ಕಂಡುಕೊಳ್ಳುತ್ತಾನೆ; ತನ್ನ ಸೋಲಿನಲ್ಲಿ ಭಕ್ತ ಕಾಣುವ ಗೆಲುವನ್ನು ಈತ ಕಾಣದೇ ಉಳಿಯುತ್ತಾನೆ; ರೋಗದಿಂದ ಗುಣಮುಖನಾಗುವುದರಲ್ಲಿ ಅರ್ಥವನ್ನು ಕಾಣಲು ತಿರಸ್ಕರಿಸಿ, ಆ ರೋಗವನ್ನು ಜಾಗೃತವಾಗಿ ಅನುಭವಿಸುವುದರಲ್ಲಿ ಅರ್ಥವನ್ನು ಕಂಡುಕೊಳ್ಳುತ್ತಾನೆ.

ಇಂದ್ರಿಯಗಳನ್ನು ಊರ್ಧ್ವಮುಖ ಗೊಳಿಸುವುದೆಂದರೆ ಅತಿಮಾನವ ಸ್ಥಿತಿಯನ್ನು ತಲುಪಿಬಿಡುವುದು;ಆದರೆ,ಅತಿಮಾನವತ್ವ ನಿಜಕ್ಕೂ ಅಮಾನವೀಯತೆ–ಅಂದರೆ, ಸತ್ವಹೀನ ಸ್ಥಿತಿ ; ಭೌತಿಕ ಆತ್ಮಹತ್ಯೆಗಿಂತಲೂ ಹೀನ ಸ್ಥಿತಿ–

ಮನುಷ್ಯ ತನಗೆ ಏನು ಗೊತ್ತಿದೆಯೋ ಅಷ್ಟೇಅಷ್ಟರಿಂದ ಮಾತ್ರ ಬದುಕುವುದು ಸಾಧ್ಯವೆ?—ಎನ್ನುವುದಷ್ಟೇ ಅಸಂಗತವಾದಿಯ ನೈತಿಕ ಬಯಕೆ. ಬೌದ್ಧಿಕ ಸೀಮಿತತೆಯ ಅರಿವಿದೆ ಎಂದ ಮಾತ್ರಕ್ಕೆ ಮನುಷ್ಯ ಅದನ್ನು ತಿರಸ್ಕರಿಸಲೇಬೇಕೆಂದಾಗಲಿ, ಅದರ ಸಾಪೇಕ್ಷವಾದ ಶಕ್ತಿಗಳನ್ನು ಕಡೆಗಣಿಸಬೇಕೆಂದಾಗಲಿ ಅರ್ಥವಲ್ಲ. ಆದ್ದರಿಂದಲೇ, ಬುದ್ಧಿ ನಿರ್ಮಲವಾಗಿರುವ ಸ್ಥಿತಿಯಲ್ಲಿ ಮಾತ್ರ ಅಸಂಬದ್ಧವಾದಿ ಜೀವಿಸಬಯಸುತ್ತಾನೆ. ಇದು ಒಂದು ಪ್ರತಿಷ್ಠೆ ಆಗಿರಲೂಬಹುದು–ಹಾಗೆಂದು ಆ ಸ್ಥಿತಿಯಲ್ಲಿ ಬಾಳುವುದನ್ನು ಬಿಟ್ಟುಕೊಡಲು ಅವನು ಸಿದ್ಧನಿಲ್ಲ.

ಪಾಪ ಮನುಷ್ಯನನ್ನು ದೇವರಿಂದ ದೂರಕ್ಕೆ ಒಯ್ಯುತ್ತದೆ. ಹಾಗೆಯೇ, ಅಸಂಬದ್ಧತೆ ಪ್ರಜ್ಞೆಯ ಆಧ್ಯಾತ್ಮಿಕ ಅವಸ್ಥೆಯಾದ್ದರಿಂದಾಗಿಯೇ, ಮನುಷ್ಯನನ್ನು ದೇವರಿಂದ ದೂರವೇ ಇಡುತ್ತದೆ. ಅಸಂಬದ್ಧತೆ ದೈವದ ದೃಷ್ಟಿಯಿಂದಲ್ಲದ ಒಂದು ಸುಂದರವಾದ ಪಾಪ ಕೃತ್ಯ ! ಸ್ಪಷ್ಟವಾಗಿ ಹೇಳಬೇಕೆಂದರೆ, ದೇವರ ಅಸ್ತಿತ್ವದ ಉಳಿವು ಸಾಧ್ಯವಾಗಿರುವುದೇ ಮನುಷ್ಯನ ಬೌದ್ಧಿಕತೆಯ ಕೊಲೆಯಿಂದಾಗಿ. ಬೌದ್ಧಿಕ ಜಾಗೃತಿಯೇ

ತನ್ನ ಪ್ರಜ್ಞೆಯಾದ ಅಸಂಬದ್ಧವಾದಿ ದೇವರತ್ತ ನುಗ್ಗದೇ, ಜಗತ್ತು ಹಾಗೂ ಮನಸ್ಸು ಪರಸ್ಪರ ತಾಕಲಾಟವಾಡುವ ಸ್ಥಿತಿಯನ್ನು ಪ್ರಜ್ಞಾ ಪೂರ್ವಕವಾಗಿ, ಆದರೆ ನಿರ್ಲಿಪ್ತತೆಯಿಂದ ಸ್ವೀಕರಿಸುತ್ತಾನೆ.

ಅಸ್ತಿತ್ವವಾದಿಗಳಿಗೆ ದೈವದ ತಿರಸ್ಕಾರವೇ ದೇವರು. ಕಾಮೂಗೆ ಅದೂ ಅರ್ಥಹೀನ ಸ್ಥಿತಿಯೇ. ಕಾರಣ, ಸತ್ಯ ಏನು ಎನ್ನುವುದರ ಅನ್ವೇಷಣೆ ಎಂದೂ ಸ್ವೀಕಾರದ ಅನ್ವೇಷಣೆಯಾಗಲಾರದು. ಆದ್ದರಿಂದ, ದೈವಾತೀತವಾದ ಪಾಪಪ್ರಜ್ಞೆಯೇ ಅಸಂಬದ್ಧವಾದ; ಅತೀಂದ್ರಿಯ ಜಗತ್ತು ಸತ್ತಾಗ ಜನಿಸಿದ ಪ್ರಕಾಶ; ಆದರೂ ವೈಚಾರಿಕತೆಯೇ ಅಂತಿಮ ಗೆಲುವಾಗುವ ವೈಚಾರಿಕ ಜಗತ್ತು ಅಸಂಗತವಾದಿಯ ಪಾಲಿಗೆ ಏನೂ ಅಲ್ಲ; ಅವನು ಯಾವ ವೈಚಾರಿಕತೆಯನ್ನು ಮರೆಯುವುದು ಸಾಧ್ಯವಿಲ್ಲವೋ ಅದನ್ನೇ ಅವನು ತನ್ನ ಇರುವಿಕೆಯ ಸಲುವಾಗಿ ಮರೆಯುತ್ತಾನೆ! ಬಯಕೆಯಲ್ಲಿ ತುಂಬಿ ತೊನೆಯುವ ಮನಸ್ಸು ಹಾಗೂ ತೃಪ್ತಿಯನ್ನು ಕೊಡದ ಜಗತ್ತು ಇವುಗಳ ಮಧ್ಯದ ವಿಚ್ಛೇದನ, ಮತ್ತು ಅವುಗಳ ಮಧ್ಯದ ಸಾಮರಸ್ಯ ಅಲ್ಲದೆ, ಛಿದ್ರ ಛಿದ್ರವಾದ ಜಗತ್ತು ಮತ್ತು ಅದನ್ನು ಕೂಡಿಸುವ ವಿರೋಧಾಭಾಸಗಳೇ ಕಾಮೂನ ಇಂದ್ರಿಯ ಸೀಮಿತ ಜಾಗೃತ ಜಗತ್ತು. ಅವುಗಳ ಸ್ವೀಕಾರ ಅಥವಾ ತಿರಸ್ಕಾರವೇ ಅವನ ದಾರ್ಶನಿಕ ಅನ್ವೇಷಣೆಗಳು!

'ಆಧ್ಯಾತ್ಮಿಕ ಆತ್ಮಹತ್ಯೆ' ಈ ಕಾರಣಕ್ಕಾಗಿಯೇ ಅವನಿಗೆ ತ್ಯಾಜ್ಯ ವಾದ ವಸ್ತು; ಭೌತಿಕ ಆತ್ಮಹತ್ಯೆ ಅಸಂಬದ್ಧತೆಯನ್ನು ಒಪ್ಪಿಕೊಳ್ಳುವ ಸ್ಥಿತಿಯಾದ್ದರಿಂದ ಅದೂ ಅವನಿಗೆ ತ್ಯಾಜ್ಯವಾದುದೇ ಆಗಿದೆ.

—ಇಲ್ಲಿಗೆ, ಮೂಲಭೂತವಾದ ಸೈದ್ಧಾಂತಿಕ ಸಮಸ್ಯೆಯನ್ನು ಅದರ ಪೂರ್ಣ ಸ್ವರೂಪದಲ್ಲಿ ದರ್ಶನಮಾಡಿದ್ದಾಯಿತು.

ಅದರ ಫಲವಾಗಿ, ಅಸಂಬದ್ಧ ಮನುಷ್ಯನೇ ಈ ಜಗತ್ತಾಗಿರಬೇಕು- ಯಾವ ಜಗತ್ತಿಗೆ ಆತ ಅಪರಿಚಿತನಾಗಿದ್ದಾನೆಯೋ, ಯಾವ ಜಗತ್ತನ್ನು ಆತ ತನ್ನೆಲ್ಲಾ ಪ್ರಜ್ಞೆಗಳಿಂದ ಧಿಃಖರಿಸುತ್ತಿದ್ದಾನೆಯೋ, ಆ ಮಿಥ್ಯ ಜಗತ್ತಿನ ಏಕಮಾತ್ರ ಸತ್ಯ ಅವನಾಗಬೇಕು ಎನ್ನುವುದೇ ಖಚಿತವಾಯಿತು. ಈ

ತುಚ್ಛ ಕಾರಣಗಳಿಂದಾಗಿಯೇ ಅವನು ತನ್ನ ಜಗತ್ತಿನ ವಿರುದ್ಧ ಬಂಡೆದ್ದಿರುವುದು ಕೂಡ.

ಜಗತ್ತು ಹಾಗೂ ಮನಸ್ಸಿನ ಮಧ್ಯದ ದ್ವಂದ್ವದ ಮೂಲವಾದರೂ ಅವನ ಪ್ರಜ್ಞೆಯಲ್ಲದೆ ಬೇರೇನು? ಆದ್ದರಿಂದಲೇ ಅವನು ತನ್ನ ಪ್ರಜ್ಞೆಯನ್ನು ನಿತ್ಯನೂತನವಾಗಿ, ನಿತ್ಯ ಚೇತನಿಯಾಗಿ ಇಟ್ಟುಕೊಳ್ಳಲು ಬಯಸುತ್ತಾನೆ. ಈ ಕಾರಣದಿಂದಾಗಿಯೇ ಅಸಂಬದ್ಧವಾದಿ ಗೆಲ್ಲಲು ಬಹುಕಷ್ಟಸಾಧ್ಯವಾದ, ಆದರೆ ಅಷ್ಟೇ ಅನಿವಾರ್ಯವಾದ ತನ್ನ ಮಾನವ ಜೀವಿತದ ಮನೆಗೆ ಹಿಂದಿರುಗಿದ್ದಾನೆ. ಮತ್ತೆ ಅಸ್ಪಷ್ಟತೆ ಎಲ್ಲಿ ತಲೆ ಎತ್ತಿ ನಿಲ್ಲುವುದೋ ಎನ್ನುವ ಭಯದಲ್ಲೇ ಆತ ತನ್ನ ಭಾವಶುದ್ಧಿ ಮತ್ತು ಭಹಿಷ್ಕಾರಗಳನ್ನು ಸಾರಿ ನಿಂತಿದ್ದಾನೆ. ಆಸೆ-ಆಮಿಷಗಳಿಗೆ ಸಿಕ್ಕಿ ಪೇಚಾಡುವುದನ್ನು ಮರೆತಿದ್ದಾನೆ. ಕೊನೆಗೆ, ವರ್ತಮಾನದ ನರಕವೇ ಅವನ ರಾಜ್ಯವಾಗಿದೆ. ಎಲ್ಲ ಸಮಸ್ಯೆಗಳೂ ತಮ್ಮೆಲ್ಲ ನಿಜವಾದ ಬಣ್ಣಗಳಲ್ಲಿ ಗರಿಗೆದರಿ ನಿಂತಿವೆ. ಆಕಾರ ಮತ್ತು ವರ್ಣವೈವಿಧ್ಯತೆಗಳ ಕಾವ್ಯ ಅವನ ಅಮೂರ್ತ ಸಾಕ್ಷಿಯ ಮುಂದೆ ನಿಲ್ಲಲಾರದೆ ಹಿಂದೆ ಸರಿದಿದೆ. ಆಧ್ಯಾತ್ಮಿಕ ಸಮಸ್ಯೆ ಸ್ಫುಟಗೊಂಡು ಅವನ ಹೃದಯದಲ್ಲಿಗೂಡುಕಟ್ಟಿವೆ.ಯಾವ ಸಮಸ್ಯೆಗಳೂ ಪರಿಹಾರ ಹುಡುಕಿಕೊಂಡಿಲ್ಲ-ಆದರೆ, ರೂಪಾಂತರಗೊಂಡುಬಿಟ್ಟಿವೆ! ಈ ಸ್ಥಿತಿಯಲ್ಲಿ ಅವನು ಸಾವನ್ನು ಅರಸುತ್ತಾನೆಯೆ? ಅಥವಾ ಯೋಚನೆ-ಯೋಜನೆಗಳ ಜಗತ್ತನ್ನು ಕಟ್ಟಿಕೊಂಡುಬಿಡುತ್ತಾನೆಯೆ? ಅಥವಾ ಈ ಹುಚ್ಚು ಜಗತ್ತಿನಲ್ಲಿ ಮಾನವ್ಯದ ಗೌರವವನ್ನು ಕಾಯ್ದುಕೊಳ್ಳುವ ಹಾಗೂ ಹೃದಯಕ್ಕೆ ತಾಗುವಂತಹ ಅಭೂತಪೂರ್ವ ಅಸಂಬದ್ಧ ಪ್ರಲಾಪದ ಆಲಾಪನೆಗೆ ತೊಡಗುತ್ತಾನೆಯೆ?

ಅವನೀಗ ಮಾಡುವುದಿಷ್ಟೇ–ಕೊಟ್ಟಕೊನೆಗೆ, ಮನುಷ್ಯ ಮತ್ತೆ ತನ್ನ ಅಸಂಬದ್ಧತೆಯ ವೈನನ್ನು ಕುಡಿದು, ನಿರ್ಲಕ್ಷ್ಯದ ಬ್ರೆಡ್ಡನ್ನು ಮೆದ್ದು, ಅದನ್ನು ಪರಿಪೂರ್ಣವಾಗಿ ದಕ್ಕಿಸಿಕೊಳ್ಳುವ, ಯಾವುದರಿಂದಲೂ ವಿಚಲಿತನಾಗದ ಅರ್ಥಪೂರ್ಣ ಜೀವನವನ್ನು ಅನ್ವೇಷಿಸಿಕೊಳ್ಳುತ್ತಾನೆ. ಅವನು ತನಗೆ ಏನು ಮಾತ್ರ ಅರ್ಥವಾಗುತ್ತದೆಯೋ ಅದನ್ನು ಬಿಟ್ಟು ಬೇರೇನನ್ನೂ ಮಾಡದವನಾಗುತ್ತಾನೆ.

–ತನ್ನೀ ನಿರ್ಧಾರವೇ ತನ್ನ ಒಣಪ್ರತಿಷ್ಠೆಯ ಪಾಪವೆಂದೂ ಅವನಿಗೆ

ಗೊತ್ತಿದೆ ; ಆದರೆ, ಪಾಪದ ಭೀತಿ ಅವನಿಗೆ ತಟ್ಟದಾಗಿದೆ ; ಪ್ರಾಯಶಃ, ನರಕ ಆವನಿಗಾಗಿ ತೆರೆದಿದೆ–ಆದರೆ, ಅದನ್ನು ಕಲ್ಪಿಸಿಕೊಳ್ಳುವಷ್ಟು ನೀಚ ಕ್ರಿಯಾತ್ಮಕ ಶಕ್ತಿ ಅವನಿಗೆ ಅಲಭ್ಯವಾಗಿದೆ; ಅವನ ಪಾಲಿಗೆ ಅನಂತ ಜೀವನ ಕಳೆದುಹೋಗಿಬಿಟ್ಟಿರಲೂಬಹುದು ; ಆದರೆ, ಅದು ಅವನ ದೃಷ್ಟಿಯಲ್ಲಿ ಒಂದು ಅಸಹ್ಯವಾದ ಆದರ್ಶ. ಅವನ ಪಾಪದ ಅರಿವು ಅವನಿಗೆ ತಟ್ಟುವಂತಾಗುವ ಪ್ರಯತ್ನಗಳೂ ನಡೆದೇ ಬಿಟ್ಟವೆ ! ಆದರೆ, ಅವನು ಮುಗ್ಧನಾಗಿರುವುದರ ಅರಿವು ಮಾತ್ರ ಅವನಿಗಿದೆ. ಸತ್ಯವನ್ನು ಮತ್ತೆ ಹೇಳಿಬಿಡುವುದೇ ಆದರೆ–ಇಷ್ಟೇ ಅವನ ಅರಿವಿನ ರಾಜ್ಯ–ತಿದ್ದಲಾಗದ ಮೂರ್ಖ ಮಾತ್ರ ಅವನು! ಈ ಮೂರ್ಖತೆಯಲ್ಲೇ ಅವನು ಎಲ್ಲವನ್ನೂ ದಕ್ಕಿಸಿಕೊಳ್ಳುವುದು. ಆದ್ದರಿಂದಾಗಿಯೇ, ಅವನು ಅವನಿಂದ ಒತ್ತಾಯ ಪೂರ್ವಕವಾಗಿ ಬಯಸಿರುವುದು ಅವನಿಗೆ ಗೊತ್ತಿರುವಷ್ಟರಲ್ಲಿ ಮಾತ್ರ ಬದುಕಿರುವುದು ; ತನ್ನಿಂದ ಏನು ಸಾಧ್ಯವೋ ಅಷ್ಟನ್ನು ಮಾತ್ರ ಬದುಕುವುದು ; ಈ ಎಲ್ಲ ನಿರ್ಧಾರಗಳು ಅವನ ಬಾಳಿಗೆ ಏನನ್ನು ಕೊಡುತ್ತವೆಯೋ ಅದರ ಗೊಡವೆಯೇ ಅವನಿಗೆ ಇಲ್ಲ. ಪಡೆಯಬೇಕಾದ್ದು ಏನೂ ಇಲ್ಲವೆಂದು ಅವನಿಗೆ ಎಂದೋ ಶೃತವಾಗಿ ಹೋಗಿದೆ. ಅವೆಲ್ಲವೂ ಏನೂ ಆಗಿಲ್ಲವಾದರೂ ಚಿಂತೆಯಿಲ್ಲ–ಒಂದು ಸುಲಭ ಸಾಧ್ಯವಾದ ಖಚಿತತೆಯಾದರೂ ಆಗಿದೆ ; ಇಷ್ಟೇ ಇಷ್ಟು ಅವನ ಎಲ್ಲ ಕಾಳಜಿಗಳ ಗುಟ್ಟು. ಮನವಿಗಳೇ ಇಲ್ಲದ ಜಗತ್ತು ಮಾತ್ರ ಅವನು ಬಯಸದೇ ಪಡೆದುಕೊಳ್ಳುವ ಭಾಗ್ಯ ವಿಶೇಷ.

ಈ ಸ್ಥಿತಿಯಲ್ಲೇ ಆತ್ಮಹತ್ಯೆಯ ಸಾಧ್ಯಾಸಾಧ್ಯತೆಗಳು ನಿರ್ಧಾರವಾಗಬೇಕಾಗಿರುವುದು : ಅವನ ಈ ಸ್ಥಿತಿಯ ಕಾರಣದಿಂದಾಗಿಯೇ ಅರ್ಥರಹಿತ ಜೀವನ ಮಾತ್ರವೇ ಧಾರಣಾಯೋಗ್ಯವಾಗಿ ಹೋಗಿರುವುದು. ಬಾಳುತ್ತಾ ಹೋಗುವುದೆಂದರೆ ವಿಧಿತವಾದ ಬಾಳನ್ನು ಒಪ್ಪಿಕೊಳ್ಳುವುದು– ಆದರೆ, ಅದರ ಅಸಂಬದ್ಧತೆಯನ್ನು ಅರಿತವನಾರೂ ಆ ಬಾಳನ್ನು ಸ್ವೀಕರಿಸಲಾರ–ಅಸಂಗತ ಪ್ರಜ್ಞೆ ಇತ್ತ ಬೆಳಕು ಗೋಚರವಾಗುವವರೆಗೆ ಪ್ರಜ್ಞಾಪೂರ್ವಕವಾದ ಆಂದೋಲನವನ್ನು ಕೈಬಿಡುವುದು ಎಂದರೆ ಸಮಸ್ಯೆಯನ್ನೇ ಕೈಬಿಟ್ಟಂತೆ. ಆದ್ದರಿಂದಾಗಿಯೇ ಜೀವಿಸುವುದು ಎಂದರೆ ಅಸಂಬದ್ಧತೆ

ಯನ್ನು ಜೀವಂತವಾಗಿ ಇಟ್ಟುಕೊಳ್ಳುವುದೇ ಆಗಿದೆ. ಹೀಗಾಗಿ, ಅಸಂಬದ್ಧ ವಾದಿ ಸಾಯುವುದು ಅವನು ತನ್ನ ಅಸಂಬದ್ಧ ಪ್ರಜ್ಞೆಯನ್ನು ಕಳೆದು ಕೊಂಡಾಗ ಮಾತ್ರ. ಆದ್ದರಿಂದಲೇ ಸುಸಂಬದ್ಧವಾದ ದಾರ್ಶನಿಕ ಸ್ಥಿತಿ ಎಂದರೆ ಅವಿರತ ಕ್ರಾಂತಿ, ಈ ಸ್ಥಿತಿ ಜಗತ್ತನ್ನು ಪ್ರತಿಕ್ಷಣವೂ ತನ್ನ ಹೊಚ್ಚ ಹೊಸತನದಲ್ಲಿ ವಿರೋಧಿಸುತ್ತಲೇ ಇರುತ್ತದೆ.

ಅಪಾಯ ಹೇಗೆ ಮನುಷ್ಯ ಸದಾ ಜಾಗೃತನಾಗಿರುವಂತೆ ಮಾಡುವುದೋ ಹಾಗೆಯೇ ಆಧ್ಯಾತ್ಮಿಕ ಬಂಡಾಯವೂ ಮನುಷ್ಯನ ಎಲ್ಲ ಅನುಭವಗಳತ್ತ ಅವನ ಪ್ರಜ್ಞೆಯನ್ನು ಜಾಗೃತವಾಗಿಯೇ ಇಟ್ಟಿರುತ್ತದೆ. ಇದೇ ಮನುಷ್ಯ ತನ್ನ ಕಣ್ಣುಗಳ ಮುಂದೆಯೇ ತನ್ನ ವಿಶ್ರಾಂತಿರಹಿತ ಅಸ್ತಿತ್ವವನ್ನು ಕಂಡುಕೊಳ್ಳುವ ವಿಧಾನ; ಮತ್ತೆ ಹೇಳುವುದೇ ಆದರೆ, ಇದು ಆಶಾಭಾವನೆಯಲ್ಲ-ಕಾರಣ ಅವನು ಆಶಾರಹಿತ : ಈ ಬಂಡೇ ಅವನನ್ನು ಸದಾ ತುಳಿಯುವ ಖಚಿತತೆ, ಹಾಗೂ ನಿಖರತೆ–

—ಈ ಅಸಂಬದ್ಧವಾದಿಯ ನಿರ್ಣಯಗಳಿಂದಾಗಿ ಆತ ಆತ್ಮಹತ್ಯೆಯಿಂದ ಅದೆಷ್ಟು ದೂರವಿದ್ದಾನೆನ್ನುವುದನ್ನು ತಿಳಿದಂತಾಯಿತು. ಆತ್ಮಹತ್ಯೆ ಬಂಡಿನ ಫಲವೆನ್ನುವುದು ತಪ್ಪುಕಲ್ಪನೆ–ಆತ್ಮಹತ್ಯೆ ಅಸಾಂಗತ್ಯವನ್ನು ಅದರ ಪರಾಕಾಷ್ಠತೆಗೆ ಹೊಯ್ದು ಒಪ್ಪಿಕೊಂಡ ಸ್ಥಿತಿ ಮಾತ್ರ. ಅಸಂಬದ್ಧವಾದಿ ಏನನ್ನೂ ಒಪ್ಪದವನು-ಆದ್ದರಿಂದ ಆತ್ಮಹತ್ಯೆ ಅಸಾಧ್ಯ.

ಈ ಅಸಂಬದ್ಧತೆಯ ಬಂಡು ಬದುಕಿಗೆ ಅದರ ಶುದ್ಧ ಮೌಲ್ಯವನ್ನು ತಂದುಕೊಡುವಂತಹದ್ದು ; ಬದುಕಿನ ಗೌರವವನ್ನು ಹೆಚ್ಚಿಸುವಂತಹದ್ದು. ಅಸಂಬದ್ಧ ಮನಸ್ಸು ತನ್ನ ಮೇಲೆ ತಾನೇ ಹೇರಿಕೊಂಡ, ಎಲ್ಲ ಬಂಧನಗಳಿಂದ ಮುಕ್ತವಾದ ಕಾಯಿದೆಗಳಿಂದಾಗಿ, ಬದುಕನ್ನು ಬದುಕುವ ಕ್ರಿಯೆಯ ಭರಿಸಲಾಗದ ಹೊರೆಯಿಂದ ತಪ್ಪಿಸುತ್ತದೆಯಲ್ಲದೆ, ಆತ ತಾನು ಮಾತ್ರವೆ ತನ್ನ ಬದುಕಿನ ಭಾರರಹಿತ ಹೊರೆಯನ್ನು ಹೊರುವಂತೆಯೂ ಮಾಡುತ್ತದೆಯಾಗಿ, ಈ ಭೂಮಿಯ ಮೇಲೆ ಮನುಷ್ಯನ ಬದುಕನ್ನು ಸಾಧ್ಯಗೊಳಿಸುತ್ತದೆ.

ಪ್ರಜ್ಞೆ ಹಾಗೂ ಕ್ರಾಂತಿ ವೈರಾಗ್ಯದಿಂದ ಮುಕ್ತನಾದ ಸ್ಥಿತಿಗಳು. ವಿಧಿಯನ್ನು' ಅಂತಿಮ ಕಾಯಿದೆಗಳನ್ನು ಬಗ್ಗು ಬಡಿಯುವ' ಖಚಿತತೆಯೇ

ಆಂದೋಲನ-ಆದರೆ ವೈರಾಗ್ಯದಿಂದಲ್ಲ; ಪ್ರಜ್ಞೆಯ ಪರಾಕಾಷ್ಠತೆಯಿಂದ. ಅವನಿಗೂ ಅತೀತವಾದ ಶಕ್ತಿ ಯಾವ ವಿಧವಾದ ಮುಕ್ತತೆಯನ್ನು ಕೊಡಬಲ್ಲದೋ ಅವನಿಗೆ ಗೊತ್ತಿಲ್ಲ–ಅವನಿಗೆ ಅವನ ಮೇಲೆ ಸದಾ ಸವಾರಿ ಮಾಡುತ್ತಿರುವ ದೈವಾಧಿಕಾರದ ಪರಿವೆ ಇಲ್ಲ; ಆತ ಎಲ್ಲ ಆಗುಹೋಗುಗಳನ್ನು ಅವುಗಳ ತುಟ್ಟತುದಿಯ ಕಹಿಗೆ ಎಳೆದೊಯ್ದು, ಆದರೆ, ಅದರಿಂದ ತಾನು ತ್ಯಕ್ತನಾಗಿಯೇ ಉಳಿದು ಬಿಡುತ್ತಾನೆ. ಅಸಂಬದ್ಧತೆ ಅವನ ಮಾನಸಿಕ ತುಯಿತದ ಪರಮಾವಸ್ಥೆ ; ಆ ಅವಸ್ಥೆಯನ್ನು ಅವನು ತನ್ನ ಏಕಾಂತದ ಪ್ರಯತ್ನಗಳಲ್ಲೇ ದೊರಕಿಸಿಕೊಂಡು, ಸದಾ ಆ ಅವಸ್ಥೆಯನ್ನು ಅಜಾಗೃತನಾಗಿಯೇ ಕಾಪಾಡಿಕೊಂಡು ಬರುತ್ತಾ, ಅನುದಿನದ ತಿರಸ್ಕಾರದಲ್ಲಿ ತೀವ್ರತರ ಸವಾಲಾಗಿರುವ ತನ್ನ ಏಕಮಾತ್ರ ಸತ್ಯದ ಸಾಕ್ಷಿಯನ್ನು ಪ್ರಮಾಣೀಕರಿಸಿಕೊಳ್ಳುತ್ತಾನೆ.

*

ಅಸಂಬದ್ಧವಾದಿಗೂ ಆಧ್ಯಾತ್ಮಿಕ ಮುಕ್ತಿಯ ಸಮಸ್ಯೆಗಳಿಗೂ ಏನೂ ಸಂಬಂಧವಿಲ್ಲ — ಕಾರಣ, ಮನುಷ್ಯ ಮುಕ್ತನೇ ಅಥವಾ ಬಂದಿಯೇ ಎನ್ನುವ ವಿಚಾರದ ಗೊಡವೆಯೇ ಮೂಲಭೂತವಾಗಿ ಅವನದಲ್ಲವೇ ಅಲ್ಲ. ಅವನು ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಮಾತ್ರ ಗುರುತಿಸಬಲ್ಲಾತ–ಅಂದರೆ, ಅದನ್ನು ಕುರಿತಾದ ಕೆಲವು ವಿಶೇಷ ಚಕ್ಷುಗಳು ಮಾತ್ರ ಅವನವು. ಸ್ವಾತಂತ್ರ್ಯ ಅಥವಾ ಮುಕ್ತಿ ಅದು ಹೇಗಿರಬಹುದೋ ಆ ಸ್ಥಿತಿಯಲ್ಲಿ ಯಾವುದೇ ಅರ್ಥವೂ ಅದಕ್ಕಿಲ್ಲ – ಏಕೆಂದರೆ, ದೈವತ್ವದ ಸಮಸ್ಯೆಗಳೊಡನೆ ಅದನ್ನು ಬೇರೊಂದು ಅರ್ಥದಲ್ಲಿ ಬೆಸೆಯಲಾಗಿದೆ. ದೈವತ್ವದ ಎದುರು ಮುಕ್ತಿಯನ್ನು ಅರಸುವುದೆಂದರೆ ನಮ್ಮನ್ನು ಆಳುವ ಪ್ರಭು ಒಬ್ಬನನ್ನು ನಾವು ಸ್ವೀಕರಿಸುವ ಅಥವಾ ತಿರಸ್ಕರಿಸುವ ಯಾತನೆಯಾಗಿ ಬಿಡುತ್ತದೆ. ಈ ಸ್ಥಿತಿಯಲ್ಲಿ ಸಾಧ್ಯವಾಗುವ ಮುಕ್ತಿ ತನ್ನನ್ನು ತಾನು ಅರ್ಥವಂತಿಕೆಯಿಂದಲೇ ಸಂಪೂರ್ಣವಾಗಿ ವಂಚಿಸಿಕೊಂಡು ಬಿಟ್ಟಿರುತ್ತದೆ! ದೈವದ ಪ್ರಭುತ್ವ ಇರುವಷ್ಟು ಕಾಲವೂ ಮುಕ್ತಿಯ ಸಮಸ್ಯೆಗಳು ಬಹು ವಿರಳವಾಗಿ, ಕೆಡಕಿನ ಸಮಸ್ಯೆಗಳು ಮಾತ್ರ ಓತಪ್ರೋತವಾಗಿ ಬೆಳೆಯತೊಡಗುತ್ತವೆ. ತದ್ವಿರುದ್ಧವಾದ ಸ್ಥಿತಿ ಗೊತ್ತೇ ಗೊತ್ತು : ನಾವು ಮುಕ್ತರಲ್ಲ; ಎಲ್ಲಕ್ಕೂ ಕಾರಣವಾದ ದೇವರು ಮಾತ್ರವೇ ಕೆಡಕಿಗೂ

ಕಾರಣನು; ಅಥವಾ,ಸಾವು ಹೇಗೆ ಮುಕ್ತರೊ ಹಾಗೆಯೇ ಎಲ್ಲಕ್ಕೂ ನಾವೇ ಕಾರಣವಾದ ಕಾರಣ, ದೇವರ ಇರುವಿಕೆ ಒಂದು ಗೇಲಿ ಮಾತ್ರ— ಈ ಬಗೆಯ ಎಲ್ಲಾ ವಿದ್ವತ್ತಿನ ಕಸರತ್ತುಗಳೂ ಒಗಟನ್ನು ಬಿಡಿಸದೇ ಅಥವಾ ಗೋಜಲುಗೊಳಿಸಲೂ ಆಗದೇ ಹೋದ ತೀಟೆಗಳು ಮಾತ್ರ.

—ಆದ್ದರಿಂದಾಗಿಯೇ ಅಸಂಬದ್ಧವಾದಿ ಈ ಎಲ್ಲ ತೀಟೆಗಳಿಗೆ ತನ್ನ ಬೆನ್ನನ್ನು ತಿರುಗಿಸಿ ನಿಶ್ಚಿಂತನಾಗಿದ್ದಾನೆ. ಅವನಿಗೆ ಗೊತ್ತಿರುವುದೆಲ್ಲಾ ತನ್ನ ಚಿಂತನೆ ಮತ್ತು ಕ್ರಿಯೆಗಳಿಂದ ತಾನು ದೊರಕಿಸಿಕೊಳ್ಳಬಹುದಾದ ಮುಕ್ತತೆ ಮಾತ್ರ. ಅಸಂಬದ್ಧತೆ ಅವನನ್ನು ಅಮರತ್ವದಿಂದ ವಂಚಿಸಿದ್ದರೂ, ಅವನ ಪಾಲಿಗೆ ಅವನ ಕ್ರಿಯೆ ಹಾಗೂ ಚಿಂತನೆಗಳ ಮುಕ್ತಿಯನ್ನು ಬಿಟ್ಟು ಕೊಟ್ಟಿದೆ. ಆಸೆ ಆಕಾಂಕ್ಷೆಗಳು ಹಾಗೂ ಭವಿಷ್ಯದ ತೆರವು ಮನುಷ್ಯತ್ವದ ಇರುವಿಕೆಯನ್ನಷ್ಟೇ ವಿಶೇಷ ರೀತಿಯಲ್ಲಿ ಪ್ರಖರಗೊಳಿಸುತ್ತದೆ.

—ಮೇಲಿಂದ ಮೇಲೆ ಹೇಳಿದ್ದನ್ನೇ ಮತ್ತೆ ಮತ್ತೆ ವಿವಿಧ ರೀತಿಯಲ್ಲಿ ಹೇಳಿ, ಮಾನವ ಇಂದಿನವರೆಗೂ ಚಿಂತಿಸಿಕೊಂಡು ಬಂದ ರೀತಿಗೆ ತಾನೇ ಗುಲಾಮನಾಗಿರುವ ಸ್ಥಿತಿಯಿಂದ ಇಡೀ ಮಾನವ ಕುಲವನ್ನೇ ಮುಕ್ತಗೊಳಿಸಬೇಕಾದ ಅನಿವಾರ್ಯ ಅಸಂಬದ್ಧವಾದಿಯ ಪಾಲಿಗೆ ಅತ್ಯುಗ್ರ ರೀತಿಯಲ್ಲಿ ಇದೆ :

ಅಸಂಬದ್ಧವಾದಿಯ ಜಗತ್ತು ನಿತ್ಯದ ಮನುಷ್ಯನ ಜಗತ್ತಿನಿಂದ ತಿರುವು ಮುರುವಾದ ಜಗತ್ತು : 'ನಾನು ಇದ್ದೇನೆ' ಹಾಗೂ 'ಎಲ್ಲದಕ್ಕೂ ಅರ್ಥವಿರುವುದರಿಂದ ನನ್ನ ಕ್ರಿಯಾಬದ್ಧ ಜಗತ್ತಿಗೂ ಒಂದು ಅರ್ಥವ್ಯಾಪ್ತಿ ಇದೆ'— ಎನ್ನುವ ಭಾವನೆಗಳೆಲ್ಲಾ ನಾಳೆ ಎಂದೋ ಸಾಧ್ಯವಾಗಿಯೇ ತೀರುವ ಎಲ್ಲದರ ಅಂತ್ಯವಾದ ಸಾವಿನ ಸತ್ಯದ ನೆರಳಲ್ಲಿ 'ಅರ್ಥ'ದ ಅನ್ವೇಷಣೆ ಒಂದು ಸುಂದರವಾದ ಕುಚೋದ್ಯ ಮಾತ್ರ. ಆಮಿಶಗಳ ಜಗತ್ತಿನಲ್ಲಿ ಆ ಅಂತಿಮ ಮಹಾನ್ ಸತ್ಯದ ಕ್ಷಣ ಒಂದು ಇದ್ದೇ ಇದೆ! ಎಲ್ಲಕ್ಕೂ ಮೀರಿದ ಸ್ವಾತಂತ್ರ್ಯ – ನಾನು ನಾನು ಮಾತ್ರವೇ ಆಗಿ ನನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳಬಲ್ಲ ಮುಕ್ತಿ - ಮಹಾನ್ ಅಂತಿಮ ಸತ್ಯ ಒಂದರ ಮೂಲ ಶೃತಿಯಾಗಬಲ್ಲ ಮುಕ್ತಿ– ಇಲ್ಲವೇ ಇಲ್ಲವಾಗಿ ಹೋಗಿರುವ ಆ ಒಂದು ಕಠೋರ ಕ್ಷಣ ಇದ್ದೇ ಇದೆ; ಸಾವು ಮಾತ್ರವೇ ಎಲ್ಲ ಸತ್ಯಗಳ

ಸತ್ಯವಾದ, ಉಳಿದೆಲ್ಲವೂ ಮಿಥ್ಯಮಾತ್ರವಾದ ಭೀಬತ್ಸವಾದ ಸತ್ಯ ಒಂದು ಇದ್ದೇ ಇದ್ದು ಬಿಟ್ಟಿದೆ! ಪೂರ್ಣ ಮುಕ್ತತೆಯ ನಂತರದ ಅಮರತ್ವದಲ್ಲಿ ಕ್ರಾಂತಿಯೇ ಇಲ್ಲವಾಗಿ ಹೋಗಿರುವ ಜಗತ್ತಿನಲ್ಲಿ ಅಂತಿಮ ವಾಗಿ ಪರಮ ಗುಲಾಮಗಿರಿಯಲ್ಲದೆ ಬೇರೇನಿದೆ?— ಮುಕ್ತತೆಯ ಭ್ರಮೆಯ ಗುಲಾಮ ಅತಃ ತೃಪ್ತಿಯಿಲ್ಲದವ, ಕ್ರಾಂತಿ ಬೇಡದವ, ತೃಷೆ ಕಾಣಲಾರದವ ಗುಲಾಮನಾದುದಾದರೂ ಎಲ್ಲಿ? ಅಮರತ್ವದ ಭರವಸೆಯೇ ಇಲ್ಲವಾದ ಮೇಲೆ ಯಾವ ಸ್ವಾತಂತ್ರ್ಯ ತಾನೆ ಉಳಿದೀತು? ಸ್ವಾತಂತ್ರ್ಯ ಇದ್ದರೂ ಏಕೆ ತಾನೆ ಬೇಕಾದೀತು?

ಮತ್ತೆ ಅಸಂಗತವಾದಿ ತನ್ನ ವಾದವನ್ನು ಸ್ಪಷ್ಟಪಡಿಸುತ್ತಾನೆ!

ಅಸಂಬದ್ಧವಾದಿಗೆ ಆಯ್ಕೆ ಮಾಡಿಕೊಳ್ಳುವಷ್ಟಾದರೂ ಮುಕ್ತತೆ ಇರುವ ಇಂದ್ರಿಯಬದ್ಧ ಜಗತ್ತು ಉಳಿದೆಲ್ಲಕ್ಕಿಂತಲೂ ಶ್ರೇಷ್ಠ. ಯಾವ ಸೀಮಾರೇಖೆಗಳನ್ನು ಆತ ತನ್ನ ಪ್ರಜ್ಞಾಮಾತ್ರದಿಂದ ಸೃಷ್ಟಿಸಿಕೊಳ್ಳುವನೋ ಆ ಸೀಮಾರೇಖೆಯಲ್ಲಿ ಜೀವಿಸುವ ಸ್ವಾತಂತ್ರ್ಯ ಅವನಿಗಿದೆ! ಅಸಂಬದ್ಧತೆಯ ಸಾಕ್ಷಾತ್ಕಾರ ಆಗುವ ಮೊದಲು ಆತ ಗುಲಾಮಮಾತ್ರನಾಗಿದ್ದ, ಪಾಪ:

ಆತನ ಮುಂದೆ ಎರಡು ತುಲನಾತ್ಮಕ ವಿವೇಚನೆ ಇದೆ: ಅವು ಗಳನ್ನು ಅವನು ಮತ್ತೆ ಅವಲೋಕಿಸುತ್ತಾನೆ:

ಅಸಂಗತ ಮಾನವ ಭವಿಷ್ಯರಹಿತ ಜಗತ್ತನ್ನು ದರ್ಶನ ಮಾಡುತ್ತಾನೆ: ಇದರಿಂದಾಗಿಯೇ, ಅವನ ಆಂತರಿಕ ಮುಕ್ತಿ ತನಗೆ ತಾನೇ ತೆರೆದುಕೊಳ್ಳು ತ್ತದೆ: ಇದೇ ಆವನ ಬದುಕಿನ ಗೋಪ್ಯ ಸೂತ್ರ; ಆದರೆ, ದಾರ್ಶನಿಕರು ತಮ್ಮನ್ನು ತಾವು ಅರ್ಪಿಸಿಕೊಳ್ಳುವುದರ ಮೂಲಕ ಮುಕ್ತಿಯನ್ನು ಕಂಡು ಕೊಳ್ಳುತ್ತಾರೆ. ಕಾಣದ ಪ್ರಭುವಿನ ಕಾಯಿದೆಗಳಿಗೆ ತಮ್ಮನ್ನು ತಾವು ಅರ್ಪಿಸಿ ಕೊಂಡು, ತಾವು ಗೋಪ್ಯವಾಗಿ ಮುಕ್ತರಾಗಿಬಿಡುತ್ತಾರೆ! ಗುಲಾಮಗಿರಿಯ ಪರಾಕಾಷ್ಠತೆ ತಲುಪಿ, ತಮ್ಮ ಇಂದ್ರಿಯಗಳನ್ನು ತಾವಾಗಿಯೇ ಕಳೆದು ಕೊಂಡು, ತಮಗೆ ತಾವೇ ಪರಿಪೂರ್ಣವಾಗಿ ಮುಕ್ತರಾಗುತ್ತಾರೆ, ನಿಜ. ಆದರೆ, ಈ ಮುಕ್ತಿಯ ಅರ್ಥವೇನು? ಅವರ ಮಟ್ಟಿಗೆ ಅವರು ಮುಕ್ತರಾದರು-ಎನ್ನುವ ಮಾತು ನಿಜವಿರಬಹುದು. ಆದರೆ, ಸಂಯಕ್ ಸ್ವಾತಂತ್ರ್ಯದ ಪೂರ್ಣಾರ್ಥ ದಲ್ಲಿನ ಮಹಾನ್ ಮುಕ್ತಿ ಅವರ ಪಾಲಿಗೆ ಎಲ್ಲಿದೆ? ಹಾಗೆಯೇ, ಸಾವನ್ನು

ಪ್ರಜ್ಞಾಪೂರ್ವಕವಾಗಿ ತನ್ನ ಚಿತ್ತ ಶುದ್ಧಿಯಿಂದ ಒಪ್ಪಿಕೊಂಡ ಅಸಂಬದ್ಧ ಮಾನವ ತನ್ನಲ್ಲಿನ ಘನೀಭೂತವಾಗುತ್ತಿರುವ ಎಲ್ಲ ಆಮಿಶಗಳ ಜಂಜಾಟ ದಿಂದ ಪೂರ್ಣವಾಗಿಯೇ ಮುಕ್ತನಾಗುತ್ತಾನೆ. ಇಲ್ಲೇ ಅಸ್ತಿತ್ವವಾದದ ಮೂಲದ್ರವ್ಯ ತನ್ನ ಪೂರ್ಣಾರ್ಥದಲ್ಲಿ ಸತ್ಯವಾಗಿರುವುದು : ಪ್ರಜ್ಞಾ ಪೂರ್ಣಾ ಜಗತ್ತಿಗೆ ಮರಳುವುದೇ ಹಾಗೂ ದೈನಂದಿನ ಆಸೆ-ಆಕಾಂಕ್ಷೆಗಳ ನಿದ್ದೆಯಿಂದ ಎಚ್ಚರಗೊಳ್ಳುವುದೇ ಅಸಂಬದ್ಧ ಮಾನವ ತನ್ನ ಸ್ವಾತಂತ್ರ್ಯ ದತ್ತ ಇಡುವ ಮೊಟ್ಟಮೊದಲ ದಿಟ್ಟ ಹೆಜ್ಜೆ : ಆದರೆ, ಸೂಚ್ಯವಾಗಿರುವುದು ಅಸ್ತಿತ್ವವಾದದ ಬೋಧೆಯಾಗಿದೆಯಾಗಿ, ಪ್ರಜ್ಞೆಯನ್ನೇ ಕೊಲ್ಲುವ ಆಧ್ಯಾತ್ಮಿಕ ಜಿಗಿತವೂ ಸೂಚ್ಯವೇ ಆಗಿ ಉಳಿಯುತ್ತದೆ. ಈ ಕಾರಣಕ್ಕೇ ಪುರಾತನ ದರ್ಶನಾಕಾಂಕ್ಷಿಯೂ ತನ್ನವನು ತಾನಾಗಿ ಇರಲಿಲ್ಲ ! ಅಂದರೆ, ಬದುಕಿನ ಹೊರೆಯಿಂದ ಮುಕ್ತನಾಗಿಬಿಡುವುದೇ ಆ ದಾರ್ಶನಿಕ ಮುಕ್ತಿ ಯಾಗಿತ್ತು – ಸಾವು ಕೂಡ ರಕ್ಷಣೆಯ ಹಸ್ತವನ್ನು ಚಾಚಿ, ಬದುಕನ್ನು ನಿರ್ನಾಮಗೊಳಿಸಿ, ಮುಕ್ತಿಯನ್ನು ದಯಪಾಲಿಸುತ್ತದೆ : ಇದರಿಂದ ಭ್ರಮಾತ್ಮಕ ಮುಕ್ತಿ ಮಾತ್ರ ದರ್ಶಿತವಾಗಿರುತ್ತದೆ.

ಇದರಿಂದ ಸ್ಪಷ್ಟವಾದ ವಿಚಾರ ಇಷ್ಟೇ— ನಿಜಕ್ಕೂ ದಕ್ಕಿಯೇ ತೀರಬೇಕಾದ ಸಂಯಕ್ ಮುಕ್ತಿಯ ಮೂಲದ್ರವ್ಯಗಳೆಂದರೆ ಒಂದನೆಯ ದ್ದಾಗಿ ಸಾವು ಹಾಗೂ ಎರಡನೆಯದಾಗಿ ಅಸಂಬದ್ಧತೆಯ ಅರಿವು.

ಈ ಕಾರಣ ಮಾತ್ರದಿಂದಲೇ ಅಸಂಗತ ಮಾನವ ಒಮ್ಮೆಲೆಗೇ ಉರಿಯುತ್ತಿರುವ ಹಾಗೂ ತಣ್ಣಗಾಗುತ್ತಿರುವ, ಎಲ್ಲ ದತ್ತವಾಗಿರುವ, ಆದರೆ ಏನೂ ದಕ್ಕದೇ ಉಳಿದಿರುವ ಪಾರದರ್ಶಕವಾದ, ಅಷ್ಟೇ ಸೀಮಿತವಾದ ಹಾಗೂ ಇದರ ಆಚೆಗೆ ಎಲ್ಲವೂ ಸುರುಟಿಕೊಂಡಿರುವ, ಅಲ್ಲದೇ ಏನೂ ಇಲ್ಲವಾಗಿರುವ ಜಗತ್ತನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಆ ನಂತರವೇ ಆತ ಆ ಜಗತ್ತನ್ನು ಸ್ವೀಕರಿಸಿ, ತನ್ನ ಶಕ್ತಿಯ ಮೂಲವನ್ನು, ಆಸೆ ಆಕಾಂಕ್ಷೆಗಳ ಬಹಿಷ್ಕಾರವನ್ನು, ಸಮಾಧಾನರಹಿತವಾದ ಮತ್ತು ಯಾವುದಕ್ಕೂ ಬಗ್ಗದ, ಜಗ್ಗದ ಸಾಕ್ಷಿಯನ್ನು ತನ್ನದಾಗಿಸಿಕೊಳ್ಳುತ್ತಾನೆ.

*

ಅಂತಹ ಅಸಂಬದ್ಧವಾದಿಯ ಜಗತ್ತು ಹೇಗಿರಬಹುದು ?

ಭವಿಷ್ಯದತ್ತ ನಿರ್ಲಕ್ಷ್ಯಗೊಂಡ, ಸಿಕ್ಕಿದ್ದೆಲ್ಲವನ್ನೂ ಭೋಗಿಸಿಬಿಡುವ ಜಗತ್ತಲ್ಲದೆ ಬೇರೇನೂ ಆ ಜಗತ್ತಿನಲ್ಲಿ ಇಲ್ಲ. ಬದುಕಿನಲ್ಲಿ ಅರ್ಥವನ್ನು ಕಂಡುಕೊಳ್ಳುವುದು ಎಂದರೆ ಮೌಲ್ಯಗಳ, ಬಯಕೆಗಳ, ಆಯ್ಕೆಗಳ ಜಗತ್ತು ಅದು–ಅದು ಅಸಂಬದ್ಧತೆಗೆ ತದ್ವಿರುದ್ಧವಾದುದು ; ಆದ್ದರಿಂದಲೆ, ಇದರ ಪರೀಕ್ಷೆ ಒಂದು ಮಾನವೀಯ ಗೌರವಕ್ಕೆ ಯೋಗ್ಯವಾದ ನಿಲುವು; ಆದ್ದರಿಂದಲೇ, ಈ ಆಧುನಿಕ ಮಾನವನ ಅಸಂಗತವಾದ ಒಂದು ಶುದ್ಧ ನೈತಿಕವಾದ.

ಶಬ್ದಗಳನ್ನು ಎಚ್ಚರದಿಂದ ತೂಕ ಹಾಕುವ ಕ್ರಿಯೆ ಕೇವಲ ಅದೃಷ್ಟಕ್ಕೆ ಬಿಟ್ಟ ಸತ್ಯ! ಆದರೂ, ಅಸಂಗತವಾದಿ ತಾನು ದಕ್ಕಿಸಿಕೊಂಡ ಜಗತ್ತನ್ನು ಅತಿ ಅತಿ ಸರಳವಾದ ಮಾತುಗಳಲ್ಲಿ ಸೆರೆ ಹಿಡಿಯಬೇಕಾಗಿದೆ :

ಮನವಿರಹಿತ ಬಾಳಿನ ಸಾಧ್ಯಾಸಾಧ್ಯತೆ ಮಾತ್ರ ಅಸಂಗತವಾದಿಯ ಜಗತ್ತು. ಅವನು ಅವನ ಬದುಕಿನ ಆಳವಾದ ಮಾನವ ಗೌರವದಿಂದ ಹೊರ ಬರಲು ಸಿದ್ಧನಿಲ್ಲದವ. ಅಸಂಗತ ಜಗತ್ತಿಗಿನ್ನ ಭಿನ್ನವಾದ ಜಗತ್ತು ಅವನ ಪಾಲಿಗೆ ಇಲ್ಲವೆಂದು ಅವನಿಗೆ ಖಚಿತವಾಗಿರುವುದೇ ಆದರೆ, ಪ್ರಜ್ಞಾಪೂರ್ಣ ಕ್ರಾಂತಿ, ಹಾಗೂ ಆ ಕ್ರಾಂತಿ ಸೆಣಸುವ ಕಾರ್ಗತ್ತಲುಗಳ ಮಧ್ಯದ ವಿರೋಧದ ಮೇಲೆ ಆತನ ಬದುಕಿನ ಸಮತೋಲನ ನಿಂತಿರುವುದೇ ಆದರೆ, ಅವನ ಸ್ವಾತಂತ್ರ್ಯಕ್ಕೆ ಅವನೇ ಹಾಕಿಕೊಂಡಿರುವ ಸೀಮಾರೇಖೆಯ ಆಚೆ ಅರ್ಥವೇ ಇಲ್ಲವೆನ್ನುವುದಾಗಿಬಿಟ್ಟರೆ, ಆಗ ಆ ಅಸಂಗತವಾದಿಯ ಪಾಲಿಗೆ ಉಳಿದದ್ದು ಜೀವಿಸಿದ್ದರ ಮೊತ್ತವೇ ವಿನಹ ಜೀವಿಸಿದ್ದರ ಹಿರಿಮೆ ಗರಿಮೆಗಳಲ್ಲ.

ಎಷ್ಟು ಸಾಧ್ಯವೋ ಅಷ್ಟು ಕಾಲವೂ ಅವನು ಜೀವಿಸಬೇಕು–ಅಸಾಂಗತ್ಯದ ಪ್ರಜ್ಞೆಯ ಅವನ ದೃಷ್ಟಿಯಲ್ಲಿ ಅನುಭವದ ಮೌಲ್ಯ ಅರ್ಥಹೀನ ; ಆದರೆ 'ಅನುಭವದ ಮೊತ್ತ' ಅವನು ಅದರ ಅರಿವಿರದೆ ಸಾಗಬೇಕಾಗಿರುವ ದಾರಿ. ಅನುಭವದ ಮೊತ್ತ ಸನ್ನಿವೇಶಗಳ ಮೂಲಕ ಹಾದುಹೋಗುವುದೇ ಆಗಿರುವುದಾದರೆ, ಆತ ತನ್ನ ವಾದವನ್ನು ಮತ್ತಷ್ಟು ಸರಳಗೊಳಿಸುತ್ತಾನೆ : ಆತನ ನಿರ್ಲಿಪ್ತಕ್ರಾಂತಿ, ಆತನ ಸ್ವಾತಂತ್ರ್ಯ, ಆತನ ದೀರ್ಘಾವಧಿಯ ಬಾಳ್ವೆಯ ಪ್ರಜ್ಞೆ ಎಂದರೆ ಭಾವಶುದ್ಧಿಯಿಂದ

ಯಿಂದ ಎಷ್ಟು ಸಾಧ್ಯವೋ ಅಷ್ಟೂ ಬಾಳುತ್ತಾ ಸುಮ್ಮನೆ ಇದ್ದು ಬಿಡುವುದು. ಭಾವಶುದ್ಧಿ ಇದ್ದೆಡೆ ಮೌಲ್ಯಗಳು ಅರ್ಥರಹಿತವಾಗುತ್ತವೆ–ತಮಗೆ ತಾವೇ. ಇನ್ನೂ ಸ್ಪಷ್ಟತೆಗೆ ಇಳಿಯುವುದೇ ಆದರೆ, ಅಕಾಲಮೃತ್ಯುವೇ ಅಂತಿಮ ಆತಂಕ ಹಾಗೂ ಅಂತಿಮ ಕೊರತೆಯನ್ನು ಒಳಿತಾಗಿಸುತ್ತದೆ! ಅವನ ಪಾಲಿಗೆ ಸಾವು, ಭಾವೋತ್ಕಟನೆ, ಕಾಮನೆಗಳು ಹಾಗೂ ತ್ಯಾಗಾದಿಗಳು 'ಸುಮ್ಮನೆ ಬಾಳು' ಎನ್ನುವುದನ್ನು ಬಿಟ್ಟು ಹೆಚ್ಚಿನದೇನನ್ನೂ ಹೇಳದ ಸಮಾನ ಸ್ಥಿತಿಗಳು. ಅವನು ಆಯ್ಕೆ ಮಾಡಲಾಗಲಿ, ವಿರೋಧಿಸಲಾಗಲಿ ಹೋಗುವುದಿಲ್ಲ. ಹುಚ್ಚು ಹಾಗೂ ಸಾವು ಅವನು ತಿದ್ದಲಾಗದ ಸ್ಥಿತಿಗಳು. ಅಂದರೆ, ಅಸಂಬದ್ಧತೆ ಹಾಗೂ ಅದರಿಂದಾದ ವಿಶೇಷ ಜೀವನ ಅವನ ನಿರ್ಧಾರದಿಂದ ಬಂದುದಲ್ಲ : ಅದಕ್ಕೆ ವಿರುದ್ಧವಾದ ಸಾವಿನಿಂದ ತಮಗೆ ತಾವೇ ತೀರ್ಮಾನವಾಗಿ ಹೋದವು.

—ತನ್ನ ಈ ಎಲ್ಲ ವಾದ–ಪ್ರತಿವಾದಗಳಿಂದ ಅಸಂಬದ್ಧವಾದಿ ಒಂದನೆಯದಾಗಿ ನಿರ್ಲಿಪ್ತ ಕ್ರಾಂತಿ, ಎರಡನೆಯದಾಗಿ ನಿರ್ಲಿಪ್ತ ಸ್ವಾತಂತ್ರ್ಯ ಹಾಗೂ ಮೂರನೆಯದಾಗಿ ನಿರ್ಲಿಪ್ತ ಕಾಮನೆಗಳ ಜಗತ್ತಿನಲ್ಲಿ ಅವತರಿಸುತ್ತಾನೆ. ಕೇವಲ ಪ್ರಜ್ಞಾಪೂರ್ವ ಚಟುವಟಿಕೆ ಮಾತ್ರದಿಂದ, ಯಾವುದು ಸಾವಿಗೆ ಆಹ್ವಾನವಾಗಿತ್ತೋ ಅದಕ್ಕೆ ತದ್ವಿರುದ್ಧವಾದ, ಬದುಕುವ ಕ್ರಿಯಾಸ್ಥಿತಿಗೆ ಮರಳುವುದರ ಮೂಲಕ ಭೌತಿಕ ಆತ್ಮಹತ್ಯೆಯನ್ನೂ ತಿರಸ್ಕರಿಸಿ ಬಿಡುತ್ತಾನೆ.

*

— ಹೀಗೆ, ಅಸಂಬದ್ಧ ಮಾನವ ಈ ಮಿಥ್ಯವಾದ, ಭ್ರಮಾತ್ಮಕವಾದ ಮಾಯಮಯವಾದ ಆದರೆ, ಸಾವಿನ ಸತ್ಯಮಾತ್ರದಿಂದ ತಾನು ಎಚ್ಚರಗೊಳ್ಳುವ ಸ್ಥಿತಿಯಲ್ಲಿ ಆಧ್ಯಾತ್ಮಿಕ ಹಾಗೂ ಆದಿಭೌತಿಕ ಆತ್ಮಹತ್ಯೆಗಳನ್ನು ಪ್ರಜ್ಞಾಪೂರ್ವಕವಾಗಿಯೇ ತಿರಸ್ಕರಿಸಿ ಬಿಟ್ಟು, ತನ್ನ ಪ್ರಜ್ಞೆಮಾತ್ರದಿಂದ ನಿರ್ಣಯಿಸಿದ ಹಾಗೂ ನ್ಯಾಯಬದ್ಧವಾಗಿಸಿದ ಜಗತ್ತಿನಲ್ಲಿ ಎಷ್ಟು ಸಾಧ್ಯವೋ ಅಷ್ಟೂ ಮೊತ್ತದ ಬಾಳನ್ನು ಅದರ ಅರಿವನ್ನು ತಂದುಕೊಳ್ಳದೇ ಬಾಳತೊಡಗುತ್ತಾನೆ.

ಸೂಕ್ಷ್ಮಾತಿಸೂಕ್ಷ್ಮವಾದ ಅಥವಾ ಹುಚ್ಚುಚ್ಚಾದ ಅಥವಾ ಪರಮ ಪವಿತ್ರವಾದ ಬಾಳು ಅಂತಿಮವಾಗಿ ಒಂದಲ್ಲ ಒಂದಕ್ಕೆ ಮಾನವ ತನ್ನನ್ನು

ತಾನು ಅರ್ಪಿಸಿಕೊಂಡಾಗ ಮಾತ್ರ ದೊರೆಯುವಂತಹದ್ದಾಗಿರುವುದು ನಿಜ
ವಿರಬಹುದು : ಆದರೆ, ಮನುಷ್ಯ ಪ್ರಜ್ಞೆಯ ಗೌರವಾನ್ವಿತ ಕಾಯಿದೆ
ಗಳಿಗೆ ಇದು ವಿರುದ್ಧವಾದುದಾದ್ದರಿಂದಲೇ ಆತ ಈ ಅರ್ಪಣೆಗೆ ವಿರುದ್ಧ
ವಾದ ನಿರ್ಲಿಪ್ತ ಕ್ರಾಂತಿಗೆ ಧುಮುಕಿದ್ದು ; ತನ್ನ ಬದುಕನ್ನು ತಾನೇ ತನ್ನ
ಪ್ರಜ್ಞೆಮಾತ್ರದಿಂದ ಆಯ್ದುಕೊಂಡದ್ದು. ಹಾಗೆ ತನ್ನ ಅಂತಿಮ ಆಯ್ಕೆ
ಯಲ್ಲಿ ಆತ ಏಕಾಂಗಿಯಾಗಿದ್ದಾನೆ–ಚಿಂತೆಯಿಲ್ಲ :

ಪ್ರಾರ್ಥನೆ ಎಂದರೆ ಚಿಂತನೆಗಳ ಮೇಲೆ ಕತ್ತಲಾವರಿಸುವುದೇ
ಆಗಿದೆ ! ಆದರೆ, ಅಸ್ತಿತ್ವವಾದಿಗಳು ಹಾಗೂ ದಾರ್ಶನಿಕರೂ 'ಮನಸ್ಸು
ಕತ್ತಲನ್ನು ಸಂಧಿಸಿಯೇ ತೀರಬೇಕು' ಎನ್ನುತ್ತಾರೆ. ಈ ಮಾತು ಸತ್ಯದ
ಮಹಾನ್ ಸತ್ಯ : ಆದರೆ, ಮನುಷ್ಯ ತಾನಾಗಿಯೇ ಆ ಕತ್ತಲಲ್ಲಿ ಹುದುಗಿ
ಹೋಗಲು ಬಯಸಿ ಮುಚ್ಚಿಕೊಂಡ ಕಣ್ಣುಗಳ ಕತ್ತಲಾಗಿರಬಾರದು !

ಆ ಪ್ರಾರ್ಥನೆ ಆ ರಾತ್ರಿಯ ವಿರುದ್ಧವಾಗಿ ಕ್ರಾಂತಿಯ ಕಹಳೆಯನ್ನು
ಮೊಳಗಿಸುವುದೇ ಆದರೆ—

ಆ ಪ್ರಾರ್ಥನೆಯ ಕ್ರಾಂತಿ ಕಹಳೆ ಒಂದು ಉದ್ವೇಗವಾಗಿ–ಯಾವ
ಉದ್ವೇಗ ತಾನೆಷ್ಟು ಪ್ರಖರವಾಗಿದೆಯೋ ಅಷ್ಟೇ ನಿರ್ಮಲವಾಗಿದ್ದು
ಕೊಂಡು ಮನಸ್ಸನ್ನು ಎಚ್ಚರದಿಂದ ಕಾಯುತ್ತಾ ಹಾಗೆಯೇ ಮಾರ್ಗದರ್ಶನ
ನೀಡುತ್ತಾ ಸಾಗುವ ಉದ್ವೇಗವಾಗಿ – ನಿರ್ಮಲವೂ ಅಷ್ಟೇ ಅಸ್ಖಲಿತವೂ
ಆದ ಬೆಳಕಿನ ಮಹಾಪ್ರಭೆಯಾಗಿ, ಆ ಮಹಾಪ್ರಭೆ ಚೆಲ್ಲಾಡುವ ಸ್ಥಳಗಳ
ವಸ್ತುಗಳೆಲ್ಲಾ ನಿಚ್ಚಳವಾಗಿ ಗುರುತಿಸುವಂತಾಗುವ ಜಾಗೃದಾವಸ್ಥೆಯಾಗಲಿ.

ಆ ಸ್ಥಿತಿಯಲ್ಲಿ ಬದುಕಿನ ಸಮತೋಲನ ರಸಿಕ–ಗ್ರಹಿಕೆಯನ್ನು
ಮುಖಾಮುಖಿಯಾಗಿ ಸಂಧಿಸುತ್ತದೆ.

ಅಂತಹ ಸಮತೋಲದ ಅಸ್ತಿತ್ವಾನದ ಪೂರ್ವ ಸ್ಥಿತಿಯನ್ನು
ನಿರ್ಣಯಿಸುವ ಪ್ರಶ್ನೆ ಕೂಡ ಆಗಿರುವುದಿಲ್ಲ. ಆದರೂ ಪ್ರಜ್ಞಾಶೀಲನಿಗೆ
ಆ ಜಗಿತ ಮೂಲತಃ ಅಸಂಬದ್ಧವಾದುದು ಮಾತ್ರವಾಗಿ, ವಿರೋಧಾಭಾಸ
ವನ್ನು ಅಥವಾ ವಿಪರ್ಯಾಸವನ್ನು ನಿರಾಕರಿಸುವ ಬದಲಿಗೆ, ನಿಚ್ಚಳ
ಗೊಳಿಸಿ, ಪುನಃಸ್ಥಾಪನೆಗೆ ಕಾರಣವಾಗುತ್ತದೆ.

ಅಸಂಬದ್ಧತೆ ತನ್ನ ಈ ವಿಜಯದಿಂದಾಗಿ ರೋಮಾಂಚಕಾರಿಯಾ

ಗಿದೆ: ಈ ವಿಜಯದಿಂದಾಗಿ ಪ್ರತಿಯೊಂದೂ ತಮ್ಮ ತಮ್ಮ ಸ್ಥಳಗಳನ್ನು ಮತ್ತೆ ಆಕ್ರಮಿಸುತ್ತವೆ. ಹಾಗೂ ಅಸಂಬದ್ಧ ಜಗತ್ತು ತನ್ನ ಎಲ್ಲ ವೈಭವ ಹಾಗೂ ವಿರೋಧಾಭಾಸಗಳಲ್ಲಿ ಮತ್ತೆ ಜನ್ಮ ಧರಿಸಿದೆ. ಪ್ರಾಯಶಃ, ಆಧ್ಯಾತ್ಮಿಕ ವಲ್ತಡಗಳಲ್ಲಿ ಅತಿಸೂಕ್ಷ್ಮವಾದ, ನೋಟವನ್ನು ಒಂದೇ ಒಂದು ಕೋನಕ್ಕೆ ಅಳವಡಿಸಿದ್ದರಿಂದ ಅಂತಿಮ ತೃಪ್ತಿ ಕಷ್ಟ ಸಾಧ್ಯವಾದ, ವಿರೋಧಾಭಾಸ ಗಳೇ ಪ್ರಜ್ಞಾಪೂರ್ಣವಾಗಿ ಇಲ್ಲವಾದ, ಆದರೂ ಅನ್ವೇಷಿತವಾಗಿರುವ ಈ ಅಸಂಬದ್ಧ ಪ್ರಲಾಪದ ತಾತ್ವಿಕತೆಯನ್ನು ಕಿತ್ತೆಸೆಯುವುದು ತಪ್ಪಾಗುತ್ತದೆ.

ಈ ತಾತ್ವಿಕತೆ ವೈಚಾರಿಕತೆಯಲ್ಲಿನ ದೃಷ್ಟಿಯೊಂದಾಗಿದೆಯಾದರೂ, ಆ ದೃಷ್ಟಿಯ ಜೀವನವನ್ನು ದಕ್ಕಿಸಿಕೊಳ್ಳುವುದರಲ್ಲೇ ಮನುಷ್ಯನ ವಿಶೇಷತೆ ಹಾಗೂ ಗೌರವ ಇರುವುದು.

*

ಅಸಂಬದ್ಧ ಮಾನವ ತನ್ನಲ್ಲಿನ ಆತ್ಮರಹಿತತೆಯನ್ನು ತನ್ನ ನಿರ್ಲಕ್ಷ್ಯ ಕ್ರಾಂತಿಯಿಂದ, ಭಾವಶುದ್ಧಿಯಿಂದ ನಿಚ್ಚಳವಾಗಿ ಕಂಡು ದಕ್ಕಿಸಿಕೊಂಡವನು. ಆತನ ಕ್ಷೇತ್ರ ಕಾಲವಾಗಿದೆ; ಆತ ಅನಂತವನ್ನು ಅಲಕ್ಷಿಸದೆ, ಸ್ವೀಕರಿಸದೇ ಉಳಿದಾತ. ಅದರ ವ್ಯಾಮೋಹ ಅವನಿಗೆ ಅನ್ಯವೇನೂ ಅಲ್ಲ–ಆದರೆ, ಅವನು ತನ್ನ ವಿಚಾರ ಶೀಲತೆಯಲ್ಲಿ, ತನ್ನ ಅಸಂಗತ ಧೀಯಲ್ಲಿ ನಂಬಿಕೆ ಹೊತ್ತವನು. ಅವನ ವೈಚಾರಿಕತೆ ಅವನ ಇತಿಮಿತಿಯ ಅರಿವನ್ನು ಅವನಿಗೆ ತಂದುಕೊಟ್ಟು, ಅವನಲ್ಲಿ ಏನಿದೆಯೋ ಅಷ್ಟರಲ್ಲಿ ಬದುಕುವುದನ್ನು ಅವನಿಗೆ ಕಲಿಸಿಕೊಟ್ಟಿರುವಂತೆಯೇ, ಅವನ ಅಸಂಬದ್ಧ ಧೀ ಅವನನ್ನು ಬೇಡಿಕೆ ಹಾಗೂ ಪಶ್ಚಾತ್ತಾಪಗಳಿಂದ ಮುಕ್ತವಾದ ಜಗತ್ತಿನಲ್ಲಿ ಪ್ರತಿಷ್ಠಾಪಿಸಿದೆ. ತಾತ್ಕಾಲಿಕವಾಗಿ ಸೀಮಿತವಾದ ಮುಕ್ತಿಯ ಭರವಸೆ ಅವನಿಗೆ ಪ್ರಾಪ್ತವಾಗಿರುವಂತೆಯೇ, ಭವಿಷ್ಯದ ಹಂಗಿಲ್ಲದ ಮರ್ತ್ಯಪ್ರಜ್ಞೆಯಿಂದಾದ ಜಗತ್ತು ಅವನದಾಗಿ, ಅವನು ತನ್ನ ಬದುಕಿನ ಸಾಹಸಗಳನ್ನು ಬದುಕಿನ ಅವಧಿಯ ಉದ್ದಕ್ಕೂ ನಡೆಸುತ್ತಾ ಸಾಗುತ್ತಿರುವಾಗ, ಈ ಕಾರಣಕ್ಕೆ ಮಹಾನ್ ಜೀವನವೆಂದರೆ ಅವನ ಮಟ್ಟಿಗೆ ಬೇರೊಂದು ಬದುಕಾಗುವು

ದಿಲ್ಲ. ಆದ್ದರಿಂದಲೇ ಅವನ ಪಾಲಿಗೂ ಒಂದು ನೈತಿಕ ಮೌಲ್ಯವಿದೆ : ಈ ಮೌಲ್ಯ ದೇವರಿಂದ ಪ್ರತ್ಯೇಕಿಸಲ್ಪಡದ ಆದರೂ ವಿಧಿತವಾದ್ದ ಮೌಲ್ಯ- ಆದರೆ, ಆತ ದೇವರ ಅಸ್ತಿತ್ವದಿಂದ ಹೊರಗೆ ಜೀವಿಸುತ್ತಿರುವಾತ! ಅನ್ಯರು ತಮ್ಮ ಬದುಕನ್ನು ತಾವು ಸಮರ್ಥಿಸಿಕೊಳ್ಳುವುದನ್ನು ಕಾಣುತ್ತಾನಾದರೂ ಅವನ ಪಾಲಿಗೆ ಸಮರ್ಥಿಸಿಕೊಳ್ಳಲು ಏನೂ ಇರುವುದಿಲ್ಲ.

ಅಸಂಬದ್ಧ ಜೀವಿಯು ಈ ಮುಗ್ಧತೆಯಿಂದ ಅವನ ಬಾಳನ್ನು ಅನ್ವೇಷಿಸುವುದರಲ್ಲಿ, ಹೊಸ ಜೀವನದ ಮೌಲ್ಯಗಳ ಅರ್ಥಗಳು ಪದರು ಪದರಾಗಿ ಬಿಚ್ಚಿಕೊಳ್ಳುತ್ತವೆ.

ಮುಗ್ಧತೆ ಎಂದ ಕೂಡಲೇ ಹೆದರಿಬಿಡಬೇಕಾಗುತ್ತದೆ : ಮುಗ್ಧತೆಗೆ ಏನನ್ನೂ ಬೇಕಾದರೂ ಮಾಡಿಬಿಡುವ ಶಕ್ತಿ ಇದೆ. ಏನನ್ನು ಬೇಕಾದರೂ ಮಾಡಿಬಿಡುವುದು ಕೂಡ ಅಸಂಬದ್ಧತೆಯ ಲಕ್ಷಣವೇ—ಆದರೆ ಅಶ್ಲೀಲವಾದ ಅರ್ಥದಲ್ಲಿ ಮಾತ್ರ ಅಲ್ಲ! ಕಹಿಯಾದರೂ ಒಪ್ಪಲೇಬೇಕಾದ ಸತ್ಯ ಇದು-ದಿವ್ಯಅಗ್ನಿಗೆ ವಿಧೇಯನಾಗಿರುವುದು ಎಷ್ಟು ಕಷ್ಟವೋ ಅಷ್ಟೇ ಸುಲಭವೂ ಹೌದು. ಆಯ್ಕೆ ಮಾಡುವುದು ಕಷ್ಟವಾಗುವುದಿಲ್ಲ; ಆದರೆ ಆಯ್ಕೆ ಇಲ್ಲದಿರುವುದೇ ಕಷ್ಟವಾಗಿರುವುದು ; ಅಥವಾ ಕಹಿಯಾಗಿರುವುದು.

ಅಸಂಬದ್ಧತೆ ಮುಕ್ತನನ್ನಾಗಿಸದು, ಬದಲಿಗೆ ಬಂಧಿಸುತ್ತದೆ-ಎಂದ ಮೇಲೆ ಏನನ್ನು ಬೇಕಾದರೂ ಮಾಡುವ ಪ್ರಶ್ನೆಯೇ ಇಲ್ಲ; ಏನನ್ನು ಬೇಕಾದರೂ ಮಾಡಬಹುದು ಎಂದರೆ ನಿಷೇದಿತವಾದುದೇ ಇಲ್ಲವೆಂದು ಅರ್ಥವಲ್ಲ. ಅಸಂಗತ ಮಾನವ ತನ್ನ ಎಲ್ಲ ಕ್ರಿಯೆಗಳ ಫಲಶೃತಿಗಳ ಮೇಲೆ ಸಮತೋಲನ ಒಂದನ್ನು ತಂದುಕೊಳ್ಳುತ್ತಾನೆ. ಅಪರಾಧವನ್ನು ಅವನು ಒಪ್ಪುತ್ತಾನೆಂದೂ ಅಲ್ಲ-ಕಾರಣ ಅದು ಅವನಿಗೆ ತೀರ ಬಾಲಿಶವಾದದ್ದು, ಅಷ್ಟೇ. ಮನಸ್ಸೆನ್ನುವ ಭ್ರಮೆಯಲ್ಲಿ ಸಾಪೇಕ್ಷತೆ ಮಾತ್ರ ಸತ್ಯವೆಂದು ಬಲ್ಲ ಆತ ಅಪರಾಧವನ್ನು ಪ್ರಶಾಂತವಾಗಿಯೇ ಸ್ವೀಕರಿಸುತ್ತಾನೆ; ನಿರ್ಲಕ್ಷ್ಯದಿಂದ ಕಾಣುತ್ತಾನೆ- ತನ್ನೆಲ್ಲ ಅನುಭವಗಳಿಂದಾದ ಕ್ರಿಯೆ ಇದು.

ಕಾಲ ಕಾಲವನ್ನು ಉದ್ದಗೊಳಿಸುವಂತೆ, ಬದುಕು ಬದುಕನ್ನು ಕಾಯ್ದುಕೊಳ್ಳುತ್ತದೆ: ಖೋಟಾ ಆಗಿರುವುದು ಅವಶ್ಯಕವಲ್ಲ ; ಆದರೆ ಅಸಂಬದ್ಧವಾಗಿರುವುದು ಅವಶ್ಯಕ. ಹಾಗೆಂದು ನಾಲ್ಕು ಅವಯವಗಳ ಮೇಲೆ ನಡೆ

ಯಲೇಬೇಕೆಂದಾಗಲಿ, ನೀಷೆಯ ಹೇಳಿಕೆಯಂತೆ ಒಬ್ಬ ತನ್ನ ತಾಯಿಯನ್ನೇ ಭೋಗಿಸಬೇಕೆಂದಾಗಲಿ ಅರ್ಥವಲ್ಲ: ಇದೆಲ್ಲದರ ಅರ್ಥ ಇಷ್ಟೇ : ಬದುಕಿನ ಆಳಕ್ಕೆ ಇಳಿದು, ಅಲ್ಲಿರುವುದನ್ನೆಲ್ಲಾ ನಿರ್ಲಕ್ಷ್ಯದಿಂದ ದೋಚಿ, ಬದುಕನ್ನು ವಿಶಾಲಗೊಳಿಸಿಕೊಳ್ಳುವುದರ ಬಗ್ಗೆ ಮಾತ್ರ ಅಸಂಗತ ಜೀವಿ ಕಾಳಜಿ ತಳೆಯುತ್ತಾನೆ. ತನ್ನಲ್ಲಿ ತಾನು ವೃದ್ಧಿಯಾಗುತ್ತಾ ಹೋಗುವುದೇ ಅವನ ಆಯ್ಕೆ. ಅಸಂಗತ ಜಗತ್ತಿನಲ್ಲಿ ಅಭಿಪ್ರಾಯ ಅಥವಾ ಜೀವನದ ಮೌಲ್ಯ ಅದರ ಬಂಜೆತನ ಮಾತ್ರದಿಂದ ನಿರ್ಮಿತವಾಗುತ್ತದೆ.

*

ಪ್ರೀತಿಸುವುದು ಸಾಕಷ್ಟು ಇದ್ದಿದ್ದರೆ ಜಗತ್ತು ಭರಿಸಲು ಸುಲಭವಾಗಿ ಬಿಡುತ್ತಿತ್ತು. ಪ್ರೀತಿಸಿದಷ್ಟೂ ಅಸಂಬದ್ಧವಾದಿ ಬಲಗೊಳ್ಳುತ್ತಾ ಹೋಗಿಬಿಡುತ್ತಾನೆ. (ಹಾಗೆಯೇ ಹೆಚ್ಚು ಹೆಚ್ಚು ಅಪರಿಚಿತನೂ ಆಗಿಬಿಡುತ್ತಿರುತ್ತಾನೆ!)

ಭಗ್ನ ಪ್ರೇಮದಿಂದಾಗಿ ಡಾನ್ ಜುಆನ್ ಹೆಣ್ಣಿನಿಂದ ಹೆಣ್ಣಿಗೆ ಹಾರುತ್ತಿಲ್ಲ;ಅವನು ಅನಂತ ಪ್ರೇಮದ ಅನ್ವೇಷಣೆಯಲ್ಲಿರುವ ದಾರ್ಶನಿಕನೂ ಅಲ್ಲ: ಆ ಎಲ್ಲ ಹೆಣ್ಣುಗಳನ್ನೂ ಅವನು ಸಮಚಿತ್ತದಿಂದ ಬಯಸಿರುವುದರಿಂದ, ತನ್ನಲ್ಲಿನ ಹುಟ್ಟುಕಾಮ ಹಾಗೂ ಅಗಾಧ ಅನ್ವೇಷಣೆಯ ಭಾವಶುದ್ಧಿಯಲ್ಲಿ ತನ್ನ ಬದುಕನ್ನು ಪುನಃ ಪುನಃ ಕಾಣುತ್ತಿರಬೇಕಾದ್ದರಿಂದ, ಅವನು ಹಾಗೆ ಮಾಡುತ್ತಿದ್ದಾನೆ. ಪ್ರತಿ ಹೆಣ್ಣೂ ಬೇರೊಂದು ಹೆಣ್ಣು ಅವನಿಗೆ ಉಣಿಸಲಾಗದ್ದನ್ನು ಉಣಿಸಲೆಳಸಿರಬಹುದು–ಆದರೆ, ಆದರಿಂದ ಅವನ ಪುನರಾವೃತ್ತಿಯ ಅವಶ್ಯಕತೆಯನ್ನಷ್ಟೇ ಆ ಹೆಣ್ಣುಗಳು ಹೆಚ್ಚಿಸುತ್ತವೆ. 'ಕೊನೆಗಾದರೂ ನಾನು ನಿನಗೆ ಕಾಮವನ್ನು ಕೊಟ್ಟೆ !' ಎಂದು ಪ್ರತಿಯೊಬ್ಬಳೂ ಹೇಳುತ್ತಿರಬಹುದು; ಆದರೆ ಅವನ ಉತ್ತರ ಇಷ್ಟೇ :'ಕೊನೆಗಾದರೂ ಅಲ್ಲ; ಪ್ರತಿಬಾರಿಯೂ!'

ಈ ಹುಚ್ಚ ಒಬ್ಬ ಮಹಾ ವಿವೇಕಿ: ಅವನ ಎಲ್ಲ ಆಸೆ ಆಕಾಂಕ್ಷೆಗಳನ್ನೂ ಅವನು ತನ್ನದಾಗಿಸಿಕೊಳ್ಳುತ್ತಿದ್ದಾನೆ; ಅವುಗಳನ್ನು ಕಳೆದುಕೊಳ್ಳುವುದು ಎಲ್ಲಕಿಂತಲೂ ಕೀಳಾದುದು. ಪ್ರತಿಸುಖಿಯೂ ತನ್ನವರ ಸಂಖ್ಯೆಯನ್ನು ಬೆಳೆಸಲೆತ್ನಿಸುತ್ತಾನೆ. ಅವನು ದುಃಖಿಯಲ್ಲ–ಭಗ್ನ

ಹೃದಯಿಯಲ್ಲ-ಏಕೆಂದರೆ ಅವನಿಗೆ ಅರಿವಿದೆ, ಆಸೆಯಿಲ್ಲ. ಅವನ ಬದುಕು ತನ್ನ ಸಾಧ್ಯಾಸಾಧ್ಯತೆಯನ್ನು ಬಲ್ಲ, ಅದನ್ನು ಎಂದೂ ಮೀರದ ಕಲಾವಿದ ನನ್ನು ನೆನಪಿಗೆ ತರುತ್ತದೆ. ಅರಿವಿರುವ ಆದರೆ, ಆಸೆ ಇಲ್ಲದ ಮಧ್ಯಂತರ ದಲ್ಲಿ ತನ್ನ ತಾತ್ವಿಕ ನಿಲುವನ್ನು ದಕ್ಕಿಸಿಕೊಂಡ ಕಲಾವಿದ ಜಗತ್ತಿನ ಎಲ್ಲಾ ಮುಕ್ತರ ಆಶ್ಚರ್ಯಮಯ ಸರಳತೆಯನ್ನೂ ಸುಖಿಸುತ್ತಾನೆ. ಈ ತಾತ್ವಿಕ ಪ್ರವೃತ್ತಿಯೇ-ತನ್ನ ಎಲ್ಲೆಗಳ ಅರಿವಿರುವ ಬುದ್ಧಿಯೇ–ನಿಜಕ್ಕೂ ಮೇಧಾವಿ ಯದು. ಭೌತಿಕ ಸಾವಿನ ಎಲ್ಲೆಯವರೆಗೂ ದುಃಖದ, ಅಥವಾ ಭಗ್ನ ಹೃದಯದ ಅರಿವಿರದ ಮುಗ್ಧ ಜೀವಿ ! ಭೌತಿಕ ಸಾವಿನ ಎಲ್ಲೆಯ ಅರಿವಾಗು ತ್ತಿದ್ದಂತೆಯೇ ಆತನ ನಗೆ ಉಕ್ಕಿಹರಿದುಬಿಡುತ್ತದೆ; ಅವನು ಎಲ್ಲವನ್ನೂ ಮರೆತೂಬಿಡುತ್ತಾನೆ. ಅವಶ್ಯಕವಾದ ಅಪೂರ್ಣತೆ ಮಾತ್ರವೇ ಬದುಕನ್ನು ಭರಿಸಲು ಸಾಧ್ಯವಾಗಿಸುವಂತಹದ್ದು !

ಅವನು ಆಹಾರಾದಿಗಳನ್ನು ಊಟಮಾಡಿಯೂ ಉಪವಾಸಿಯಾಗಿ ದ್ದಾನೆ; ಯೋನಿಗಳನ್ನು ಬಳಸಿಯೂ ಬ್ರಹ್ಮಚಾರಿಯಾಗಿದ್ದಾನೆ. ಆದ್ದ ರಿಂದಲೇ ಅವನ ಕಾಮ ಅಸಂಬದ್ಧ ಮಾನವನ ಕಾಮ. ಅವನಿಗೆ ಅವನ ಕರ್ಮಗಳ ಬಗ್ಗೆ ಭಾವಶುದ್ಧಿ ಇರುವುದರಿಂದಾಗಿ, ಅವನು ಎಂದೂ ನೈತಿಕ ಮೌಲ್ಯವೇ ಮೊದಲಾದ ಕಾರಣಗಳಿಗೆ ಬದಲಾಗದವ. ಆದರೆ, ಎಲ್ಲವೂ ಅವನ ಅತಿ ಶುದ್ಧ ಸ್ವರೂಪದ ಅಸಂಬದ್ಧ ಪ್ರಜ್ಞೆಯಿಂದಾಗಿ ರೂಪಾಂತರ ಹೊಂದಿವೆ. ಅವನದು ಸಿದ್ಧ ಪರಿಹಾರಗಳನ್ನು ನಿರಂತರವಾಗಿ ನಿರ್ಲಕ್ಷಿ ಸುತ್ತಿರುವ ಮೂಲಕ ದಟ್ಟವಾಗಿ ಬಾಳುವ ಸ್ಥಿತಿ. ದಾರ್ಶನಿಕನ ಗುಣಾತ್ಮಕ ವಾದ ನೈತಿಕತೆಯನ್ನು ತಿರಸ್ಕರಿಸಿದ್ದರಿಂದಾಗಿ ಪಡೆದ ದಟ್ಟ ಬಾಳುವೆಯ ನೈತಿಕತೆ. ಕಾಲ ಅವನನ್ನು ಅನುಸರಿಸುತ್ತದೆ: ಕಾಲದಿಂದ ಹೊರಗಾದ ವನು ಅಸಂಬದ್ಧವಾದಿಯಲ್ಲ. ಅವನು ಬದುಕನ್ನು ಉತ್ಕಟವಾಗಿ ಬಾಳಿಯೂ ಎಲ್ಲ ಪಶ್ಚಾತ್ತಾಪಗಳಿಂದ ಮುಕ್ತನಾಗಿದ್ದಾನೆ. ಅವನು ಎಲ್ಲ ಆಗಿದ್ದೂ ಏನೂ ಆಗದವನು ! ಯೋನಿಗಳ ಸಂಖ್ಯೆಯನ್ನು ದೋಚಿ ಬರಿದಾಗಿಸಿ ಆ ಮೂಲಕ ಬದುಕಿನ ಅವಕಾಶಗಳನ್ನೆಲ್ಲಾ ದೋಚಿಬಿಟ್ಟ ವನು.

ಇಲ್ಲಿ ಸಾವಿನ ವಿವಿಧ ಅವಸ್ಥೆಗಳಿವೆ–ಪೂರ್ಣ ಬಳುವಳಿಯಾದ

ಉತ್ಕಟ ಅನುಭೋಗ ಹಾಗೂ ಬಾಳ್ವೆಯ ಮರವೆ– ರೋಮಾಂಚಕವಾದ ಸ್ಥಿತಿ ಇದು !–ಬೇರೊಂದು ರೀತಿಯ ಪ್ರೇಮ ಅವನನ್ನು ಆವರಿಸಿದೆ–ಈ ಪ್ರೇಮ ಅವನನ್ನು ಬದುಕಿನಿಂದ ಮೇಲಕ್ಕೆ ಎತ್ತಿದೆ; ಇಂದ್ರಿಯ ಬದ್ಧ ಜಗತ್ತಿನಿಂದ ಪೂರ್ಣ ಮುಕ್ತಿಯನ್ನು ನೀಡಿದೆ. ಅವನು ಏನೂ ಅಲ್ಲವಾಗಿದ್ದಾನೆ–ಅವನ ಮನಸ್ಸು ಮುಕ್ತವಾಗಿರುವ ಕಾರಣ. ನಿಚ್ಚಳವಾಗಿ ಕಾಣುವುದೇ, ಸ್ಪಷ್ಟವಾಗಿ ಅನುಭವಿಸುವುದೇ ಅವನ ಉದ್ದೇಶ–ಅವನ ಎಲ್ಲ ಸಾವು ಮತ್ತು ಪುನರ್ಜನ್ಮಗಳು ಅವನ ಬದುಕನ್ನು ಆರಳಿಸಿವೆ. ಪ್ರಜ್ಞಾಪೂರ್ಣ ಜೀವಿಗೆ ವೃದ್ಧಾಪ್ಯವಾಗಲಿ, ಅದರ ಇರುಸು ಮುರುಸಾಗಲಿ ಆಘಾತ ಅಥವಾ ಆಶ್ಚರ್ಯವನ್ನು ತರುವುದಿಲ್ಲ. ಅದರ ಭಯದಿಂದ ತನ್ನನ್ನು ತಾನು ಬಚ್ಚಿಟ್ಟುಕೊಂಡಿಲ್ಲದ ಅರಿವು ಅವನಿಗಿದೆ. ವಿಧಿ ಅವನ ಪಾಲಿಗೆ ಶಿಕ್ಷೆಯಾಗದು.

ಯಾವ ಜ್ಞಾನ ತಾನು ಪಡೆದುದನ್ನು ಇಲ್ಲವಾಗಿಸಿಕೊಂಡಿದೆಯೋ ಆ ಎಲ್ಲ ಭ್ರಮೆಗಳಿಗೆ ಅತೀತವಾದ ಜ್ಞಾನವನ್ನು ಅವನು ದಕ್ಕಿಸಿಕೊಂಡಿದ್ದಾನೆ.

ಅವನಿಗೆ ಮುಗ್ಧತೆಯನ್ನು ಬದುಕುವ ಕ್ರಿಯೆಯ ಸತ್ಯವೇ ನೀಡಿದೆ.

*

ಭಾವನೆಗಳ ಅಭಿನಯವಾದ ನಾಟಕದಲ್ಲಿ ಆತ್ಮನಿಷ್ಠೆಯನ್ನು ಸೆರೆಹಿಡಿಯಬೇಕಾಗುತ್ತದೆ. ‘ಸೆರೆಹಿಡಿ’ ಎನ್ನುವುದೇ ಸರಿಯಾದ ಮಾತು. ಏಕೆಂದರೆ, ಆತ್ಮನಿಷ್ಠೆ ಅಸಾಧ್ಯ ವೇಗದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ; ಅಷ್ಟೇ ವೇಗದಲ್ಲಿ ತನ್ನಲ್ಲಿ ತಾನು ಹುದುಗಿಹೋಗಿಬಿಡುತ್ತದೆ. ಈ ಆತ್ಮನಿಷ್ಠೆಯನ್ನು ಅದು ತನ್ನನ್ನು ತಾನೆ ನೋಡಿಕೊಳ್ಳುವ ಆ ಗ್ರಹ್ಯಾತೀತ ಕ್ಷಣದ ಭಿನ್ನಾಂಶದಲ್ಲಿ ನೇಪಥ್ಯದಲ್ಲಿ ನಿಂತು ಗ್ರಹಿಸಬೇಕಾಗುತ್ತದೆ ! ಪ್ರತಿನಿತ್ಯ ಮನುಷ್ಯ ತನ್ನ ಆತ್ಮನಿಷ್ಠೆಯತ್ತ ನೋಡಿಕೊಳ್ಳುವುದರಲ್ಲಿ ತನ್ನ ಸುಖ ಕಂಡುಕೊಳ್ಳಲಾರ. ಅನ್ಯರು ಬದುಕಿನಿಂದ ಹೊರಗಾಗುವಲ್ಲಿ ಅಸಂಬದ್ಧಜೀವಿ ಬದುಕಿನ ಒಳಗಾಗುತ್ತಾನೆ. ನಟ ಅಸಂಗತವಾದಿಯಲ್ಲವಾದರೂ ಅವನ ಕರ್ಮ ಅಸಂಗತವಾದಿಯದೇ. ಆದ್ದರಿಂದ, ಆತನ ಜೀವನ ಯಾವುದೇ ನಿರ್ಮಲವಾದ ಹೃದಯಕ್ಕೆ ಆಹ್ಲಾದತೆಯನ್ನೂ ಆಕರ್ಷಣೆಯನ್ನೂ ಕೊಟ್ಟೀತು. ನಟ

ತನ್ನ ನಟನೆಯಿಂದ ವಿಜಯಿಯಾಗಬಹುದು, ಅಥವಾ ಆಗದೇ ಹೋಗ ಬಹುದು. ಲೇಖಕ ಸೋತರೂ ತಾನು ಏನಾಗಿದ್ದೆನೆಂದು ಹೇಳಲು ಸಾಕ್ಷಿ ಯಾದರೂ ಇದೆ-ಆದ್ದರಿಂದ, ಆಸೆಯನ್ನು ಹೊತ್ತು ಸಾಗಲು ಅವಕಾಶ ಇದೆ. ನಟನಿಗೆ ಇಂತಹದ್ದೇನೂ ಇಲ್ಲ : ಅವನು ಪಾತ್ರವನ್ನು ಅಭಿನಯಿಸ ವೆಷ್ಟು ಕಾಲವೂ ಆ ಪಾತ್ರಕ್ಕೆ ಜೀವ ತುಂಬುತ್ತಾನೆ; ಇಲ್ಲ, ಕೊಲ್ಲುತ್ತಾನೆ. ನಟನ ಪಾಲಿಗೆ ಆ ನಟನೆ ಮುಗಿದನಂತರ ಆ ಜೀವನ ಒಂದು ಕನಸು. ಅವನು ಎಷ್ಟೇ ಉತ್ಕಟವಾಗಿ ನಟನ ಬಾಳನ್ನು ಬದ್ದಿದ್ದರೂ ಅದೊಂದು 'ವಾಸ್ತವವಾಗಿ ಇಲ್ಲದ, ಆದರೆ ಇದ್ದಂತೆ ತೋರಿಕೆಯಾದ' ಕನಸು ಮಾತ್ರ. ಅವನ ಬಾಳಿನ 'ನಟನ ಜೀವನ' ಅವನದೇ ಆದರೂ ಆ ಜೀವನ ಸ್ವತಃ ಅವನ ದಲ್ಲ: ಅಷ್ಟರ ಮಟ್ಟಿಗೆ ಅದು ತಾವರೆಯ ಎಲೆಯ ಮೇಲಿನ ಹನಿ. ಆದರೂ ನಟ ತನ್ನ ಜೀವಂತ ಜೀವನವನ್ನು ಬಾಳುವುದು ಅಸಾಧ್ಯವಾಗುವುದು ಅವನು ನಟಿಸದೇ ಹೋದಾಗಲೇ. ನಟಿಸದೇ ಇರುವುದೆಂದರೆ ತಾನು ಜೀವಕೊಟ್ಟ ಅಥವಾ ಕಿತ್ತುಕೊಂಡ ಪಾತ್ರಗಳಲ್ಲಿ ಕ್ಷಣಕ್ಷಣವೂ ಸಾಯುವುದೇ ಆಗಿದೆ! ಅಸಂಬದ್ಧತೆಯನ್ನು ವಿವರಿಸಲು ಇದಕ್ಕಿಂತಲೂ ಸಮರ್ಥವಾದ ಸಾಧನ ಬೇರೊಂದಿಲ್ಲ.

ಜಗತ್ತೂ ಒಂದು ನಾಟಕಶಾಲೆ : ಅಸಂಬದ್ಧವಾದಿಯೂ ನಟನಂತೆಯೇ ಶತಶತಮಾನಗಳ ತುಂಬೆಲ್ಲಾ ತನ್ನನ್ನು ಹರಡಿಕೊಂಡು. ಅಸಂಖ್ಯಾತ ಮನಸ್ಸುಗಳ ಒಳಹೊರಗೆಲ್ಲಾ ಹಾಯ್ದುಕೊಂಡು, ಮನುಷ್ಯ ಹೇಗಿರ ಬೇಕೋ ಹಾಗೆಲ್ಲಾ ನಟಿಸುತ್ತಾ, ನಿತ್ಯಯಾತ್ರಿಕನಾಗಿ ಉಳಿದುಬಿಡು ತ್ತಾನೆ ; ಆದರೆ, ಯಾತ್ರೆ ಅವನದಾಗಿರುವುದಿಲ್ಲ, ಅಷ್ಟೇ. ಆದರೂ ಅತ ಕಾಲದ ಸೀಮೆಯಲ್ಲಿ ಸಂಚರಿಸುವ ಯಾತ್ರಿಕ ; ಬಹಳವೆಂದರೆ ಪ್ರಜ್ಞೆ ಯಿಂದ ಹುಡುಕಾಡಲ್ಪಟ್ಟ ಪಾತ್ರಧಾರಿ. ಉತ್ಕಟ ಬಾಳೇ ನೈತಿಕ ಮೌಲ್ಯ ವಾಗಿರುವುದಾದರೆ, ಆ ವಿಚಿತ್ರ ರಂಗದ ಮೇಲೆ ಅದನ್ನು ನೋಟಕ ನೋಡ ಬಹುದು. ಸದಾ ಎಷ್ಟು ಸಾಧ್ಯವೋ ಅಷ್ಟು ಶ್ರೇಷ್ಠ ಪ್ರಾತಿನಿಧ್ಯವನ್ನು ಆಗು ಮಾಡಿಕೊಳ್ಳುವುದನ್ನೇ ಚಿಂತಿಸುತ್ತಾ, ತನ್ನ ಹಾಜರಿ ಎಷ್ಟರ ಮಟ್ಟಿಗೆ ಬೇರೊಂದು ವ್ಯಕ್ತಿಯನ್ನು ಸೃಷ್ಟಿಸಬಲ್ಲದೆನ್ನುವುದನ್ನು ಅಭಿನಯಿ ಸುತ್ತಾ ಸಾಗುತ್ತಾನೆ. ಏಕೆಂದರೆ ಅದೇ ಅವನ ಬಾಳುವೆಯ ಕಲೆ – ತನ್ನ

ದಲ್ಲದ ಜೀವನಗಳ ಆಳಕ್ಕೆ ತಾನು ಎಷ್ಟು ಸಾಧ್ಯವೋ ಅಷ್ಟು ಆಳವಾಗಿ ಇಳಿದು, ಉತ್ಕಟವಾಗಿ ಪ್ರಚೋದಿಸುತ್ತಾ ಆ ಪಾತ್ರಗಳನ್ನು ಬಾಳುತ್ತಾ ಸಾಗುತ್ತಾನೆ. ಅವನ ಪ್ರಯತ್ನದ ಅಂತ್ಯದಲ್ಲಿ ಅವನ ಬಾಳಿನ ಕರೆ ಸ್ಪಷ್ಟವಾಗುತ್ತದೆ: ತನ್ನ ಹೃದಯದ ಆಳದಿಂದ ತನ್ನಲ್ಲಿ ತಾನು ಏನೂ ಅಲ್ಲವಾಗುವ ಅಥವಾ ಎಲ್ಲವಾಗುವ ಸ್ಥಿತಿಯೊಂದಕ್ಕೆ ತಾನು ಬದ್ಧನಾಗಿಸುತ್ತಾನೆ ಅವನು ಅಭಿನಯಿಸಬೇಕಾದ ಪಾತ್ರ ಚಿಕ್ಕದಾದಷ್ಟೂ ಅವನು ಹೆಚ್ಚೆಚ್ಚಿನ ಪ್ರತಿಭೆಯನ್ನು ವ್ಯಯಿಸಬೇಕಾಗುತ್ತದೆ. ಕೇವಲ ಸೀಮಿತ ಅವಧಿಯಲ್ಲಿ ಅವನು ಅಭಿವ್ಯಕ್ತಗೊಳಿಸಲು ಆಶಿಸುವ ವಿಶೇಷ ಪಾತ್ರವನ್ನು ಅವನು ಅನುಭವಿಸಿಬಿಡಬೇಕಾಗುತ್ತದೆ.

—ಇದನ್ನೇ ತನ್ನನ್ನು ತಾನು ಕಂಡುಕೊಳ್ಳುವ ಸಲುವಾಗಿ ತನ್ನನ್ನು ತಾನು ಕಳೆದುಕೊಳ್ಳಲೇಬೇಕಾಗುತ್ತದೆ—ಎನ್ನುವುದು. ನೋಟಕ ತನ್ನ ಬಾಳಿನುದ್ದಕ್ಕೂ ಪ್ರಾಯಶಃ ಬದುಕಲಾಗದ್ದನ್ನು, ಆ ನಟ ಶೀರ ಸೀಮಿತ ಅವಧಿಯಲ್ಲಿ ಬದ್ದು ಸಾವನ್ನೂ ಅಪ್ಪಿಬಿಟ್ಟಿರುತ್ತಾನೆ; ಬೇರೊಂದು ಪಾತ್ರದ ಬದುಕಿಗಾಗಿ ಮತ್ತೆ ಪುನರ್ಜನ್ಮ ಧರಿಸುತ್ತಿರುತ್ತಾನೆ.

*

ಇಲ್ಲೇ ಮೌನಗಳು ತಮಗೆ ತಾವೇ ಶೃತವಾಗುವಂತೆ ಆಗಬೇಕಾಗಿದೆ! ದುರಂತ ಬೆತ್ತಲುಗೊಳ್ಳುವ ಕ್ರಿಯೆಯನ್ನು ಹುಚ್ಚು ಆಕ್ರಮಿಸಬೇಕು; ಮನುಷ್ಯ ಶರೀರದ ಆಳತೆಗೋಲೇ ಎಷ್ಟು ಬೇಕೋ ಅಷ್ಟು ಶಕ್ತವಾದುದೇನೂ ಅಲ್ಲ. ಸ್ವರ್ಗ ಹಾಗೂ ಹೀನ ಪ್ರಾಮಾಣೀಕತೆಗಳ ಮಧ್ಯದ ಆಯ್ಕೆ, ಅನಂತತೆಯನ್ನು ತನ್ನ ಬದಲಿಗೆ ದಕ್ಕಿಸಿಕೊಳ್ಳುವುದು ಅಥವಾ ತನ್ನನ್ನು ತಾನು ದೇವರಲ್ಲಿ ಕಳೆದುಕೊಳ್ಳುವುದು ಅನಂತ ಯುಗಗಳಿಂದ ನಡೆದು ಬಂದ ದುರಂತನಾಟಕ. ಈ ದುರಂತನಾಟಕದಲ್ಲಿ ಪ್ರತಿಯೊಬ್ಬನೂ ತನ್ನ ಪಾತ್ರವನ್ನು ಅಭಿನಯಿಸಿಯೇ ತೀರಬೇಕು. ನಮ್ಮನ್ನು ಕಾಡುವುದು ಅನಂತದ ಜೀವನವಲ್ಲ; ಅನಂತದ ಸಚೇತನ ರಮಣೀಯತೆ! ಆದರೂ 'ಎಲ್ಲೆಲ್ಲೂ' ಹಾಗೂ 'ಎಂದೆಂದಿಗೂ'ಗಳ ಮಧ್ಯೆ ರಾಜಿಯೇ ಇಲ್ಲ!! ಮನುಷ್ಯ ತನ್ನ ಅಭಿನಯದ ಯುಗದಲ್ಲಿ ತಾನು ಭಹಿಷ್ಕೃತನಾಗಿಯೇ ತೀರುತ್ತಾನೆ: ನಟ ತನ್ನದಲ್ಲದ ಪಾತ್ರ ಒಂದನ್ನು ಬಾಳುತ್ತಾ 'ರಂಗ'ದ ಮೇಲೆ ಸತ್ತುದೇ ಆದರೆ, ಮೇಧಾವಿ

ಆತನಲ್ಲಿ ಜನ್ಮ ತಳೆಯುತ್ತಾನೆ. ಆ ಮೇಧಾವಿತನ ಎಲ್ಲವನ್ನು ಕ್ಷಮಿಸಿಬಿಡುತ್ತದೆ; ಆದರೆ, ಮೇಧಾವಿ ಯಾವುದನ್ನೂ ಕ್ಷಮಿಸುವುದಿಲ್ಲ – ತಾನು ಕ್ಷಮಿಸದೇ ಇರುವ ಕಾರಣಕ್ಕಾಗಿ ಮಾತ್ರ.

*

ತನ್ನ ಇಂದ್ರಿಯ ಬದ್ಧ ಜೀವನದಲ್ಲಿನ ಸಾಧನೆಗಳಲ್ಲಿ ಸಿದ್ಧಿಯನ್ನು ಪಡೆದ ಅಸಂಬದ್ಧವಾದಿ, ತಾನು ತನ್ನ ಕ್ರಿಯೆಯನ್ನು ಪ್ರೀತಿಸುವವನು ಮಾತ್ರವಾದ್ದರಿಂದ, ತಾನು ಸಿದ್ಧನೆಂದು ನಂಬುವುದಿಲ್ಲ. ಆತ ತಾನು ಹೇಗೆ ಚಿಂತಿಸುತ್ತಿದ್ದೇನೆ – ಎನ್ನುವುದನ್ನು ಮರತೇಬಿಟ್ಟಿರುವಾತ: ಹಾಗೂ ಇದಕ್ಕೆ ತದ್ವಿರುದ್ಧವಾಗಿ, ತಾನು ನಂಬಿಕೆ ತಳೆದುದನ್ನು ಮನೋಜ್ಞವಾಗಿ ವಿವರಿಸುವವನು ಕೂಡ ! !

ಅವನಿಗೆ ಅವನದೇ ಆದ ಯಾವುದೇ ಅಭಿಪ್ರಾಯಗಳೂ ಇಲ್ಲ: ಆತ ತನ್ನ ಬಾಳುವೆಯ ಅಂತ್ಯದಲ್ಲಿ ತಾನು ಅಪ್ಪಿದ ಸತ್ಯ ಒಂದು – ಯಾವ ಸತ್ಯವನ್ನೂ ಅಪ್ಪಬಾರದು ಎನ್ನುವ ಸತ್ಯ ಒಂದೇ ಒಂದು – ಅವನ ಬದುಕನ್ನು ಆಗು ಮಾಡಿಕೊಟ್ಟದ್ದನ್ನು ಕಂಡುಕೊಳ್ಳುತ್ತಾನೆ : ಒಂದೇ ಒಂದು ಸತ್ಯ – ಅದು ಅನಿವಾರ್ಯವಾದುದು ಮಾತ್ರವಾಗಿದ್ದರೆ– ಒಂದು ಸಾರ್ಥಕ ಬಾಳನ್ನು ನಡೆಸಿಕೊಡಲು ಸಾಕುಬೇಕಾದಷ್ಟೇ ಆಯಿತು. ತನ್ನ ಬಗ್ಗೆ ತಾನು ಸ್ಪಷ್ಟವಾಗಿ ಅಷ್ಟೇ ವರಟೊರಟಾಗಿ ಬಿಚ್ಚುಮನಸ್ಸಿನಿಂದ ವಿಷದೀಕರಿಸಬೇಕು ; ಅವಶ್ಯಕತೆ ಇದ್ದರೆ ತನ್ನ ಬಗೆಗೆ ತಾನೇ ತಳೆದಿರುವ ಜಿಗುಪ್ಸೆಯನ್ನೂ ಶೃತಪಡಿಸಲೇಬೇಕು. ಅಸಂಬದ್ಧ ಮನುಷ್ಯ ತಾನು ತನ್ನ ಬಗ್ಗೆ ಹೇಳಿಕೊಳ್ಳುವುದಕಿಂತಲೂ, ತನ್ನ ಬಗ್ಗೆ ತಾನು ಏನೇನು ಅಭಿಪ್ರಾಯಗಳನ್ನೂ ತಳೆದಿದ್ದಾನೋ ಅವುಗಳಿಂದಾಗಿಯೇ ಆತನ ಹೆಚ್ಚಿನ ಮನುಷ್ಯತ್ವ ಕಾಣಸಿಗುವುದು.

ಬುದ್ಧಿ, ಪ್ರಖರವಾದ ಬುದ್ಧಿ ತಾನು ಅವಶ್ಯವಾಗಿ ಗಮನಿಸಲೇಬೇಕಾದುದನ್ನೆಲ್ಲಾ ಮೊದಲೇ ಕಂಡುಕೊಂಡುಬಿಟ್ಟಿರುತ್ತದೆ-ಅದು ನಿರ್ಮಲವಾಗಿದ್ದರೆ ; ಅಷ್ಟೇ ಪ್ರಾಮಾಣಿಕವಾಗಿದ್ದರೆ. ವ್ಯಕ್ತಿ ಸಮಾಜವನ್ನು ಪಾಲಿಸಬೇಕೇ ಅಥವಾ ಸಮಾಜ ವ್ಯಕ್ತಿಯನ್ನು ಪಾಲಿಸಬೇಕೆ ? — ಎನ್ನುವುದು ತನ್ನಗೆ ತಾನೇ ವಿಧಿತವಾಗುತ್ತದೆ ; ಇವುಗಳನ್ನೆಲ್ಲಾ ಮಾನವ

ಪ್ರಾಣಿಗಳು ತಮ್ಮ ಹುಟ್ಟುಗುಣಗಳಿಂದಲೇ ನಿರ್ಧರಿಸಿಬಿಟ್ಟಿರುತ್ತವೆ!— ಕಾರಣ, ವ್ಯಕ್ತಿಯಾಗಲಿ ಅಥವಾ ಸಮಾಜವಾಗಲಿ ಇನ್ನೂ ತಮ್ಮ ನಿಜ ವಾದ ಸತ್ವವನ್ನು ಜಗತ್ತಿಗೆ ದರ್ಶಿಸಲಾಗಿಲ್ಲ !

ಚಿರಮೌಲ್ಯಗಳು ಲೌಕೀಕದ ದುಗುಡವನ್ನೆಲ್ಲಾ ಗೆದ್ದು, ಸಾಮಾನ್ಯರ ಆಶ್ಚರ್ಯಚಕಿತ ಕಣ್ಣುಗಳ ಮುಂದೆಯೇ ಉಳಿದು ಬಾಳುತ್ತವೆ. ಇವತ್ತಿನ ಕಲಾವಿದನಿಗೆ ಈ ವಾತಾವರಣ ಇಲ್ಲವಾಗಿರುವುದರಿಂದಲೇ ಅವನ ಕಲಾ ಪ್ರಜ್ಞೆಯ ಹೋರಾಟದ ಜವಾಬ್ದಾರಿ ಗುರುತರವಾಗಿದೆ ಕೂಡ !

ಅಸಂಬದ್ಧ ಮನುಷ್ಯ ತಾನು ಬಾಳುತ್ತಿರುವ ಕಾಲದಿಂದ ಹೊರಗೆ ನಿಲ್ಲಲಾರನೆನ್ನುವ ಪ್ರಜ್ಞೆ ಇರುವುದರಿಂದಲೇ ಆತ ಆ ಕಾಲದ ಅವಿಚ್ಛಿನ್ನ ಭಾಗವಾಗಿ ಇದ್ದು ಬಿಡಲು ನಿರ್ಧರಿಸಿದ್ದಾನೆ. ಆದ್ದರಿಂದಲೇ ಅಸಂಬದ್ಧ ಜೀವಿ ತೀರ ಶ್ರೇಷ್ಠ ಪ್ರಾಣಿ—ಏಕೆಂದರೆ ಆತ ಜಗತ್ತಿನ ಪಾಲಿಗೆ ಅಣಕ ಹಾಗೂ ಯಾತನೆಯಾಗಿದ್ದಾನೆ. ಈ ಜಗತ್ತಿಗೇ ಬದ್ಧನಾಗಿರುವ ಪ್ರತಿ ಅಸಂಬದ್ಧ ಜೀವಿಯ ಪಾಲಿಗೂ ನಾಗರಿಕತೆಗಳ ತಾಕಲಾಟ ರುದ್ರ ಯಾತನೆ ಯನ್ನು ಉಣಿಸಿಯೇ ತೀರುತ್ತವೆ; ಹಾಗೂ ಅವನು ಅದನ್ನು ಬುದ್ಧಿ ನಿಷ್ಠೆಯಿಂದ ಸ್ವೀಕರಿಸುತ್ತಾನೆ–ತನ್ನದು ಮಾತ್ರವಾಗಿ. ಆತ ಇತಿಹಾಸ ಹಾಗೂ ಅನಂತದ ಮಧ್ಯೆ ಇತಿಹಾಸವನ್ನೇ ಆಯ್ಕೆ ಮಾಡಿಕೊಂಡಿದ್ದಾನೆ– ಏಕೆಂದರೆ ನಿಖರತೆಗಳೇ ಆತನ ಬಾಳಾಗಿದೆ. ಅವನನ್ನು ಸದಾ ತುಳಿಯು ತ್ತಿರುವ ನಿರ್ದಿಷ್ಟತೆಯನ್ನು ಅವನು ಹೇಗೆ ತಾನೆ ಅಲ್ಲಗಳೆಯಬಲ್ಲ ?

ನಿನಿಧ್ಯಾಸ ಹಾಗೂ ಕ್ರಿಯಾತ್ಮಕತೆಯ ಮಧ್ಯೆ ಒಂದನ್ನು ಆಯ್ದು ಕೊಂಡೇ ತಿರುವ ಕಾಲ ಬಂದೇ ತೀರುತ್ತದೆ. ಪ್ರತಿಯೊಬ್ಬನೂ ತನಗೆ ಕೊಡ ಲ್ಪಟ್ಟ ಕಾಲದ ಮಿತಿಯಲ್ಲಿ ಮಾತ್ರ ಬದುಕಿ, ನಂತರ ಸಾಯಬೇಕಾಗು ತ್ತದೆ: ಅಥವಾ ತಾನು ಬದುಕಿದ್ದಕ್ಕೂ ಶ್ರೇಷ್ಠವಾದ ಜೀವನಕ್ಕಾಗಿ, ತನ್ನ ಬದುಕುವ ಕ್ರಿಯೆಯ ಚಟವನ್ನು ಬಲಿ ಕೊಡಬೇಕಾಗುತ್ತದೆ. ಅನಂತದಲ್ಲಿ ನಂಬಿಕೆ ಹೊತ್ತು, ಜಗತ್ತಿನೊಡನೆ ರಾಜಿಯಾಗಿ ಬಾಳಬಹುದು–ಇದನ್ನೇ ಸ್ವೀಕಾರವೆನ್ನುವುದು ! ಈ ರಾಜಿ, ಆ ಅನಂತತೆ ಎಂದರೆ ಅಸಂಬದ್ಧವಾದಿಗೆ ಥಟ್ಟನೆ ವಾಕರಿಕೆ ಬರುತ್ತದೆ. ಅವನಿಗೆ ಸಮಸ್ತವೂ ಬೇಕು; ಅಥವಾ ಏನೇನೂ ಬೇಡ, ಅಸಂಬದ್ಧಜೀವಿ ಕಾರ್ಯಶೀಲನಾದ ಮಾತ್ರಕ್ಕೆ ನಿನಿ

ಧ್ಯಾಸ ಅಥವಾ ಅನನ್ಯಭಾವ ಅವನ ಪಾಲಗೆ ಅನ್ಯರ ರಾಜ್ಯವೇನೂ ಅಲ್ಲ- ಆದರೆ, ಆ ಅನಂತತೆಯೊಡನಾದ ಲೀನತೆ ಅವನೆಲ್ಲಾ ಬೇಡಿಕೆಗಳನ್ನು ದಕ್ಕಿಸಿಕೊಡುವುದಿಲ್ಲ ; ಹಾಗಾಗಿ, ಅವನು ಅನಂತವನ್ನೂ ಕಳೆದುಕೊಂಡ ಬಿಡುತ್ತಾನೆ ! ಬದುಕಿಗೆ ವ್ಯಾಮೋಹ ಅಥವಾ ಕಹಿಯ ಬಣ್ಣಗಳನ್ನು ಬಳಿದುಕೊಳ್ಳಲು ಅವನು ಸಿದ್ಧನಿಲ್ಲ; ಅವನಿಗೆ ಕೇವಲ, ಕೇವಲ ಸುಸ್ಪಷ್ಟ ವಾಗಿ ನೋಡುವುದು ಮಾತ್ರ ಬೇಕಾಗಿದೆ. ಅಸಂಬದ್ಧವಾದಿ ಘೋಷಿಸುತ್ತಿ ದ್ದಾನೆ-ನಾಳೆಯಲ್ಲಿ ಒಂದು ದಿನ ಅವನ ಹಾಗೂ ಅವನ ತರಹದವರ ಬಾಳಿಗೆ ಒಂದು ಚಾಲನೆ ಬಂದೇ ತೀರುತ್ತದೆ: ಅದೇ, ಅದು ಮಾತ್ರವೇ ಸ್ವಾತಂತ್ರ್ಯ ಹಾಗೂ ಮುಕ್ತಿ ಹಾಗೂ ಬಿಡುಗಡೆ! ವ್ಯಕ್ತಿ ಏನನ್ನೂ ಮಾಡಲಾರ ಹಾಗೂ ಎಲ್ಲ ಎಲ್ಲವನ್ನೂ ಮಾಡಿಯೇ ತೀರುತ್ತಾನೆ. ಆ ಭವ್ಯ ನಿರ್ಲಿಪ್ತ ಸ್ಥಿತಿಯಲ್ಲಿ ಅಸಂಗತ ಸಿದ್ಧ ಕಾಮೂ ಆ ಅಸಂಗತವಾದಿಯನ್ನು ಒಮ್ಮೆಲೆ ಏಕೆ ಮೇಲಕ್ಕೆ ಎತ್ತುತ್ತಿದ್ದಾನೆ ಹಾಗೂ ಕೆಳಕ್ಕೆ ತುಳಿಯುತ್ತಿ ದ್ದಾನೆ-ಎಂದು ಅವನನ್ನು ಅರ್ಥಮಾಡಿಕೊಂಡವರಿಗೆ ಮಾತ್ರ ಗೊತ್ತಾಗು ತ್ತದೆ. ಆ ನಿರ್ಲಿಪ್ತ ಭವ್ಯತೆಯ ಜಗತ್ತೇ ಆತನನ್ನು ಧೂಳೀಪಟ ಮಾಡು ವಂತಹದ್ದು ; ಹಾಗೂ ಮುಕ್ತಾನನ್ನಾಗಿಸುವಂತಹದ್ದು. ಆ ಕಾರಣಕ್ಕಾಗಿ ಅಸಂಬದ್ಧ ಮುಕ್ತನಿಗೆ ಅವನ ಎಲ್ಲ ಹಕ್ಕು ಬಾಧ್ಯತೆಗಳನ್ನೂ ದಯಪಾಲಿಸಿ ಬಿಡಲಾಗಿದೆ.

*

ಅಸಂಬದ್ಧ ಸಿದ್ಧನಿಗೆ ತಾನು ಅಷ್ಟೊಂದು ಪ್ರೀತಿಸುವ ಕ್ರಿಯೆ, ಕ್ರಿಯೆಯಾಗಿ ಅರ್ಥಹೀನವೆಂದು ಗೊತ್ತು. ಆದರೆ, ಒಂದು ಯುಕ್ತ ಹಾಗೂ ಮುಕ್ತವಾದ ಕ್ರಿಯೆ ಅವನ ಪಾಲಿಗೆ ಇದೆ ; ಅದೆಂದರೆ ಈ ಭೂಮಿ ಹಾಗೂ ಮನುಷ್ಯನನ್ನು ಪುನಃ ಬೇರಾಗಿ ಸೃಷ್ಟಿಸುವುದು. ಆದರೆ, ಅಸಂಬದ್ಧವಾದಿ ಮನುಷ್ಯನ ಪುನರ್ ಸೃಷ್ಟಿಗೆ ಕೈಹಾಕುವವನೇ ಅಲ್ಲ ; ಆದರೂ, ಆತ ಪುನರ್‌ಸೃಷ್ಟಿಗೆ ಕೈಹಾಕಿದವನಂತೆ ಕಾರ್ಯೋನ್ಮುಖನಾಗು ತ್ತಾನೆ! ಏಕೆಂದರೆ, ಅವನ ಹೋರಾಟದ ಹಾದಿ ಆತನನ್ನು ಮತ್ತೆ ನಶ್ವರ ವಾದ-ಆದರೆ, 'ಅವನೇ ಆ ನಶ್ವರ'ವಾಗಿರುವ ಮಾಂಸದ ಜಗತ್ತಿಗೆ ಕರೆದೊಯ್ಯುತ್ತದೆ. ಮಾಂಸದ ಜಗತ್ತಿನಲ್ಲಿ ಯಾತನೆ ಇದೆಯಾದರೂ

ಅದೇ ಅವನ ತೌರುಮನೆ. ಆದ್ದರಿಂದಲೇ, ಆತ ಅಸಂಗತವನ್ನು ಹಾಗೂ ಫಲರಹಿತ ಪ್ರಯತ್ನ ಮಾತ್ರವನ್ನು ಅಂತಿಮ ಆಯ್ಕೆಯಾಗಿ ಸ್ವೀಕರಿಸಿದ್ದಾನೆ. ಕ್ರಾಂತಿ ಆತನಿಗೆ ನೀಡಿದ ಜಗತ್ತು ಇದು ಮಾತ್ರವೇ. ಆದ್ದರಿಂದಲೇ ಅವನು ಸತತ ಹೋರಾಟದ ಪಕ್ಷಪಾತಿಯಾಗಿದ್ದಾನೆ. ಸಿದ್ಧಿ ಅಥವಾ ವಿಜಯ ಇರುವುದೇ ಪ್ರತಿಭಟನೆ ಹಾಗೂ ಕುರುಡುಹಾದಿಯ ಆಹುತಿಯಲ್ಲಿ.

ವಿಜಯ ಬಯಸುವಂತಹದ್ದೇ; ಆದರೆ, ಇರುವ ವಿಜಯವೆಲ್ಲಾ ಅನಂತದ ಸಿದ್ಧಿಮಾತ್ರ. ಆದರೆ, ಅದು ಅಸಂಬದ್ಧನಿಗೆ ಎಂದೂ ಬೇಡವಾದದ್ದು, ಅಲ್ಲೇ ಅವನು ಎಡವುವುದು; ಆದರೂ ಅದಕ್ಕೆ ಅವನು ಅಂಟಿನಿಲ್ಲುವುದು ಕೂಡ!

*

ಕ್ರಾಂತಿ ಆಗುವುದೇ ಆದರೆ ಅದು ದೇವರ ವಿರುದ್ಧವೇ-ಮೊಟ್ಟ ಮೊದಲ ಆಧುನಿಕ ಸಿದ್ಧವಾದ ಪ್ರೊಮಥ್ಯುಯಸ್‌ನಿಂದ ಹಿಡಿದು, ಇಂದಿನ ಅಸಂಬದ್ಧ ಜೀವಿಯವರೆಗೂ ಕ್ರಾಂತಿ ಆಗಿರುವುದೇ ದೈವದ ವಿರುದ್ಧ. ಇದೇ ಮನುಷ್ಯ ತನ್ನ ವಿಧಿಯ ವಿರುದ್ಧ ನಡೆಸಿದ ಬೇಡಿಕೆ-ಆ ಯಃಕಶ್ಚಿತನ ಬೇಡಿಕೆ ಕೇವಲ 'ನೆಪ' ಆಗಿರಲೂಬಹುದು; ಆದರೂ, ಆತ ಆ ಕ್ರಾಂತಿಯ ಅರ್ಥವನ್ನು ಅದರ ಐತಿಹಾಸಿಕ ಮೂಲೋದ್ದೇಶದಿಂದಲೇ ತನ್ನದಾಗಿಸಿಕೊಂಡವನು; ಹಾಗೂ ಅದರ ಐತಿಹಾಸಿಕ ಮೂಲೋದ್ದೇಶದೊಡನೆಯೇ ಅವನು ಸಂಪರ್ಕ ಕಲ್ಪಿಸಿಕೊಳ್ಳುವವನು ಕೂಡ. ಹೀಗೆಲ್ಲಾ ಮಾಡುವುದೇ ಅವನಿಗೆ ತೆವಲೇನೂ ಆಗಿಲ್ಲ-ಬಹಿರ್ ವಿರೋಧಾಭಾಸಗಳ ವಿರುದ್ಧವಾಗಿಯೇ ಆತ ತನ್ನ ಮಾನವೀಯ ಆಂತರಿಕವಿರೋಧಾಭಾಸಗಳನ್ನು ಕಾಯ್ದುಕೊಂಡಿದ್ದಾನೆ. ಭಾವಶುದ್ಧಿಯನ್ನು ಇಲ್ಲವಾಗಿಸುವ ಶಕ್ತಿಗಳ ವಿರುದ್ಧವೇ ಆತ ಹೋರಾಡಿ ತನ್ನ ಭಾವ ನೈರ್ಮಾಲ್ಯವನ್ನು ಕಾಪಾಡಿಕೊಳ್ಳುತ್ತಾನೆ. ಅಸಂಬದ್ಧ ಜೀವಿ ಮನುಷ್ಯನನ್ನು ತುಳಿಯುವ ಆ ಎಲ್ಲ ಶಕ್ತಿಗಳ ವಿರುದ್ಧ ಹೋರಾಡಿ ಆ ಮನುಷ್ಯನನ್ನು ಮೇಲೆತ್ತುತ್ತಾನೆ; ಅವನ ಮುಕ್ತತೆ, ಅವನ ಆಂದೋಲನ ಹಾಗೂ ಅವನ ಎಲ್ಲ ಕಾಮನೆಗಳು ಅದರ ಊರ್ಧ್ವಮುಖಿಯಾಗಿಸಿದ ನಿರ್ಮಲತೆಯಲ್ಲಿ ಮತ್ತು ವತ್ತಡಗಳಲ್ಲಿ ಹಾಗೂ ಅಗಾಧ

ಪುನರಾವೃತ್ತಿಗಳಲ್ಲಿ ಒಗ್ಗೂಡುವಂತಹವು.

ಹೌದು, ಮಾನವನೇ ಅವನ ಸ್ವಂತದ್ದಾದ ಹಾಗೂ ಏಕಮಾತ್ರವಾದ ಅಂತ್ಯ. ಅವನು ಏನಾದರೂ ಆಗುವುದೇ ಆದರೆ, ಈ ಜನ್ಮ ಮಾತ್ರದಲ್ಲಿ ಸಾಧ್ಯ. ತನ್ನನ್ನು ತಾನು ಗೆಲ್ಲುವುದೆಂದರೆ, ತಾನು ದೇವರಿಗೆ ಸರಿಸಮನಾಗಿರುವುದನ್ನು ಆಗುಮಾಡಿಕೊಳ್ಳುವುದು–ಎನ್ನುವ ಭಾವ. ಆದರೆ, ಅವನಿಗೆ ಈ ಭಾವ ಮೂಡಿದ್ದು ಅವನು ತನ್ನ ಮನಸ್ಸಿನ ವೈಭವದ ಅಗಾಧತೆಯನ್ನು ಕಂಡು ಮರುಳಾದಾಗ. ಅಸಂಬದ್ಧ ಸಿದ್ಧರೆಲ್ಲರಿಗೆ ಈ ಊರ್ಧ್ವಮುಖೀ ಎತ್ತರದಲ್ಲಿ ವಾಸಿಸಬಲ್ಲ ಅರಿವು ಪ್ರಜ್ಞಾಪೂರ್ಣವಾಗಿಯೇ ಇದೆ–ಹಾಗೂ ಅವನು ಅದನ್ನು ಸದಾ ತನ್ನದಾಗಿ ಮಾಡಿಕೊಂಡೇ ಇರುತ್ತಾನೆ. ಅಸಂಬದ್ಧ ಸಿದ್ಧರಿಗೆ ಇದಕ್ಕೂ ಮೀರಿದ್ದು ಕೂಡ ಸಾಧ್ಯವಿದೆ–ಇದು ಕೇವಲ ಕೂಡಿ ಕಳೆಯುವ ವಿದ್ಯೆ–ಆದರೆ, ಅವರು ಮನುಷ್ಯನಿಗೆ ಅತೀತವಾದುದೇನನ್ನೂ ಮಾಡುವವರಲ್ಲ.

–ಅಸಂಬದ್ಧಜೀವಿ ಈ ಎಲ್ಲ ಕಾರಣಗಳಿಂದಾಗಿ ಇಷ್ಟಪಡುವ ಹಾಗೂ ಮೆಚ್ಚುವ ವಸ್ತುವೆಂದರೆ ಮನುಷ್ಯ ಮತ್ತು ಅವನ ಮೌನ. ಇದೇ ಅವನ ಗುರಿ ಹಾಗೂ ಸಕಲ ಸಂಪತ್ತು. ಇದಕ್ಕೂ ಮೀರಿದ ಸಂಪತ್ತೊಂದಿದೆ–ಅದು ಮಾನವ ಸಂಪರ್ಕ. ಇದಕ್ಕೂ ಮೀರಿದ ಅರ್ಥ ಸಂಪತ್ತನ್ನು-ಮಾನವೀಯವಾದುದನ್ನು, ಪರಿಪೂರ್ಣವಾಗಿ ಮಾನವೀಯವಾದುದು ಮಾತ್ರವಾದುದನ್ನು ಮೀರಿದ ಸಂಪತ್ತನ್ನು ಕಲ್ಪಿಸಿಕೊಳ್ಳುವುದು ತಾನೆ ಈ ಪೆಟ್ಟಿನ ಮೇಲೆ ಪೆಟ್ಟು ಬೀಳುವ ಜಗತ್ತಿನಲ್ಲಿ ಸಾಧ್ಯ ?

ಎಲ್ಲದರ ಮಧ್ಯೆ ಇರುವ ಅಸಂಬದ್ಧನ ಮನಸ್ಸು ತನ್ನ ಅಗಾಧ ಶಕ್ತಿ ಹಾಗೂ ಅದರ ಎಲ್ಲೆಗಳ ಪ್ರಜ್ಞೆಯನ್ನು ಕಾಯ್ದಿಟ್ಟುಕೊಂಡಿರುತ್ತದೆ. ಅವನು ಬುದ್ಧಿಯನ್ನು ಮಾತ್ರ ನಂಬುತ್ತಾನೆ. ಆದ್ದರಿಂದಲೇ ಅದನ್ನು ಆತ ಅದ್ಭುತವಾದುದೆಂದೂ ಕರೆಯುತಾನೆ. ಈ ಇಂದ್ರಿಯಬದ್ಧ ಜಗತ್ತಿನ ಮರಳುಗಾಡನ್ನು ಆ ಬುದ್ಧಿ ಬೆಳಕಾಗಿಸುತ್ತದೆ ; ಹಾಗೂ ಅದನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿರುತ್ತದೆ. ಆ ಬುದ್ಧಿಗೆ ತನ್ನ ಬದ್ಧತೆ ಏನೆಂದು ಗೊತ್ತಿದೆಯಾಗಿಯೇ ಅದನ್ನು ವಿವರಣಾತ್ಮಕವಾಗಿ ವಿಶದೀಕರಿಸುತ್ತದೆ. ಹಾಗೆಯೇ ಆದು ತಾನು ಹುಟ್ಟಿಬಂದ ಸ್ಥಳದಲ್ಲೇ ಸತ್ತು ಹೋಗಿಬಿಡುತ್ತದೆ.

ಇದರ ಅರಿವೇ ಅದರ ಮುಕ್ತತೆ.

ಇದೆಲ್ಲಕ್ಕೂ ಮೀರಿದ ಅನನ್ಯ ಅಸಂಬದ್ಧ ಜೀವಿಯಾದ ಸೃಷ್ಟಿಕರ್ತ ನನ್ನ ಕುರಿತು ಈ ಅಸಂಬದ್ಧ ಜೀವಿ ಇನ್ನೂ ಮಾತನಾಡಲು ಆರಂಭಿಸಿಲ್ಲ!

*

ಸಿಸಿಫಸ್ ತನ್ನ ಬಾಳಿನ ಅಸಂಬದ್ಧತೆಯ ಅರಿವಿನಿಂದಾಗಿಯೇ ಅವನೊಬ್ಬ ಕಾಮುನೆ ಹಾಗೂ ಯಾತನೆಗಳಿಂದಾದ ಅಸಂಬದ್ಧ ನಾಯಕ; ಅವನಲ್ಲಿರುವ ದೈವದ ಬಗೆಗಿನ ವ್ಯಂಗ್ಯ, ಸಾವಿನ ಬಗ್ಗೆ ಇರುವ ತಿರಸ್ಕಾರ ಹಾಗೂ ಬದುಕುವ ಛಲಗಳಿಂದಾಗಿ ಅವನು ಏನನ್ನೂ ದಕ್ಕಿಸಿಕೊಳ್ಳಲಾಗದೆ ಇಡೀ ಜೀವಿತವೇ ದಣಿದುಹೋದ, ಮಾತುಗಳಿಂದ ವರ್ಣಿಸಲಾಗದ ದಂಡವೇ ಅವನಾದ. ಅವನು ಈ ಭೂಮಿಗೆ ಬದ್ಧನಾದ ಅನನ್ಯತೆಗೆ ಬೆಲೆ ಗಟ್ಟುವುದು ಅಸಾಧ್ಯದ ಮಾತು.

ಪುರಾಣಗಳು ಇರುವುದೇ ಅವುಗಳಿಗೆ ನಾವು ಜೀವ ತುಂಬಲು: ಆಕಾಶವೂ ಇಲ್ಲದ ಶೂನ್ಯ ಹಾಗೂ ಆಳವೇ ಇಲ್ಲದ ಕಾಲಗಳಿಂದ ಮಾತ್ರ ಅಳೆಯಲ್ಪಟ್ಟ ಅವನ ಪ್ರಯತ್ನಗಳಲ್ಲೇ ಅವನ ಬದುಕಿನ ಸಾರ್ಥಕತೆ ಇರುವುದು. ಪರ್ವತದ ತುದಿಗೆ ನೂಕಿ ಹೊಯ್ಯಲ್ಪಟ್ಟ ಹಾಗೂ ಉರಳು ಬಂಡೆ ಹಿಂದಕ್ಕೆ ಜಾರುವ ಮಧ್ಯದ ಉಸಿರಾಟದ ವಿರಾಮುವೇ ಅವನ ಪರಿಪೂರ್ಣ ಜಾಗೃತ ಪ್ರಜ್ಞೆಯ ಅವಧಿ. ಈ ಅವಧಿಯಲ್ಲೇ ಆತ ತನ್ನ ಜಾಗೃತ ಹಾಗೂ ನಿರ್ಲಿಪ್ತ ಹಾಗೂ ಚಿತ್ತಶುದ್ಧಿಯ ಬದುಕನ್ನು ಅಪ್ಪಿ ದೇವರನ್ನೂ ಗೆದ್ದವನಾಗಿರುವುದು.

ಇದು ದುರಂತವಾಗಿರುವುದು ನಿಜವೇ ಆಗಿದ್ದರೆ, ಅದಕ್ಕೆ ಕಾರಣ ಆ ದುರಂತದ ಅರಿವು ಸಿಸಿಫಸ್‌ಗೆ ಇರುವುದರಿಂದಾಗಿ ಮಾತ್ರ: ಅವನ ಬದುಕಿನ ಸ್ಪಷ್ಟ ನೋಟವೇ ಅವನ ಬದುಕಿನ ಯಾತನೆಯಾಗಿರುವುದರಿಂದಾಗಿಯೇ ಆತನ ಮುಕ್ತ ಭಾವಶುದ್ಧಿಯ ವ್ಯಂಗ್ಯ ಎಂತಹ ವಿಧಿಯನ್ನೂ ತುಳಿದೇ ತೀರುತ್ತದೆ.

ಈಡಿಪಸ್ ಕೂಡ ತನಗೆ ಅರವಿಲ್ಲದೇ ವಿಧಿಯ ಆಜ್ಞೆಯನ್ನು ಪಾಲಿಸುತ್ತಿದ್ದ; ಆದರೆ, ತಾನು ವಿಧಿಯ ಗುಲಾಮನಾಗಿರುವುದರ ಅರಿವು ಮೂಡಿದ ಕೂಡಲೇ ಅವನ ಬಾಳಿನ ದುರಂತ ಆರಂಭವಾಯಿತು.

ಕುರುಡನಾಗಿರುವ, ಉದ್ವೇಗದಿಂದ ಬಳಲಿ ಬೆಂಡಾಗಿ ಹೋಗಿರುವ ಆತನಿಗೆ ತನಗೂ ಹಾಗೂ ಈ ಜಗತ್ತಿಗೂ ಇರುವ ಸಂಬಂಧವೆಲ್ಲಾ ತಾನು ಹಿಡಿದಿರುವ ಹುಡುಗಿಯ ತಂಪುಕೈಗಳು ಮಾತ್ರವೆಂದು ಗೊತ್ತು. ಅರಿವಿನಿಂದ ಮೂಡಿಬಂದ ಭಾವಪರವಶತೆಯಲ್ಲಿ ಅವನ ನಾಲಿಗೆ ಅವನಿಗೇ ಗೊತ್ತಿಲ್ಲದಂತೆ ನುಡಿಯುತ್ತದೆ :

'ಇಷ್ಟೆಲ್ಲಾ ವಿಧಿಯ ಕಟ್ಟಾಜ್ಞೆಗಳನ್ನು .ಅನುಭವಿಸಿಯಾಗಿದ್ದರೂ ನನ್ನ ಬಲಿತ ವಯಸ್ಸು ಹಾಗೂ ಆತ್ಮನ ಶ್ರೇಷ್ಠತೆಗಳಿಂದಾಗಿ ಎಲ್ಲವೂ ಒಳ್ಳೆಯದೇ ಆಗಿದೆ ಎಂದು ತೀರ್ಮಾನಿಸುವಂತಾಗಿದೆ.'

*

ಸುಖದ ಸಂಹಿತೆಯೊಂದನ್ನು ಬರೆಯುವ ಆಸೆಯಿಂದಾಗಿಯೇ ಮನುಷ್ಯ ಅಸಂಬದ್ಧ ಜೀವಿಯಾಗಿರುವುದು. ಸುಖ ಮತ್ತು ಅಸಂಬದ್ಧತೆ ಒಂದೇ ನಾಣ್ಯದ ವಿವಿಧ ಮುಖಗಳು, ಅಷ್ಟೆ.

'ಎಲ್ಲ ಒಳ್ಳೆಯದಕ್ಕೇ ಎಂದು ನಾನು ತೀರ್ಮಾನಿಸುತ್ತೇನೆ!'

–ಎನ್ನುವುದೇ ಅಸಂಗತ ಮನುಷ್ಯನ ಹುಚ್ಚುಚ್ಚಾದ, ಆದರೆ ಸೀಮಿತವಾದ ಜಗತ್ತಿನ ಪವಿತ್ರ ! ಮಂತ್ರ. ಇದರಿಂದಾಗಿ ಯಾವುದೂ ಬರಿದಾಗಿ ಹೋಗಲು ಆಗಿಯೇ ಇಲ್ಲವೆಂದು ತಿಳಿಯುತ್ತದೆ!!

ಸಿಸಿಪಸ್‌ನ ಎಲ್ಲ ಮೂಕ ಸುಖ ಇಲ್ಲಿ ರಾಚಿಬಿದ್ದಿದೆ: ಅತೃಪ್ತ ಹಾಗೂ ಅರ್ಥಹೀನ ಕಷ್ಟಕಾರ್ಪಣ್ಯಗಳ ದೈವದ ಉಚ್ಚಾಟನೆಯಾಗಿದೆ–ಈ ಜಗತ್ತಿನಿಂದ.

*

'ಅಸಂಬದ್ಧ ತಾತ್ವಿಕತೆಯ ಪ್ರವಾದಿ' ಕಾಮೂ ತನ್ನ ಕಾಲದ ಕೇಲವೇ ಶ್ರೇಷ್ಠ ಗದ್ಯ ಶೈಲಿಯ ಲೇಖಕರಲ್ಲಿ ಪ್ರಮುಖನಾಗಿದ್ದ. ಆದರೂ ಆತನಿಗೆ ಕೆಲವು ಪದಗಳ ಬಗ್ಗೆ ಇದ್ದ ಒಂದು ವಿಚಿತ್ರ ರೀತಿಯ ವ್ಯಾಮೋಹದಿಂದಾಗಿ ಆ ಪದಗಳಲ್ಲಿ ಅರ್ಥಾಂತರವಿದೆ! ಆದರಿಂದಾಗಿ, ಕೆಲವೊಮ್ಮೆ ಆ ಪದಗಳಿಗೆ ವಿಪರೀತವಾದ ಅರ್ಥಗಳೇ ಪ್ರಾಪ್ತವಾಗಿ, ಅವನು ಹೇಳಲು ಬಯಸಿದ್ದಕ್ಕಿಂತ ಭಿನ್ನವಾದುದನ್ನು ಆ ಪದಗಳು ಹೇಳುವಂತಾಗಿದೆ!—

ಅವುಗಳಲ್ಲಿ ಅತಿ ಮುಖ್ಯವಾದ ಪದಗಳೆಂದರೆ ‘ ಅಸಂಬದ್ಧತೆ ’ ಹಾಗೂ ‘ಕ್ರಾಂತಿ’. ಈ ಪದಗಳ ಸಹಜ ಅರ್ಥ ಅತ್ಯುಗ್ರವಾದ ಸ್ಥಿತಿಗಳನ್ನೇ ಸಂಕೇತಿಸುವುದು. ಆದರೆ, ಕಾಮೂ ಪ್ರಯೋಗದ ಅರ್ಥಮಾತ್ರ ಈ ಉಗ್ರ ಸ್ಥಿತಿಗಳಲ್ಲ !

ಅವನ ಅತಿ ವಿವಾದಾತ್ಮಕ ಕೃತಿ ‘ ರೆಬೆಲ್ ’ನ ಮೊದಲ ಸಾಲುಗಳೇ ಇದಕ್ಕೆ ಸಾಕ್ಷಿ:

‘ ಕ್ರಾಂತಿಕಾರಿ ಯಾರು ? “ ಇಲ್ಲ ” ಎಂದು ಹೇಳುವವ. ಆದರೆ, ಇವನ ತಿರಸ್ಕಾರ ವಿರಾಗಿಯದಲ್ಲ; ಅವನಲ್ಲಿ ಅವನೇ ಯೋಚಿಸಲು ಆರಂಭಿಸಿದ ಕೂಡಲೇ “ ಹೌದು ” ಎಂದು ಹೇಳುವವನೂ ಈತನೇ....’

ಅಂದರೆ, ಅವನ ಈ ತಿರಸ್ಕಾರ ತೀರ ವೈಯಕ್ತಿಕವಾದ, ಆತ ಪರಮ ಪವಿತ್ರವೆಂದು ತಿಳಿದು ತಳೆದ ಧೋರಣೆಯಿಂದ ಉದ್ಭವಿಸಿದೆ. ವಿಕಾಸದ ಹಾದಿಯತ್ತ ಪಯಣಿಸುವ ಸಲುವಾಗಿ ತನ್ನ ಸ್ಥಗಿತತೆಯ ವಿರುದ್ಧ ಸಿಡಿದೆದ್ದ, ಅಲ್ಲದೆ, ತನ್ನ ವೈಯಕ್ತಿಕ ಸಿಡಿತದಿಂದ ತನ್ನ ಇರುವಿಕೆಯನ್ನು ಮುಗಿಸಿಬಿಡಲು ಸಿದ್ಧನಿಲ್ಲದ ಸ್ಥಿತಿ; ಅಂದರೆ, ‘ಪವಿತ್ರ ಕಾಯಿದೆಗಳ ಸಹಾಯವಿಲ್ಲದೆ ಮನುಷ್ಯ ತನ್ನದೇ ಆದ ನೈತಿಕ ಮೌಲ್ಯ ಮಾತ್ರಗಳಿಂದ ಜೀವಿಸಬಲ್ಲನೆ ?’—ಎನ್ನುವ ಪ್ರಶ್ನೆಯೇ ಈ ಸ್ಥಿತಿಯಾಗಿದೆ. ‘ಜೀವಿಸಬಲ್ಲ !’ ಎನ್ನುವುದೇ ಕಾಮೂನ ಆಂದೋಲನಕಾರ ಕೊಡುವ ಉತ್ತರವೂ ಆಗಿದೆ.

ಇಲ್ಲಿನ ಕ್ರಾಂತಿ ಬೌದ್ಧಿಕವೂ ತೀರ ವೈಯಕ್ತಿಕವೂ ಆದ್ದರಿಂದ ಆ ಪದಗಳ ಮಾಮೂಲೀ ಅರ್ಥ ಇಲ್ಲಿ ದಕ್ಕಿನಿಲ್ಲಲಾರದವಾಗಿವೆ. ‘ವ್ಯಕ್ತಿ’ ತನ್ನ ಮೇಲೆ ತಾನೇ ನಡೆಸಿಕೊಳ್ಳುವ ಕ್ರಾಂತಿಯ ಮೂಲಕವೇ ಆತ ಜಗತ್ತಿನೊಡನೆ ತನ್ನ ಸಂಬಂಧವನ್ನು ರೂಪಾಂತರಿಸಿಕೊಳ್ಳುತ್ತಾನೆ. ಈ ಕಾರಣಕ್ಕೆ ಕಾಮೂ ‘ಅಹಿಂಸೆಯ ಪರಾಕಾಷ್ಠತೆ ಕೂಡ ಮುಕ್ತತೆಯ ಪರಾಕಾಷ್ಠತೆಯಂತೆ ಅಸಂಬದ್ಧ’ ಎನ್ನುತ್ತಾನೆ : ವ್ಯಕ್ತಿ ತನ್ನನ್ನು ತಾನು ಮಹಾನ್ ಉದ್ದೇಶ ಒಂದಕ್ಕಾಗಿ ತ್ಯಾಗಮಾಡಿಕೊಳ್ಳುವುದು ಆ ಉದ್ದೇಶದ ಗೌರವವನ್ನು ಕಾಯ್ದುಕೊಳ್ಳುತ್ತದೆ; ಹಾಗೆಯೇ, ವ್ಯಕ್ತಿ ಸಮಷ್ಟಿಯನ್ನು ಆ ಮಹಾನ್ ಉದ್ದೇಶಕ್ಕಾಗಿ ಬಲಿಗೊಡುವುದು ಆ ಉದ್ದೇಶದ ಗೌರವ

ವನ್ನೇ ಬಲಿಗೊಟ್ಟ ಅಮಾನವೀಯತೆಯಾಗುತ್ತದೆ.

ಅವನ ವಾದದ ಸೂಕ್ಷ್ಮತೆ ಅವನ ಸಮಕಾಲೀನ ಚಿಂತಕರ ವಾದದ ತೀಕ್ಷ್ಣತೆಯ ವಿರುದ್ಧ ಸಿಡಿದೆದ್ದ ಕ್ರಾಂತಿ ಸಂಹಿತೆಯಾಗಿದೆ. ಇರುವ ವಸ್ತುಸ್ಥಿತಿಯ ಸತ್ಯವನ್ನೇ ಆಮೂಲಾಗ್ರವಾಗಿ ಕಿತ್ತೆಸೆಯುವ ಪ್ರಳಯವೇ ಕ್ರಾಂತಿಯಲ್ಲ—ಬದಲಿಗೆ, ಇರುವ ವಸ್ತುಸ್ಥಿತಿಯ ವಿರುದ್ಧ ಸಿಡಿದೆದ್ದು, ಅದರ ಮೂಲ ಸತ್ವವನ್ನು ಕಾಯ್ದುಕೊಂಡು, ಅದನ್ನು ಬದಲಿಸುವುದೇ, ತಿದ್ದುವುದೇ ಹಾಗೂ ಪುನರ್ ರಚಿಸುವುದೇ ನಿಜವಾದ ಕ್ರಾಂತಿ. ವಿಕಾಸ ಕ್ರಾಂತಿಯಿಂದ ಸಾಧ್ಯವಾಗುವುದಲ್ಲ–ತದ್ವಿರುದ್ಧವಾಗಿ, ತಿದ್ದುಪಾಡುಗಳಿಂದ ಮಾತ್ರ ಸಾಧ್ಯವಾಗಬಲ್ಲುದು.

ತೀರ ವೈಯಕ್ತಿಕವಾದ ಒಳಗಲ ಕ್ರಾಂತಿ ಆಗಬೇಕಲ್ಲದೆ, ಹೊರಗಲ ದಲ್ಲ–ಎಂದು ಸಾರಿದ ಅವನು ತನ್ನ ಕಾಲದ ಚಿಂತನೆಯ ವಿರುದ್ಧ ಸಿಡಿದು ನಿಂತ ಮಹಾನ್ ಪ್ರವಾದಿಯಾಗಿದ್ದ.

ತನ್ನ ಕಾಲವನ್ನು ರಾಜಕೀಯವಾಗಿ ಅರ್ಥೈಸಿಕೊಳ್ಳಲೆಂದೇ ಆತ ಬರೆದ ' ರೆಬೆಲ್ 'ನ ಉದ್ದಕ್ಕೂ ಆತ 'ಐವತ್ತು ವರ್ಷಗಳ ಅವಧಿಯಲ್ಲಿ ಎಪ್ಪತ್ತು ಮಿಲಿಯನ್ ಮಾನವರನ್ನು ದೇಶಭ್ರಷ್ಟರನ್ನಾಗಿ ಮಾಡಿದ, ಗುಲಾಮ ಗಿರಿಗೆ ಒಗೆದ, ಅಥವಾ ಕೊಂದ ಕಾಲವನ್ನು ಈ ಕೂಡಲೇ ಧಿಃಕರಿಸಬೇಕು; ಅಲ್ಲದೆ, ಅದರ ಪಾಪವನ್ನು ಅರ್ಥಮಾಡಿಕೊಳ್ಳಬೇಕು'–ಎನ್ನುವತ್ತ ವಿಶ್ಲೇಷಣೆ ನಡೆಸುತ್ತಾ ಸಾಗುತ್ತಾನೆ. ರಾಜಕೀಯವಾದ ಕ್ರಾಂತಿ–ಅದರ ಉದ್ದೇಶ ಎಂತಹದೇ ಆಗಿದ್ದರೂ–ನಿರಂಕುಶ ಪ್ರಭುತ್ವಕ್ಕೆ ಮಾತ್ರ ಎಡೆ ಮಾಡುತ್ತದೆ ಹಾಗೂ ಭೀಕರ ರೀತಿಯಲ್ಲಿ ಹಿಂಸಾತ್ಮಕವಾಗಿ ಉಳಿದೇ ತೀರು ತ್ತದೆ—ಎನ್ನುವುದೇ ಅವನ ಅಚಲವಾದ ನಂಬಿಕೆ. ಈ ನಂಬಿಕೆಯಿಂದಾ ಗಿಯೇ, ಆತ ತೀರ ವೈಯಕ್ತಿಕವೆಂದು ಜರೆಸಿಕೊಂಡ–ತೀರ ವೈಯಕ್ತಿಕವೇ ಆಗಿರಲೂಬಹುದಾದ ತಾತ್ವಿಕ ಅಥವಾ ಆಧ್ಯಾತ್ಮಿಕ ಕ್ರಾಂತಿಗೆ ಆಹ್ವಾನ ವೀಯುತ್ತಾನೆ.

ಗ್ರೀಕರಂತೆ ಪ್ರಕೃತಿಯಲ್ಲಿ ಆಗಾಧವಾದ ನಂಬಿಕೆಯನ್ನು ಹೊತ್ತಿದ್ದ ಕಾಮೂ ವ್ಯಕ್ತಿಯ ಐತಿಹಾಸಿಕ ಸ್ಥಿತಿಯ ವಿರುದ್ಧ, ಹಾಗೂ ಸೃಷ್ಟಿಯ ವಿರುದ್ಧ ಬಂಡೇಳುತ್ತಾನೆ ; ಅದು ಕ್ರೂರ ಅರ್ಥದ ಬಂಡಾಗಿರದಂತೆ ಜಾಗರೂಕತೆ

ಯಿಂದ ಕಾಯ್ದುಕೊಳ್ಳುತ್ತಾನೆ. ತನ್ಮೂಲಕ ಆತ ಶತಮಾನಕ್ಕೂ ಮೀರಿದ ಕಾಲದ ಉದ್ದಕ್ಕೂ ಯೂರೋಪಿನ ಜನರ ಬುದ್ಧಿಗೆ ಮುಚ್ಚಿದ್ದ ಕತ್ತಲನ್ನು ನಿವಾರಿಸಿ, ಇನ್ನೂರಕ್ಕೂ ಮೀರಿದ ವರ್ಷಗಳ ವಿಜ್ಞಾನ ಹಾಗೂ ವೈಚಾರಿಕತೆಯ ಗೋಜಲನ್ನು ಬಿಡಿಸಿ, ಅವರ ನಿರೀಶ್ವರವಾದ, ಜಿಗುಪ್ಸೆ, ಹೇಯ ಭಾವಗಳಿಂದ ಅವರನ್ನು ಮುಕ್ತರನ್ನಾಗಿಸಿ, ಮತ್ತೆ ಹೊಚ್ಚಹೊಸದಾರಿಯಲ್ಲಿ ಚಿಂತಿಸಲು, ಆಸೆಆಮಿಷಗಳನ್ನು ಇಟ್ಟುಕೊಳ್ಳಲು, ಮನುಷ್ಯನ ಭವಿಷ್ಯದಲ್ಲಿ ಭರವಸೆ ತಳೆದುಕೊಳ್ಳಲು ಅವರಿಗೆ ಶಕ್ತಿಯನ್ನು ಕಲ್ಪಿಸಿಕೊಡುತ್ತಾನೆ.

ಬದುಕುವ ಕ್ರಿಯೆಯ ಯುಕ್ತಾಯುಕ್ತತೆಯನ್ನು ಪ್ರಶ್ನಿಸಿ, ತನ್ನ ಪ್ರಖರ ಬುದ್ಧಿಯ ನಿರ್ಮಲ ಸ್ಥಿತಿಯಲ್ಲಿ ಸೂಕ್ತ ಪರಿಹಾರವನ್ನು ತನ್ನ ತಾತ್ವಿಕ ಬರಹಗಳಲ್ಲಿ ಅನ್ವೇಷಿಸುತ್ತಾನೆ ; ಎಂತಹ ಕ್ರಾಂತಿಯಿಂದ ಮಾತ್ರ ಇದರ ಸಾಧ್ಯತೆ ಸಾಧ್ಯವೆಂದು ಗುರುತಿಸಿ ಕೊಡುತ್ತಾನೆ.

ಅತಿ ಧಾರುಣ ರಾಜಕೀಯ ಹಾಗೂ ಧಾರ್ಮಿಕ ದುರಂತವೇ ರಾಜ್ಯವನ್ನು ಆಳುವ ಸ್ಥಿತಿಯಾದಾಗ, ನೈತಿಕ ಮೌಲ್ಯ ಒಂದನ್ನು ಸೃಷ್ಟಿಸಿ, ಜಗತ್ತನ್ನು ಹೊಸದಾಗಿಸಿ, ಭರಿಸಲು ಸಾಧ್ಯಗೊಳಿಸುತ್ತಾನೆ. ದಬ್ಬಾಳಿಕೆ ಹಾಗೂ ಸರ್ವತಂತ್ರ ಸ್ವಾತಂತ್ರ್ಯಗಳ ಮಧ್ಯದ ಸಮರಸತೆಯ ಪರಿಹಾರವನ್ನು ಅನ್ವೇಷಿಸಿದ್ದಾನೆ. ಇನ್ನೂರಕ್ಕೂ ಮೀರಿದ ಬೌದ್ಧಿಕ ಇತಿಹಾಸದ ಗುಲಾಮನಾಗಿದ್ದ ಯೂರೋಪಿನ ಮನುಷ್ಯ ತನ್ನ ಅತಿಯಾದ ವೈಚಾರಿಕತೆಯಿಂದ 'ನ್ಯಾಯ'ವನ್ನು 'ತರ್ಕ'ವನ್ನಾಗಿ ಪರಿವರ್ತಿಸಿಬಿಟ್ಟು, ಕೊಲೆಯನ್ನು ಮಕ್ಕಳಾಟವಾಗಿಸಿ ಬಿಟ್ಟಿದ್ದ. ಬಂಡೇಳುವುದೇ ಮನುಷ್ಯನ ಆಜನ್ಮಸಿದ್ಧವಾದ ಹಕ್ಕೆಂದು ನಂಬಿ, ಇದರ ವಿರುದ್ಧ ಬಂಡೆದ್ದ ಆಲ್ಬರ್ಟ್ ಕಾಮೂ ತಾನೆದ್ದ ಬಂಡನ್ನು ವೈಯಕ್ತಿಕ ಸ್ತರಗಳಲ್ಲಿ ವಿಶ್ಲೇಷಿಸಿ ಹಾಗೂ ಅರ್ಥೈಸಿ ಸಾಮೂಹಿಕ ಜಗತ್ತಿನ ಎಲ್ಲ ಸ್ತರಗಳ ಪಾಲಿಗೆ ಬಿಡುಗಡೆ ಮಾಡಿದ್ದಾನೆ. ತನ್ನ ಕ್ರಾಂತಿಯ ಸ್ತರಗಳನ್ನು ವಿಕಾಸದತ್ತಲ ಹೆಜ್ಜೆಗಳಾಗಿ ಗುರುತಿಸಿ, 'ಆಧ್ಯಾತ್ಮಿಕ ಕ್ರಾಂತಿ' ಎಂದು ಸಾರಿದ್ದಾನೆ. ಮಾನವನ ಇರುವಿಕೆಯ ವಿರುದ್ಧವೇ ಸಿಡಿದು ಎದ್ದ ಕ್ರಾಂತಿಯಿಂದಾಗಿ, ಇರುವಿಕೆಗೆ ಪವಿತ್ರ ಅರ್ಥ ಒಂದನ್ನು ತಂದು ರಾಚಿದ್ದಾನೆ.

ಸತತವಾಗಿ ಸೃಷ್ಟಿತವಾದ ತಿಕ್ತತಮ ಕ್ರಾಂತಿ ವಿವೇಕ ಪೂರ್ಣ ಬುದ್ಧಿಯ ಅಧೀನದಲ್ಲಿ ಇರುವಷ್ಟು ಕಾಲವೂ ನಾವು ಏನನ್ನೇ ಮಾಡಲಿ. 'ಅತಿ'ಯನ್ನು ಮನುಷ್ಯನ ಏಕಾಂತದ ತಾಣವಾದ ಹೃದಯದಲ್ಲೇ ಹುಗಿದು, ಅದು ಮನುಷ್ಯನಿಗೆ ಅವನ ಬೌದ್ಧಿಕ ಗೊಂದಲದಿಂದ ಬಿಡುಗಡೆಯನ್ನು ಕೊಡುವ ರೀತಿಯನ್ನು ಕಾಮೂ ಆಗುಮಾಡಿ ಕೊಟ್ಟಿದ್ದಾನೆ.

ಅವನ ಸಿದ್ಧಾಂತಗಳು ಏನೇ ಆಗಿರಲಿ ಅಥವಾ ಬಿಟ್ಟಿರಲಿ—ಅವುಗಳು ಮಾತ್ರ ರಚನಾತ್ಮಕತೆಯ ಹೊಸ ಸ್ಫೂರ್ತಿಯಿಂದ ಆವಿರ್ಭವಿಸಿದ ಕ್ರಾಂತಿಯು ತುಡಿತ ನೀಡಿದ ಹೊಚ್ಚ ಹೊಸ ಪಶ್ಚಿಮ ಜಗತ್ತಂತೂ ಆಗಿದೆ. ಮರಳು ಗಾಡಿನಲ್ಲಿ ಇರುವ ಕಲಾವಿದ ತಾನು ಆ ಬೆಂಗಾಡಿನಲ್ಲಿ ಬದುಕಲು, ಬದುಕಿ ರಚನಾತ್ಮಕ ಕ್ರಿಯೆಯಲ್ಲಿ ತೊಡಗಲು ನಡೆಸಿದ ಸುಂದರ ಜಗತ್ತಂತೂ ಅವನ ಸೈದ್ಧಾಂತಿಕ ಕೃತಿಗಳು ಆಗಿರುವುದು ಸತ್ಯ.

ತನ್ನ ಕೃತಿ 'ರೆಬೆಲ್'ನಲ್ಲಿ ಹೇಳಲಾಗದೇ ಬಿಟ್ಟದ್ದನ್ನು – ರಾಜಕೀಯ ಪರಿಸ್ಥಿತಿಯಿಂದ ವೈಯಕ್ತಿಕ ಪರಿಸ್ಥಿತಿಗೆ ಜಿಗಿದ ಜಿಗಿತವನ್ನು– ಆತ ತನ್ನ 'ಮಿಥ್ ಆಫ್ ಸಿಸಿಪಸ್' ನಲ್ಲಿ ಚರ್ಚಿಸಿ ಪರಿಹಾರವನ್ನು ತಂದುಕೊಂಡಿದ್ದಾನೆ.

* * *

ಆಲ್ಬರ್ಟ್ ಕಾಮೂನ ಸಿದ್ಧಾಂತಗಳ ಯೋಗ್ಯತೆಯನ್ನು ಒರೆಹಚ್ಚಿ ಪರೀಕ್ಷಿಸುವ ಕೆಲಸ ಈ ಪುಸ್ತಕದ ಪರಿಧಿಗೆ ಹೊರತಾದುದು.

ಎರಡು ಯುದ್ಧಗಳ ನಡುವಣ ಮಧ್ಯದ ವಿರಾಮ ಬರಲಿರುವ ಯುದ್ಧ ಒಂದರ ಪೂರ್ವ ಸಿದ್ಧತೆ ಮಾತ್ರವಾಗಿದ್ದ ಪಶ್ಚಿಮದ ಸುಂದರವಾದ ಶಿಶು ಆಲ್ಬರ್ಟ್ ಕಾಮೂ. ಕೇವಲ ಇನ್ನೂರು ವರ್ಷಗಳ ಕಾಲದಿಂದ ಮಾತ್ರ ಅವನ ಪೂರ್ವಿಕರು ಬೇಟೆಯಾಡುವುದರಿಂದ ಮುಕ್ತರಾಗಿ, ಅಲೆಮಾರಿ ಜೀವನಕ್ಕೆ ವಿಶ್ರಾಂತಿಯ ಮಂತ್ರವನ್ನು ಆಗತಾನೆ ಪಠಿಸಲೆತ್ನಿಸುತ್ತಿದ್ದವರು, ಪಾಪ !

ಎಲ್ಲಕ್ಕೂ ಮಿಗಿಲಾಗಿ ಇವರೆಲ್ಲರ ತಾತ್ವಿಕ ಸಿದ್ಧಾಂತಗಳ ಮೂಲ ಪುರುಷರು ಗ್ರೀಕರೇ. ಗ್ರೀಕರು ತಮ್ಮ ಬೌದ್ಧಿಕತೆಯಲ್ಲಿ ವಿಧಿಯ ಆಟದ ಗೊಂಬೆಗಳು. ಇವರ ಆಧ್ಯಾತ್ಮಿಕ ತುರಿಯಾವಸ್ಥೆ ಶರಣ್ಯ ಭಾವದ ಪ್ರಾರ್ಥನೆ!

ಇವರ ವಿರುದ್ಧ ಸಿಡಿದೆದ್ದ ಕ್ರಿಸ್ತನ ಆಧ್ಯಾತ್ಮಿಕ ತುರೀಯಾವಸ್ಥೆ ಪ್ರೇಮ: ಪ್ರೇಮ ಇವತ್ತಿನ ಯೂರೋಪಿನ ಜೀವಿಗೆ ಒಂದು ಮ್ಯೂಸಿಯಂ ಪೀಸ್‌: ಅಥವಾ ಕಾಮಕ್ಕೆ ಕೊಟ್ಟ ಬೇರೊಂದು ಹೆಸರು ! ಇವತ್ತಿನ ಯೂರೋಪಿನ ಬುದ್ಧಿಜೀವಿ ಕ್ರಿಸ್ತನ ಅಥವಾ ಮಾರ್ಕ್ಸ್‌ನ ವಿರುದ್ಧ ಸಿಡಿದೆದ್ದ ಕೂಡಲೇ ಸಿಗುವ ಜಗಿತ ಮತ್ತೆ ಗ್ರೀಕರ ತಾತ್ವಿಕತೆಯೇ ! ಗ್ರೀಕರಿಗೆ ಅತಿಮಾನುಷದಲ್ಲಿ ನಂಬಿಕೆಯಾದರೂ ಇತ್ತಾಗಿ, ಅವರ ಜೀವನ ಹೆಚ್ಚು ಅರ್ಥಪೂರ್ಣ ವಾಗಿತ್ತು. ಇವತ್ತಿನ ಯೂರೋಪಿನ ಬುದ್ಧಿಜೀವಿಗೆ ತನ್ನ ವೈಚಾರಿಕತೆ ಯಿಂದಾಗಿ ಈ ನಂಬಿಕೆಯೂ ಇಲ್ಲ.

—ಕಾಮೂನ ಸಿದ್ಧಾಂತವನ್ನು ತೀರ ತೀರ ಸರಳೀಕರಿಸಿ ಹೇಳು ವುದೇ ಆದರೆ; ಅದು:

'ಬಡವಾ, ಮಡಗಿದ ಹಾಗಿರು !!'

ಈ ಅರ್ಥದಲ್ಲಿ ಕಾಮೂ ಹಾಗೂ ಅವನ ಸಮಕಾಲೀನ ಬುದ್ಧಿಜೀವಿ ಗಳು ಇಪ್ಪತ್ತನೆಯ ಶತಮಾನವನ್ನು ಅತಿಮಾನವ ಶಕ್ತಿಯಲ್ಲಿ ನಂಬಿಕೆ ಯನ್ನು ಕಳೆದುಕೊಂಡ ಗ್ರೀಕ್ ಯುಗವಾಗಿ ಮಾತ್ರ ಪುನರ್ ರಚಿಸಿದವರು! ಇವರು ಗ್ರೀಕರಿಗಿಂತಲೂ ತುಚ್ಛವಾದ ವಿಧಿಯ ಗುಲಾಮರು ಅಥವಾ 'ಅತಿ ಗ್ರೀಕ್ ತಾತ್ವಿಕರು.'

*

ಜೀವನದಲ್ಲಿನ ಅಸಂಬದ್ಧತೆಗಳನ್ನು ಗೆಲ್ಲಲೆಂದೇ ಪೂರ್ವದ ಜನ ತಮ್ಮ ದರ್ಶನಶಾಸ್ತ್ರಗಳನ್ನು ಐದು ಸಾವಿರ ವರ್ಷಗಳ ಹಿಂದೆಯೇ ಆಗು ಮಾಡಿಕೊಂಡವರು; ಅಸಂಬದ್ಧತೆಯನ್ನು ಸುಸಂಬದ್ಧವಾಗಿ ಗೆದ್ದವರು. ಅವರ ಪಾಲಿಗೆ ಅಸಂಬದ್ಧತೆ ಮಕ್ಕಳ ಆಟ. ಮರೆತ ಕೆಟ್ಟ ಕನಸು! ಪೂರ್ವದ ದರ್ಶನಗಳ ಅನ್ವೇಷಕರಾದ ನಮ್ಮವರ ಪ್ರಾರ್ಥನೆ ಶರಣ್ಯಭಾವ ದಿಂದ ಜನ್ಯವಾದುದಲ್ಲ: 'ಯಾವ ಬೆಳಕು ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳಿಗೆ ಬೆಳಕನ್ನು ಕೊಡುತ್ತದೆಯೋ ಆ ಬೆಳಕು ನಮ್ಮ ಬುದ್ಧಿ ಯನ್ನು ಪ್ರಜ್ವಲಿಸಲಿ'-ಎಂದ ''ಗಾಯತ್ರೀ'ಯ ದಿವ್ಯ ಭಾವದ ವಿರಕ್ತ ಆದರೂ ಜಾಗೃತ ಪ್ರಜ್ಞೆ! ಆದ್ದರಿಂದಲೇ ಸಾಕ್ಷಾತ್ಕಾರ ದೊರಕಿಸಿಕೊಂಡ ನಮ್ಮವರ ಬಚ್ಚಲನ್ನು ಬಳಿಯುವ ಕೂಲಿ ಆ ಪಾಶ್ಚಾತ್ಯರ ಪರಮಾಧಿಕಾರದ

*

ಆದರೆ, ಪಾಶ್ಚಾತ್ಯರ ಪಾಲಿಗೆ ಈ ಅಸಂಬದ್ಧತೆಯೇ ಎಂದೋ ನಿಶ್ಚಿತವಾದ ಒಂದು ತಾತ್ವಿಕ ತೀರ್ಮಾನವಾಗಿದ್ದರೂ ದಾರ್ಶನಿಕ ಅನ್ವೇಷಣೆಯ ಮೊದಲ ಹಾಗೂ ಕೊನೆಯ ಹಂತ.

ಕಾಮೂ ಇಲ್ಲಿಲ್ಲೋ ಮೈಕೈ ಪರಚಿಕೊಳ್ಳುತ್ತಿದ್ದಾನೆ, ಪಾಪ; ಸಾವು ತನ್ನನ್ನು ಗೆಲ್ಲಬಾರದೆಂದು ತಾನೇ ಸಾವಿಗೆ ಗುರಿಯಾದ ಕಂದಮ್ಮ ಈತ. ಆದರೆ, ಆತ ತಾನು ಕಂಡುಕೊಂಡ 'ಮಾನಸಿಕ ಸಾವಿ'ಗೆ ಆಧ್ಯಾತ್ಮದ ಹೆಸರಿಟ್ಟು,' 'ಸುಖದ ಲೇಪ'ವನ್ನು ಬಳಿದವನು! ಇವನ ಅಭೂತಪೂರ್ವ ಕೊಡುಗೆ ಎಂದರೆ ಇಂದ್ರಿಯ ಸೀಮಿತ ಸುಖಾರ್ಥತೆ ಮಾತ್ರವೇ ಭವದ ಮೂಲ ತತ್ವವೆಂದು ಸಾರಿದ್ದು! ತನಗೆ ಬೇಕಾಗಿರುವುದು ಸುಖದ ಅಚಲ ಜಾಗೃದಾವಸ್ಥೆ–ಎಂದದ್ದು!!

–ಇವನೂ ಇಲ್ಲವಾಗಿದ್ದರೆ ಆ ಯೂರೋಪಿನ ಗತಿ?

'ಕಾಮೂವೇ ನಮ್ಮ ಜಗದ್ಗುರು!'–ಎಂದು ಮನಸಾ ನಂಬಿ ನಮಸ್ಕರಿಸಿ, ಸ್ತುತಿಸುತ್ತಿರುವ ನಮ್ಮ ಸಧ್ಯದ ಕನ್ನಡ ಬುದ್ಧಿಜೀವಿಗಳ ಸ್ಥಿತಿ?

ಪೂರ್ವ ಹಾಗೂ ಪಶ್ಚಿಮದ ದಾರ್ಶನಿಕ ಅವಸ್ಥೆಗಳನ್ನು ಅಭ್ಯಸಿಸಿ, ಹೊಸ ಆಧ್ಯಾತ್ಮಿಕ ಮಹಾಸ್ತರದ ಸಂಯಕ್ ದರ್ಶನದತ್ತ ನಮ್ಮನ್ನು ನಿಜಕ್ಕೂ ಕೊಂಡೊಯ್ಯುವ ಜಗದ್ಗುರು ನಮಗೆ ಲಭ್ಯವಾಗುವ ಕಾಲ ಇನ್ನೂ ಪ್ರಾಪ್ತವಾಗಿಲ್ಲ. ಆದರೆ, ಪ್ರಾಪ್ತವಾಗುವ ಸೂಚನೆಗಳು ಸಾಕಷ್ಟು ಪ್ರಖರವಾಗಿಯೇ ಇವೆ–ಎಂದು ನನ್ನ ಅನಿಸಿಕೆ; ಅಥವಾ ಕಲ್ಪನೆ!

*

ಲೇಖನ ಕಲಾವಿದರಾಗಿ ಈ ಯೂರೋಪಿಯನ್ ಲೇಖಕರು ನಿಜಕ್ಕೂ ಅಸಾಧ್ಯರು. ಅವರು ತಮ್ಮ ಕೃತಿಗಳ ಮೂಲಕ ಮೇಲಿಂದ ಮೇಲೆ ಆಗುಮಾಡಿಕೊಳ್ಳುತ್ತಿರುವ ಹೊಸ ಸಾಧ್ಯತೆಗಳು ದಿಗ್ಭ್ರಮೆಗೊಳಿಸುವಷ್ಟು ಮಹತ್ತರವಾಗಿವೆ. ಒಬ್ಬೊಬ್ಬ ಲೇಖಕನೂ ಒಂದೊಂದು ಮನ್ವಂತರಗಳ ಆದ್ಯ ಪ್ರವರ್ತಕನೇ ಆಗುತ್ತಿದ್ದಾನೆ.

ತನ್ನ ಕಲಾಪ್ರಜ್ಞೆಗೆ ತಳಹದಿಯಾಗುವಂತಹ ಸಿದ್ಧಾಂತಗಳನ್ನು ತಾನೇ ಅನ್ವೇಷಿಸಿ, ಆ ಸಿದ್ಧಾಂತಗಳನ್ನು ಜಗತ್ತಿನ ನೆತ್ತಿಗೆ ನೆಟ್ಟು, ಅದರ ಬೆಳಕಿನಲ್ಲಿ ರಚಿಸುತ್ತಿರುವ ಕಲಾಕೃತಿಗಳು ಆ ಸಿದ್ಧಾಂತಗಳನ್ನು ಮೀರಿದ ಕಲಾಕೃತಿಗಳಾಗುವಂತೆ ನೋಡಿಕೊಳ್ಳುತ್ತಿರುವ ವಿಚಾರ ನಿಜಕ್ಕೂ ಅದ್ವಿತೀಯವಾದುದು. ಅವರ ಸಿದ್ಧಾಂತಗಳನ್ನು ನಾವು ಒಪ್ಪಬಹುದು ಅಥವಾ ಬಿಡಬಹುದು: ಅವು ಸರಿ ಇರಬಹುದು ; ತಪ್ಪೇ ಇರಬಹುದು—ಆದರೆ, ಅವರ ಕಲಾಕೃತಿಗಳು ಯಾರೂ ಒಪ್ಪಲೇಬೇಕಾದ ಮಹಾನ್ ಸಾಧನೆ ಹಾಗೂ ಸಿದ್ಧಿಗಳಾಗಿವೆ.

ನಮ್ಮಲ್ಲಿ ಮಾನವನ ಬಾಳ್ವಿಗೆ ಹೊಸ ಸಿದ್ಧಾಂತ ಒಂದನ್ನು ರೂಪಿಸುವ 'ದಾರ್ಶನಿಕ-ಲೇಖಕ'ನ ಸಾಧ್ಯತೆಯ ಮಾತು ಹಾಗಿರಲಿ, ಶ್ರೇಷ್ಠ ಕೃತಿಗಳನ್ನು, ಯುಗ ನಿರ್ಮಾಣದ ಸಾಹಿತ್ಯಗಳನ್ನು ರಚಿಸಬಲ್ಲ ಲೇಖಕರೇ ದಿಗಿಲು ಗೊಳಿಸುವಷ್ಟು ಪ್ರಮಾಣದಲ್ಲಿ ಇಲ್ಲವಾಗಿದ್ದಾರೆ. ಹಾಗೂ ಹೀಗೂ .. ಹೇಗೆ ಹೇಗೋ ಇರುವ ನಮ್ಮ ಆಧುನಿಕ ಸಮಕಾಲೀನ ಲೇಖಕರು ತಮ್ಮ ಬರಹಗಳ ತಾಯಿಕೃತಿಗಾಗಿ ಯುರೋಪಿಯನ್ ಲೇಖಕರ ಕೃತಿಗಳನ್ನು ಹುಡುಕಿ ಭಾರತೀಕರಣಮಾಡಿ ಕೃತಾರ್ಥರಾಗುತ್ತಿದ್ದಾರೆ.

ಅವರೆಲ್ಲರ ಈ ಕೃತಾರ್ಥತೆ ಪಶ್ಚಿಮವನ್ನು ತಮ್ಮ ಸ್ಫೂರ್ತಿಯಾಗಿ ಸ್ವೀಕರಿಸಿದ್ದರಿಂದ ಬಂದುದಲ್ಲ ; ಅವರ ಕ್ರಿಯಾತ್ಮಕ ರಚನೆ ಅಸಾಧ್ಯವಾಗಿ ಬಿಟ್ಟ ಬಂಜೆತನದಿಂದ ಪ್ರಾಪ್ತವಾದುದು. ಇಂತಹ ನೆಲೆತಪ್ಪಿ ಅಕ್ರಿಯಾತ್ಮಕವಾದ ಭಾರತೀಕರಣದ ಕೃತಿಗಳು ರಾಷ್ಟ್ರೀಯ ಸಾಹಿತ್ಯವಾಗಿ ಮೆರೆಯುತ್ತಿರುವುದು ನಮ್ಮ ರಚನಾತ್ಮಕ ಶಕ್ತಿಯ ಬರಡುತನದ ದುರಂತ.

ನಾವು ಇಂದು ನಾಚಿಕೆಗೆಟ್ಟ ಜನಾಂಗವಾಗಿದ್ದೇವೆ.

ಜಗತ್ತಿನ ಶೇಷ್ಠ ದಾರ್ಶನಿಕ ಮಹಾನ್ ಶಕ್ತಿಯೇ ಬೆನ್ನಿಗಿದ್ದು, ಆ ಶಕ್ತಿ ಜಗತ್ತಿನ ಮಹಾ ಪುರಾಣಗಳಿಗೆ ಜನ್ಮ ಕೊಟ್ಟಿರುವುದನ್ನು ಅರಿತೂ ನಾವು ನಮ್ಮ ರಚನಾತ್ಮಕ ಲೇಖನ ಕ್ರಿಯೆಯಲ್ಲಿ ಇಷ್ಟೊಂದು ಸತ್ವಹೀನರಾಗಿರುವುದರ ಮೂಲ ನಿಜಕ್ಕೂ ಸಂಶೋಧನೆಗೆ ಒಂದು ಶ್ರೇಷ್ಠ ವಸ್ತು.

ಹೊಸ ಆಧ್ಯಾತ್ಮಿಕ ಸ್ತರಗಳ ಅನ್ವೇಷಕನಾದ ಲೇಖಕ ತಾನು ಹುಟ್ಟು ಹಾಕಿದ ಸಿದ್ಧಾಂತಗಳ ಜೊತೆ ಜೊತೆಗೇ ಜಗತ್ತಿನ ಮಹಾನ್

ಯುಗ ಪ್ರವರ್ತಕ ಸಾಹಿತ್ಯ ಕೃತಿಗಳ ರಚನೆಯನ್ನು ಮಾಡುತ್ತಾ ಸಾಗ
ಬಲ್ಲ ಕಾಲ ನಮ್ಮ ಪಾಲಿಗೆ ದಕ್ಕುವ ಸಾಧ್ಯತೆ ಇದೆಯೆ ?—ಗೊತ್ತಿಲ್ಲ !

ಕಾರಣ, ಬೌದ್ಧಿಕತೆ ಎಂದರೆ, ದಾರ್ಶನಿಕ ಅನ್ವೇಷಣೆಗಳೆಂದರೆ ಓದುವುದು—ಅದರಲ್ಲೂ ಪಶ್ಚಿಮದ ಹೊತ್ತಿಗೆಗಳನ್ನು ಕಾಪಿ ಮಾಡುವುದು ಮಾತ್ರವಾಗಿದೆ ! ಮೂಲದಲ್ಲಿ ನಮ್ಮದೇ ಆದ ರಚನಾತ್ಮಕ ಚಿಂತನ ಶೀಲತೆಯ ಕ್ರಾಂತಿಯ ಸಾಧ್ಯತೆಯನ್ನು ಚಿಂತಿಸುವುದು ಹಾಗಿರಲಿ, ಕೇಳಿದರೆ ಸಾಕು ಬೆಚ್ಚಿ ಬೀಳುತ್ತಿದ್ದೇವೆ ; ದಿಗ್ಭ್ರಮೆಗೊಂಡು ತೆಪ್ಪಗಾಗಿ ಬಿಡುತ್ತಿದ್ದೇವೆ !

ನಮ್ಮ ಬರೆಯುವ ತೆವಲುಗಳನ್ನು ಡೂಪ್ಲಿಕೇಟ್‌ಗಳ ಸೃಷ್ಟಿಯಲ್ಲಿ ಸಂಪೂರ್ಣವಾಗಿ ತೀರಿಸಿಕೊಳ್ಳುತ್ತಿದ್ದೇನೆ. ಆದರೆ ಕಾಮೂ ಲೇಖನ ಕಲಾವಿದನಾಗಿ ಹೇಳಿಕೊಳ್ಳುವ ಮಾತು–

'ಸಾವು ಮತ್ತು ಲೇಖಕನ ಕೃತಿ : ಸಾಯುವ ಮುನ್ನ ಲೇಖಕನಿಗೆ ಅವನ ಕೃತಿಯನ್ನು ಓದಲಾಗುತ್ತದೆ. ಅವನು ಇನ್ನೂ ತಾನು ಹೇಳಬೇಕಾದನ್ನು ಹೇಳಿಯೇ ಇಲ್ಲ. ಅವನು ಆ ಕೃತಿಯನ್ನು ಸುಟ್ಟು ಬೂದಿ ಮಾಡಲು ಆಜ್ಞಾಪಿಸುತ್ತಾನೆ. ತನ್ನನ್ನು ಸಾಂತ್ವನಗೊಳಿಸುವಂತಹದ್ದು ಏನೂ ಇಲ್ಲವಾಗಿ ಹರಿದ ತಂತಿಯಂತೆ ಅವನ ಹೃದಯದಲ್ಲಿ ಚುಚ್ಚುತ್ತಿರುವ ಸ್ಥಿತಿಯಲ್ಲಿ ಸಾಯುತ್ತಾನೆ.'

–ನಮ್ಮಲ್ಲಿನ ಬಹಳ ಬಹಳ ಲೇಖಕರಿಗೆ ಬೇಡವಾದ ವಸ್ತುಸ್ಥಿತಿಯಾಗಿರುವುದೇ ಇದಕ್ಕೆ ಮೂಲ ಕಾರಣವಾಗಿದೆ.

*

ಕಾಮೂನ ಮಾತುಗಳಲ್ಲೇ ಈ ದೀರ್ಘವಾದ ಪ್ರಬಂಧವನ್ನು ಬರೆದು, ಅಸಂಗತ ಸಿದ್ಧಾಂತದ ಬಗ್ಗೆ ಇರುವ ಅರ್ಥಹೀನ 'ಮಿತ್'ಗಳನ್ನು ತೊಡೆಯಲೆತ್ನಿಸಿದ್ದೇನೆ ; ಹಾಗೂ ಅವನ ದುರಂತ ನಾಟಕ ರಚನಾತ್ಮಕ ಕ್ರಿಯೆಯ ಹಿನ್ನೆಲೆಯಲ್ಲಿರುವ ಭಾವನೆಗಳನ್ನು ಕನ್ನಡಿಗರಿಗೆ ಪರಿಚಯಿಸಲು ಪ್ರಯತ್ನಿಸಿದ್ದೇನೆ.

ಹಾಗೆಯೇ, ಉದ್ದುದ್ದನೆಯ 'ಮುನ್ನುಡಿಗಳನ್ನು ಕೊರೆಯುವ' ನನ್ನ ಶೀಟೆಗಳಿಗೂ ಒಂದು ಪರಿಹಾರವನ್ನು ತಂದುಕೊಂಡುಬಿಟ್ಟಿದ್ದೇನೆ:

ಇದರಿಂದಾಗಿ, ಈ ಶತಮಾನದ ಶ್ರೇಷ್ಠ ನಾಟಕಗಳಲ್ಲೇ ಅತಿ ಮುಖ್ಯವಾದ ಈ ಅಸಂಬದ್ಧ ನಾಟಕವನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಸುಲಭವಾದೀತೆಂದೂ ಆಶಿಸಿದ್ದೇನೆ!

* * *

ಇನ್ನು 'ಕ್ಯಾಲಿಗುಲ' ಭಾಷಾಂತರದ ಹಿನ್ನೆಲೆಯಾಗಿ ನಾನು ತಳೆದ ಧೋರಣೆಯನ್ನು ಕುರಿತು ಒಂದೆರಡು ಮಾತು ತೀರ ಅವಶ್ಯಕವೆಂದು ನನ್ನ ಭಾವನೆ:

ಯಾವುದೇ ಶ್ರೇಷ್ಠ ಕಲಾಕೃತಿಯ ಭಾಷಾಂತರ ಎಷ್ಟೇ ಸಮರ್ಥವಾಗಿದ್ದರೂ ಅದು ಮುಸುಕಿನ ಮರೆಯಲ್ಲಿ ಮಾತ್ರ ಆಸ್ವಾದಿತವಾದ ಚುಂಬನ! -ಎಂದಮೇಲೆ 'ಕ್ಯಾಲಿಗುಲ' ದಂತಹ ಅಸಂಬದ್ಧ ತಾತ್ವಿಕ ಅನ್ವೇಷಣೆಯ ದುರಂತ ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸಿಕೊಳ್ಳುವುದು ಅಷ್ಟೇ ಶ್ರೇಷ್ಠ ನಾಟಕದ ರಚನೆಗಿಂತಲೂ ಕಷ್ಟಸಾಧ್ಯವಾಗಿಬಿಡುವ ಹೊಣೆಗಾರಿಕೆ. ನಾಟಕ ಸಾಹಿತ್ಯವೇ ಅತಿ ವಿರಳವಾಗಿರುವ ಬೂಸಾ ಕನ್ನಡದಲ್ಲಿ ಆಧುನಿಕ ದುರಂತ ನಾಟಕ ರಚನೆಗೆ ಬೇಕಾಗುವ ಭಾಷೆಯನ್ನು ರೂಪಿಸುವ ಜವಾಬ್ದಾರಿ, ಅದರಲ್ಲೂ ಆಧುನಿಕ ಫ್ರೆಂಚ್ ನಾಟಕದ ಭಾಷಾಂತರ ಒಂದನ್ನು ಆಗುಮಾಡಿಕೊಳ್ಳುವುದು ನಿಜಕ್ಕೂ 'ಛಾಲೆಂಜಿಂಗ್'.

'ಕ್ಯಾಲಿಗುಲ' ಬಹಳಮಟ್ಟಿಗೆ ಮಾತುಗಳೇ ಪ್ರಧಾನವಾದ ಹಾಗೂ ತಾರ್ಕಿಕತೆಯ ಸೋಲೇ ಅನ್ವೇಷಣೆಯಾದ ನಾಟಕವಾಗಿದೆಯಾಗಿ, ಪದಗಳ ಪ್ರಯೋಗ ಗುರುತರವಾದ ಹೊಣೆಗಾರಿಕೆ ಬೇರೆ ಆಗಿದೆ. ನಾಟಕ'ಕ್ಯಾಲಿಗುಲ' ದಲ್ಲಿನ ಪಶ್ಚಿಮದ ವಾತಾವರಣವೂ ಈ ಪದಪ್ರಯೋಗಗಳಲ್ಲಿಯೇ ಬಹುಶೇಕವಾಗಿ ಮೂಡಿ ಬರಬೇಕಾದುದು ಅನಿವಾರ್ಯವಾದ ಸ್ಥಿತಿಯೂ ಆಗಿದೆ. ಇತ್ಯಾದಿ ಕಾರಣಗಳಿಂದಾಗಿ, ಪಾಶ್ಚಾತ್ಯ ದೊರೆ ತನ್ನ ಸಂಸ್ಕೃತಿಗೆ ಅನುಗುಣವಾಗಿ ತಾನು ಉಪಯೋಗಿಸಬಹುದಾದ ಕನ್ನಡ ಒಂದರಲ್ಲಿ ಈ ಭಾಷಾಂತರಕ್ಕೆ ಜನ್ಮ ಕೊಡಲು ಪ್ರಯತ್ನಿಸಲಾಗಿದೆ. ಆಧುನಿಕ ಕನ್ನಡವನ್ನು ರೂಪಿಸಿದ ಮಿಷನರಿಗಳ ಕನ್ನಡವನ್ನೇ ಬಳಸಿ, ಆ ಕನ್ನಡ ಆಂಗ್ಲೀಕೃತ ಕನ್ನಡವಾಗಿರುವಂತೆಯೇ ಕನ್ನಡದ ಜಾಯಮಾನಕ್ಕೆ ಎಷು

ಸಾಧ್ಯವೋ ಅಷ್ಟೂ ಒಗ್ಗಿ ಬಂದ ಕನ್ನಡವೂ ಆಗಿ ನಿಲ್ಲುವಂತೆ ನೋಡಿ ಕೊಳ್ಳಲಾಗಿದೆ. ನಾಟಕದ ಮೂಲ ಉದ್ದೇಶವೇ ದಾರ್ಶನಿಕ ಅನ್ವೇಷಣೆ ಯಾಗಿರುವುದರಿಂದ, ದರ್ಶನ ಶಾಸ್ತ್ರದ ತಾಂತ್ರಿಕ ಪದಗಳು ನಮ್ಮ ಮಟ್ಟಿಗೆ ಸಂಸ್ಕೃತ ಪದಗಳೇ ಆಗಿರುವುದರಿಂದ ಭಾಷಾಂತರವನ್ನು ಎಷ್ಟು ಸಾಧ್ಯವೋ ಅಷ್ಟೂ ಮಟ್ಟಿಗೆ ಸಂಸ್ಕೃತ ಭೂಯಿಷ್ಠವಾಗಿ ಮಾಡಿಕೊಳ್ಳಲಾಗಿದೆ. ಹಾಗೆಯೆ, ಚಕ್ರವರ್ತಿ ಬಳಸುವ ಭಾಷೆಯ ಗಾಂಭೀರ್ಯವನ್ನು ಗ್ರಾಂಥಿಕ ಭಾಷೆಯ ಮೂಲಕ ಕಾಪಾಡಿಕೊಳ್ಳುತ್ತಾ, ರೋಂ ಆಸ್ಥಾನದ ವಾತಾ ವರಣವನ್ನು ಕೆಲವೆಡೆ ನೇರ ಭಾಷಾಂತರಗಳ ಮೂಲಕ–ಅಂದರೆ, ಅದನ್ನು ಭಾರತೀಕರಣಗೊಳಿಸದ ರೀತಿಯಲ್ಲಿ ದಕ್ಕಿಸಿಕೊಳ್ಳಲು ಪ್ರಯತ್ನಿಸಿರು ವಂತೆಯೇ, ಕ್ಯಾಲಿಗುಲನ ಶೀಟೆ, ತಿಕ್ಕಲು, ತೆವಲು, ಉನ್ಮಾದ ಹಾಗೂ ಐಲು ತನಗಳಿಗೂ ಒಗ್ಗಿಸಿಕೊಳ್ಳಲು ಯೋಗ್ಯವೆನಿಸಿದ ಪ್ರಯತ್ನಗಳನ್ನೂ ಮಾಡಿ ಕೊಳ್ಳಲಾಗಿದೆ. 'ಇಂಗ್ಲಿಷ್ ಭಾಷಾಂತರ ಕರ್ಕಶವಾಗಿದೆ' ಎಂದು ಮೇಲಿಂದ ಮೇಲೆ ಹೇಳುತ್ತಾ ಬಂದ ಫ್ರೆಂಚ್ ಗೆಳೆಯನ ಸಹಾಯದಿಂದ, ಅರಿವಿಲ್ಲದ ಫ್ರೆಂಚ್ ಮೂಲದ ಮೃದುತ್ವವನ್ನೂ ಕಾಯ್ದುಕೊಳ್ಳಲು ಯತ್ನಿಸಿರು ವಂತೆಯೇ, ನಾಟಕದ ಸ್ಫೂರ್ತಿಮೂಲಕ್ಕೆ ಸರಿಹೊಂದಿಸಲು ಭಾಷಾಂತರ ವನ್ನು ಹಿತಮಿತವಾಗಿ ಕೆಲವೆಡೆ ಸೂಚ್ಯವಾಗಿಯೂ ಹಲವೆಡೆ ವಾಚ್ಯವಾ ಗಿಯೂ ಮಾಡಲಾಗಿದೆ—ಭಾಷೆಯ ಮೂಲಕವೇ ಬಹಳ ಮಟ್ಟಿಗೆ 'ಕ್ಯಾಲಿಗುಲ'ನ ಆಂತರಿಕ ನಿಜ ಸ್ವರೂಪವನ್ನು ಕಾಣಲೇಬೇಕಾದ ಮೂಲದ ಹೊಣೆಯೇ ಇದಕ್ಕೆ ನೇರವಾದ ಜವಾಬ್ದಾರಿಯೂ ಆಗಿದೆ!

ಆಧುನಿಕ ದುರಂತ ನಾಟಕಕ್ಕೆ ಬೇಕಾದ ಭಾಷೆಯನ್ನು ಕಾಮೂ ಪ್ರಯತ್ನ ಪೂರ್ವಕವಾಗಿ ತನ್ನ 'ಕ್ಯಾಲಿಗುಲ'ದ ಮೂಲಕ ಹಾಗೊಮ್ಮೆ ಆಗು ಮಾಡಿಕೊಂಡಿದ್ದರೆ ಕನ್ನಡಕ್ಕೂ ಅಂತಹದೇ ಒಂದು ಅವಕಾಶ ಈ ಭಾಷಾಂ ತರದಿಂದ ಕೂಡಿಬಂದಿರಬೇಕು ! ಹಾಗಾಗಿದ್ದರೆ ಅದಕ್ಕೆ ಕಾರಣ ಆಲ್ಬರ್ಟ್ ಕಾಮೂ ; ಹಾಗಾಗಿಲ್ಲವಾಗಿದ್ದರೆ ಅದಕ್ಕೆ ಕಾರಣ ಭಾಷಾಂತರಕಾರ !!

ಈ ನಾಟಕವನ್ನು ಪ್ರಯೋಗಿಸಬಯಸುವವರು ಭಾಷಾಂತರ ತನ್ನ ದ್ದಾಗಿಸಿಕೊಂಡಿರುವ ಭಾಷಾಪ್ರಯೋಗದಲ್ಲಿನ ತನ್ನತನವನ್ನು ಕಾಯ್ದು ಕೊಂಡು, ಕ್ರಿಶ್ಚಿಯನ್ ಕನ್ನಡಿಗರ ಉಚ್ಚಾರಣೆಯನ್ನೇ ಉಪಯೋಗಿಸುವುದ

ರಿಂದ ಮಾತ್ರ ಇಲ್ಲಿನ ಭಾಷೆ ತನ್ನ ಸಾರ್ಥಕತೆಯನ್ನು ಪಡೆಯಲಾದೀತೆಂದು ನನ್ನ ಅಚಲ ನಂಬಿಕೆ.

ಇಷ್ಟೆಲ್ಲಾ ಪ್ರಯತ್ನಗಳು ನಾಟಕದ ಮೊದಲ ಓದಿಗೆ ಕಂಡೂ ಕಾಣದಾಗಿಯೇ ಉಳಿದೂ ಗಂಭೀರ ಅಭ್ಯಾಸಕ್ಕೆ ತೊಡಗಿದಂತೆಲ್ಲಾ ನಿಚ್ಚಳ ವಾಗುತ್ತಾ ಹೋಗಿದ್ದರೆ ಆ ಎಲ್ಲಾ ಪ್ರಯತ್ನಗಳೂ ಸಾರ್ಥಕವಾಗುತ್ತಾ ಸಾಗಿದ್ದರೆ ಈ ಭಾಷಾಂತರ ನಿಜಕ್ಕೂ ಸಮರ್ಥವಾದುದೇ ಆಗಿ ಬಿಡುವ 'ಭಯವೂ' ಭಾಷಾಂತರಕಾರನಾದ ನನಗೆ ಇದೆ !

*

ಬರಹವೇ ನನ್ನ ಬದುಕಾಗಬೇಕೆಂದು ಹೋರಾಡುತ್ತಾ ಬಂದವನು ನಾನು; ಅಲ್ಲದೆ, ಮಾಮೂಲೀ ಜೀವನದೊಡನೆ ರಾಜಿಗೆ ಒಪ್ಪದೇ ಹೋದ ವನು ಬೇರೆ ! ಆದರಿಂದಾಗಿ, ಎದುರಿಸಲೇ ಬೇಕಾಗಿಬಿಟ್ಟ ಸಮಸ್ಯೆಗಳಿಗೆ ಇತಿಮಿತಿ ಇಲ್ಲವಾಯಿತು – ಸಾವನ್ನು ಗೆಲ್ಲುವುದರಿಂದ ಹಿಡಿದು, ಅಂತ್ಯವರಿ ಯದ ಉಪವಾಸಾದಿಗಳನ್ನು, ವ್ಯವಸ್ಥೆಯಿಂದ ಅನ್ಯವಾದ ಹಿಪ್ಪೀ ಬಾಳನ್ನು ಪ್ರೀತಿಯಿಂದ ಭರಿಸಲೂ ಬೇಕಾಯಿತು. ಇಂತಹ ವೈಪರೀತ್ಯಗಳ ನಡು ವೆಯೂ ಬಾಳು ಪಶ್ಚಾತ್ತಾಪಗಳಿಂದ ಮುಕ್ತವಾಗುವಂತೆ ಮಾಡಿದವರೆಂದರೆ ದೇಶ ವಿದೇಶಗಳಾದ್ಯಂತ ಹಬ್ಬಿ ಹರಡಿ ಹೋಗಿರುವ ನನ್ನ ಮಿತ್ರರು ಮತ್ತು ಓದುಗ ಗೆಳೆಯ–ಗೆಳತಿಯರು. ಅವರು ತಮ್ಮ ಅಭಿಮಾನಾದಿಗಳಿಂದ ಈ ಬದುಕಿನತ್ತ ನುಗ್ಗಿ, ಈ ಯಃಕಶ್ಚಿತನ ಬದುಕನ್ನು ತಮ್ಮದಾಗಿ ಅಪ್ಪದೇ ಹೋಗಿದ್ದರೆ,ಈ ಜೀವ ಎಂದೋ ಬಾಡಿ ಹೋಗಿಬಿಡುತ್ತಿತ್ತು. ಆರ್ಥಿಕ ಹಾಗೂ ಆಧ್ಯಾತ್ಮಿಕ ಕಾರಣಗಳಿಂದಾಗಿ ನಾನು ತೊಟ್ಟ ದೀರ್ಘಾವಧಿಯ ಲೇಖನ ಸಂನ್ಯಾಸವನ್ನು ಅವರು ಪ್ರೀತಿಯಿಂದ ಮನ್ನಿಸಿದರಲ್ಲದೆ-ಅವರೆಲ್ಲರ ಅಖಂಡ ಪ್ರೇಮ, ಆತ್ಮೀಯತೆ ಹಾಗೂ ವಿಚಾರ ವಿನಿಮಯಾದಿಗಳ ಸತತ ಹೊಡೆತ ಬಡಿತಗಳ ಕಾಟ ಈ ಬಾಳಿಗೆ ಇಲ್ಲವಾಗಿದ್ದರೆ ನನ್ನಲ್ಲಿ ಇಂದು ಎಂದಿಗಿಂತಲೂ ಹೆಚ್ಚು ಜೀವಂತವಾಗಿರುವ ಬೌದ್ಧಿಕ ಧೀ ಹಾಗೂ ಆಧ್ಯಾತ್ಮಿಕ ಚೇತನಗಳ ಸತತ ಅನ್ವೇಷಣೆ ಇಲ್ಲವಾಗಿಯೇ ಬಿಡುತ್ತಿತ್ತು!!


ಈ ಭಾಷಾಂತರಕ್ಕೂ ಒಂದಲ್ಲ ಹಲವು ರೀತಿಯಲ್ಲಿ ಆ ಮಿತ್ರರೆ
ಕಾರಣಕರ್ತರು !

ಮತ್ತೆ ನಾನೀಗ ನನ್ನ ಬರಹದ ಜಗತ್ತಿಗೆ ಬಹಳ ಕಾಲದ ನಂತ
ಮರಳುತ್ತಿದ್ದೇನೆ–ನನ್ನ ಬರೆದು ಗೆದ್ದಲು ಮೇಯುತ್ತಿರುವ, ಬರೆಯುತ್ತಿ
ರುವ ಹಾಗೆಯೇ ಬರೆಯಬೇಕೆಂದುಕೊಂಡಿರುವ ಕೃತಿಗಳ ಪ್ರಕಟನೆ ಆ ವ
ಪ್ರೀತಿ ಹಾಗೂ ಅಭಿಮಾನದ ಪ್ರತಿಬಿಂಬ ಮಾತ್ರವಾಗಿ ಹೊರಬೀಳಬೇಕು

....ಎಂದಿನಂತೆ ಆ ಎಲ್ಲ ಮಿತ್ರರ ಹಾಗೂ ಓದುಗ ಗೆಳೆಯ-ಗೆಳ
ಯರ ವಿಮರ್ಶಾತ್ಮಕವಾದ ಪ್ರತಿಕ್ರಿಯೆಗಳಿಗೆ, ಜೀವಂತವಾದ ವಿಚಾರ-
ವಿನಿಮಯಾದಿಗಳಿಗೆ ಆತ್ಮೀಯವಾದ ಸಂಪರ್ಕಕ್ಕೆ ಭವ್ಯವಾದ ಸ್ವಾಗತ
ಇಂದೂ ಕಾದಿದೆ....

— ರೂಪರಾಜ್, ಎಂ. ಎಸ್.

ಅಸಿದ್ಧರ ಸಿದ್ಧಾಯಣ



ಕ್ಯಾಲಿಗುಲ

... if his integrity consists in his denial of the gods, his fault is to be found in his denial of men. One cannot destroy everything without destroying oneself. This is why Caligula depopulates the world around him and then, in keeping with his own logic, does what is necessary to arm against himself those who will ultimately kill him. Caligula's story is that of a high-minded type of suicide. It is an account of the most human and most tragic of mistakes. Caligula is faithless towards humanity in order to keep faith with himself. He consents to die, having learned that no man can save himself alone and that one cannot be free by working against mankind. But at least he will have rescued some souls, including his own and that of his friend Scipio, from the dreamless sleep of mediocrity.

— ALBERT CAMUS

ಪಾತ್ರವರ್ಗ

ಕ್ಯಾಲಿಗುಲ :

ರೋಮ್ ಚಕ್ರಾಧಿಪತಿ, ಇಪ್ಪತ್ತೈದರಿಂದ ಇಪ್ಪತ್ತೊಂಬತ್ತು ವರ್ಷ.

ಕೆಸೋನಿಯಾ :

ಕ್ಯಾಲಿಗುಲನ ನಲ್ಲೆ, ಮೂವತ್ತು ವರ್ಷ.

ಹೆಲಿಕಾನ್ :

ಕ್ಯಾಲಿಗುಲನ ಆಪ್ತ, ಮೂವತ್ತು ವರ್ಷ.

ಸಿಪಿಯೋ :

ಕವಿ, ಹದಿನೇಳು ವರ್ಷ.

ಚೆರಿಯಾ :

ಕ್ಯಾಲಿಗುಲನ ವಿರೋಧಿ, ಮೂವತ್ತು ವರ್ಷ.

ವೃದ್ಧ ಆಸ್ಥಾನಿಕ :

ಎಪ್ಪತ್ತೊಂದು ವರ್ಷ.

ಮೆರಿಯಾ :

ಅರವತ್ತು ವರ್ಷ.

ಮ್ಯೂಸಿಯಸ್ :

ಮೂವತ್ತ ಮೂರು ವರ್ಷ.

ಸರದಾರ :

ಐವತ್ತು ವರ್ಷ.

ಮೊದಲನೆಯ, ಎರಡನೆಯ ಮತ್ತು ಮೂರನೆಯ ಆಸ್ಥಾನಿಕ :

ನಲವತ್ತರಿಂದ ಅರವತ್ತು ವರ್ಷ.

... * ಲೆಪಿಡಸ್ * ಮೆಟಲಸ್ * ಆಕ್ಟೇವಿಯಸ್ * ಪೆಟ್ರೋಷಿಯಸ್...

...ಸರದಾರರು, ಪಹರೆಯವರು, ಪರಿಚಾರಕರು, ಅಂಗರಕ್ಷಕರು, ಕವಿಗಳು, ವಾದ್ಯಗಾರರು, ಯೋಧರು, ಗುಲಾಮರು, ಪೌರರು, ಬೇಹುಗಾರರು, ಪಾರುಪತ್ತೆದಾರರು, ದೂತರು ಮತ್ತು ಇತರರು....

ಅಂಕ ಒಂದು, ಮೂರು ಮತ್ತು ನಾಲ್ಕು :

ಸಾರ್ವಭೌಮ ಅರಮನೆಯಲ್ಲಿನ ಅತಿಥಿಗೃಹ ಆಳೆತ್ತರದ ನಿಲುಗನ್ನಡಿ,
ಕರೆ ಜಾಗಟೆ ಮತ್ತು ಒರಗು ಮಂಚದಿಂದ ಅಲಂಕೃತವಾಗಿದೆ.

ಅಂಕ ಎರಡು :

ಚೆರಿಯಾನ ಔತಣ ಗೃಹ

ಅಂಕ ಒಂದು

(ಹಲವಾರು ಆಸ್ಥಾನಿಕರು – ಅವರಲ್ಲಿ ಒಬ್ಬ ಅತಿ ವೃದ್ಧ – ಅರಮನೆಯ ಅತಿಥಿ ಗೃಹದಲ್ಲಿ ಸಭೆ ಸೇರಿದ್ದಾರೆ. ಅವರೆಲ್ಲರೂ ಭೀತರಾಗಿದ್ದಾರೆ.)

ಮೊದಲ ಆಸ್ಥಾನಿಕ : ಇನ್ನೂ ಸುದ್ದಿಯೇ ಇಲ್ಲ.

ವೃದ್ಧ ಆಸ್ಥಾನಿಕ : ರಾತ್ರಿಯೂ ಇಲ್ಲ, ಬೆಳಗ್ಗೆಯೂ ಇಲ್ಲ.

ಎರಡನೆ ಆಸ್ಥಾನಿಕ : ಮೂರು ದಿನಗಳಾದರೂ ಸುದ್ದಿಯೇ ಇಲ್ಲ— ನಿಜಕ್ಕೂ ವಿಚಿತ್ರ.

ವೃದ್ಧ ಆಸ್ಥಾನಿಕ : ನಮ್ಮ ದೂತರು ಹೋಗುವವರು ಹೋಗುತ್ತಿರುತ್ತಾರೆ ; ಬರುವವರು ಬರುತ್ತಿರುತ್ತಾರೆ : ಸಾಲದಿದ್ದುದಕ್ಕೆ ಅವರು ಯಾವಾಗಲೂ ತಲೆ ಆಡಿಸಿ 'ಏನೂ ಇಲ್ಲ' ಎನ್ನುತ್ತಿರುತ್ತಾರೆ.

ಎರಡನೆ ಆಸ್ಥಾನಿಕ : ಅವರುಗಳು ಇಡೀ ಕಾಡುಮೇಡುನಾಡನ್ನೆಲ್ಲಾ ಜಾಲಾಡಿಯಾಗಿದೆ– ಇನ್ನೇನು ತಾನೆ ಮಾಡಲಾದೀತು ?

ಮೊದಲನೆ ಆಸ್ಥಾನಿಕ : ಕಾಯುತ್ತಿರಬಹುದು ನಾವು—ಅಷ್ಟೇ. ತೊಂದರೆಯನ್ನು ಮಧ್ಯದಲ್ಲೇ ಎದುರಿಸೋಣವೆಂದರೆ ಅದರಿಂದ ಏನೂ ಪ್ರಯೋಜನವಿಲ್ಲವಲ್ಲ. ಪ್ರಾಯಶಃ, ಅವನು ನಮ್ಮನ್ನು ಬಿಟ್ಟು ಹೋದಷ್ಟೇ ಅನಿರೀಕ್ಷಿತವಾಗಿ ಹಿಂದಿರುಗಲೂಬಹುದು.

ವೃದ್ಧ ಆಸ್ಥಾನಿಕ : ಅವನು ಅರಮನೆಯನ್ನು ಬಿಟ್ಟು ಹೊರಟಾಗ ಅವನ

ಕಣ್ಣುಗಳಲ್ಲಿ ಎಂಥದೋ ವಿಚಿತ್ರ ದೃಷ್ಟಿಯಿದ್ದುದನ್ನು ನಾನು ಕಂಡೆ.

ಮೊದಲ ಆಸ್ಥಾನಿಕ : ಹೌದು— ನಾನೂ ಕಂಡೆ ; ಸಾಲದಿದ್ದುದಕ್ಕೆ 'ಏನಾಗಿದೆ' ಎಂದು ಕೇಳಿಯೂ ಬಿಟ್ಟೆ.

ಎರಡನೆ ಆಸ್ಥಾನಿಕ : ಅವನು ಉತ್ತರಿಸಿದನೆ ?

ಮೊದಲ ಆಸ್ಥಾನಿಕ : ಒಂದೇ ಮಾತು– 'ಏನೂ ಇಲ್ಲ'.

(ಸ್ವಲ್ಪ ಕಾಲ ನೀರವತೆ. ಹೆಲಿಕಾನ್ ಈರುಳ್ಳಿ ಅಗಿಯುತ್ತಾ ಪ್ರವೇಶಿಸುತ್ತಾನೆ.)

ಎರಡನೆ ಆಸ್ಥಾನಿಕ : (ಅದೇ ಹೆದರಿದ ಧ್ವನಿಯಲ್ಲಿ) ಎಲ್ಲಾ ಶೀರ ಕಸಿವಿಸಿಯಾಗಿದೆ.

ಮೊದಲ ಆಸ್ಥಾನಿಕ : ಹೋ, ಬಿಡು ! ಬಿಡು ! ವಯಸ್ಸಿಗೆ ಬಂದವರೆಲ್ಲಾ ಹೀಗೇನೆ.

ವೃದ್ಧ ಆಸ್ಥಾನಿಕ : ನೀನು ಹೇಳುತ್ತಿರುವುದೇ ಸರಿ—ವಯಸ್ಸಿಗೆ ಬಂದವರು ಎಲ್ಲವನ್ನೂ ಅತಿಅತಿಯಾಗಿ ಹಚ್ಚಿಕೊಂಡು ಬಿಡುತ್ತಾರೆ. ಆದರೆ, ಕಾಲ ಎಲ್ಲವನ್ನೂ ಸರಿಗಟ್ಟಬಿಡುತ್ತದೆ.

ಎರಡನೆ ಆಸ್ಥಾನಿಕ : ನಿಜಕ್ಕೂ ನಿನಗೆ ಹಾಗನಿಸುತ್ತದೆಯೆ ?

ವೃದ್ಧ ಆಸ್ಥಾನಿಕ : ಮತ್ತಿನ್ನೇನು ?–ಸತ್ತ ಒಂದು ಹುಡುಗಿಗೆ ಬದಲಾಗಿ ಜೀವಂತವಾಗಿರುವ ಹುಡುಗಿಯರು ಡಜನ್ ಗಟ್ಟಲೆಯಲ್ಲಿದ್ದಾರೆ.

ಹೆಲಿಕಾನ್ : ಆ್ಞ ?—ಹಾಗಾದರೆ ಇದರ ಹಿನ್ನೆಲೆಯಲ್ಲಿ ಒಂದು ಹುಡುಗಿ ಇದ್ದಾಳೆ ಎನ್ನುವಿರಾ ?

ಮೊದಲ ಆಸ್ಥಾನಿಕ : ಇನ್ನೇನು ತಾನೆ ಇರಲು ಸಾಧ್ಯ ? ಅಂತೂ ಪುಣ್ಯ ಅಂದರೆ ಇದೇ !—ದುಃಖ ಶಾಶ್ವತವಲ್ಲ. ನೋಡಿ, ನಮ್ಮಲ್ಲಿ ಯಾರಾದರೂ ಸತ್ತವರನ್ನು ನೆನೆದು ವರ್ಷದಾದ್ಯಂತಕ್ಕೂ ಮೀರಿ ದುಃಖಿಸಬಲ್ಲವರಿದ್ದಾರೇನು ?

ಎರಡನೆ ಆಸ್ಥಾನಿಕ : ನನ್ನಿಂದಂತೂ ಸಾಧ್ಯವಿಲ್ಲ.

ಮೊದಲ ಆಸ್ಥಾನಿಕ : ಯಾರಿಂದಲೂ ಅದು ಸಾಧ್ಯವಾಗುವುದಿಲ್ಲ.

ವೃದ್ಧ ಆಸ್ಥಾನಿಕ : ಅದು ಹಾಗೆ ಸಾಧ್ಯವಿದ್ದಿದ್ದರೆ ಬದುಕೇ ಅಸಹನೀಯವಾಗಿ ಬಿಡುತ್ತಿತ್ತು.

ಮೊದಲ ಆಸ್ಥಾನಿಕ : ಖಂಡಿತ ; ನನ್ನ ವಿಚಾರವನ್ನೇ ತೆಗೆದುಕೊಳ್ಳಿ– ಹೋದ ವರ್ಷ ನಾನು ನನ್ನ ಹೆಂಡತಿಯನ್ನು ಕಳೆದುಕೊಂಡೆ. ಎಷ್ಟು ಬೇಕೋ ಅಷ್ಟು ಅತ್ತೆ ; ಮತ್ತೆ ಹಾಗೆಯೇ ಮರೆತೂ ಬಿಟ್ಟೆ. ಈಗಲೂ ಒಮ್ಮೊಮ್ಮೆ ಆ ದುಃಖ ಒತ್ತಿಕೊಂಡು ಬರುತ್ತದೆ. ಆದರೆ, ಪುಣ್ಯಕ್ಕೆ ಈ ದುಃಖ ಅಸಹನೀಯವಲ್ಲ.

ವೃದ್ಧ ಆಸ್ಥಾನಿಕ : ಹೌದು, ಕಾಲ ಎಂಥದನ್ನೂ ಮಾಯಿಸಿಬಿಡುತ್ತದೆ.

(ಚೆರಿಯಾನ ಪ್ರವೇಶ)

ಮೊದಲ ಆಸ್ಥಾನಿಕ : ಏನಾದರೂ........?

ಚೆರಿಯಾ : ಇನ್ನೂ ಏನೂ ಇಲ್ಲ.

ಹೆಲಿಕಾನ್ : ಬಿಡಿ, ಸನ್ಮಾನ್ಯರೇ !—ಗಾಬರಿ ಪಡುವ ಅವಶ್ಯಕತೆ ಯೇನೂ ಇಲ್ಲ.

ಮೊದಲ ಆಸ್ಥಾನಿಕ : ನನಗೂ ಹಾಗೆಯೇ ಅನ್ನಿಸುತ್ತಿದೆ.

ಹೆಲಿಕಾನ್ : ಸುಮ್ಮನೇ ಯೋಚಿಸುತ್ತಿರುವುದರಿಂದ ಏನನ್ನೂ ಸರಿಪಡಿಸ ಲಾಗುವುದಿಲ್ಲ—ಮತ್ತೆ ಈಗ ಊಟದ ಹೊತ್ತು ಬೇರೆ.

ವೃದ್ಧ ಆಸ್ಥಾನಿಕ : ಅದು ಸರಿ—ಅಲ್ಲದೆ, ನೆರಳಿಗೆ ಮಿಗವನ್ನು ನಾವು ಹಾಕಲೇಬಾರದು.

ಚೆರಿಯಾ : ಎಂಥದೋ ಅನಿಷ್ಟ ತುಂಬಿಕೊಂಡು ಬಿಟ್ಟಿದೆ. ಆದರೆ.... ಆಗ ಎಲ್ಲ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿತ್ತು. ಚಕ್ರವರ್ತಿಯಾಗಿ ಆತ ಸ್ವಯಂ ಪರಿಪೂರ್ಣನಾಗಿದ್ದ.

ಎರಡನೆ ಆಸ್ಥಾನಿಕ : ನಿಜ – ನಾವು ಬಯಸುವ ಚಕ್ರವರ್ತಿ ತಾನೇ ಅವನಾಗಿದ್ದ. ಪ್ರಜ್ಞಾವಂತ, ಆದರೆ ಅನನುಭವಿ.

ಮೊದಲ ಆಸ್ಥಾನಿಕ : ಅಯ್ಯೋ–ನಿಮಗೇನಾಗಿದೆ? ನಿಮ್ಮ ಈ ಎಲ್ಲಾ ತೊಳಲಾಟಕ್ಕೆ ಕಾರಣವೇ ಇಲ್ಲ. ಅವನು ಬದಲಾಗಬಲ್ಲನೆಂದು ಕೊಳ್ಳಲು ನಮಗೆ ಆಧಾರವೇ ಇಲ್ಲ. ಅವನು ಡ್ರುಸಿಲ್ಲಾಳನ್ನು ಪ್ರೇಮಿ ಸಿದನೆಂದೇ ಇಟ್ಟುಕೊಳ್ಳೋಣ; ಅದು ತೀರ ಸಹಜ–ಎಷ್ಟೇ ಆದರೂ ಆಕೆ ಅವನ ಸೋದರಿ. ಅಥವಾ ಅವರಿಬ್ಬರ ಪ್ರೀತಿ ಸೋದರತ್ವದ

ಎಲ್ಲೆ ಮೀರಿದ್ದು ದೆಂದೇ ಇಟ್ಟುಕೊಳ್ಳೋಣ-ಅದು ಸಾಕಷ್ಟು ಮನಃ
ಘಾತದ ವಿಚಾರವೇ, ಒಪ್ಪಿಕೊಳ್ಳುತ್ತೇನೆ. ಆದರೆ, ಈ ಹುಡುಗಿ ಸ
ಳೆನ್ನುವಷ್ಟೇ ವಿಚಾರ ಇಡೀ ರೋಮ್ ನಗರವನ್ನೇ ತಳಮಳಕ್ಕೀ
ಮಾಡುವಷ್ಟು ದೂರ....ತುಂಬಾ ದೂರ....ಹೋಗಿಬಿಡುತ್ತಿದೆ.

ಚೆರಿಯಾ : ಇರಬಹುದು – ಆದರೆ, ನಾನು ಮೊದಲೇ ಹೇಳಿದಂ
ಎಂಥದೋ ಅನಿಷ್ಟ ತುಂಬಿಕೊಂಡುಬಿಟ್ಟಿದೆ. ಅವನ ಈ ಪಲಾಯ
ಸೂತ್ರಪಠಣ ನನ್ನನ್ನು ಬಡಿದೆಬ್ಬಿಸುತ್ತಿದೆ.

ವೃದ್ಧ ಆಸ್ಥಾನಿಕ : ಹೌದು – ಬೆಂಕಿ ಇಲ್ಲದೆ ಹೊಗೆಯಾಡುವುದ
ಸಾಧ್ಯವಾಗುವುದೇ ಇಲ್ಲ.

ಮೊದಲ ಆಸ್ಥಾನಿಕ : ಏನೇ ಇರಲಿ, ದೇಶದ ಹಿತದೃಷ್ಟಿಯಿಂದ ತನ
ಈ ಶೋಚನೀಯ ಸಂಬಂಧವನ್ನು ಅವನು ಸಾರ್ವಜನಿಕ ದುರಂ
ವನ್ನಾಗಿ ಮಾಡದಿದ್ದರೆ ಸಾಕು. ಇಂತಹವು ನಿಸ್ಸಂದೇಹವಾ
ಆಗಿಂದಾಗ್ಗೆ ಆಗುತ್ತಲೇ ಇರುತ್ತವೆ; ಆದರೆ, ಇವುಗಳ ಬಗ್ಗೆ ನಾವ
ಎಷ್ಟು ಕಮ್ಮಿ ಮಾತನಾಡುತ್ತೇವೋ ಅಷ್ಟೂ ಒಳ್ಳೆಯದೇ.

ಹೆಲಿಕಾನ್ : ಈ ಎಲ್ಲ ಸಂಕಷ್ಟಗಳಿಗೂ ಡ್ರುಸಿಲ್ಲಾಳೇ ಕಾರಣಳೆಂದ
ಹೇಗೆ ತಾನೆ ಖಚಿತಪಡಿಸಬಲ್ಲಿರಿ ?

ಎರಡನೆ ಆಸ್ಥಾನಿಕ : ಆಕೆಯಲ್ಲದೆ ಮತ್ತೆ ಇನ್ನು ಯಾರು ?

ಹೆಲಿಕಾನ್ : ಇನ್ನು ಯಾರೂ ಅಲ್ಲವೇ ಅಲ್ಲ–ಬಹಳ ಮಟ್ಟಿಗೆ. ಆರಿ
ಕೊಳ್ಳುವುದಕ್ಕೆಂದೇ ಸಾಕಷ್ಟು ವಿವರಣೆಗಳಿರುವಾಗ, ತೀರ ಅಪ
ಹಾರ್ಯವಾದ ಆದರೆ ಮೂರ್ಖವಾದುದನ್ನೇ ಏಕೆ ಆರಿಸಿಕೊ
ಬೇಕು ?

(ಸಿಪಿಯೋ ಪ್ರವೇಶಿಸುತ್ತಾನೆ. ಅವನತ್ತ ಚೆರಿಯಾ ಹೋಗುತ್ತಾನೆ.)

ಚೆರಿಯಾ : ಏನಾದರೂ ಸಮಾಚಾರ ?

ಸಿಪಿಯೋ : ಇನ್ನೂ ಏನೂ ಇಲ್ಲ – ರೋಮ್‌ಗೆ ಸಮೀಪದಲ್ಲೆಲ್ಲೋ
ಬಿರುಗಾಳಿಯ ಮಧ್ಯೆ ಚಕ್ರವರ್ತಿ ನುಗ್ಗಿ ಹೋಗುತ್ತಿರುವಂತೆ ಕೆಲ
ರೈತರು ಕಂಡರೆಂದು ಹೇಳುವುದನ್ನು ಬಿಟ್ಟರೆ ಏನೂ ಸಮಾಚಾರವಿಲ್ಲ

(ಚೆರಿಯಾ ಆಸ್ಥಾನಿಕರತ್ತ ಬರುತ್ತಾನೆ. ಸಿಪಿಯೋ ಅವನನ್ನು ಹಿಂಬಾಲಿಸುತ್ತಾನೆ.)

ಚೆರಿಯಾ : ....ಅಲ್ಲಿಗೆ ಮೂರು ದಿನಗಳು ಆದ ಹಾಗೆ ಆಯಿತು– ಅಲ್ಲವೇ ಸಿಪಿಯೋ ?

ಸಿಪಿಯೋ : ನಿಜ........ನಾನು ಆ ದಿನ ಅಲ್ಲೇ ಇದ್ದೆ – ಎಂದಿನಂತೆ ಅವನ ನೆರಳಾಗಿ. ಅವನು ಡ್ರುಸಿಲ್ಲಾಳ ಶವದ ಸಮೀಪಕ್ಕೆ ಹೋದ– ಹೋಗಿ, ಎರಡು ಬೆರಳಿಂದ ಅವಳ ಶರೀರವನ್ನು ತಟ್ಟುತ್ತಾ ತಟ್ಟುತ್ತಾ ಚಿಂತೆಯಲ್ಲೇ ಕಳೆದುಹೋಗಿ ಬಿಟ್ಟ ಹಾಗೆ ಕಂಡ. ಬಹಳ ಕಾಲದ ಮೇಲೆ ಅತ್ತಿತ್ತ ತೂರಾಡುತ್ತಾ ಎದ್ದು ಹಾಗೆಯೇ ಸೌಮ್ಯವಾದ ಹೆಜ್ಜೆಗಳನ್ನಿಡುತ್ತಾ ಎತ್ತಲೋ ಹೋಗಿ ಬಿಟ್ಟ........ಅಂದಿನಿಂದಲೂ ನಾವು ಅವನಿಗಾಗಿ ಹುಡುಕಾಡುತ್ತಿದ್ದೇವೆ, ವ್ಯರ್ಥವಾಗಿ.

ಚೆರಿಯಾ : (ತಲೆಯಾಡಿಸುತ್ತಾ) ಈ ಕಿರಿಯ ಚಕ್ರವರ್ತಿಗೆ ಸಾಹಿತ್ಯವೆಂದರೆ ವಿಪರೀತವಾದ ಹುಚ್ಚು.

ಎರಡನೆ ಆಸ್ಥಾನಿಕ : ಓಹ್ ! ನಿಮಗೇ ಗೊತ್ತಲ್ಲ – ಅವನ ವಯಸ್ಸಿನಲ್ಲಿ ಸಹಜವಾಗಿ ಯಾರಿಗೇ ಆದರೂ........

ಚೆರಿಯಾ : ಪ್ರಾಯಶಃ ಅದು ಅವನ ವಯಸ್ಸಿಗೆ ಒಪ್ಪಬಹುದು ; ಆದರೆ ಅವನ ಸ್ಥಾನಮಾನಕ್ಕಲ್ಲ : ಕಲಾತ್ಮಕ ಚಕ್ರವರ್ತಿ ಒಂದು ರೀತಿಯ ವಿರೋಧಾಭಾಸ. ಅಂಥವರು ಒಬ್ಬಿಬ್ಬರು ನಮ್ಮಲ್ಲಿದ್ದರೆಂದು ಒಪ್ಪಿಕೊಳ್ಳುತ್ತೇನೆ – ಎಂಥ ಶ್ರೇಷ್ಠ ಸಾಮ್ರಾಜ್ಯಗಳಲ್ಲೂ ನಾಲಾಯಕ್ಕಾದ ಚಕ್ರಾಧಿಪತಿಗಳು ಆಗಿಹೋಗಿದ್ದಾರೆ. ಆದರೆ, ಅವರುಗಳಿಗೆ ತಾವು ಸಾರ್ವಜನಿಕ ಸೇವಕರೆನ್ನುವ ನಿಜಪ್ರಜ್ಞೆ ಇತ್ತು.

ಮೊದಲ ಆಸ್ಥಾನಿಕ : ಅದರಿಂದಾಗಿಯೇ ಸಮಸ್ತವೂ ಹೆಚ್ಚು ಸುಸೂತ್ರವಾಗಿ ಸಾಗುವಂತಾಗುತ್ತಿತ್ತು.

ವೃದ್ಧ ಆಸ್ಥಾನಿಕ : ಒಬ್ಬ ವ್ಯಕ್ತಿಗೆ ಒಂದು ಉದ್ಯೋಗ – ವ್ಯವಸ್ಥೆ ಇರಲೇಬೇಕಾದುದು ಹೀಗೆ.

ಸಿಪಿಯೋ : ಚೆರಿಯಾ, ನಾವೇನುತಾನೆ ಮಾಡಬಲ್ಲೆವು ?

ಚೆರಿಯಾ : ಏನೂ ಇಲ್ಲ ......

ಎರಡನೆ ಆಸ್ಥಾನಿಕ : ಕಾಯುತ್ತಾ ಇರಬಲ್ಲೆವು, ಅಷ್ಟೇ. ಹಾಗೊಮ್ಮೆ ಅವನು ಹಿಂದಿರುಗದೇ ಹೋದಪಕ್ಷದಲ್ಲಿ ಉತ್ತರಾಧಿಕಾರಿಯನ್ನು ಹುಡುಕಬೇಕಾಗುತ್ತದೆ. ನಮ್ಮಲ್ಲೇ ಯಾರಾದರೂ ಆಗಬಹುದು ಎನ್ನುವುದಾದರೆ ಅಭ್ಯರ್ಥಿಗಳಿಗೆ ಕೊರತೆ ಏನೂ ಇಲ್ಲ.

ಮೊದಲ ಆಸ್ಥಾನಿಕ : ಇದೆ – ಸರಿಯಾದ ಅಭ್ಯರ್ಥಿಗಳಿಗೆ ಕೊರತೆ ಇದ್ದೇ ಇದೆ.

ಚೆರಿಯಾ : ವಿಕಾರಚಿತ್ತನಾಗಿ ಅವನು ಹಿಂದಿರುಗಿದ್ದೇ ಆದರೆ ?

ಮೊದಲ ಆಸ್ಥಾನಿಕ : ಓಹ್, ಅವನಿನ್ನೂ ಹುಡುಹುಡುಗು : ಪೂರ್ವಾಪರ ವಿವೇಚನೆ ಅವನ ದೃಷ್ಟಿಗೆ ಗೋಚರಿಸುವಂತೆ ನಾವು ಮಾಡಬಲ್ಲೆವು.

ಚೆರಿಯಾ : ಪೂರ್ವಾಪರ ವಿವೇಚನೆ ಅವನ ದೃಷ್ಟಿಯಿಂದ ಅಗೋಚರವಾಗಿಯೇ ಉಳಿದುಬಿಟ್ಟರೆ ಆಗೇನು ಮಾಡುವಿರಿ ?

ಮೊದಲ ಆಸ್ಥಾನಿಕ : (ನಗುತ್ತಾ) ಹಾಗೇನಾದರೂ ಆಗಿಬಿಟ್ಟರೆ, ನಾನು ಹಿಂದೊಮ್ಮೆ ಕ್ರಾಂತಿಯ ಸಂಹಿತೆಯೊಂದನ್ನು ಬರೆದಿಟ್ಟದ್ದೇನೆ ಎನ್ನುವುದು ನಿನಗೆ ನೆನಪಿದೆ ತಾನೆ – ಅದರಲ್ಲಿ ಬೇಕಾದ ಕಾಯಿದೆ ಕಟ್ಟಲೆಗಳೆಲ್ಲಾ ನಮೂದಿತವಾಗಿದೆ.

ಚೆರಿಯಾ : ಅಂತಹ ಪರಿಸ್ಥಿತಿ ಬಂದಾಗ ಅದನ್ನು ನೋಡಿದರಾಯಿತು– ಅಲ್ಲಿಯವರೆಗೆ ನನ್ನದೇ ಆದ ಪುಸ್ತಕಗಳು ನನಗೆ ಇದ್ದೇ ಇವೆ.

ಸಿಪಿಯೋ : ನೀವು ಕ್ಷಮಿಸಬಲ್ಲಿರಾದರೆ ......(ಹೊರಗೆ ಹೋಗುತ್ತಾನೆ).

ಚೆರಿಯಾ : ಇವನಿಗೆ ತನಗೇ ಅಪಮಾನವಾದಂತೆ ಆಗಿದೆ.

ವೃದ್ಧ ಆಸ್ಥಾನಿಕ : ಸಿಪಿಯೋ ಇನ್ನೂ ಚಿಕ್ಕವನು. ಅಲ್ಲದೆ, ಚಿಕ್ಕವರು ಯಾವಾಗಲೂ ಪರಸ್ಪರ ಅಂಟಿಕೊಂಡಿರುತ್ತಾರೆ.

ಹೆಲಿಕಾನ್ : ಸಿಪಿಯೋ ಹೇಗೂ ಲೆಖ್ಖಕ್ಕಿಲ್ಲವಲ್ಲ.......

(ಸಾರ್ವಭೌಮನ ಅಂಗರಕ್ಷಕನೊಬ್ಬ ಪ್ರವೇಶಿಸುತ್ತಾನೆ.)

ಅಂಗರಕ್ಷಕ : ಕ್ಯಾಲಿಗುಲ ಹಿಂದಿರುಗಿ ಬಂದು, ಈಗ ಅರಮನೆಯ

ಉದ್ಯಾನವನದಲ್ಲಿದ್ದಾನೆ.

(ಎಲ್ಲರ ನಿರ್ಗಮನ. ಸ್ವಲ್ಪಕಾಲ ಖಾಲಿ ಇದ್ದ ರಂಗವನ್ನು ಕಳ್ಳಹೆಜ್ಜೆಗಳನ್ನಿಡುತ್ತಾ ಕ್ಯಾಲಿಗುಲ ಪ್ರವೇಶಿಸುತ್ತಾನೆ. ಅವನ ಕಾಲುಗಳಿಗೆ ಮಣ್ಣಿನ ತೆಕ್ಕೆಗಳು ಮೆತ್ತಿವೆ; ಅವನ ಉಡುಪು ಮಾಸಲುಮಾಸಲಾಗಿವೆ; ಅವನ ಕೂದಲು ಒದ್ದೆಮುದ್ದೆಯಾಗಿದೆ ; ಅವನ ದೃಷ್ಟಿ ಅಸ್ತವ್ಯಸ್ತವಾಗಿದೆ. ಆತನ ಕೈ ಪದೇ ಪದೇ ಬಾಯಿಯ ಮೇಲೆ ಆಡುತ್ತಿದೆ. ಆತ ನಿಲುಗನ್ನಡಿಯತ್ತ ಬರುತ್ತಾ, ತನ್ನ ಪ್ರತಿಬಿಂಬವನ್ನು ಕಂಡು, ಕಾಣುತ್ತಿದ್ದಂತೆಯೇ ಥಟ್ಟನೆ ನಿಂತು ಬಿಡುತ್ತಾನೆ. ಅನಂತರ ಕೆಲವು ಅರ್ಥಹೀನ ಶಬ್ದಗಳನ್ನು ಮಣಿಮಣಿಸುತ್ತಾ, ಮಂಡಿಗಳ ಮಧ್ಯೆ ತೋಳುಗಳನ್ನು ಜೋತು ಬಿಟ್ಟು ರಂಗಬಲದಲ್ಲಿ ಕುಳಿತುಬಿಡುತ್ತಾನೆ. ರಂಗ ಎಡದಿಂದ ಪ್ರವೇಶಿಸುತ್ತಿರುವ ಹೆಲಿಕಾನ್ ಕ್ಯಾಲಿಗುಲನನ್ನು ದೂರದ ರಂಗದಂಚಿನಿಂದಲೇ ಕಂಡು, ಕಂಡ ಸ್ಥಳದಲ್ಲೇ ನಿಂತು, ಅವನನ್ನು ಏಕದೇಕವಾಗಿ ದಿಟ್ಟಿಸುತ್ತಾ ಇದ್ದು ಬಿಡುತ್ತಾನೆ. ಸಾಕಷ್ಟು ಕಾಲ ಮೌನ.)

ಹೆಲಿಕಾನ್ : (ರಂಗದಂಚಿನಿಂದ) ಸುಪ್ರಭಾತ, ಕಾಯಸ್.

ಕ್ಯಾಲಿಗುಲ : (ಎಂದಿನ ಧ್ವನಿಯಲ್ಲಿ) ಸುಪ್ರಭಾತ, ಹೆಲಿಕಾನ್.

(ಲಘು ಮೌನ)

ಹೆಲಿಕಾನ್ : ಆಯಾಸವಾಗಿರುವ ಹಾಗೆ ಕಾಣುತ್ತಿದೆ !

ಕ್ಯಾಲಿಗುಲ : ನಾನು ತುಂಬ ಅಲೆದಾಡಿಬಿಟ್ಟಿದ್ದೇನೆ.

ಹೆಲಿಕಾನ್ : ಹೌದು – ನೀನು ಸಾಕಷ್ಟು ಕಾಲ ಹೊರಗೇ ಉಳಿದು ಬಿಟ್ಟಿದ್ದೆ. (ಮತ್ತೆ ಕೊಂಚ ಕಾಲ ಮೌನ.)

ಕ್ಯಾಲಿಗುಲ : ಹುಡುಕುವುದು ಕಷ್ಟವಾಯಿತು.

ಹೆಲಿಕಾನ್ : ಏನನ್ನು ಹುಡುಕುವುದು ಕಷ್ಟವಾಯಿತು ?

ಕ್ಯಾಲಿಗುಲ : ನಾನು ಯಾವುದನ್ನು ಹುಡುಕಿಕೊಂಡು ಹೊರಟಿದ್ದೆನೋ ಅದನ್ನು.. ....

ಹೆಲಿಕಾನ್ : ಹಾಗೆಂದರೆ ?

ಕ್ಯಾಲಿಗುಲ : (ಎಂದಿನ ನಿರ್ವಿಕಾರ ಧ್ವನಿಯಲ್ಲಿ) ಚಂದ್ರ ...

ಹೆಲಿಕಾನ್ : ಏನು ! ?

ಕ್ಯಾಲಿಗುಲ : ಹೌದು – ನನಗೆ ಚಂದ್ರ ಬೇಕಾಗಿತ್ತು.

ಹೆಲಿಕಾನ್ : ಆಹ್! .... (ಮತ್ತೆ ಮೌನ. ಹೆಲಿಕಾನ್ ಕ್ಯಾಲಿಗುಲನತ್ತ ಬರುತ್ತಾ
ಅಲ್ಲ, ನಿನಗೆ ಅದು ಏಕೆತಾನೆ ಬೇಕಾಗಿತ್ತು ?

ಕ್ಯಾಲಿಗುಲ : ಹೇಗೂ...ನನ್ನಲ್ಲಿ ಇಲ್ಲದೇ ಇರುವ ವಸ್ತುಗಳಲ್ಲಿ ಅದೂ
ಒಂದು.

ಹೆಲಿಕಾನ್ : ಹಾಗೋ ...... ಹಾಗಾದರೆ ಈಗ ನೀನದನ್ನು ನಿನಗೆ
ತೃಪ್ತಿಯಾಗುವಷ್ಟು ದಕ್ಕಿಸಿಕೊಂಡು ಬಿಟ್ಟೆ ಏನು ?

ಕ್ಯಾಲಿಗುಲ : ಇಲ್ಲ – ನನಗದು ದಕ್ಕಲೇ ಇಲ್ಲ.

ಹೆಲಿಕಾನ್ : ತುಂಬಾ ಅನ್ಯಾಯ !

ಕ್ಯಾಲಿಗುಲ : ಹೌದೌದು – ಈ ಕಾರಣಕ್ಕೇ ನಾನು ದಣಿದು
ಹೋಗಿರುವುದು. (ತಡೆದು, ಮತ್ತೆ) ಹೆಲಿಕಾನ್.

ಹೆಲಿಕಾನ್ : ಕಾಯಸ್ ?

ಕ್ಯಾಲಿಗುಲ : ನನಗೆಲ್ಲೋ ಹುಚ್ಚು ಹಿಡಿದಿರಬೇಕೆಂದು ನಿಸ್ಸಂದೇಹವಾಗಿ
ನೀನು ಯೋಚಿಸಿಯೇ ಯೋಚಿಸುತ್ತಿದ್ದೀಯೆ.

ಹೆಲಿಕಾನ್ : ನಿನಗೇ ಚೆನ್ನಾಗಿ ಗೊತ್ತಲ್ಲ – ನಾನು ಯಾವಾಗಲೂ
ಯೋಚಿಸುವ ಗೊಡವೆಗೇ ಹೋಗುವವನಲ್ಲವೆಂದು.

ಕ್ಯಾಲಿಗುಲ : ಆಹ್, ಹೌದು .....ಈಗ ಕೇಳು! – ನನಗೆ ಹುಚ್ಚು
ಹಿಡಿದಿಲ್ಲ. ನಿಜ ಹೇಳಬೇಕು ಅಂದರೆ ನನಗೆ ಇಷ್ಟು ನಿಚ್ಚಳವಾಗಿ
ನಾನು ಕಾಣಿಸಿಯೇ ಇರಲಿಲ್ಲ – ನನಗೆ ಏನಾಯಿತು ಎನ್ನುವ ವಿಚಾರ
ತೀರ ಸರಳವಾದುದು : ನನಗೆ ಇದ್ದಕ್ಕಿದ್ದಂತೆಯೇ ಅಸಾಧ್ಯದ ಬಯಕೆ
ಯಾಗಿಹೋಯಿತು – ಅಷ್ಟೇ. (ಮೌನ) ನನ್ನ ದೃಷ್ಟಿಯಲ್ಲಿ ಹಾಲಿ
ಇರುವ ವಸ್ತುಸ್ಥಿತಿ ಏನಿದೆಯೋ ಅದು-ತೀರ... ತೀರ ಅತೃಪ್ತವಾಗಿದೆ.

ಹೆಲಿಕಾನ್ : ನಿನ್ನ ಈ ಅಭಿಪ್ರಾಯ ಅನೇಕರಿಗಿದೆ.

ಕ್ಯಾಲಿಗುಲ : ಅದೇನೋ ನಿಜ – ಆದರೆ, ಹಿಂದೆ ಈ ಸತ್ಯ ನನಗೆ ಮನ
ವರಿಕೆಯಾಗಿರಲಿಲ್ಲ; ಈಗಲೀಗ ಮನವರಿಕೆಯಾಗಿದೆ. (ಈಗಲೂ
ಎಂದಿನ ಅದೇ ನಿರ್ವಿಕಾರ ಧ್ವನಿಯಲ್ಲಿ) ಸತ್ಯಕ್ಕೂ ನಮ್ಮ ಈ ಜಗತ್ತು–
ದೊಡ್ಡವರು ಹೇಳುವ ಅದರ ರಚನೆಯ ರೀತಿನೀತಿ – ತೀರ

ಅಸಹನೀಯವಾಗಿದೆ. ಈ ಕಾರಣದಿಂದಾಗಿಯೇ ಚಂದ್ರ ಅಥವಾ ಆನಂದ ಅಥವಾ ಅಮರತ್ವ–ವಾಸ್ತವಿಕವಾಗಿ ಭ್ರಮಾತ್ಮಕವೆನ್ನ ಬಹುದಾದುದು, ಆದರೆ ಈ ಜಗತ್ತಿನದಲ್ಲವಾದ್ದುದು – ಏನಾದರೂ ಸರಿಯೆ, ನನಗೆ ಬೇಕಾಗಿದೆ.

ಹೆಲಿಕಾನ್ : ಸೈದ್ಧಾಂತಿಕವಾಗಿ ನಿನ್ನ ಮಾತು ತುಂಬ ಚೆನ್ನಾಗಿದೆ. ಆದರೆ, ಅದನ್ನು ಕೃತಿಗೆ ಇಳಿಸಬೇಕು ಎಂದಾಗ ಮಾತ್ರ ಯಾರಿಂದಲೂ ಅದನ್ನು ಕೊನೆಮುಟ್ಟಿಸುವುದು ಸಾಧ್ಯವಾಗಲಾರದು.

ಕ್ಯಾಲಿಗುಲ : (ಏಳುತ್ತಾ, ಅದೇ ಪರಿಪೂರ್ಣ ಪ್ರಶಾಂತ ಭಾವದಲ್ಲಿ) ನೀನು ತಪ್ಪುಮಾಡುತ್ತಿರುವುದು ಇಲ್ಲೇ. ತಮ್ಮ ಗುರಿ ಸಾಧನೆಗಾಗಿ ಕೊನೆಯ ವರೆಗೂ ಹೋರಾಡುವ ಕೆಚ್ಚಿರುವವರು ಯಾರೂ ಇಲ್ಲವಾಗಿ ಹೋಗಿರುವುದರಿಂದಲೇ ಏನನ್ನೂ ಸಾಧಿಸಲಾಗುತ್ತಿಲ್ಲ. ನಾನು ಹೇಳುವುದು ಏನೆಂದರೆ ಈ ಗುರಿ ಮುಟ್ಟಲು ಬೇಕಾಗಿರುವುದೆಲ್ಲ ಕೊನೆಯುವರೆಗೂ ಶತಾಯಗತಾಯ ತರ್ಕಬದ್ಧವಾಗಿಯೆ ಉಳಿದು ಬಿಡಬೇಕು–ಅಷ್ಟೇ. (ಹೆಲಿಕಾನ್‌ನ ಮುಖವನ್ನು ಅಭ್ಯಸಿಸುತ್ತಾ) ನೀನು ಏನನ್ನು ಯೋಚಿಸುತ್ತಿದ್ದೀಯೆ ಎಂದು ನನಗೆ ನಿಚ್ಚಳವಾಗಿ ಗೊತ್ತಾಗುತ್ತಿದೆ – ಒಂದು ಹೆಣ್ಣಿನ ಸಾವಿನಿಂದಾಗಿ ಏನೆಲ್ಲಾ ರಾದ್ಧಾಂತ–ಎಂದಲ್ಲವೆ ! ಆದರೆ ವಸ್ತುಸ್ಥಿತಿಯೇ ಬೇರೆ – ನಾನು ಪ್ರೇಮಿಸಿದ ಹೆಣ್ಣೊಬ್ಬಳು ಕೆಲವು ದಿನಗಳ ಹಿಂದೆ ಸತ್ತುಹೋದ ನೆನಪು ನನಗೆ ಇರುವುದೇನೋ ನಿಜ ; ಆದರೆ, ಪ್ರೇಮ.... ಏನದು? ಅದು ಸತ್ಯದಿಂದ ಹೊರತಾದ ವಿಚಾರ. ನನ್ನ ಮೇಲೆ ಆಣೆಯಿಟ್ಟು ನಿನಗೆ ಹೇಳುತ್ತಿದ್ದೇನೆ, ಕೇಳಿಕೋ – ಅವಳ ಸಾವಲ್ಲ ಸತ್ಯ–ಅದು ಬಹಳ ಹೆಚ್ಚೆಂದರೆ ನನಗೆ ಚಂದ್ರ ಬೇಕೇಬೇಕೆನ್ನುವ ಸತ್ಯದ ಸಂಕೇತ ಮಾತ್ರ – ಆದರೆ ಆ ಸತ್ಯ ಸ್ವೀಕರಿಸಲು ದುಃಸ್ಸಾಧ್ಯವಾದ, ಹೊರಲು ಭಾರವಾದ, ಮಕ್ಕಳಾಟದಷ್ಟೇ ಸರಳವಾದ ಜೊತೆಗೆ ಅಪರಿಹಾರ್ಯ ವಾದ ಹಾಗೂ ಬಹಳ ಮಟ್ಟಿಗೆ ತುಚ್ಛವಾದ ಸತ್ಯ.

ಹೆಲಿಕಾನ್ : ನೀನು ಅನ್ವೇಷಿಸಿದ ಸತ್ಯ ಏನೆಂದು ನಾನು ತಿಳಿದು ಕೊಳ್ಳಬಹುದೇ ?

ಕ್ಯಾಲಿಗುಲ : (ದೃಷ್ಟಿಯನ್ನು ವಿಮುಖಗೊಳಿಸಿ, ನಿರ್ಜೀವವಾದ ಧ್ವನಿಯಲ್ಲಿ

ಮನುಷ್ಯ ಸಾಯುತ್ತಾನೆ ; ಅಲ್ಲದೆ ಅವನು ಅಸುಖಿಯಾಗಿದ್ದಾನೆ

ಹೆಲಿಕಾನ್ : (ಸ್ವಲ್ಪ ಮೌನದ ನಂತರ) ಕ್ಯಾಲಿಗುಲ, ಹೇಗೂ ನೀನು ಹೇಳುತ್ತಿರುವುದು ಹೆಚ್ಚಿನ ತೊಂದರೆಯಿಲ್ಲದೆ ಯಾರೂ ಒಪ್ಪಿಕೊಂಡು ಬಿಡುವಂತಹ ವಿಚಾರ. ಅಲ್ಲಿರುವ ಆ ಜನಗಳನ್ನೇ ನೋಡು – ನಿನ್ನ ಈ ಅನ್ವೇಷಿತ ಸತ್ಯ ಅವರು ಸುಖಿಸುತ್ತಿರುವ ಊಟದಿಂದ ಅವರನ್ನು ಹೇಗೂ ವಂಚಿಸಲಾರದು.

ಕ್ಯಾಲಿಗುಲ : (ಥಟ್ಟನೆ ವಿಕಾರವಾಗಿ) ಇದು ಹೇಗೆ ಮಿಥ್ಯೆ ಮತ್ತು ಆತ್ಮ ದ್ರೋಹಗಳು ನನ್ನನ್ನು ಆವರಿಸಿಕೊಂಡಿವೆ ಎನ್ನುವುದನ್ನು ಸಾಧಿಸಿ ತೋರಿಸುತ್ತಿದೆ. ಆದರೆ ಇದನ್ನೆಲ್ಲಾ ನಾನು ಸಾಕು ಬೇಕಾದಷ್ಟು ಅನುಭವಿಸಿ ಆಗಿದೆ – ನಾನು ಜನ ಸತ್ಯದ ಬೆಳಕಿನಲ್ಲಿ ಬದುಕಬೇಕೆಂದು ಬಯಸುವವನು ; ಅಲ್ಲದೆ, ಅವರು ಸತ್ಯದ ಬೆಳಕಿನಿಂದಲೇ ಜೀವಿಸು ವಂತೆ ಮಾಡುವ ಶಕ್ತಿಯುಳ್ಳವನು : ಹೇಗೆಂದರೆ, ಅವರ ಅವಶ್ಯಕತೆ ಮತ್ತು ಕೊರತೆಗಳೇನೆಂದು ನಾನು ಬಲ್ಲವನು. ಪಾಪ !—ಅವರು ತಿಳುವಳಿಕೆ ಇಲ್ಲದವರು – ಆದ್ದರಿಂದ, ತಾನು ಆಡುವ ಮಾತೇನೆಂದು ಚೆನ್ನಾಗಿ ಗೊತ್ತಿರುವ ಗುರು ಒಬ್ಬ ಅವರಿಗೆ ಬೇಕಾಗಿದ್ದಾನೆ.

ಹೆಲಿಕಾನ್ : ನಾನು ನಿನಗೆ ಒಂದು ಬುದ್ಧಿವಾದದ ಮಾತನ್ನು ಹೇಳುತ್ತಿದ್ದೇನೆಂದು, ಕಾಯಸ್, ನೀನು ನೊಂದುಕೊಳ್ಳುವುದಿಲ್ಲ ವಾದರೆ... ....ಹೇಗೂ ಇವೆಲ್ಲಾ ನಿನಗಾಗಿ ಕಾಯುತ್ತಿರಬಲ್ಲವು ಆದ್ದರಿಂದ, ಮೊದಲು ನೀನು ಸ್ವಲ್ಪ ನಿದ್ದೆ ಮಾಡು ಹೋಗು.

ಕ್ಯಾಲಿಗುಲ : (ಕುಳಿತು, ಗಂಭೀರ ಧ್ವನಿಯಲ್ಲಿ) ಅದು ಸಾಧ್ಯವಿಲ್ಲ ಹೆಲಿಕಾನ್ : ನಾನು ಇನ್ನು ಎಂದೂ ನಿದ್ದೆ ಹೋಗಿಬಿಡಲಾರೆ

ಹೆಲಿಕಾನ್ : ಆದರೆ............ಏಕೆ ?.... ....

ಕ್ಯಾಲಿಗುಲ : ನಾನು ನಿದ್ದೆ ಹೋಗಿಬಿಟ್ಟರೆ ನನಗೆ ಯಾರುತಾನೆ ಚಂದ್ರ ನನ್ನ ತಂದುಕೊಡುತ್ತಾರೆ ?

ಹೆಲಿಕಾನ್ : (ತುಸು ಮೌನದ ನಂತರ) ನಿಜ ಅದು.

ಕ್ಯಾಲಿಗುಲ : (ಮೇಲೇಳುತ್ತಾ, ಪ್ರಯತ್ನ ಪೂರ್ವಕವಾಗಿ) ಹೆಲಿಕಾನ್

ನೋಡು....ನನಗೆ ಯಾವುದೋ ಕಾಲಿನ ಸಪ್ಪಳಗಳು, ಯಾರದೋ ಧ್ವನಿಗಳು ಕೇಳಿಸುತ್ತಿರುತ್ತವೆ. ಏನನ್ನೂ ಪ್ರತಿ ಹೇಳಬೇಡ ; ಹಾಗೆಯೇ- ನೀನು ನನ್ನನ್ನು ನೋಡಿದ್ದೇನೆನ್ನುವುದನ್ನೂ ಮರೆತುಬಿಡು.

ಹೆಲಿಕಾನ್ : ... ಎಲ್ಲ ಅರ್ಥವಾಗುತ್ತಿದೆ.

ಕ್ಯಾಲಿಗುಲ : (ಬಾಗಿಲತ್ತ ಹೋಗುತ್ತಾ, ಹಿಂದಕ್ಕೆ ತಿರುಗಿ) ಅಲ್ಲದೆ, ಈ ಕ್ಷಣದಿಂದೀಚೆಗೆ ದಯವಿಟ್ಟು ನೀನು ನನಗೆ ನೆರವಾಗಬೇಕು.

ಹೆಲಿಕಾನ್ : ನಿನಗೆ ನಾನು ನೆರವಾಗದೇ ಇರಲು ಕಾರಣವೇ ಇಲ್ಲ. ಆದರೆ ನನಗೆ ಗೊತ್ತಿರುವುದೆಲ್ಲಾ ಕೆಲವೇ ಕೆಲವು ಸಂಗತಿಗಳು ಮತ್ತು ನನ್ನ ಆಸಕ್ತಿ ಎಲ್ಲಾ ಕೇವಲ ಕೆಲವು ವಿಚಾರಗಳಲ್ಲಿ ಮಾತ್ರ -ಆದ್ದರಿಂದ, ನಾನು ಯಾವ ರೀತಿಯಲ್ಲಿ ತಾನೆ ನಿನಗೆ ನೆರವಾಗಬಲ್ಲೆ ?

ಕ್ಯಾಲಿಗುಲ : ಅಸಾಧ್ಯದ......ಅಸಾಧ್ಯದ ಸಾಧ್ಯತೆಯಲ್ಲಿ.................

ಹೆಲಿಕಾನ್ : ನಾನು ನನ್ನ ಕೈಲಾದುದನ್ನೆಲ್ಲಾ ಮಾಡುತ್ತೇನೆ.

(ಕ್ಯಾಲಿಗುಲನ ನಿರ್ಗಮನ. ಅವಸರವಸರವಾಗಿ ಸಿಪಿಯೋ ಮತ್ತು ಕೆಸೋನಿಯಾ ಪ್ರವೇಶ)

ಸಿಪಿಯೋ : ಯಾರೂ ಇಲ್ಲ ! ನೀನೂ ಅವನನ್ನು ಕಾಣಲಿಲ್ಲವೆ ?

ಹೆಲಿಕಾನ್ : ಇಲ್ಲವಲ್ಲ.

ಕೆಸೋನಿಯಾ : ನನಗೆ ಹೇಳು, ಹೆಲಿಕಾನ್ – ಹೊರಟುಹೋಗುವ ಮೊದಲು ಅವನು ನಿನಗೆ ಏನನ್ನೂ ಹೇಳಲಿಲ್ಲವೆನ್ನುವುದು ಖಚಿತವೆ?

ಹೆಲಿಕಾನ್ : ನಾನು ಅವನ ಗುಟ್ಟುಗಳ ಪಾಲುದಾರನಲ್ಲ : ಪ್ರಜೆ ಮಾತ್ರ ; ಕೇವಲ ಓರ್ವ ಪ್ರೇಕ್ಷಕ. ಹೀಗಿದ್ದು ಬಿಡುವುದೇ ವಿವೇಕಯುತವಾದುದು ಕೂಡ.

ಕೆಸೋನಿಯಾ : ದಯವಿಟ್ಟು ಹೀಗೆಲ್ಲಾ ಮಾತನಾಡಬೇಡ.

ಹೆಲಿಕಾನ್ : ನನ್ನ ಪ್ರಿಯ ಕೆಸೋನಿಯಾ, ನಮಗೆಲ್ಲಾ ತಿಳಿದಿರುವಂತೆ ಕಾಯಸ್ ಓರ್ವ ಆದರ್ಶವಾದಿ. ಅವನು ತನ್ನ ಆದರ್ಶದತ್ತ ಸಾಗುತ್ತಾ ಇದ್ದುಬಿಡುತ್ತಾನೆ – ಅದು ಅವನನ್ನು ಎಲ್ಲಿಗೆ ಕರೆದು ಒಯ್ಯುತ್ತದೆ ಎನ್ನುವುದು ಮಾತ್ರ ಯಾರಿಗೂ ಗೊತ್ತಾಗುವುದೇ

ಇಲ್ಲ...ಆದರೆ, ನೀವು ಕ್ಷಮಿಸುವಿರಾದರೆ ನಾನು ಊಟಕ್ಕೆ ಹೋಗುತ್ತೇನೆ. (ನಿರ್ಗಮನ)

ಕೆಸೋನಿಯಾ : (ಆಯಾಸದಿಂದ ಒರಗು ಮೆತ್ತೆಗೆ ಕುಸಿಯುತ್ತಾ) ಅವನು ಸಮೀಪದಲ್ಲೆ ಹೋಗುತ್ತಿರುವುದನ್ನು ಕಾವಲುಗಾರನೊಬ್ಬ ಕಂಡನಂತೆ. ಅಂತೂಇಂತೂ ರೋಮ್‌ಗೆ ರೋಮೇ ಕ್ಯಾಲಿಗುಲನನ್ನು ಎಲ್ಲೆಲ್ಲೂ ನೋಡುತ್ತಿದೆ. ಆದರೆ, ಕ್ಯಾಲಿಗುಲನಿಗೆ ಮಾತ್ರ ತನ್ನ ಕಲ್ಪನೆಗಳಲ್ಲದೆ ಬೇರೇನೂ ಕಾಣಿಸುತ್ತಿಲ್ಲ.

ಸಿಪಿಯೋ : ಯಾವ ಕಲ್ಪನೆ ?

ಕೆಸೋನಿಯಾ : ನಾನು ಏನೆಂದು ಹೇಳಲಿ, ಸಿಪಿಯೋ ?

ಸಿಪಿಯೋ : ನೀನು ಡ್ರುಸಿಲ್ಲಾಳನ್ನು ಕುರಿತು ಯೋಚಿಸುತ್ತಿದ್ದೀಯಲ್ಲವೆ ?

ಕೆಸೋನಿಯಾ : ಇರಬಹುದೋ ಏನೋ–ಒಂದು ವಿಚಾರವಂತೂ–ಅವನು ಅವಳನ್ನು ಪ್ರೇಮಿಸಿದನೆನ್ನುವುದಂತೂ ನಿಜ. ನೆನ್ನೆಯಷ್ಟೇ ನೀನು ತೋಳುಗಳಲ್ಲಿ ಆತಿದ್ದ ಹೆಣ್ಣೊಂದು ಇವತ್ತು ಸತ್ತು ಹೋದಳೆಂದರೆ ಅಬ್ಬ !—ಅದೆಷ್ಟು ಕ್ರೂರವಾದ ವಿಚಾರ, ಅಲ್ಲವೆ?

ಸಿಪಿಯೋ ; (ಹೆದರಿ) ಹಾಗಾದರೆ...ನೀನು... ?

ಕೆಸೋನಿಯಾ : ಓಹ್ ನಾನು ? ನಾನು ನಂಬಿಕೆಗೆ ಯೋಗ್ಯಳಾದ ಒಂದು ಮುದಿ ಹೆಣ್ಣು. ಅಷ್ಟೇ ನನ್ನ ಪಾತ್ರ.

ಸಿಪಿಯೋ : ಕೆಸೋನಿಯಾ, ನಾವು ಅವನನ್ನು ಕಾಪಾಡಿಯೇ ಕಾಪಾಡಬೇಕು.

ಕೆಸೋನಿಯಾ : ಹಾಗಾದರೆ, ನೀನು ಕೂಡ ಅವನನ್ನು ಪ್ರೀತಿಸುತ್ತಿದ್ದೀಯಲ್ಲವೇ ?

ಸಿಪಿಯೋ : ಹೌದು – ಉದ್ದಕ್ಕೂ ಅವನು ನನ್ನ ಪಾಲಿಗೆ ತುಂಬಾ ಒಳ್ಳೆಯವನಾಗಿಯೇ ಇದ್ದಾನೆ. ನನ್ನನ್ನು ಅವನು ಪ್ರೋತ್ಸಾಹಿಸಿದ. ಅವನು ಹೇಳಿದ ಕೆಲವು ವಿಚಾರಗಳನ್ನಂತೂ ನಾನುಮರೆಯುವಂತೆಯೆ ಇಲ್ಲ. ಜೀವನ ದುಃಸಾಧ್ಯವಾದುದೆಂದೂ ಅದರ ಪರಿಹಾರಾರ್ಥವಾಗಿ

ಧರ್ಮ, ಕಲೆ ಮತ್ತು ಒಬ್ಬ ಮತ್ತೊಬ್ಬನಲ್ಲಿ ಸ್ಫುರಿಸುವಪ್ರೇಮಗಳಿವೆ ಎಂದು ಅವನು ಹೇಳಿದ್ದ. ಮನುಷ್ಯ ಮಾಡುವ ಒಂದೇ ಒಂದು ತಪ್ಪೆಂದರೆ ಅನ್ಯರ ಜೀವನ ಕಷ್ಟಮಯವಾಗುವಂತೆ ಮಾಡುವುದು– ಎಂದು ಅವನು ಪದೇ ಪದೇ ಹೇಳುತ್ತಿದ್ದ. ಅವನು ತುಂಬ ಪ್ರಾಮಾಣಿಕನಾಗಿರಲು ಪ್ರಯತ್ನಿಸುತ್ತಲೇ ಇದ್ದ.

ಕೆಸೋನಿಯಾ : (ಮೇಲೇಳುತ್ತಾ) ಅವನು ಇನ್ನೂ ಕೇವಲ ಹಸುಳೆ. (ಕನ್ನಡಿಯ ಬಳಿಹೋಗಿ ತನ್ನ ಶರೀರವನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಕೊಳ್ಳುತ್ತಾಳೆ.) ನನ್ನ ಪಾಲಿಗೆ ಎಂದೆಂದಿಗೂ ಇರುವ ಏಕೈಕ ದೈವ ವೆಂದರೆ ನನ್ನ ಈ ಶರೀರ ಮಾತ್ರ. ನಾನೀಗ ನನ್ನ ಈ ದೈವವನ್ನು 'ನನ್ನ ಕಾಯಸ್‌ನನ್ನು ಮತ್ತೆ ನನಗೆ ಕರುಣಿಸು' ಎಂದು ಪ್ರಾರ್ಥಿಸಿ ಕೊಳ್ಳುತ್ತಿದ್ದೇನೆ.

(ಪ್ರವೇಶಿಸುತ್ತಿರುವ ಕ್ಯಾಲಿಗುಲ ಕೆಸೋನಿಯಾ ಮತ್ತು ಸಿಪಿಯೋರನ್ನು ಕಂಡು ಅರೆಮನಸ್ಕನಾಗಿ ಒಂದು ಹೆಜ್ಜೆ ಹಿಂದಕ್ಕೆ ಸರಿಯುತ್ತಾನೆ. ಇದೇ ಸಮಯ ದಲ್ಲೇ ವಿರುದ್ಧ ದಿಕ್ಕಿನಿಂದ ಬಂದ ಅರಮನೆಯ ಹಲವಾರು ಜನ ಆಸ್ಥಾನಿಕರು ಮತ್ತು ಸರದಾರರು ಕ್ಯಾಲಿಗುಲನನ್ನು ಕಾಣುತ್ತಿದ್ದಂತೆಯೇ ಗಕ್ಕನೆ ನಿಂತು ಬಿಡುತ್ತಾರೆ. ಕೆಸೋನಿಯಾ ಕ್ಯಾಲಿಗುಲನ ಕಡೆ ತಿರುಗಿನೋಡುತ್ತಾಳೆ. ಸಿಪಿಯೋ ಮತ್ತು ಕೆಸೋನಿಯಾ ಕ್ಯಾಲಿಗುಲನತ್ತ ಅವಸರವಸರವಾಗಿ ಧಾವಿಸುತ್ತಿರುವಾಗ, ಅವನು ಅವರನ್ನು ಸನ್ನೆಮಾಡಿ ತಡೆಯುತ್ತಾನೆ.)

ಸರದಾರ : (ನಡಗುವ ಧ್ವನಿಯಲ್ಲಿ) ನಾವು ......ನಾವು ನಿನಗಾಗಿ ಎಲ್ಲೆಲ್ಲೂ ಹುಡುಕಾಡುತ್ತಿದ್ದೆವು – ಹಿರಿಯನೂ, ಕಿರಿಯನೂ ಮತ್ತು ಸಮಸ್ತವೂ ನೀನೇ ಆಗಿರುವ ಸೀಜರ್.

ಕ್ಯಾಲಿಗುಲ : (ಬದಲಿಸಿದ ಕರ್ಕಶ ಧ್ವನಿಯಲ್ಲಿ) ನನಗೇ ಕಾಣುತ್ತಿದೆ....

ಸರದಾರ : ನಾವು...ನಾನು ಹೇಳಬಯಸಿದ್ದು...

ಕ್ಯಾಲಿಗುಲ : (ಒರಟೊರಟಾಗಿ) ನಿನಗೆ ಏನು ಬೇಕು ?

ಸರದಾರ : ನಮಗೆಲ್ಲಾ ತುಂಬಾ ಆತಂಕವಾಗಿಹೋಗಿತ್ತು, ಸೀಜರ್.

ಕ್ಯಾಲಿಗುಲ : (ಅವನತ್ತ ಹೋಗುತ್ತಾ) ನೀನು ಆತಂಕ ಪಡುವಂತಹ ಕಾರಣ

ವಾದರೂ ಏನಿತ್ತು ?

ಸರದಾರ : ಏನೆಂದರೆ....ಏನೆಂ ... (ಸ್ಫೂರ್ತಿ ಬಂದಂತಾಗಿ) ಏನೆಂದ ನಿನಗೇ ತಿಳಿದಿರುವಂತೆ, ಖಜಾನೆಗೆ ಸಂಬಂಧ ಪಟ್ಟ ಕೆಲವು ವಿಚಾ ಗಳನ್ನು ತೀರ್ಮಾನಿಸಬೇಕಾಗಿದೆ.

ಕ್ಯಾಲಿಗುಲ : (ಗಹಗಹಿಸಿ ನಗುತ್ತಾ) ಆಹ್, ಹೌದೌದು ! ಬೊಕ್ಕಸ ಖಜಾನೆ ! ಆದು ನಿಜ-ಖಜಾನೆಯೇ ಮುಖ್ಯಾತಿಮುಖ್ಯವಾದದು

ಸರದಾರ : ಹೌದು – ಅತ್ಯಗತ್ಯವಾಗಿ ಖಜಾನೆಯೆ ಮುಖ್ಯವಾದುದು

ಕ್ಯಾಲಿಗುಲ : (ಇನ್ನೂ ನಗುತ್ತಾ, ಕಸೋನಿಯಾ ಕಡೆಗೆ ತಿರುಗಿ) ಎಲ್ಲವನ್ನೂ ಮೀರಿ ಖಜಾನೆಯೇ ಮುಖ್ಯವಾದುದೆಂದು, ನನ್ನಪ್ರಿಯೆ, ನೀನ ಒಪ್ಪಿಕೊಳ್ಳುವುದಿಲ್ಲವೆ ?

ಕೆಸೋನಿಯಾ : ಇಲ್ಲ ಕ್ಯಾಲಿಗುಲ-ಖಜಾನೆ ಅಷ್ಟೊಂದು ಮುಖ ವಾದುದೇನಲ್ಲ.

ಕ್ಯಾಲಿಗುಲ : ಇದು ನಿನ್ನ ಮೌಢ್ಯವನ್ನಷ್ಟೇ ತೋರಿಸುತ್ತದೆ. ನಮ ನಮ್ಮ ಖಜಾನೆಯ ವಿಚಾರದಲ್ಲಿ ಅಪಾರವಾದ ಆಸಕ್ತಿಗಳಿವೆ. ನಮ ಮಟ್ಟಿಗೆ ಎಲ್ಲವು ಮುಖ್ಯವೇ: ನಮ್ಮ ಕಂದಾಯದ ವ್ಯವಸ್ಥೆ, ಸಾವ ಜನಿಕರ ಶೀಲ, ವಿದೇಶಾಂಗ ನೀತಿ, ಕೃಷಿಯ ಕಟ್ಟಲೆಗಳು – ಪ್ರ ಯೊಂದೂ ಅತ್ಯಂತ ಮಹತ್ವಪೂರ್ಣವಾದುವು ಎಂದು ನಾನು ಭರವ ಕೊಟ್ಟು ಹೇಳುತ್ತಿದ್ದೇನೆ. ಅದೂ ಅಲ್ಲದೆ, ಪ್ರತಿಯೊಂದಕ್ಕೂ ಸ ಸಮಾನವಾದ ಪ್ರಾಮುಖ್ಯತೆ ಕೂಡ – ರೋಮ್‌ನ ವೈಭವ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ನಿನ್ನ ಸಂಧಿವಾತದ ಪೀಡನೆಗಳು... ಇರಲಿ, ಇರಲಿ–ಮರೆಯದೇ ಎಲ್ಲವನ್ನೂ ನಿಗವಿಟ್ಟು ನೋಡಿಕೊಳ್ತ ತ್ತೇನೆ—ಮೊದಲಿಗೆ .... ಸರದಾರ, ಈಗ ನನ್ನ ಮಾತುಗಳನ್ನ ಗಮನವಿಟ್ಟು ಕೇಳು.

ಸರದಾರ : ಕೇಳುತ್ತಿದ್ದೇವೆ, ಪ್ರಭು.

(ಸರದಾರರೆಲ್ಲ ಮುಂದೆ ಬರುತ್ತಾರೆ.)

ಕ್ಯಾಲಿಗುಲ : ನೀವೆಲ್ಲಾ ನಮ್ಮ ನಿಷ್ಠಾವಂತಾ ಪ್ರಜೆಗಳು, ಅಲ್ಲವೆ

ಸರದಾರ : (ಅವಮಾನಿತ ಧ್ವನಿಯಲ್ಲಿ) ಓಹ್, ಸೀಜರ್!

ಕ್ಯಾಲಿಗುಲ : ಅಂದಹಾಗೆ, ನಾನೀಗ ನಿಮ್ಮ ಮುಂದೆ ಒಂದು ವಿಚಾರವನ್ನು ಇಡುತ್ತಿದ್ದೇನೆ : ನಾವು ನಮ್ಮ ಆರ್ಥಿಕ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ ಬಿಡುತ್ತಿದ್ದೇವೆ. ಬದಲಾವಣೆ ಎರಡು ರೀತಿಯಲ್ಲಿ _ ಹಟಾತ್ತಾಗಿ ಮತ್ತು ಉಗ್ರವಾಗಿ – ಆಗಬೇಕಾಗಿದೆ. ಆಸ್ಥಾನಿಕರೆಲ್ಲಾ ಹೊರಟುಹೋಗುತ್ತಿದ್ದಂತೆ ನಾನು ಅದನ್ನೆಲ್ಲಾ ನಿಮಗೆ ವಿವರಿಸಿ ಹೇಳುತ್ತೇನೆ. ... .(ಆಸ್ಥಾನಿಕರು ನಿರ್ಗಮಿಸುತ್ತಾರೆ. ಕ್ಯಾಲಿಗುಲ ಕೆಸೋನಿಯಾಳ ಬಳಿ ಕುಳಿತು, ಅವಳ ಸೊಂಟದ ಸುತ್ತ ಕೈ ಬಳಸಿ) ನನ್ನ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಕೇಳಿಕೊಳ್ಳಿ: ಮೊದಲ ಕ್ರಮವಾಗಿ, ಪ್ರತಿ ಆಸ್ಥಾನಿಕನೂ.... ಅಲ್ಪವೋ ಅಥವಾ ಅಪಾರವೋ ಆದ ಆಸ್ತಿ ಇರುವ ಸಾಮ್ರಾಜ್ಯದ ಪ್ರತಿಯೊಬ್ಬ ಆಸ್ಥಾನಿಕನೂ, ಆ ಆಸ್ತಿಯಿಂದ ತನ್ನ ಪುತ್ರಾದಿಗಳನ್ನು ಅಬಾಧ್ಯರನ್ನಾಗಿ ಮಾಡಿ, ಆ ಆಸ್ತಿಯನ್ನು ಸಾಮ್ರಾಜ್ಯದ ಹೆಸರಿಗೆ ಉಯಿಲಿನ ಮೂಲಕ ಸಲ್ಲಿಸಿಬಿಡಬೇಕೆಂದು ಈ ಮೂಲಕ ರಾಜಾಜ್ಞೆಯಾಗಿದೆ.

ಸರದಾರ : ಆದರೆ ಸೀಜರ್........

ಕ್ಯಾಲಿಗುಲ : ನಾನು ಇನ್ನೂ ನಿನಗೆ ಮಾತನಾಡಲು ಅವಕಾಶಕೊಟ್ಟಿಲ್ಲ. ಅವಶ್ಯಕತೆ ಬಂದಂತೆಲ್ಲಾ, ಅವರುಗಳು ಸಾಯಬೇಕಾಗುವ ಕ್ರಮಕ್ಕನುಸಾರವಾಗಿ ಒಂದು ಪಟ್ಟಿಯನ್ನು ತಯಾರಿಸಿ, ಈ ಆಸ್ಥಾನಿಕರು ಸಾವನ್ನಪ್ಪುವಂತೆ ಮಾಡಲಿದ್ದೇವೆ; ನಮಗೆ ಖುಷಿ ಬಂದರೆ ನಾವು ಆಜ್ಞೆಯನ್ನು ಸಡಿಲಿಸಲೂಬಹುದು. ಅಲ್ಲದೆ,ಹೇಗೂ ನಾವು ಅವರ ಹಣವನ್ನು ದೋಚಿಯೇ ದೋಚುತ್ತೇವೆ.

ಕೆಸೋನಿಯಾ : (ಬಿಡಿಸಿಕೊಳ್ಳುತ್ತಾ) ಅಲ್ಲ, ಇಂದು ನಿನಗೇನಾಗಿದೆ?

ಕ್ಯಾಲಿಗುಲ : (ಅಚಲಿತನಾಗಿ) ಅವರು ಸಾಯುವ ಕ್ರಮ ಅಷ್ಟೇನೂ ಮುಖ್ಯವಲ್ಲ ಎನ್ನುವುದು ಸ್ಪಷ್ಟವಾಗಿಯೇ ಇದೆ. ಅಥವಾ, ಸ್ವಲ್ಪ ಹೆಚ್ಚೋ ಕಮ್ಮಿ, ಎಲ್ಲ ಸಾವುಗಳಿಗೂ ಸರಿಸಮಾನವಾದ ಮಹತ್ವವಿದೆ-ಅಂದರೆ, ಯಾವುದೇ ಸಾವಿಗೂ ಎಂಥದೇ ರೀತಿಯ ಮಹತ್ವವೂ

ಇಲ್ಲ. ಸತ್ಯಕ್ಕೂ ಆ ಎಲ್ಲರೂ ಸರಿಸಮಾನರಾಗಿದ್ದಾರೆ – ಹ್ಞಾ,ಬ
ಇನ್ನೊಬ್ಬನಷ್ಟೇ ಅಪರಾಧಿ- (ನಿರ್ಧಾರದ ಧ್ವನಿಯಲ್ಲಿ, ಸರದಾರನ
ತಿರುಗಿ) ನೀನು ಕ್ಷಣವೂ ವಿಳಂಬಮಾಡದೆ ಈ ರಾಜಾಜ್ಞೆಯನ್ನ
ಹರಡಿ, ಈಗಿಂದೀಗಲೇ ಜಾರಿಗೆ ತಂದುಬಿಡಬೇಕು. ರೋಮ್ ನ
ನಿವಾಸಿಗಳು ಈ ಸಂಜೆಯ ಒಳಗಾಗಿ, ಹೊರ ಪ್ರದೇಶಗಳ ಜನಗ
ಬಹಳವೆಂದರೆ ತಿಂಗಳ ಒಳಗಾಗಿ ತಮ್ಮ ತಮ್ಮ ಉಯಿಲುಗಳಿಗೆ ಸ
ಮಾಡಿಬಿಡಬೇಕು. ಅಟ್ಟು, ನಿಮ್ಮ ಬೇಹುಗಾರರನ್ನು ಅಟ

ಸರದಾರ : ಸೀಜರ್ ನನಗೆ ಆಶ್ಚರ್ಯವಾಗುತ್ತಿದೆ – ನಿನಗೆ ಅರಿ
........ಅರಿವಾದಾಗ.... ...

ಕ್ಯಾಲಿಗುಲ : ನನಗೆ ಅರಿವಾಗುತ್ತದೆಯೆ ...? ಏಯ್ ಮೂರ್ಖ, ಈ
ಸರಿಯಾಗಿ ಕೇಳಿಕೊ ! ಖಜಾನೆಗೇ ಅಗ್ರಮಾನ್ಯತೆ ಬಂದುಬಿಟ್ಟ
ಮನುಷ್ಯ ಜೀವನಕ್ಕೆ ಯಾವ ಪ್ರಾಮುಖ್ಯತೆಯೂ ಉಳಿಯುವುದಿಲ್ಲ
ಇದನ್ನು ಮೊದಲು ನೀನು ಸ್ಪಷ್ಟವಾಗಿ ತಿಳಿದುಕೊಂಡೇ ತೀರಬೇಕ
ನಿನ್ನ ಹಾಗೆ ಯೋಚಿಸುವ ಜನ ನನ್ನ ಆಜ್ಞೆಯ ತಾರ್ಕಿಕತೆಯನ
ಒಪ್ಪಲೇಬೇಕಾಗುತ್ತದೆ. ಅಲ್ಲದೆ,ಹಣ ಒಂದೇ ಮುಖ್ಯವಾದುದಾ
ರಿಂದ ತನ್ನ ಅಥವಾ ಬೇರೆಯವರ ಜೀವನಕ್ಕೆ ಬೆಲೆ ಇಲ್ಲವೇ ಇ
ವೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ತರ್ಕಬದ್ಧವಾಗಿಯೇ ಉಳಿ
ಬಿಡಬೇಕೆಂದು ನಾನು ತೀರ್ಮಾನಿಸಿಬಿಟ್ಟಿದ್ದೇನೆ ಹಾಗೂ ನ
ತೀರ್ಮಾನವನ್ನು ಜಾರಿಗೆ ತರುವ ಅಧಿಕಾರವೂ ನನಗೆ ಇದ್ದೇ ಇ
ಈಗಿಂದೀಗಲೇ ತಾರ್ಕಿಕತೆಗೆ ಎಂತಹ ಬೆಲೆ ತೆರಬೇಕಾಗುತ್ತ
ಎನ್ನುವುದನ್ನು ನೀನೇ ನೋಡುವೆ – ನಾನು ವಿರೋಧಗಳನ್ನು
ಮತ್ತು ವಿರೋಧಿಗಳನ್ನೂ ಹೊರಗೆ ಎಸೆಯಲೇಬೇಕಾಗಿದೆ. ಅವ
ಕತೆ ಬಂದರೆ ಅದನ್ನು ನಿನ್ನಿಂದಲೇ ಆರಂಭಿಸಿಬಿಡುವೆ !

ಸರದಾರ : ಸೀಜರ್, ನನ್ನ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ-
ನೀನು ನನ್ನನ್ನು ನಂಬಬಹುದು.

ಕ್ಯಾಲಿಗುಲ : ನೀನೂ ನನ್ನನ್ನು ನಂಬಬಹುದು—ಭರವಸೆ ಕೊಟ
ಹೇಳುತ್ತಿದ್ದೇನೆ. ನಿನ್ನ ದೃಷ್ಟಿಯನ್ನು ನಾನು ಒಪ್ಪಿಕೊಳ್ಳಲು ಮತ

ಖಜಾನೆಗೆ ನನ್ನ ಕಾರ್ಯಕ್ರಮದಲ್ಲಿ ಮೊಟ್ಟಮೊದಲ ಸ್ಥಾನ ಕೊಡಲು ನಾನು ಹೇಗೆ ಸಿದ್ಧನಾಗಿದ್ದೇನೆ ಎನ್ನುವುದನ್ನು ನೀನೇ ನೋಡು. ನಿಜಕ್ಕೂ ನೀನು ನನಗೆ ಋಣಿಯಾಗಿರಬೇಕು – ನಿನ್ನ ಎಲೆಗಳನ್ನೇ ತೆಗೆದುಕೊಂಡು ನಿನ್ನ ಕೈಗೇ ಆಟವನ್ನು ಹಾಕುತ್ತಿದ್ದೇನೆ. (ಮೌನವಾಗಿದ್ದು, ಜಡ ಮತ್ತು ಭಾವರಹಿತ ಧ್ವನಿಯಲ್ಲಿ) ಒಟ್ಟಿನಲ್ಲಿ, ಈ ವಿಷಯವನ್ನು ನಿರ್ಣಯಿಸುವ ನನ್ನ ಯೋಚನೆಯ ಸರಳತೆಯಲ್ಲಿ ಸಾಕಷ್ಟು ಪ್ರತಿಭೆಯ ಸ್ಪರ್ಶವಿದೆ. ನಿನ್ನನ್ನು ನೀನೇ ಇಲ್ಲಿಂದ ಹೊರ ದೂಡಲು ಮೂರು ಕ್ಷಣಗಳ ಅವಕಾಶ ಕೊಡುತ್ತೇನೆ – ಒಂದು....

(ಸರದಾರ ಓಡಿ ಹೋಗುತ್ತಾನೆ.)

ಕೆಸೋನಿಯಾ : ಹೀಗೆಲ್ಲಾ ಆಡುತ್ತಿದ್ದವನು ನೀನೇ ಎಂದು ನಂಬುವುದಕ್ಕೇ ಆಗಲಿಲ್ಲ ! – ಆದರೆ, ಇದೆಲ್ಲಾ..... ನೀನು ಅವನಿಗೆ ಹೇಳಿದ್ದೆಲ್ಲಾ ಕೇವಲ ಒಂದು ತಮಾಷೆ, ಅಲ್ಲವೆ ?

ಕ್ಯಾಲಿಗುಲ : ಹಾಗೇನೂ ಅಲ್ಲ, ಕೆಸೋನಿಯಾ – ಇದು ರಾಜತಾಂತ್ರಿಕತೆಯಲ್ಲಿನ ಒಂದು ಪಾಠ ಎಂದು ಇಟ್ಟುಕೊಳ್ಳೋಣ.

ಸಿಪಿಯೋ : ಆದರೆ ಕಾಯಸ್, ಇದು ... ಇದು ಅಸಾಧ್ಯ ! ...

ಕ್ಯಾಲಿಗುಲ : ಸಂಪೂರ್ಣ ಉದ್ದೇಶವೇ ಅದು !

ಸಿಪಿಯೋ : ನನಗೆ ಅರ್ಥವೇ ಆಗುತ್ತಿಲ್ಲ.

ಕ್ಯಾಲಿಗುಲ : ನಾನು ಮತ್ತೆ ಹೇಳುತ್ತೇನೆ, ಕೇಳು – ನನ್ನ ಉದ್ದೇಶವೇ ಅದು:ನಾನು ಅಸಾಧ್ಯವನ್ನು ದೋಚಿಬಿಡುತ್ತಿದ್ದೇನೆ ಅಥವಾ ಅದನ್ನೇ ಹೆಚ್ಚು ಕರಾರುವಾಕ್ಕಾಗಿ ಹೇಳುವುದೇ ಆದರೆ ಅಸಾಧ್ಯವನ್ನು ಸಾಧ್ಯಗೊಳಿಸುವ ಪ್ರಯತ್ನದಲ್ಲಿದ್ದೇನೆ.....

ಸಿಪಿಯೋ : ಆದರೆ ಇಂತಹ ಆಟ .. ಆಟದಿಂದ ಏನು ಬೇಕಾದರೂ ಆಗಿಬಿಡಬಹುದು ! ಹುಚ್ಚ ತನ್ನ ಕಾಲವನ್ನು ಕಳೆಯುವ ವಿಧಾನ ಇದು.

ಕ್ಯಾಲಿಗುಲ : ಅಲ್ಲ, ಸಿಪಿಯೋ ಅಲ್ಲ–ಇದು ಸಾಮ್ರಾಟನ ವಿಹಾರಾರ್ಥವಾದ ಉದ್ಯೋಗ. (ಆಯಾಸದಿಂದಾಗಿ ಮೆತ್ತೆಗಳ ಮೇಲಕ್ಕೆ ಕುಸಿದು

ಕೊಳ್ಳುತ್ತಾ) ಆಹ್ ! – ನನ್ನ ಪ್ರೀತಿಪಾತ್ರರೇ ಕಟ್ಟ ಕಡೆಗಾದರೂ ಪರಮಾಧಿಕಾರದ ಉಪಯೋಗವನ್ನು ಕಾಣುವಂತಾಯಿತು–ಅದು ಅಸಾಧ್ಯಗಳಿಗೆ ಒಂದು ಬಗೆಯ ಚಾಲನೆಯನ್ನು ಕೊಡುತ್ತದೆ. ಇಂದಿನಿಂದ ಮೊದಲುಗೊಂಡು, ಈ ಬದುಕು ಸನ್ನದಾಗಿರುವಷ್ಟು ಕಾಲವೂ ನನ್ನ ಸ್ವಾತಂತ್ರ್ಯಕ್ಕೆ ಇತಿಮಿತಿಗಳೇ ಇರುವುದಿಲ್ಲ.

ಕೆಸೋನಿಯಾ : (ಸೋಪಿನಿಂದ) ನಿನ್ನ ಈ ಅನ್ವೇಷಣೆ ನಮ್ಮನ್ನು ಸುಖಿಗಳನ್ನಾಗಿ ಮಾಡುತ್ತದೆ ಎನ್ನುವ ವಿಚಾರದಲ್ಲಿ ನನಗೆ ನಂಬಿಕೆ ಇಲ್ಲ.

ಕ್ಯಾಲಿಗುಲ : ನನಗೂ ನಂಬಿಕೆ ಇಲ್ಲ– ಆದರೂ, ಆ ಬಾಳನ್ನು ಬಾಳಿ ನೋಡಿದಾಗಲೇ ಯಾವುದೂ ಗೊತ್ತಾಗುತ್ತದೆ ಎಂದು ನನಗೆ ಅನ್ನಿಸುತ್ತಿದೆ.

(ಚೆರಿಯಾನ ಪ್ರವೇಶ)

ಚೆರಿಯಾ : ನೀನು ಹಿಂದಿರುಗಿದ ವಿಚಾರ ಈಗಷ್ಟೇ ತಿಳಿಯಿತು. ನಿನ್ನ ಆರೋಗ್ಯ ಹೇಗೆ ಇರಬೇಕೋ ಹಾಗೆ ಇದೆ ಎಂದು ನಂಬುತ್ತೇನೆ.

ಕ್ಯಾಲಿಗುಲ : ನನ್ನ ಆರೋಗ್ಯ ಯಥೋಚಿತವಾಗಿ ಖುಣಿಯಾಗಿದೆ. (ಮೌನವಾಗಿದ್ದು ನಂತರ ಇದ್ದಕ್ಕಿದ್ದಂತೆ) ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡು, ಚೆರಿಯಾ – ನಿನ್ನನ್ನು ನೋಡುತ್ತಾ ಇರುವುದು ನನ್ನಿಂದ ಆಗದು.

ಚೆರಿಯಾ : ನಿಜಕ್ಕೂ, ಕಾಯಸ್, ನಾನು ಬೆರಗಾಗಿ ಹೋಗಿದ್ದೇನೆ ..

ಕ್ಯಾಲಿಗುಲ : ಬೆರಗಾಗಿ ಹೋಗಲು ಏನೂ ಕಾರಣವೇ ಇಲ್ಲ – ಸಾಹಿತಿಗಳೆಂದರೆ ನನಗೆ ಇಷ್ಟವಾಗುತ್ತಿಲ್ಲ. ಏಕೆಂದರೆ, ಸುಳ್ಳುಗಳನ್ನು ನಾನು ಇನ್ನು ಸಹಿಸಲಾರೆ.

ಚೆರಿಯಾ : ನಾವು ಒಂದು ಪಕ್ಷ ಸುಳ್ಳಾಡಿದ್ದೇ ಆದರೆ ಅದು ಬಹುತೇಕವಾಗಿ ಗೊತ್ತಾಗದೇ ಆಡಿದ್ದು. ನಾನು ನಿರಪರಾಧಿಯೆಂದು ರುಜು ವಾತು ಪಡಿಸಬಲ್ಲೆ.

ಕ್ಯಾಲಿಗುಲ : ಸುಳ್ಳು ಎಂದೂ ಪಾಪಮುಕ್ತವಾದುದಾಗಲಾರದು.

ಅಲ್ಲದೆ, ನಿಮ್ಮ ಸುಳ್ಳುಗಳಿಂದಾಗಿ ಮನುಷ್ಯನಿಗೆ ಮತ್ತು ವಸ್ತುಗಳಿಗೆ ಇಲ್ಲದ ಬೆಲೆ ಬಂದು ಬಿಡುತ್ತದೆ. ಈ ಕಾರಣದಿಂದಲೇ ನಾನು ನಿಮ್ಮ ಗಳನ್ನು ಕ್ಷಮಿಸಲಾಗುವುದಿಲ್ಲ.

ಚೆರಿಯಾ : ಆದರೂ, ನಮ್ಮ ಪಾಲಿಗೆ ಇರುವ ಜಗತ್ತು ಇದೊಂದೇ ಆದ್ದರಿಂದ ಅದರ ಪರವಾಗಿ ನಾವೇಕೆ ವಾದಮಾಡಬಾರದು ?

ಕ್ಯಾಲಿಗುಲ : ನಿಮ್ಮ ವಾದ ತೀರ ವಿಳಂಬವಾಗಿ ನಮ್ಮ ಮುಂದೆ ಬಂದಿದೆ; ಅಲ್ಲದೆ,ತೀರ್ಪನ್ನು ಈಗಾಗಲೇ ಕೊಟ್ಟಾಗಿಹೋಗಿದೆ. ಈ ಜಗತ್ತಿಗೆ ಯಾವ ಬೆಲೆಯೂ ಇಲ್ಲ; ಒಮ್ಮೆ ಈ ಅರಿವು ಮನುಷ್ಯನಿಗೆ ಬಂದರೆ ಸಾಕು, ಆತ ತನ್ನ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡುಬಿಡುತ್ತಾನೆ. (ಮೇಲೇಳುತ್ತಾ)ಆದ್ದರಿಂದಲೇ ನಾನು ನಿನ್ನನ್ನೂ ಮತ್ತು ನಿನ್ನಂತಹ ವರನ್ನೂ ದ್ವೇಷಿಸುವುದು—ಕಾರಣ, ನೀವುಗಳು ಇನ್ನೂ ಮುಕ್ತ ರಾಗಿಲ್ಲ. ಇಡೀ ರೋಮ್ ಸಾಮ್ರಾಜ್ಯದಲ್ಲಿರುವ ಒಬ್ಬನೆ ಒಬ್ಬ ಮುಕ್ತ ಮಾನವನನ್ನು ನೀವು ನನ್ನಲ್ಲಿ ಕಾಣಬಲ್ಲಿರಿ. ಕೊನೆಗಾದರೂ ಸ್ವಾತಂತ್ರ್ಯದ ಹಾದಿಯತ್ತ ಬೆರಳುಮಾಡಿತೋರಿಸುವ ಸಾರ್ವಭೌಮ ನೊಬ್ಬ ನಿಮ್ಮಗಳ ಮಧ್ಯೆ ಇದ್ದಾನೆಂದು ನೀವುಗಳು ಸಂತೋಷ ಪಡ ಬೇಕು. ನನ್ನ ಪಾಲಿಗೆ ನನ್ನನ್ನು ಬಿಡು, ಚೆರಿಯಾ ; ನೀನೂ ಅಷ್ಟೇ ಸಿಪಿಯೋ, ಹೋಗಿ ಬಿಡು—ಸ್ನೇಹ ಇರುವುದಾದರೂ ಏತಕ್ಕಾಗಿ? —ಹೋಗಿ, ನೀವುಗಳಿಬ್ಬರೂ ಹೋಗಿ – ಕಟ್ಟಕಡೆಗೆ ರೋಮ್ ಸಾಮ್ರಾಜ್ಯಕ್ಕೆ ಸರ್ವತಂತ್ರ ಸ್ವಾತಂತ್ರ್ಯ ಸಿಕ್ಕಿದೆ; ಅಲ್ಲದೆ, ಈ ಸ್ವಾತಂತ್ರ್ಯದ ಜೊತೆಗೇ ಮಹಾ ಪರೀಕ್ಷೆಯ ಕಾಲವೂ ಆರಂಭ ವಾಗಿದೆ ಎಂದು – ಘೋಷಿಸಿ ಬಿಡಿ.

(ಅವರು ನಿರ್ಗಮಿಸುತ್ತಾರೆ. ಕ್ಯಾಲಿಗುಲ ತನ್ನ ಕಣ್ಣುಗಳನ್ನು ಮುಚ್ಚಿ ಕೊಳ್ಳುತ್ತಾ ಬೇರೆ ಕಡೆಗೆ ತಿರುಗಿಕೊಂಡು ಬಿಡುತ್ತಾನೆ.)

ಕೆಸೋನಿಯಾ : ಅಳುತ್ತಾ ಇದ್ದಿಯೇ ?

ಕ್ಯಾಲಿಗುಲ : ಹೌದು, ಕೆಸೋನಿಯಾ—ಅಳುತ್ತಾ ಇದ್ದೇನೆ !

ಕೆಸೋನಿಯಾ : ಅಲ್ಲ, ಬಹಳ ಅಂದರೆ ನಿನ್ನ ಬಾಳಿನಲ್ಲಿ ಆಗಿರುವ

ಬದಲಾವಣೆಯಾದರೂ ಏನು? ನೀನು ಡ್ರುಸಿಲ್ಲಾಳನ್ನು ಪ್ರೀತಿಸಿರಬಹುದು-ಆದರೆ,ಅವಳನ್ನು ಪ್ರೀತಿಸುತ್ತಿರುವ ಕಾಲದಲ್ಲೇ-ನನ್ನನ್ನೂ ಸೇರಿ-ನೀನು ಅನೇಕರನ್ನು ಪ್ರೀತಿಸುತ್ತಿದ್ದೆಯಲ್ಲವೆ? ಇದಿಷ್ಟೇ ಇಷ್ಟು ಕಾರಣ ಮೂರು ಹಗಲು ಹಾಗೂ ಮೂರು ರಾತ್ರಿಗಳ ಕಾಲ ನಿನ್ನನ್ನು ಕಾಡು ಮೇಡುಗಳಲ್ಲಿ, ಗುಡ್ಡ ಹಳ್ಳಿಗಾಡುಗಳಲ್ಲಿ ಅಲೆಸಿ, ನಿನ್ನ ಕಣ್ಣುಗಳಿಗೆ ಇಷ್ಟು........ಇಷ್ಟೊಂದು ಕ್ರೂರ ದೃಷ್ಟಿ ಬಡಿದು ತಂದು ಹಿಂದಕ್ಕೆ, ಅದೂ ಹೀಗೆ ಬಿಡಬೇಕೆ?

ಕ್ಯಾಲಿಗುಲ : (ಅವಳ ಸುತ್ತ ಮುತ್ತ ತೊರಾಡಿ) ಎಂತಹ ಅಸಂಬದ್ಧತೆ ನೀನಾಡುತ್ತಿರುವುದು! ಡ್ರುಸಿಲ್ಲಾಳನ್ನೇಕೆ ಇಲ್ಲಿಗೆ ಎಳೆಯುತ್ತಿದ್ದೀ? ಮನುಷ್ಯ ಅಳುವುದಕ್ಕೆ ಪ್ರೇಮ ಒಂದೇ ಕಾರಣವೆಂದು ಭಾವಿಸುತ್ತೀಯೆ ಏನು?

ಕೆಸೋನಿಯಾ : ನನ್ನ ಮಾತಿನಿಂದ ನೋವಾಗಿದ್ದರೆ ನನ್ನನ್ನು ಕ್ಷಮಿಸು, ಕಾಯಸ್. ನಾನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ-ಅಷ್ಟೇ........

ಕ್ಯಾಲಿಗುಲ : ಮನುಷ್ಯ ಏಕೆ ಅಳುತ್ತಾನೆ ಎಂದರೆ ... ಜಗತ್ತೇ....... ಇಡೀ ಜಗತ್ತೇ ತಪ್ಪುತಪ್ಪಾಗಿದೆ.

(ಅವಳು ಅವನ ಸಮೀಪಕ್ಕೆ ಬರುತ್ತಾಳೆ)

ಬೇಡ ... ಬೇಡ, ಕೆಸೋನಿಯಾ!

(ಅವಳು ಹಿಂದಿಂದಕ್ಕೆ ಹೋಗುತ್ತಾಳೆ)

ಆದರೂ ನೀನು ನನ್ನ ಬಳಿಯಲ್ಲೇ ಇದ್ದುಬಿಡು!

ಕೆಸೋನಿಯಾ : ನೀನು ಬಯಸಿದ್ದನ್ನೆಲ್ಲಾ ನಾನು ಮಾಡುವೆ.(ಕುಳಿತುಕೊಳ್ಳುತ್ತಾಳೆ) ನನ್ನ ವಯಸ್ಸಿನಲ್ಲಿ ಜೀವನ ಎನ್ನುವುದು ಒಂದು ದುಃಖಿತ ವ್ಯವಹಾರವೆಂದು ಯಾರಿಗೇ ಆದರೂ ಗೊತ್ತು. ಆದರೆ, ತಿಳಿದೂತಿಳಿದೂ ಅದನ್ನು ಮತ್ತಷ್ಟುಹದಗೆಡಿಸಲು ಹೋಗಬೇಕೇಕೆ?

ಕ್ಯಾಲಿಗುಲ : ಹಾಗೆಲ್ಲಾ ಮಾಡಬಾರದು, ಅದು ಒಳ್ಳೆಯದಲ್ಲ; ನಿನಗೆ ಅರ್ಥವೂ ಆಗುವುದಿಲ್ಲ. ಹೋಗಲಿ, ಅರ್ಥವಾಗದಿದ್ದರೆ ತಾನೆ ಏನು

—ಪ್ರಾಯಶಃ, ಇಂಥಹದಕ್ಕೆಲ್ಲಾ ನಾನು ಹಾದಿಯೊಂದನ್ನು ಅನ್ವೇಷಿಸಿಯೇ ಬಿಡುತ್ತೇನೆ ಎಂದು ಕಾಣುತ್ತಿದೆ: ಕನಸಿನಲ್ಲೂ ಕಾಣಲಾರದಂತಹ ವಸ್ತುಗಳು ತಮ್ಮನ್ನು ತಾವೇ – ನನ್ನಿಂದ ಹೊರಕ್ಕೆ – ಬೆಳಕಿನ ಎತ್ತರಕ್ಕೆ ದಬ್ಬಿಕೊಂಡು ಹೋಗುತ್ತಿರುವಂತಹ ಒಂದು ರೀತಿಯ ಕುತೂಹಲಕಾರಿ ತೊಳಲಾಟ ಮಾತ್ರ ನನಗೆ ಆಗುತ್ತಿದೆ; ಹಾಗೂ ನಾನು ಅದರ ಮುಂದೆ ನಿಃಸಹಾಯಕನಾಗಿ ಹೋಗಿದ್ದೇನೆ! (ಅವಳ ಹತ್ತಿರ ಹತ್ತಿರಕ್ಕೆ ಹೋಗುತ್ತಾ) ಓಹ್, ಕೆಸೋನಿಯಾ, ಮನುಷ್ಯ ಯಾತನೆಯನ್ನು ಅನುಭವಿಸುತ್ತಾನೆಂದು ಮಾತ್ರ ಗೊತ್ತಿತ್ತು— ಆದರೆ, ಆ ಪದ 'ಯಾತನೆ' ಏನೆಂದು ಮಾತ್ರ ಗೊತ್ತಿರಲಿಲ್ಲ. ಉಳಿದವರ ಹಾಗೆ ನಾನೂ ಅದು ಕೇವಲ ಮಾನಸಿಕರೋಗ ಮಾತ್ರವೆಂದು-ಇನ್ನೇನೂ ಅಲ್ಲವೆಂದು ಅಂದುಕೊಂಡುಬಿಟ್ಟದ್ದೆ. ಆದರೆ, ಸತ್ಯ ಬೇರೆಯೇ ಇದೆ – ಯಾತನೆಯನ್ನು ಅನುಭವಿಸುತ್ತಿರುವುದು ಈ ನನ್ನ ಶರೀರ. ಯಾತನೆ....ಎದೆಯಲ್ಲಿ, ಕಾಲುಗಳಲ್ಲಿ ಮತ್ತು ತೋಳುಗಳಲ್ಲಿ – ಎಲ್ಲೆಲ್ಲೂ ಯಾತನೆ; ನನ್ನ ಚರ್ಮ ಕೂಡ ಹಸಿಹಸಿಯಾಗಿದೆ; ತಲೆ ಗೇರಿಹೊಡೆಯುತ್ತಿದೆ; ವಾಂತಿಯಾಗುವ ಹಾಗೆ ಕಾಣುತ್ತಿದೆ. ಆದರೆ, ಎಲ್ಲಕ್ಕಿಂತಲೂ ಕೆಟ್ಟದೆಂದರೆ ನನ್ನ ಬಾಯಿಯ ವಿಲಕ್ಷಣರುಚಿ—ಆ ರುಚಿ ರಕ್ತದ್ದಲ್ಲ ಅಥವಾ ಸಾವಿನದಲ್ಲ ಅಥವಾ ಜ್ವರದ್ದೂ ಅಲ್ಲ—ಆದರೆ ಆ ರುಚಿ ಈ ಮೂರರ ಮಿಶ್ರಣ! ನಾನು ನಾಲಗೆಯನ್ನು ಹೊರಳಿಸಿದರೆ ಸಾಕು – ಜಗತ್ತಿನ ತುಂಬಾ ಕತ್ತಲು ಆವರಿಸಿಕೊಳ್ಳುತ್ತದೆ ಮತ್ತು ಮನುಷ್ಯರೆಲ್ಲರೂ ಭೀಕರವಾಗಿ ಕಾಣಿಸತೊಡಗುತ್ತಾರೆ. ಅಬ್ಬಬ್ಬ! – ಎಷ್ಟೆಲ್ಲಾ ಕಷ್ಟ ಮತ್ತು ಎಷ್ಟೊಂದು ಕ್ರೂರ ಈ ಮನುಷ್ಯ ಮನುಷ್ಯನಾಗುವ ವಿಧಾನ!

ಕೆಸೋನಿಯಾ: ನಿನಗೆ ಬೇಕಾಗಿರುವುದು, ನನ್ನ ಪ್ರಿಯ, ಒಂದು ಒಳ್ಳೆಯ ಹಾಗೂ ಸುದೀರ್ಘವಾದ ನಿದ್ದೆ. ನೀನು ಈಗ ವಿಶ್ರಾಂತಿ ತೆಗೆದುಕೊಳ್ಳಬೇಕು; ಅಲ್ಲದೆ ಎಲ್ಲಕ್ಕೂ ಹೆಚ್ಚಾಗಿ ಚಿಂತಿಸುವುದನ್ನು ನಿಲ್ಲಿಸಬೇಕು. ನೀನು ನಿದ್ದೆ ಮಾಡುವಾಗ ನಾನು ನಿನ್ನ ಬಳಿಯೇ ಇರುತ್ತೇನೆ. ನಿನಗೆ ಎಚ್ಚರವಾದಾಗ ಜಗತ್ತು ತನ್ನ ರಕ್ಷಕನನ್ನು

ಮತ್ತೆ ಪಡೆದಿರುವುದನ್ನು ನೀನೇ ನೋಡುವೆ. ಆಗ ನೀನು ನಿನ್ನ ಅಧಿಕಾರವನ್ನು ಹೆಚ್ಚು ಅರ್ಥಪೂರ್ಣವಾಗಿ – ಅಂದರೆ, ಆಗಲೂ ಪ್ರೀತಿಸಲು ಯೋಗ್ಯವಾಗಿ ಉಳಿದುವನ್ನು ಮತ್ತಷ್ಟು ಉತ್ಕಟವಾಗಿ ಪ್ರೀತಿಸಲು ಉಪಯೋಗಿಸಿಯೇ ತೀರಬೇಕು. ಏಕೆಂದರೆ, ಒಂದು ಅವಕಾಶವನ್ನು ಪಡೆಯುವ ಯೋಗ್ಯತೆ ಸಾಧ್ಯತೆಗೂ ಇದೆ.

ಕ್ಯಾಲಿಗುಲ : ಆಹ್ ! ನನ್ನನ್ನು ನಾನು ಕಳೆದುಕೊಳ್ಳುವ ಅಥವಾ ಮರೆಯುವ ಸಲುವಾಗಿಯೇ ನಾನು ನಿದ್ದೆಹೋಗಿ ಬಿಡಬೇಕಾಗುತ್ತದೆ—ನನ್ನಿಂದ ಅದು ಸಾಧ್ಯವೇ ಇಲ್ಲ.

ಕೆಸೋನಿಯಾ : ಮಿತಿಮೀರಿದ ಆಯಾಸವಾದಾಗ ಯಾರಿಗೇ ಆದರೂ ಇದೇ ರೀತಿ ಅನ್ನಿಸುತ್ತದೆ. ಆದರೂ, ಮುಷ್ಠಿ ಮತ್ತೆ ಬಿಗಿಯಾಗುವ ಕಾಲ ಬಂದೇ ಬರುತ್ತದೆ.

ಕ್ಯಾಲಿಗುಲ : ಆದರೆ, ಆ ಬಿಗಿಮುಷ್ಠಿಯನ್ನು ಯಾವುದರ ಮೇಲೆ ಇಟ್ಟೇ ತೀರಬೇಕೆಂದು ಗೊತ್ತಿರಬೇಕು – ನೋಡು : ಹಾಗಿಲ್ಲವಾದರೆ.... ಸೂರ್ಯನನ್ನು ಪೂರ್ವದಲ್ಲಿ ಅಸ್ತಮಿಸುವಂತೆ ಮಾಡಲಾಗದಿದ್ದರೆ , ಸಮಸ್ತ ಯಾತನೆಯನ್ನೂ ಅಂತ್ಯಗೊಳಿಸಲಾಗದಿದ್ದರೆ...... ,ಜೊತೆ ಜೊತೆಗೇ ಸಾವನ್ನು ಗೆಲ್ಲಲಾಗದಿದ್ದರೆ....,ಈ ಬಿಗಿ ಮುಷ್ಠಿಯ...., ದಿಗ್ಭ್ರಮೆಗೊಳಿಸುವಂತಹ ನನ್ನ ಈ ಪರಮಾಧಿಕಾರದ ಉಪಯೋಗವಾದರೂ ಏನು ? ಎಲ್ಲಾ ಒಂದೇ ....ಕೆಸೋನಿಯಾ, ಸೃಷ್ಟಿಯ ರೀತಿನೀತಿಯನ್ನು ಆಮೂಲಾಗ್ರವಾಗಿ ಬದಲಾಯಿಸಬಲ್ಲ ಅಧಿಕಾರ ನನಗಿಲ್ಲವಾದರೆ ನಾನು ನಿದ್ದೆ ಮಾಡಿಬಿಟ್ಟರೂ ಒಂದೇ ; ಎಚ್ಚರವಾಗಿಯೇ ಉಳಿದು ಬಿಟ್ಟರೂ ಒಂದೇ.

ಕೆಸೋನಿಯಾ : ಇದು ಭ್ರಮೆ, ಬರಿಯ ಭ್ರಮೆ : ಭೂಮಿಯ ಮೇಲಣ ದೈವವಾಗುವ ಬಯಕೆ ಇದು !

ಕ್ಯಾಲಿಗುಲ : ಹಾಗಾದ ಮೇಲೆ, ನೀನು ಕೂಡ ನಾನು ಹುಚ್ಚನಾಗಿ ಬಿಟ್ಟದ್ದೇನೆ ಎಂದುಕೊಂಡಿದ್ದೀಯೇ, ಅಲ್ಲವೇ! ಹೋಗಲಿ – ನಾನು ನನ್ನೊಡನೆ ಸರಿಸಮಾನತೆಯನ್ನು ಬಯಸುತ್ತಿರುವ ದೈವತ್ವವಾದರೂ ಯಾವುದದು? ಅದನ್ನಲ್ಲ–ನಾನು ಬಯಸುತ್ತಿರುವುದು, ನನ್ನ ಸಮಸ್ತ

ಹೃದಯ ಮತ್ತು ಆತ್ಮಗಳಿಂದ ಪರಿತಪಿಸುತ್ತಿರುವುದು ಅದಕ್ಕೂ ಮೀರಿದ್ದಕ್ಕಾಗಿ, ನಿಜ ದೈವತ್ವಕ್ಕೂ ಅತೀತವಾದುದಕ್ಕಾಗಿ........ ಅಸಾಧ್ಯವೇ ಸಾಧ್ಯವಾದ ರಾಜ್ಯವನ್ನು ನಾನು ಆಕ್ರಮಿಸಿಕೊಂಡು ಬಿಡುತ್ತಿದ್ದೇನೆ....

ಕೆಸೋನಿಯಾ : ಆಕಾಶ ಆಕಾಶವಾಗಿಯೇ ಉಳಿದಿರುವುದನ್ನು; ಅಥವಾ ಹಾಲ ಹಸುಳೆಯ ಮುಖದಲ್ಲಿ ಮುಪ್ಪಡರುತ್ತಿರುವುದನ್ನು ಅಥವಾ ಮನುಷ್ಯನ ಹೃದಯದಲ್ಲಿ ಬಲಿಯುತ್ತಿರುವ ಕಹಿಯನು ತಪ್ಪಿಸುವುದು ನಿನ್ನಿಂದಂತೂ ಸಾಧ್ಯವಾಗಲಾರದು.

ಕ್ಯಾಲಿಗುಲ : (ಉದ್ವೇಗಗೊಳ್ಳುತ್ತಾ) ಸಾಧ್ಯವಾಗಿಸಬೇಕಾಗಿದೆ – ನಾನ್ನು .... ನಾನು ಸಮುದ್ರದ ಆಳಕ್ಕೆ ಆಕಾಶವನ್ನು ಮುಳುಗಿಸ ಬೇಕಾಗಿದೆ ; ಕುರೂಪವನ್ನು ಸೌಂದರ್ಯದೊಡನೆ ಬೆಸೆಯ ಬೇಕಾಗಿದೆ ; ನೋವಿನಿಂದ ನಗುವನ್ನು ಹಿಂಡಿ ತೆಗೆಯಬೇಕಾಗಿದೆ.

ಕೆಸೋನಿಯಾ : (ಅವನ ಮುಖವನ್ನೇ ದಿಟ್ಟಿಸುತ್ತಾ, ಅಂಗಲಾಚುತ್ತಾ) ಒಳ್ಳೆಯದು-ಕೆಟ್ಟದ್ದು, ಹಿರಿದು-ಕಿರಿದು ಮತ್ತು ನ್ಯಾಯ - ಅನ್ಯಾಯ ... ಇತ್ಯಾದಿ ತಾರತಮ್ಯಗಳೇ ಈ ಜಗತ್ತು. ನಾನು ಪ್ರಮಾಣ ಮಾಡಿ ಹೇಳುತ್ತಿದ್ದೇನೆ—ಇವುಗಳು ಎಂದೂ ಬದಲಾಗಲಾರವು.

ಕ್ಯಾಲಿಗುಲ : (ಅವಳದೇ ಧಾಟಿಯಲ್ಲಿ)ನಾನು ಅವುಗಳನ್ನು ಬದಲಾಯಿಸಿಯೇ ತೀರುವ ದೀಕ್ಷೆ ಹೊತ್ತಿದ್ದೇನೆ...ನಾನು ಈ ನಮ್ಮ ಯುಗವನ್ನು ಒಂದು ಶ್ರೇಷ್ಠ ಕೊಡುಗೆಯಾಗಿ—ಸರಿಸಮಾನತೆಯ ಕೊಡುಗೆಯ ಯುಗವಾಗಿ–ಪರಿವರ್ತಿಸಿಯೇ ತೀರುತ್ತೇನೆ. ಎಲ್ಲವೂ ಸರಿಸಮನಾದ ನಂತರ, ಅಸಾಧ್ಯತೆ ಭೂಮಿಗೆ ಇಳಿದು ಬಂದನಂತರ, ಚಂದ್ರ ನನ್ನ ಅಂಗೈಗಳ ಮೇಲೆ ನೆಲೆ ನಿಂತನಂತರ, ಪ್ರಾಯಶಃ ಜಗತ್ತು ಹೊಚ್ಚ ಹೊಸದಾಗಿ, ನನಗೆ ದಿವ್ಯರೂಪ ಪ್ರಾಪ್ತವಾಗಿಬಿಡುತ್ತದೆ ; ಆಗ ಮನುಷ್ಯ ಸಾವು ಮತ್ತು ನೋವಿಲ್ಲದ ನಿತ್ಯಸುಖಿಯಾಗಿಬಿಡುತ್ತಾನೆ.

ಕೆಸೋನಿಯಾ :(ಸ್ವಲ್ಪ ಅತ್ತು) ಆಗ ಪ್ರೇಮ ...ಪ್ರೇಮದ ಗತಿ? ನೀನು ಆಗ ಪ್ರೇಮವನ್ನು ನಿರ್ಲಕ್ಷದಿಂದ ಕಾಣುವುದಿಲ್ಲ, ಅಲ್ಲವೆ?

ಕ್ಯಾಲಿಗುಲ : (ಅತಿ ಕೋಪದಿಂದ ಸಿಡಿದು) ಪ್ರೇಮ, ಕೆಸೋನಿಯಾ! (ಅವಳ

(ತೋಳನ್ನು ಬಲವಾಗಿ ಹಿಡಿದು, ಅವಳನ್ನು ಅಳ್ಳಾಡಿಸುತ್ತಾ) ಪ್ರೇಮದ ಸತ್ವವೇನೆಂದು ನನಗೆ ಈಗ ಮನವರಿಕೆಯಾಗಿದೆ—ಅದು ಶೂನ್ಯ, ಕೇವಲ ಶೂನ್ಯ! ಆತ ಹೇಳಿದ್ದೇ ಸರಿ—ನೀನು ಆತನ ಮಾತನ್ನು ಕೇಳಲಿಲ್ಲವೇ? ಜೆಲೆ ಇರುವುದು ಬೊಕ್ಕಸಕ್ಕೆ ಮಾತ್ರ-ಅದೇ ಎಲ್ಲದರ ಸ್ಫೂರ್ತಿಶಿಖೆ. ಆಹ್, ಕೊನೆಗಾದರೂ – ಈಗಲಾದರೂ, ನಾನು ಬದುಕುವಂತೆ...ನಿಜಕ್ಕೂ ಬದುಕುವಂತೆ ಆಯಿತು ! ಅಲ್ಲದೆ, ಬದುಕುವುದು ಎಂದರೆ ಏನು ಗೊತ್ತೆ –ಪ್ರೇಮಿಸುವುದಕ್ಕೆ ತದ್ವಿರುದ್ಧವಾದುದು ಅದು ! ನನಗೆ ನಾನು ಏನುಮಾತನಾಡುತ್ತಿದ್ದೇನೆ ಎನ್ನುವುದರ ಅರಿವಿದೆ—ಇಡೀ ಲೋಕವನ್ನೇ ತೀರ್ಪಿಗಾಗಿ ಕರೆದಂತಹ, ದೇವತೆಗಳೇ ಬೆಕ್ಕಸಬೆರಗಾಗಿ ಮಿಕಿಮಿಕಿ ನೋಡುವಂತಹ, ಅತಿ ಭವ್ಯವಾದ ಪ್ರದರ್ಶನ ಒಂದಕ್ಕೆ ನಿನ್ನನ್ನು ಆಹ್ವಾನಿಸುತ್ತಿದ್ದೇನೆ. ಆದರೆ, ಆ ದೃಷ್ಯಕ್ಕಾಗಿ ಒಂದು ಜನಜಂಗುಳಿ – ನೂರಾರು ಹಾಗೂ ಸಹಸ್ರಾರು ಸಂಖ್ಯೆಯಲ್ಲಿ ವೀಕ್ಷಕರ, ಆಪಾದಿತ ಬಲಿಗಳ, ಅಪರಾಧಿಗಳ ಗುಂಪಿಗೆ ಗುಂಪೇ—ನನಗೆ ಬೇಕಾಗಿದೆ. (ಕರೆಜಾಗಟೆಯತ್ತ ನುಗ್ಗಿ ಅದನ್ನು ಹೆಚ್ಚೆಚ್ಚು ವೇಗವಾಗಿ ಬಡಿಯಲಾರಂಭಿಸಿ) ಶಿಕ್ಷೆಗೆ ಬಲಿಯಾದವರನ್ನೆಲ್ಲಾ ಕರೆದು ತನ್ನಿ ; ನನ್ನ ಅಪರಾಧಿಗಳು–ನಿಜ, ಆ ಎಲ್ಲರೂ ಅಪರಾಧಿಗಳೇ – ನನಗೆ ನನ್ನ ಅಪರಾಧಿಗಳೆಲ್ಲಾ ಬೇಕಾಗಿದ್ದಾರೆ. (ಇನ್ನೂ ಜಾಗಟೆ ಬಡಿಯುವುದನ್ನು ಮುಂದುವರೆಸಿ) ಮರಣದಂಡನೆಗೆ ಒಳಗಾದವರನ್ನು ಕರೆದುಕೊಂಡು ಬನ್ನಿ–ನನ್ನ ಜನರ ಸಭೆ ನನಗೆ ಬೇಕೇ ಬೇಕು; ಎಲ್ಲರಿಗೂ....ನ್ಯಾಯಾಧೀಶರುಗಳಿಗೆ, ಸಾಕ್ಷಿಗಳಿಗೆ, ಶಿಕ್ಷಾರ್ಹರಿಗೆ...ಈ ಎಲ್ಲರಿಗೂ ವಿಚಾರಣೇ ಇಲ್ಲದ ಮರಣದಂಡನೆ!—ಹೌದು, ಕೆಸೋನಿಯಾ, ಅವರುಗಳು ಯಾರು ಹಿಂದೆಂದೂ ನೋಡಿರಲಾಗದಂತಹದೊಂದನ್ನು, ರೋಮ್ನ ಸಾಮ್ರಾಜ್ಯದಲ್ಲಿನ ಒಬ್ಬನೇ ಒಬ್ಬ ಮುಕ್ತ ಮಾನವನನ್ನು ನಾನು ಅವರುಗಳಿಗೆ ತೋರಿಸಲಿದ್ದೇನೆ.

(ಜಾಗಟೆಯು ಬಡಿತದ ಶಬ್ಧ ಬೆಳದಂತೆಲ್ಲಾ ಇಡೀ ಅರಮನೆ ಶಬ್ಧಗಳಿಂದ

ತುಂಬಿ ಹೋಗುತ್ತದೆ-ಶಸ್ತ್ರಾಸ್ತ್ರಗಳ ಝಣ ಝಣಾತ್ಕಾರ, ವಿವಿಧ ಮಾತುಕತೆಗಳು ನಿಧಾನಿಶ-ಅವಸರಿತ-ಸಮೀಪಗತ ಕಾಲಿನ ಸಪ್ಪಳಗಳು ಬೆಳೆಬೆಳೆಯುತ್ತಾ, ಸಾಗುತ್ತಿವೆ. ಕೆಲವು ಸೈನಿಕರು ಒಳಗೆ ನುಗ್ಗುತ್ತಿರುತ್ತಾ, ಅವಸರವಸರವಾಗಿ ಹೊರಗೆ ಓಡೋಡುತ್ತಾ ಇದ್ದಾರೆ ....)

ಕ್ಯಾಲಿಗುಲ : ನೀನು, ಕೆಸೋನಿಯಾ, ನೀನು ನನ್ನ ಆಜ್ಞೆಯನ್ನು ಪಾಲಿಸಿಯೇ ತೀರಬೇಕು. ಕೊನೆಯವರೆಗೂ ನೀನು ನನ್ನ ಜೊತೆಯಲ್ಲಿ ಇದ್ದೇ ತೀರಬೇಕು. ಅವೆಲ್ಲವೂ ಅತ್ಯದ್ಭುತವಾಗಿರುತ್ತವೆ—ನೀನೇ ನೋಡುವೆಯಂತೆ, ನನ್ನನ್ನು ಬಿಟ್ಟು ಹೋಗುವುದಿಲ್ಲವೆಂದು ಪ್ರಮಾಣ ಮಾಡಿ ಹೇಳು, ಕೆಸೋನಿಯಾ.

ಕೆಸೋನಿಯಾ : (ಎರಡು ಜಾಗಟೆ ಬಡಿತದ ಮಧ್ಯೆ ಕಿರಚುವ ಧ್ವನಿಯಲ್ಲಿ) ಪ್ರಮಾಣಮಾಡಿ ಮಾತು ಕೊಡುವ ಅವಶ್ಯಕತೆಯೇ ಇಲ್ಲ-ಹೇಗೂ ನಾನು ನಿನ್ನನ್ನು ಪ್ರೀತಿಸುತ್ತೇನೆಂದು ನಿನಗೇ ಗೊತ್ತಲ್ಲ.

ಕ್ಯಾಲಿಗುಲ : (ಅವಳದೇ ಧ್ವನಿಯಲ್ಲಿ) ನಾನು ಹೇಳಿದ್ದನ್ನೆಲ್ಲಾ ನೀನು ಮಾಡುತ್ತಾ ಇರುತ್ತೀಯೆ.......

ಕೆಸೋನಿಯಾ : ಹೌದು, ಹೌದು ಎಲ್ಲ .... ಎಲ್ಲವನ್ನೂ ಕ್ಯಾಲಿಗುಲ, ಆದರೆ, ದಯವಿಟ್ಟು ಮಾತನ್ನು ನಿಲ್ಲಿಸು ..... (ಮೊಟಕಾಗಿ) ನಿಲ್ಲಿಸು....

ಕ್ಯಾಲಿಗುಲ : (ಜಾಗಟೆಯನ್ನು ಮತ್ತೂ ಬಡಿಯುತ್ತಾ) ನೀನು ಕ್ರೂರಿಯಾಗಿ ನಡೆದುಕೊಳ್ಳುತ್ತೀಯೆ.

ಕೆಸೋನಿಯಾ : (ಬಿಕ್ಕಳಿಸುತ್ತಾ) ನಾನು ಕ್ರೂರಿಯಾಗಿ ಇದ್ದುಬಿಡುತ್ತೇನೆ.

ಕ್ಯಾಲಿಗುಲ : ಭಯಂಕರ ನಿಶ್ಕರುಣಿಯಾಗಿ ಹಾಗೂ ತೀರ ಶೀತಲವಾಗಿ ಇರುತ್ತೀಯೆ.

ಕೆಸೋನಿಯಾ : ತೀರ ನಿಶ್ಕರುಣಿಯಾಗಿ...... ...

ಕ್ಯಾಲಿಗುಲ : ಅಲ್ಲದೆ, ನೀನು ಎಲ್ಲವನ್ನೂ ಅನುಭವಿಸಿಯೇ ಅನುಭವಿಸಬೇಕಾಗಿ ಬಿಡುತ್ತದೆ.

ಕೆಸೋನಿಯಾ : ಹೌದು, ಹೌದು...ಓಹ್, ಇಲ್ಲ, ದಯವಿಟ್ಟು.... ನಾನು ಹುಚ್ಚಿ ನಾನು ಹುಚ್ಚಿಯಾಗಿಬಿಡುತ್ತಿದ್ದೇನೋ--ಏನೋ

ಎಂದು ಅನ್ನಿಸಿಬಿಡುತ್ತಿದೆ!

(ಕೆಲವು ಆಸ್ಥಾನಿಕರು ದಿಗ್ಭ್ರಮೆ ಹಾಗೂ ಗೊಂದಲಗಳಿಂದ ಪೇಚಾಡುತ್ತಿರುವ ಅರಮನೆಯ ಪರಿಚಾರಕ ಸಿಬ್ಬಂದಿ ವರ್ಗದೊಡನೆ ಅವಸರವಸರವಾಗಿ ಪ್ರವೇಶಿಸುತ್ತಾರೆ. ಕ್ಯಾಲಿಗುಲ ಜಾಗಟೆಯನ್ನು ಕಡೆಯ ಬಾರಿಗೆ ಝಾಡಿಸಿ ಬಡಿದು ಬಡಿಗೆಯನ್ನು ಮೇಲೆತ್ತಿ ಸುತ್ತುತ್ತಾ, ಅರೆ- ಭ್ರಮಿತ ಹಾಗೂ ಕೀರಲು ಧ್ವನಿಯಲ್ಲಿ ಎಲ್ಲರನ್ನೂ ಕರೆಯುತ್ತಾನೆ.)

ಕ್ಯಾಲಿಗುಲ : ಇಲ್ಲಿ ಬನ್ನಿ. ನೀವುಗಳೆಲ್ಲರೂ ಬನ್ನಿ. ಹತ್ತಿರ ಹತ್ತಿರ ಬನ್ನಿ—ಇನ್ನೂ ಹತ್ತತ್ತಿರ ಬನ್ನಿ. (ಅಸಹನೆಯಿಂದ ನಡುಗುತ್ತ) ನಿಮ್ಮ ಸಾಮ್ರಾಟ ನೀವು ತೀರ ಹತ್ತಿರಕ್ಕೆ ಬರಲೇಬೇಕೆಂದು ಆಜ್ಞಾಪಿಸುತ್ತಿದ್ದಾನೆ.

(ಅವರೆಲ್ಲಾ ತೀರ ಹತ್ತಿರಕ್ಕೆ ಬರುತ್ತಾ ಇದ್ದಾರೆ ಅವರ ಮುಖವೆಲ್ಲಾ ಭಯದಿಂದಾಗಿ ಬಿಳಿಚಿಕೊಂಡಿದೆ.)

ಬೇಗ ಬೇಗ.. ಬೇಗ...ಹಾಗೇಯೇ, ನೀನು....ಕೆಸೋನಿಯಾ, ನೀನು ನನ್ನ ಮಗ್ಗುಲಿಗೆ ಬಾ.

(ಅವಳ ಕೈಯನ್ನು ಹಿಡಿದು, ಅವಳನ್ನು ಕನ್ನಡಿಯ ಹತ್ತಿರಕ್ಕೆ ಕರೆದೊಯ್ದು, ಕನ್ನಡಿಯಲ್ಲಿನ ತಮ್ಮ ಪ್ರತಿಬಿಂಬವನ್ನು ರೊಯ್ಯನೆ ಭೀಕರವಾಗಿ ಬೀಸಿದ ತನ್ನ ಬಡಿಗೆಯಿಂದ ಅಳಿಸಿಬಿಡುತ್ತಾನೆ. ಸ್ವಲ್ಪ ಸಮಯದ ನಂತರ ಥಟ್ಟನೆ ನಗಲಾರಂಭಿಸುತ್ತಾನೆ.)

ಎಲ್ಲ ನಿರ್ಮೂಲವಾಯಿತು, ನೀನೇ ನೋಡಿದೆ–ಅಲ್ಲವೆ, ನನ್ನ ಮುದ್ದೇ?–ಎಲ್ಲ ಸ್ಮೃತಿಗಳ ಒಂದು ಅಂತ್ಯ; ಇನ್ನಿಲ್ಲವಾದುವು ಮುಖವಾಡಗಳು—ಏನೂ, ಯಾರೂ ಉಳಿಯಲಿಲ್ಲ; ಯಾರೂ ಉಳಿಯಲಿಲ್ಲವೆ? —ಇಲ್ಲ, ಅದು ನಿಜವಲ್ಲ. ನೋಡು....ನೋಡುತ್ತಿರು, ಕೆಸೋನಿಯಾ ಇಲ್ಲಿ ಬನ್ನಿ, ನೀವುಗಳೆಲ್ಲಾ—ಹಾಗೆಯೇ ನೋಡಿ........ನೋಡುತ್ತಿರಿ.....(ಕನ್ನಡಿಯ ಮುಂದೆ ವಿಕಟ ಭಂಗಿಯೊಂದರಲ್ಲಿ ನಿಂತುಬಿಡುತ್ತಾನೆ)

ಕೆಸೋನಿಯಾ : (ಭೀತಿಯಿಂದ ವಿಹ್ವಲಳಾಗಿ, ಕನ್ನಡಿಯನ್ನೇ ನೆಡುಗಣ್ಣಲ್ಲಿ ನೋಡುತ್ತಾ) ಕ್ಯಾಲಿಗುಲಾ ಾ ಾ !............

(ಕನ್ನಡಿಯ ಮೇಲೆ ಬೆರಳೊಂದನ್ನು ಊರಿ, ಕದೇಕ ದೃಷ್ಟಿಯನ್ನು ಮತ್ತೂ ತೀವ್ರಗೊಳಿಸುತ್ತಾ ಹೋಗಿ ಮಾತನಾಡಲು ಆರಂಭಿಸುತ್ತಾನೆ. ಅವನ ಧ್ವನಿಯಲ್ಲಿನ ಹೊಚ್ಚ ಹೊಸ ಆತ್ಮವಿಶ್ವಾಸದ ಗಂಭೀರ ಗತಿ ನಿಚ್ಚಳವಾಗಿ ಬಡಿಯತೊಡಗುತ್ತದೆ.)

ಕ್ಯಾಲಿಗುಲ : ಹೌದು – ಹೌದು – ಕ್ಯಾ....ಲಿ....ಗು....ಲಾ....ಾ....

—ತೆರೆ—

ಅಂಕ ಎರಡು

(ಚೆರಿಯಾನ ಔತಣ ಗೃಹದಲ್ಲಿ ಆಸ್ಥಾನಿಕರೆಲ್ಲರೂ ಗುಪ್ತಸಭೆ ಸೇರಿದ್ದಾರೆ.)

ಮೊದಲ ಆಸ್ಥಾನಿಕ : ಅವನು ನಮ್ಮ ಜೊತೆ ನಡೆದುಕೊಳ್ಳುತ್ತಿರುವ ರೀತಿ ಇದೆಯಲ್ಲ ಅದು ದೌರ್ಜನ್ಯದ ಪರಮಾವಧಿಯಾಗಿದೆ.

ವೃದ್ಧ ಆಸ್ಥಾನಿಕ : ಅವನು ನನ್ನನ್ನು 'ಪ್ರಿಯತಮೆ' ಎಂದು ಕರೆಯುತ್ತಾನೆ—ಅದೂ ಎಲ್ಲರ ಮುಂದೆ! ನನ್ನನ್ನು ನಗೆಗೇಡಿಯನ್ನಾಗಿ ಮಾಡುವುದೇ ಅವನ ಉದ್ದೇಶ–ನಿಮಗೆಲ್ಲಾ ಈ ವಿಶಯ ತಿಳಿದಿರಲಿ. ಅವನ ಪಾಲಿಗೆ ಅತಿಶ್ರೇಷ್ಠವಾದುದು ಎಂದರೆ ಸಾವೇ.

ಮೊದಲ ಆಸ್ಥಾನಿಕ : ಸಾಲದಿದ್ದುದಕ್ಕೆ ಗ್ರಾಮಾಂತರಗಳಲ್ಲಿ ಅವನು ಸುತ್ತಾಡುತ್ತಿರುವಾಗಲೆಲ್ಲಾ ನಾವು ಅವನ ಮೇನೆಯ ಆಜೂಬಾಜಲ್ಲಿ ಓಡುತ್ತಿರುವಂತೆ ಮಾಡಿ, ಆತ ಖುಷಿ ಪಡುತ್ತಾನೆ.

ಎರಡನೆ ಆಸ್ಥಾನಿಕ : ಅಂಗಸಾಧನೆ ನಮಗೆ ಒಳ್ಳೆಯದು ಎಂದು ಬೇರೆ ಹೇಳುತ್ತಾನೆ ಅವನು !

ವೃದ್ಧ ಆಸ್ಥಾನಿಕ : ಅವನ ನಡವಳಿಕೆಯಂತಹ ನಡವಳಿಕೆ ತೀರ ಅಕ್ಷಮ್ಯವಾದುದು.

ಮೂರನೆ ಆಸ್ಥಾನಿಕ : ನೀನು ಹೇಳಿದ್ದೇ ಸರಿ–ಯಾರೂ ಕ್ಷಮಿಸಲಾಗದ ನಡವಳಿಕೆ ಎಂದರೆ ಇವನತರಹದ್ದೇ.

ಮೊದಲ ಆಸ್ಥಾನಿಕ : ಅವನು ನಿನ್ನ ಆಸ್ತಿಯನ್ನು ಮುಟ್ಟಗೋಲು ಹಾಕಿಕೊಂಡೇ ಬಿಟ್ಟನಲ್ಲ, ಪೆಟ್ರೇಷಿಯಸ್ ; ನಿಮ್ಮ ತಂದೆಯನ್ನು ಇವನು ಕೊಂದೇಬಿಟ್ಟನಲ್ಲ, ಸಿಪಿಯೋ ; ಆಕ್ಟೇವಿಯಸ್ ನಿನ್ನಿಂದ ನಿನ್ನ ಹೆಂಡತಿಯನ್ನು ಕಸಿದುಕೊಂಡುದು ಮಾತ್ರವಲ್ಲದೆ, ಅವಳನ್ನುತನ್ನ ಸಾರ್ವಜನಿಕ ವೇಶ್ಯಾವಾಟಿಕೆಗೆ ಬೇರೆಬಲವಂತವಾಗಿ ತುರುಕಿದ್ದಾನೆ; ಲೆಪಿಡಸ್, ನಿನ್ನ ಮಗನನ್ನು ಬೇರೆ ಇವನು ಕೊಂದಿದ್ದಾನೆ-ನಾನು ನಿಮ್ಮಗಳನೆಲ್ಲಾ ಕೇಳುತ್ತಿದ್ದೇನೆ : ಸನ್ಮಾನ್ಯರೇ, ನೀವುಗಳೆಲ್ಲಾ ಇದನ್ನು ಸಹಿಸುವಿರೇನು? ನಾನಂತೂ ತೀರ್ಮಾನ ಕೈಗೊಂಡು ಬಿಟ್ಟದ್ದೇನೆ : ಎದುರಿಸಲೇ ಬೇಕಾಗಿ ಬರುವ ಗಂಡಾಂತರಗಳಾದರೋ ಏನು ಎಂದೆಲ್ಲಾ ನನಗೆ ಗೊತ್ತು–ಆದರೆ, ಅದರ ಜೊತೆ ಜೊತೆಗೇ ಈ ತುಚ್ಛಭಯದ ಜೀವನವಿದೆಯಲ್ಲ ಅದು ತೀರ ಸಹಿಸಲ ಸಾಧ್ಯವಾದುದೆಂದೂ ನನಗೆ ಗೊತ್ತು ; ನಿಜ ಹೇಳಬೇಕೆಂದರೆ, ಈ ಜೀವನ ಸಾವಿಗಿಂತಲೂ ಹೊಲಸಾಗಿದೆ. ಹೌದು–ನಾನು ಆಗಲೇ ಹೇಳಿದಂತೆ ನಾನಂತೂ ನನ್ನಮನಸ್ಸನ್ನು ತೀರ್ಮಾನಿಸಿಆಗಿಹೋಗಿದೆ

ಸಿಪಿಯೋ : ನನ್ನ ತಂದೆಯನ್ನು ಅವನೇ ಕೊಂದು ನನ್ನ ತೀರ್ಮಾನವನ್ನೂ ಅವನೇ ನಿರ್ಧರಿಸಿಬಿಟ್ಟದ್ದಾನೆ.

ಮೊದಲ ಆಸ್ಥಾನಿಕ : ಹೌದು ತಾನೆ ?– ಹೀಗಿದ್ದೂ ನೀನು ಇನ್ನೂ ಹಿಂಜರಿಯಬೇಕೆ ?

ಓರ್ವ ಪರಮವೀರ : ಇಲ್ಲ, ಹಿಂಜರಿಯಬೇಕಾಗಿಲ್ಲ – ನಾವೂ ನಿಮ್ಮೊಡನೆಯೇ ಇದ್ದೇವೆ: ಸರ್ಕಸ್ ಶಾಲೆಬಳಿಯ ನಮ್ಮ ಅಂಗಡಿಗಳನ್ನೆಲ್ಲಾ ಅವನು ಹಾದಿಬೀದಿಯವರಿಗೆ ಹಂಚಿಬಿಟ್ಟದ್ದಾನೆ; ಖಾಲಿಪೋಲಿಗಳ ಗುಂಪಿನೊಡನೆ ಹೋರಾಡಿ ಎಂದು ಬೇರೆ ನಮ್ಮನ್ನು ಹುರಿದುಂಬಿಸುತ್ತಿದ್ದಾನೆ: ಇಷ್ಟೆಲ್ಲಾ ಅವನು ಮಾಡುತ್ತಿರುವುದು ಕೇವಲ ನಮ್ಮನ್ನು ಶಿಕ್ಷಿಸುವ ನೆಪಕ್ಕಾಗಿ ಮಾತ್ರ !

ವೃದ್ಧ ಆಸ್ಥಾನಿಕ ; ಅವನೊಬ್ಬ ಹೇಡಿ.

ಎರಡನೆ ಆಸ್ಥಾನಿಕ ; ಆದೊಂದು ಜಗಳಗಂಟ ಪೀಡೆ.

ಮೂರನೆ ಆಸ್ಥಾನಿಕ ; ಶುದ್ಧ ಕಮಂಗಿ ಅದು.

ವೃದ್ಧ ಆಸ್ಥಾನಿಕ : ಅವನೊಬ್ಬ ನಪುಂಸಕ–ನಾನು ಹೇಳುವುದೇ ಆದರೆ, ಅವನಿಗೆ ಇರುವ ನಿಜವಾದ ತೊಂದರೆ ಎಲ್ಲಾ ಅವನ ಈ ನಪುಂಸಕತ್ವವೇ.

(ಅಸಾಧ್ಯ ಗೊಂದಲದ ದೃಶ್ಯ : ಶಸ್ತ್ರಾಸ್ತ್ರಗಳೆಲ್ಲಾ ಚಕಮಕಿಸುತ್ತವೆ; ಟೇಬಲ್ ಂದು ಕಲೆಕಿಳಕಾಗಿ ಬಿಡುತ್ತದೆ; ಬಾಗಿಲಿನ ಕಡೆಗೆ ಎಲ್ಲರ ನೂಕು ನುಗ್ಗಲು; ನುಗ್ಗುತ್ತಿರುವ ಜನರನ್ನು ತಡೆಯುತ್ತಾ ಎಂದಿನಂತೆಯೇ ಸಮಚಿತ್ತನಾಗಿ ಚೆರಿಯಾ ಳ ಪ್ರವೇಶಿಸುತ್ತಾನೆ.)

ಚೆರಿಯಾ : ಏನು....ಏನು ಇದೆಲ್ಲಾ? ನೀವುಗಳೆಲ್ಲಾ ಎಲ್ಲಿಗೆ ಹೊರಟಿದ್ದೀರಿ?

ಂರ್ವ ಆಸ್ಥಾನಿಕ : ಅರಮನೆಗೆ.

ಚೆರಿಯಾ : ಅಹ್, ಹೌದು–ಏಕೆ ಹೊರಟಿದ್ದೀರೆಂದು ನಾನು ಊಹಿಸಿ ಕೊಳ್ಳಬಲ್ಲೆ. ಆದರೆ, ನಿಮಗೆಲ್ಲಾ ಅಲ್ಲಿ ಪ್ರವೇಶ ಸಿಗುವುದೆಂದು ತಿಳಿದಿದ್ದೀರೇನು?

ಮುತ್ತೊರ್ವ ಆಸ್ಥಾನಿಕ : ಪ್ರವೇಶಕೊಡಿ ಎಂದು ಕೇಳುವ ಪ್ರಶ್ನೆಯೇ ಬರುವುದಿಲ್ಲ.

ಚೆರಿಯಾ : ಲೆಪಿಡಸ್, ದಯವಿಟ್ಟು ಆ ಬಾಗಿಲನ್ನು ಮುಚ್ಚುವೆಯಾ?

(ಬಾಗಿಲನ್ನು ಲೆಪಿಡಸ್ ಮುಚ್ಚುತ್ತಾನೆ. ಚೆರಿಯಾ ತಲೆಕೆಳಗಾದ ಟೇಬಲ್ ಳಿ ಹೋಗಿ, ಅದರ ಅಂಚೊಂದರ ಮೇಲೆ ಕೂರುತ್ತಾನೆ. ಎಲ್ಲರೂ ಅವನ ಕಡೆ ದೃಷ್ಟಿ ಹೊರಳಿಸುತ್ತಾರೆ.)

ಚೆರಿಯಾ : ಮಿತ್ರರೇ, ಇವೆಲ್ಲಾ ನೀವು ತಿಳಿದಷ್ಟು ಸುಲಭವಾಗಿ ಮಾಡ ಲಾಗುವಂತಹವಲ್ಲ. ನೀವೆಲ್ಲಾ ಹೆದರಿ ಹೋಗಿದ್ದೀರಿ–ಆದರೆ ಧೈರ್ಯ ಹಾಗೂ ತಾಳ್ಮೆಯ ಜಾಗವನ್ನು ಅಂಜಿಕೆ ಎಂದಿಗೂ ಆಕ್ರ ಮಿಸಿಬಿಡಬಾರದು. ಒಂದೇ ಒಂದು ಮಾತಿನಲ್ಲಿ ಹೇಳಿಬಿಡುವುದಾದರೆ ನೀವು ತೀರ ಅವಸರವಸರವಾಗಿ ಕಾರ್ಯರಂಗಕ್ಕೆ ಧುಮುಕಿದ್ದೀರಿ.

ಮುತ್ತೊರ್ವ ಪರಮವೀರ : ನಿನಗೆ ನಮ್ಮಗಳ ಒಡನಾಟ ಇಷ್ಟವಿಲ್ಲದಿದ್ದರೆ ನೀನು ಹೊರಟುಬಿಡು–ಆದರೆ ಎಲ್ಲೂ ಬಾಯಿ ಮಾತ್ರ ತೆರೆಯಬೇಡ:

ಚೆರಿಯಾ : ನಾನು ನಿಮ್ಮ ಒಡನೆಯೇ ಇದ್ದೇನೆ ಎಂದು ನನಗೆ ಅನ್ನಿಸ ತ್ತಿದೆ. ಆದರೆ, ನೀವುಗಳು ನನ್ನ ಮಾತನ್ನು ತಪ್ಪು ತಪ್ಪಾಗಿ ಭಾವಿಸಿ ಕೊಳ್ಳಬೇಡಿ—ನಾನು ನಿಮ್ಮಗಳ ಒಡನೆ ಇರುವುದು ನಿಮ್ಮಗ ಕಾರಣದಿಂದಂತೂ ಅಲ್ಲವೇ ಅಲ್ಲ.

ಒಂದು ಧ್ವನಿ : ಕಾಡುಮಾತು ಸಾಕು ಬೇಕಾದಷ್ಟು ಆಗಿಹೋಯಿತು

ಚೆರಿಯಾ : (ಎದ್ದು ನಿಂತು) ಒಪ್ಪಿಕೊಳ್ಳುತ್ತೇನೆ–ನಾವೀಗ ವಸ್ತುಸ್ಥಿ ಏನೆಂದು ನೋಡೋಣ ; ಆದರೆ, ಅದಕ್ಕೂ ಮೊದಲು ನನ್ನ ನಿಲ ವನ್ನು ನಾನು ಸ್ಪಷ್ಟಪಡಿಸಿಬಿಡುತ್ತೇನೆ : ನಿಮ್ಮ ಒಡನೆಯೇ ನಾನು ಇದ್ದೇನೆ–ಆದರೂ ನಿಮ್ಮಗಳ ಕಾರಣ ನನ್ನದಾಗಿಲ್ಲ ! ಈ ಕಾರಣ ದಿಂದಾಗಿಯೇ, ನೀವುಗಳು ಅಡ್ಡದಾರಿಯಲ್ಲಿ ನುಗ್ಗುತ್ತಿದ್ದೀರೆಂದು ನಾನು ಹೇಳುತ್ತಿರುವುದು. ನಿಮಗೆ ನಿಮ್ಮ ಶತ್ರುವಿನ ಆಳ ಎತ್ತರವೇ ಗೊತ್ತಿಲ್ಲ ; ಆದರೆ ನೀವು ಅದನ್ನು ತಿಳಿಯಲೇಬೇಕಾಗಿರುವುದು ಅನಿ ವಾರ್ಯ : ಏಕೆಂದರೆ, ನೀವುಗಳು ಆತನ ಮೇಲೆ ಕ್ಷುಲ್ಲಕ ಆರೋಪ ಗಳನ್ನು ಆರೋಪಿಸುತ್ತಿದ್ದೀರಿ ; ಆದರೆ, ಕ್ಯಾಲಿಗುಲನಲ್ಲಿ ಕ್ಷುಲ್ಲಕ ವಾದುದು ಏನೂ ಇಲ್ಲವಾದ್ದರಿಂದಲೇ, ನೀವು ಪ್ರಪಾತದತ್ತ ದೌಡಾಯಿಸುತ್ತಿದ್ದೀರಿ ಎಂದು ನಾನು ಹೇಳುತ್ತಿರುವುದು–ಅವನ ನಿಜಸ್ವರೂಪ ಏನಿದೆಯೋ ಅದನ್ನು ನೀವು ಕಂಡುಕೊಳ್ಳಬಲ್ಲಿರಾದರೆ ಆಗ ಮಾತ್ರ ನಿಮಗೆ ಅವನನ್ನು ಹೆದರಿಸಲು ಯೋಗ್ಯವಾದ ಶಕ್ತಿ ತಾನಾಗಿಯೇ ಬಂದೇ ತೀರುತ್ತದೆ.

ಮತ್ತೊಂದು ಧ್ವನಿ : ಅವನು ಹೇಗಿದ್ದಾನೋ ಹಾಗೇಯೇ ಅವನನ್ನು ನೋಡುತ್ತಿದ್ದೇವೆ–ಅವನೊಬ್ಬ ಐಲುಪೈಲಾದ, ಯದ್ವಾತದ್ವಾ ದಬ್ಬಾಳಿಕೆ ನಡೆಸುವ ಸಾರ್ವಭೌಮ.

ಚೆರಿಯಾ : ಅಲ್ಲ, ನಮಗೆ ಐಲುಪೈಲು ಸಾರ್ವಭೌಮರಗಳ ಅನುಭವ ಹೊಸದೇನೂ ಅಲ್ಲವಲ್ಲ,ಆದರೆ ಈತ ಮಾತ್ರ ಆ ಬಗೆಯ ಹುಚ್ಚನಲ್ಲ; ನನಗೆ ಈತನ ಬಗ್ಗೆ ಜಿಗುಪ್ಸೆ ಬಂದಿರುವುದಕ್ಕೆ ಕಾರಣವೇನೆಂದರೆ ಈತನಿಗೆ ತನಗೆ ಏನು ಬೇಕೋ ಅದು ಏನೆಂದು ಚೆನ್ನಾಗಿ ಗೊತ್ತಿದೆ.

ಮೊದಲ ಆಸ್ಥಾನಿಕ : ಅದು ನಮಗೂ ಗೊತ್ತು—ಅವನು ನಮ್ಮೆಲ್ಲ

ರನ್ನೂ ಕೊಲೆ ಮಾಡಲು ಬಯಸುತ್ತಿದ್ದಾನೆ.

ಚೆರಿಯಾ : ನೀವು ತಪ್ಪು ತಿಳಿದಿದ್ದೀರಿ–ನಮ್ಮಗಳ ಸಾವು ಅವನ ಮುಖ್ಯಉದ್ದೇಶ ಅಲ್ಲವೇ ಅಲ್ಲ. ಅವನು ತನ್ನ ಸರ್ವಾಧಿಕಾರವನ್ನು ಒಂದು ಮಹೋನ್ನತವಾದ, ಅಷ್ಟೇ ಮರಣಾಂತಕವಾದ ಉನ್ಮಾದ ಒಂದರ ಸಲುವಾಗಿ ಉಪಯೋಗಿಸಿಬಿಡುತ್ತಿದ್ದಾನೆ; ನಾವು ಸರ್ವ ಶ್ರೇಷ್ಠವೆಂದು ಪರಿಗಣಿಸುವ ಸಮಸ್ತವನ್ನೂ ಅದು ನಿರ್ನಾಮಗೊಳಿಸಿ ಬಿಡುತ್ತಿದೆ. ನಿಜ – ಅಪರಿಮಿತ ಸರ್ವಾಧಿಕಾರದ ಶಕ್ತಿಯೊಡನೆ ಮನುಷ್ಯನೊರ್ವ ಚಕ್ಕ್ಯಂದ ಆಡುತ್ತಿರುವುದನ್ನು ರೋಂ ನೋಡು ತ್ತಿರುವುದು ಇದೇ ಮೊದಲಬಾರಿ ಏನೂ ಅಲ್ಲ; ಆದರೆ, ಆತ ನಮಗೆ ಗೊತ್ತಿರುವ ಜಗತ್ತನ್ನೂ ಮತ್ತು ಮನುಕುಲವನ್ನೂ ತೀರ ತುಚ್ಛ ವಾಗಿ ಕಾಣುತ್ತಿರುವುದೇ ಅಲ್ಲದೇ, ಇದೇ ಮೊಟ್ಟ ಮೊದಲ ಬಾರಿಗೆ ಆ ಪರಮಾಧಿಕಾರದ ಶಕ್ತಿಯನ್ನು ಅದರ ವಿನಿಯೋಗದ ಇತಿ–ಮಿತಿಯ ಆಚೆಗೆ ಒಯ್ಯುತ್ತಿದ್ದಾನೆ. ಅವನ ಈ ಇತಿಮಿತಿರಹಿತತೆ ಯಿಂದಾಗಿಯೇ ಕ್ಯಾಲಿಗುಲ ಎಂದರೆ ಸಾಕು ನಾನು ಥರಥರ ನಡು ಗುವುದು, ಅಲ್ಲದೆ, ಇದರ ವಿರುದ್ಧವೇ ನಾನು ಹೋರಾಡಬೇಕಾಗಿರು ವುದು ಕೂಡ. ಒಬ್ಬ ತನ್ನ ಪ್ರಾಣವನ್ನು ಕಳೆದುಕೊಂಡು ಬಿಡುವುದು ದೊಡ್ಡ ವಿಚಾರವೇನೂ ಅಲ್ಲ; ಕಾಲ ಬಂದಾಗ ನನ್ನ ಪ್ರಾಣವನ್ನೂ ಕಳೆದುಕೊಳ್ಳಲು ನಾನು ಧೈರ್ಯಗೊಳ್ಳಬಲ್ಲೆ – ಆದರೆ, ಮನುಷ್ಯನ ಬದುಕು ಅರ್ಥದಿಂದ ಕಳಚಿ ಕಳಚಿ ಬಿದ್ದು ಹೋಗುತ್ತಿರುವುದನ್ನು ಹಾಗೂ ಮನುಷ್ಯ ಜೀವಿಸಿರಲು ಕಾರಣವೇ ಇಲ್ಲವೆಂದು ಪದೇ ಪದೇ ಅದೂ ಅವನಿಂದ ಹೇಳಿಸಿಕೊಳ್ಳುವುದನ್ನು ಮಾತ್ರ ಸಹಿಸಲು ನನ್ನಿಂದ ಸಾಧ್ಯವೇ ಇಲ್ಲ. ಹೇಗೂ, ಯಾವುದಾದರೂ ಒಂದಿಷ್ಟು ಕಾರಣ ವಿಲ್ಲದೆ ಮನುಷ್ಯ ಬದುಕಿರಲಾರ !

ಮೊದಲ ಆಸ್ಥಾನಿಕ : ಪ್ರತೀಕಾರವೂ ಒಂದು ಒಳ್ಳೆಯ ಕಾರಣ ವಾಗಬಲ್ಲದು.

ಚೆರಿಯಾ : ಹೌದು–ಆ ಪ್ರತೀಕಾರವನ್ನು ನಿಮ್ಮೊಡನೆ ಪಾಲುಗೊಳ್ಳಲು ನಾನಂತೂ ಸಿದ್ಧನಿದ್ದೇನೆ. ಆದರೆ, ಅದು ನಿಮ್ಮ ಸಲುವಾಗಿ

ಯಾಗಲಿ ಅಥವಾ ನಿಮಗಾಗಿರುವ ಕಿಂಚಿತ್ ಕಿರುಕುಳದ ವಿರುದ್ಧ ನೀವು ಬಯಸುವ ಪ್ರತೀಕಾರದ ಸಲುವಾಗಿಯಾಗಲಿ ಅಲ್ಲವೆಂದು ನಾನು ನಿಮಗೆ ಮನವರಿಕೆಯಾಗುವಂತೆ ಮಾಡುವೆ. ಇಲ್ಲ–ನಾನು ನಿಮ್ಮ ಪಡೆಯನ್ನು ಸೇರಿದ್ದೇ ಆದರೆ, ಅದು ಕೇವಲ ಒಂದು ದೊಡ್ಡ ಯೋಚನೆಯ–ನೀವು ಒಪ್ಪುವುದೇ ಆದರೆ ಒಂದು ದೊಡ್ಡ ಗುರಿಯ —ಯಾವುದಾದರೂ ಗೆಲುವು ಎಲ್ಲದರ ಸರ್ವನಾಶಕ್ಕೆ ಕಾರಣ ವಾಗಬಲ್ಲುದೋ ಅಂತಹ ಒಂದು ದೈತ್ಯ ಗುರಿಯ ವಿರುದ್ಧ ಹೋರಾಡುವ ಸಲುವಾಗಿ ಮಾತ್ರ. ಬೇಕಾದರೆ, ನಾನು ಕ್ಯಾಲಿಗುಲ ನಮ್ಮನ್ನೆಲ್ಲಾ ಅತಿ ತುಚ್ಛವಾಗಿ ಅಣಕಿಸಿಬಿಡುವುದನ್ನೂ ಸಹಿಸಬಲ್ಲೆ; ಆದರೆ, ಈತ ತನ್ನ ಸಿದ್ಧಾಂತಗಳನ್ನು ಅವುಗಳ ತುಟ್ಟತುದಿಯವರೆಗೆ ಕೊಂಡೊಯ್ಯುವುದನ್ನು ಮಾತ್ರ ಸಹಿಸಲಾರೆ. ಅವನು ತನ್ನ ದಾರ್ಶನಿಕತೆಯನ್ನು–ನಮ್ಮ ದುರ್ದೈವದಿಂದಾಗಿಯೋ ಏನೋ ಮೊದಲಿನಿಂದ ಕೊನೆಯವರೆಗೂಶುದ್ಧಾಂಗವಾಗಿ ತಾರ್ಕಿತವಾಗಿಯೇ ಉಳಿದುಬಿಡುವ ಆ ದಾರ್ಶನಿಕತೆಯನ್ನು-ಸಾವನ್ನಾಗಿ ಪರಿವರ್ತಿಸಿ ಬಿಡುತ್ತಿದ್ದಾನೆ. ಎಲ್ಲಿ ಯಾವುದನ್ನು ತಪ್ಪೆಂದು ಖಂಡಿಸಿ ಸಾಧಿಸುವುದು ಸಾಧ್ಯವಾಗುವುದಿಲ್ಲವೋ ಅಲ್ಲಿ ಅದನ್ನು ಬಗ್ಗು ಬಡಿದೇ ತೀರಬೇಕಾಗುತ್ತದೆ.

ಮುಗದೊಂದು ಧ್ವನಿ : ಹೌದೌದು– ನಾವು ಈಗ ಕಾರ್ಯೋನ್ಮುಖ ರಾಗಿಯೇ ತೀರಬೇಕು.

ಚೆರಿಯಾ : ನಾವು ಕಾರ್ಯಸನ್ನದ್ಧರಾಗಿಯೇ ತೀರಬೇಕು–ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ತನ್ನ ಸಮಸ್ತ ಅಧಿಕಾರವನ್ನು ಚಲಾಯಿಸುತ್ತಿರುವಐಲುಪೈಲಾದ ಸಾರ್ವಭೌಮನ ಮೇಲೆ ಮುಖಾ ಮುಖಿ ಹೋರಾಟಹೂಡುವುದು ಶುದ್ಧ ಅವಿವೇಕ.ನೀಚನೂ ಮತ್ತು ಪುಂಡನೂ ಆದ ರಾಜನ ವಿರುದ್ಧ ಹೋರಾಡಲು ನೀವು ಸಲೀಸಾಗಿ ಕತ್ತಿಯನ್ನು ಇರಿದು ಎತ್ತಿ ನಿಲ್ಲಬಹುದು; ಆದರೆ ನಿರಾಸಕ್ತ ದುರು ದ್ದೇಶದ ವಿರುದ್ಧ ಹೊರಾಡಲು ಕುತಂತ್ರವೇ ಬೇಕಾಗುತ್ತದೆ. ಆ ನಿರಾಸಕ್ತ ಉದ್ದೇಶ ತಾನಾಗಿಯೇ ತನ್ನ ದಾರಿಯನ್ನು ಹಿಡಿದು ಸಾಗಿ

ಹೋಗಲು ನೀವುಮತ್ತಷ್ಟು ಅನುವು ಮಾಡಿಕೊಟ್ಟು, ಅದರ ತರ್ಕ ಅದರ ಹಿಡಿತಕ್ಕೇ ಸಿಗದೆ ಅದು ತೀರ ಹಾಸ್ಯಾಸ್ಪದವಾಗಿ ಹೋಗುವ ವರೆಗೂ ಸಮಯ ಕಾಯುತ್ತಾ ಕೂರಬೇಕಾಗಿ ಬಿಡುತ್ತದೆ. ನಿಮಗೇ ಕಾಣುತ್ತಿರುವ ಹಾಗೆ ನಾನು ಇರುವುದನ್ನು ಇರುವ ಹಾಗೆ ಹೇಳಿ ಬಿಡುವವನು–ಅಲ್ಲದೆ ನಾನು ಇನ್ನು ಕೇವಲ ಸ್ವಲ್ಪಕಾಲ ಮಾತ್ರ ನಿಮ್ಮೊಡನೆ ಇರುವವನು ಎಂದೂ ಎಚ್ಚರಿಕೆ ಕೊಟ್ಟುಬಿಡುತ್ತಿದ್ದೇನೆ: ಆ ನಂತರ, ನಿಮ್ಮ ಆಶೋತ್ತರಗಳ ಸಲುವಾಗಿ ನಾನೇನನ್ನೂ ಮಾಡಲಾಗುವುದಿಲ್ಲ; ನಾನು ಮಾಡಬಹುದಾದುದು ಏನಾದರೂ ಇದ್ದರೆ, ಅದು ಅರ್ಥವನ್ನು ಪುನಃ ಗೆದ್ದ ಜಗತ್ತಿನಲ್ಲಿ ನಾನು ನನ್ನ ಮನಶ್ಶಾಂತಿಯನ್ನು ಪಡೆಯ ಬಯಸುವುದು ಮಾತ್ರ. ನನ್ನನ್ನು ಮುಂದೆಮುಂದಕ್ಕೆ ದಬ್ಬುತ್ತಿರುವ ಶಕ್ತಿ ಎಂದರೆ ಆಕಾಂಕ್ಷೆಯಲ್ಲ -ಬದಲಿಗೆ ಭಯ — ನನ್ನ ಬಾಳು ಒಂದು ತುಚ್ಛ ಕಣವಲ್ಲದೆ ಬೇರೆ ಏನೂ ಅಲ್ಲವಾಗಿ ಹೋಗಿರುವ ಅಮಾನವೀಯ ದರ್ಶನ ಒಂದರ ಸಕಾರಣೀಯವಾದ ಭಯ.

ಮೊದಲ ಆಸ್ಥಾನಿಕ : (ಬಳಿಬಂದು)ಚೆರಿಯಾ, ನೀನು ಏನನ್ನು ಹೇಳುತ್ತಿರುವೆಯೋ ಅದರ ಇಂಗಿತ ನನ್ನನ್ನೂ ಬಾಧಿಸುತ್ತ ಇದೆ. ಹೇಗೋ ಇಡೀ ಸಮಾಜದ ಹಾಸುಹೊಕ್ಕೇ ಭಯದಿಂದ ತತ್ತರಿಸಿ ಹೋಗುತ್ತಿರುವುದನ್ನು ನೀನೂ ಅನುಭವಿಸುತ್ತಿರುವುದೇ ಒಂದು ದೊಡ್ಡ ವಿಚಾರ. ಸನ್ಮಾನ್ಯರೇ, ನಮ್ಮ ಆಡಳಿತದ ಸೂತ್ರ ನೀತಿಸೂತ್ರವಾಗಬೇಕೆಂದು ನೀವು ಒಪ್ಪಿಯೇ ಒಪ್ಪುವಿರೆಂದು ನಾನು ನಂಬುತ್ತೇನೆ. ಆದರೇ ಕೌಟುಂಬಿಕ ಜೀವನ ಮುರಿದು ಬೀಳುತ್ತಿದೆ; ಜನತೆ ಪ್ರಾಮಾಣಿಕ ದುಡಿಮೆಯ ಬಗ್ಗೆ ತಮಗೆ ಇದ್ದ ಗೌರವವನ್ನು ಕಳೆದುಕೊಂಡುಬಿಡುತ್ತಿದ್ದಾರೆ; ಅನೈತಿಕತೆಯ ಅಲೆಯೊಂದು ಇಡೀ ರಾಷ್ಟ್ರವನ್ನೇ ಕೊಚ್ಚಿಹಾಕಿಬಿಡುತ್ತದೆ. ನಮ್ಮಗಳ ಮಧ್ಯೆ ನಮ್ಮ ಪರಂಪರೆಯ ಶ್ರದ್ಧೆ ವಿಶ್ವಾಸಗಳ ಅಪಾಯಕಾಲದ ಕರೆಯನ್ನು ಕೇಳಿಯೂ ಕಿವುಡರಾಗಿಯೇ ಉಳಿಯಬಲ್ಲವರು ಯಾರಿದ್ದಾರೆ? ಸಹ ಸಂಚುಗಾರರೇ, ಸಾರ್ವಭೌಮ ತನ್ನ ಮೇನೆಯ ಆಜ್ಞಾ

ಬಾಜುಗಳಲ್ಲಿ ತನ್ನ ಆಸ್ಥಾನಿಕರನ್ನು ಗುಲಾಮರಂತೆ ಬಲತ್ಕಾರವಾಗಿ ಓಡೋಡಿಸಿಕೊಂಡು ಹೋಗುತ್ತಿರುವಂತಹ ಅವ್ಯವಸ್ಥೆಯನ್ನು ನೀವು ಸಹಿಸುತ್ತೀರೇನು?

ವೃದ್ಧ ಆಸ್ಥಾನಿಕ : ಅವನು ಅವರನ್ನು 'ಪ್ರಿಯತಮೆ'ಯರೆಂದು ಕರೆದು ಮೂದಲಿಸಲು ಬಿಡುವಿರೇನು ?

ಇನ್ನೊಂದು ಧ್ವನಿ : ಅವರ ಹೆಂಡತಿಯನ್ನು ಅವರಿಂದ ಕಸಿದುಕೊಳ್ಳಲ ಅವನಿಗೆ ಅಕಾಶಕೊಡುವಿರೇನು ?

ಮೇಲೊಂದು ಧ್ವನಿ : ಅವರಿಂದ• ಅವರ ಹಣ ದೋಚಿಹೋಗುತ್ತಿರುವುದನ್ನು ನೋಡುತ್ತಾ ನೀವುಗಳೆಲ್ಲಾ ಸುಮ್ಮನೆ ಇರುತ್ತೀರೇನು ?

ಸಮಸ್ಥರು : ಇಲ್ಲ ! ಇಲ್ಲ !

ಮೊದಲಆಸ್ಥಾನಿಕ ಚೆರಿಯಾ, ನಿನ್ನ ಸಲಹೆ ತುಂಬಾ ಚೆನ್ನಾಗಿದೆ : ಅಲ್ಲದೆ ನಮ್ಮ ಉದ್ರೇಕ-ಉದ್ವೇಗಗಳನ್ನು ಶಾಂತಗೊಳಿಸಲು ನೀನು ತಕ್ಕದಾದುದನ್ನೆ ಮಾಡಿದೆ. ನಾವು ಕಾರ್ಯೋನ್ಮುಖರಾಗಲು ಇನ್ನೂ ಕಾಲ ಮಾಗಿಲ್ಲ-ಇನ್ನೂ ಜನತೆ ನಮ್ಮ ವಿರುದ್ಧವೇ ಇರುವ ಸ್ಥಿತಿ ನಮ್ಮದು. ಬಂಡೇಳಲು ಸರಿಯಾದ ಕಾಲಕ್ಕಾಗಿ, ಬಂಡೆದ್ದ ಮೇಲೆ ಸರಿಯಾಗಿ ಎಲ್ಲವನ್ನೂ ಬಗ್ಗು ಬಡಿಯುವ ಸದವಕಾಶಕ್ಕಾಗಿ ನೀನು ನಮ್ಮೊಡನೆ ಇದ್ದುಕೊಂಡು ಕಾಯಬಲ್ಲೆಯೇನು ?

ಚೆರಿಯಾ ಕಾಯಬಲ್ಲೆ – ಅಲ್ಲಿನವರೆಗೂ ಕ್ಯಾಲಿಗುಲ ತನ್ನ ಕನಸಿನ ಬೆನ್ನನ್ನು ಹತ್ತಿಯೇ ಸಾಗಿಹೋಗುತ್ತಿರಲಿ. ಅಥವಾ, ಹೀಗೆ ಮಾಡೋಣ-ಅವನು ತನ್ನ ತಿಕ್ಕಲು ತಿಕ್ಕಲು ಯೋಜನೆಗಳನ್ನೇ ಹೆಚ್ಚೆಚ್ಚು ಬೆನ್ನತ್ತುವಂತೆ ನಾವು ಮತ್ತಷ್ಟು ಅವನನ್ನು ಪ್ರೋತ್ಸಾಹಿಸಿ ಬಿಡೋಣ ; ಅವನ ಹುಚ್ಚಿಗೆ ಕ್ರಮಬದ್ಧತೆಯನ್ನು ಕಲ್ಪಿಸೋಣ : ಆಗ, ಕಟ್ಟಕಡೆಗೆ, ಅವನು ಏಕಾಂಗಿಯಾಗಿ – ಸತ್ತವರ ಬಂಧು ಬಾಂಧವನಾಗಿ, ಸತ್ತಸಾಮ್ರಾಜ್ಯದಲ್ಲಿನ ಒಬ್ಬೊಂಟಿಗನಾಗಿ ಇರಬೇಕಾಗುವ ದಿನ ಬಂದೇ ಬರುತ್ತದೆ.

(ರಂಗದ ಒಳ-ಹೊರಗೆಲ್ಲಾ ಗಲಿಬಿಲಿಯೋ ಗಲಭೆ. ಹೊರಗೆ ತುತ್ತೂರಿಯ

ಘೋಷವಾಗುತ್ತಿದ್ದಂತೆಯೇ 'ಕ್ಯಾಲಿಗುಲ-ಕ್ಯಾಲಿಗುಲ' ಎನ್ನುವ ಪಿಸುಧ್ವನಿಗಳ ಹೊರತಾಗಿ ಭೀಕರ ನಿಶ್ಶಬ್ದತೆ. ಕ್ಯಾಲಿಗುಲ ಕೆಸೋನಿಯಾಳೊಡನೆ ಪ್ರವೇಶಿಸುತ್ತಿದ್ದಂತೆಯೇ ಅವನ ಹಿಂದೆ ಹೆಲಿಕಾನ್ ಮತ್ತು ಕೆಲವು ಯೋಧರ ಪ್ರವೇಶ. ಮೂಕ ದೃಶ್ಯ : ನಿಂತ ಕ್ಯಾಲಿಗುಲ ಸ್ವಲ್ಪಕಾಲ ಸಂಚುಗಾರರನ್ನೇ ದಿಟ್ಟಿಸಿ ನೋಡುತ್ತ ಇದ್ದುಬಿಟ್ಟು, ನಂತರ, ಮೌನವಾಗಿ ಒಬ್ಬನಿಂದ ಮತ್ತೊಬ್ಬನ ಬಳಿಗೆ ಬರುತ್ತಾ, ಒಬ್ಬನ ಭುಜದ ಬಕಲ್ ಸರಿಪಡಿಸಿ, ಒಂದು ಹೆಜ್ಜೆ ಹಿಂದಕ್ಕೆ ಸರಿದು, ಇನ್ನೊಬ್ಬನನ್ನು ಕದೇಕವಾಗಿ ದಿಟ್ಟಿಸಿ, ಎಲ್ಲರ ಮೇಲೂ ನೆಡುದೃಷ್ಟಿಯನ್ನು ರ‍್ಝಳಪಿಸಿ, ಕಡೆಗೆ ತನ್ನ ಕಣ್ಣುಗಳ ಮೇಲೆ ಕೈಗಳನ್ನು ಎಳೆದುಕೊಂಡು, ಈಗಲೂ ತುಟಿ ಎರಡು ಮಾಡದೇ ರಂಗದಿಂದ ಹೊರಕ್ಕೆ ಸುಮ್ಮನೆ ಹೋಗಿಬಿಡುತ್ತಾನೆ)

ಕೆಸೋನಿಯಾ : (ಕೊಠಡಿಯ ಅವ್ಯವಸ್ಥೆಯ ಕಡೆ ಬೆರಳುಮಾಡಿ ವ್ಯಂಗವಾಗಿ) ಹೊಡೆದಾಟ ಮಾಡುತ್ತಿದ್ದಿರೇನು?

ಚೆರಿಯಾ : ಹೌದು – ಹೊಡೆದಾಟ ಮಾಡುತ್ತಿದ್ದೆವು ನಾವು !

ಕೆಸೋನಿಯಾ : (ಅದೇ ವ್ಯಂಗ್ಯದಲ್ಲೇ) ನಿಜವಾಗಿಯೂ ? ಯಾವ ಕಾರಣಕ್ಕಾಗಿ ನೀವು ಹೊಡೆದಾಡುತ್ತಿದ್ದಿರೆಂದು ನಾನು ತಿಳಿಯಬಹುದೇನು ?

ಚೆರಿಯಾ : ಕಾರಣ....? ಇಂತಹದ್ದೇ ಎಂದು ಯಾವ ಕಾರಣವೂ ಇಲ್ಲ.

ಕೆಸೋನಿಯಾ : ಆಹ್ ?-ಹಾಗಾದರೆ ಅದು ನಿಜವಲ್ಲ ನಿಜವಲ್ಲ....

ಚೆರಿಯಾ : ಯಾವುದು ನಿಜವಲ್ಲ ?

ಕೆಸೋನಿಯಾ : ನೀವು ಹೊಡೆದಾಟ ಮಾಡುತ್ತಿದ್ದದು ನಿಜವಲ್ಲ !

ಚೆರಿಯಾ : ನಿನಗೆ ಹೇಗೆಬೇಕೋ ಹಾಗೆ ನೀನು ತಿಳಿದುಕೊಳ್ಳಬಹುದು– ನಾವಂತೂ ಹೊಡೆದಾಟ ಮಾಡುತ್ತಿರಲಿಲ್ಲ.

ಕೆಸೋನಿಯಾ : (ನಗುತ್ತಾ) ಪ್ರಾಯಶಃ, ನೀವು ಈ ಸ್ಥಳದ ಸ್ವಚ್ಛತೆಯನ್ನು ಚೆನ್ನಾಗಿ ಕಾಪಾಡಬಲ್ಲರೆಂದು ಕಾಣುತ್ತದೆ? ಕ್ಯಾಲಿಗುಲ ಅಸ್ವಚ್ಛತೆಯನ್ನು ಮನಸಾ ದ್ವೇಷಿಸುತ್ತಾನೆ.

ಹೆಲಿಕಾನ್: (ವೃದ್ಧ ಆಸ್ಥಾನಿಕನಿಗೆ)ಅವನ ಸ್ವಭಾವಕ್ಕೆ ವಿರುದ್ಧವಾದುದನ್ನೇ ನೀವುಗಳು ಮಾಡಿ ಎಲ್ಲವನ್ನೂ ಕೊನೆಗಾಣಿಸಲು ಹೊರಟಿದ್ದೀರಿ?

ವೃದ್ಧ ಆಸ್ಥಾನಿಕ : ಕ್ಷಮೆಯಿರಲಿ........ನಿನ್ನ ಮಾತು ನನಗೆ ಅರ್ಥವಾಗುತ್ತಿಲ್ಲ. ಅವನ ಸ್ವಭಾವಕ್ಕೆ ವಿರುದ್ಧವಾದುದು ಏನನ್ನು ತಾನೆ ನಾವು ಮಾಡಿದ್ದೇವೆ?

ಹೆಲಿಕಾನ್ : ಏನೂ ಇಲ್ಲ; ಏನೇನೂ ಇಲ್ಲ. ಈ ವಿಚಾರದಲ್ಲಿ ಜೊಳ್ಳುಜೊಳ್ಳಾಗಿದ್ದು ಬಿಡುವುದು ಎಂದರೆ ಅದು ಶುದ್ಧಾಂಗವಾಗಿ ವಿಲಕ್ಷಣವಾದ ಭ್ರಮೆ,ಅಷ್ಟೇ—ಇದಿಷ್ಟೇ ಇಷ್ಟು ಭ್ರಮೆ ಯಾರದೇ ಪ್ರಾಣ ಹಿಂಡಲು ಸಾಕುಬೇಕಾದಷ್ಟು. ನಿಮ್ಮನ್ನು ನೀವೇ ಕ್ಯಾಲಿಗುಲನ ಸ್ಥಾನದಲ್ಲಿ ಇಟ್ಟು ನೋಡಿಕೊಳ್ಳಲು ಪ್ರಯತ್ನಿಸಿ. (ಸ್ವಲ್ಪಕಾಲ ಮೌನ) ತಿಳಿಯಿತು, ತಿಳಿಯಿತು-ನೀವು ಈಗಷ್ಟೇ ಅಷ್ಟುಇಷ್ಟು ಒಳಸಂಚು ಮಾಡುತ್ತಿದ್ದಿರಿ, ಅಲ್ಲವೆ ?

ವೃದ್ಧ ಆಸ್ಥಾನಿಕ : ನಿಜಕ್ಕೂ, ನಿನ್ನ ಮಾತು ತೀರ ಅಸಂಬದ್ಧ, ಕ್ಯಾಲಿಗುಲ ಹೀಗೆಲ್ಲಾ ಊಹಾಪೋಹ ಮಾಡುವವನಲ್ಲವೆಂದು ನಾನು ಆಶಿಸುತ್ತೇನೆ.

ಹೆಲಿಕಾನ್ : ಇಲ್ಲ, ಅವನು ಹೀಗೆಲ್ಲಾ ಊಹಾಪೋಹ ಮಾಡುವವನಲ್ಲವೇ ಅಲ್ಲ. ಆದರೆ, ಅವನಿಗೆ ಎಲ್ಲವೂ ಗೊತ್ತಿದೆ: ಅವನ ಮನಸ್ಸಿನ ಆಳದಲ್ಲಿ ಎಲ್ಲೋ ಒಂದು ಕಡೆ ಅವನು ಹೀಗೆಲ್ಲಾ ಆಗಿಯೇ ಆಗಲಿ ಎಂದು ಬಯಸುತ್ತಿರುತ್ತಾನೆಂದೂ ಕಾಣುತ್ತಿದೆ.... ಹೋಗಲಿ, ಮೊದಲು ನಾವು ಈ ಸ್ಥಳವನ್ನು ಸ್ವಚ್ಛಗೊಳಿಸೋಣ?

(ಎಲ್ಲರೂ ಸ್ವಚ್ಛಗೊಳಿಸತೊಡಗುತ್ತಾರೆ. ಒಳಬಂದ ಕ್ಯಾಲಿಗುಲ ಎಲ್ಲರನ್ನೂ ನೋಡುತ್ತಾ ನಿಲ್ಲುತ್ತಾನೆ.)

ಕ್ಯಾಲಿಗುಲ : (ವೃದ್ಧ ಆಸ್ಥಾನಿಕನಿಗೆ) ಸುದಿನ ಪ್ರಿಯತಮೆ ! (ಉಳಿದೆಲ್ಲರಿಗೆ) ಸನ್ಮಾನ್ಯರೇ, ನಾನು ಮರಣದಂಡನೆ ಒಂದನ್ನು ನೋಡಲೆಂದು ಹೊರಟಿದ್ದೇನೆ. ದಾರಿಯಲ್ಲಿ, ಚೆರಿಯಾ, ನಿನ್ನ ಮನೆಯಲ್ಲಿ ಒಂದಿಷ್ಟು ಉಪಹಾರ ತೆಗೆದುಕೊಳ್ಳಲು ನಿರ್ಧರಿಸಿದೆ. ಅಲ್ಲದೆ, ನಮ್ಮೆಲ್ಲರಿಗೆ ಬೇಕಾಗುವ ಆಹಾರವನ್ನು ಇಲ್ಲಿಗೇ ತರಲು ಆಜ್ಞಾಪಿಸಿದ್ದೇನೆ. ಆದರೆ, ಅದಕ್ಕೆ ಮೊದಲು ನಿಮ್ಮನಿಮ್ಮ ಹೆಂಡತಿಯರನ್ನು

ಇಲ್ಲಿಗೆ ಬರಲು ಹೇಳಿಕಳುಹಿಸಿಬಿಡಿ. (ಸ್ವಲ್ಪ ಹೊತ್ತು ಮೌನ) ನಾನು ಹಸಿವಿನ ದವಡೆಗೆ ತುತ್ತಾಗಿಹೋಗಿರುವುದರಿಂದ ರೂಫಿಯಸ್ ತನ್ನ ಅದೃಷ್ಟದ ತಾರೆಗಳನ್ನು ಅಭಿನಂದಿಸಿಯೇ ತೀರಬೇಕು.(ಮಾರ್ಮಿಕ ವಾಗಿ) ಈಗ ನಾನು ಬಾಯಿ ಬಿಟ್ಟು ಸತ್ಯವನ್ನು ಹೇಳುವುದೇ ಆದರೆ, ಪರಮವೀರ ರೂಫಿಯಸ್‌ನಿಗೆ ಮರಣದಂಡನೆಯನ್ನು ವಿಧಿಸಲಾಗಿದೆ (ಮತ್ತೆ ಕೊಂಚಕಾಲದ ಮೌನ) ಏನಿದು ?– ನಾನು ಏಕೆ ಅವನಿಗೆ ಮರಣದಂಡನೆಯನ್ನು ವಿಧಿಸಿದೆನೆಂದು ಕೇಳುವವರು ಯಾರೂ ಇಲ್ಲ ! (ಎಲ್ಲರೂ ಮೌನವಾಗಿಯೇ ಉಳಿಯುತ್ತಾರೆ· ಗುಲಾಮರು ಟೇಬಲ್ ಗಳನ್ನು ಜೋಡಿಸಿ, ಆಹಾರವನ್ನು ತಂದಿಡುತ್ತಾರೆ.) ಒಳ್ಳೆಯದು–ನಿಮಗೇ ಒಳ್ಳೆಯದು ! –ನೀವೆಲ್ಲಾ ಸಾಕಷ್ಟು ಬುದ್ಧಿವಂತರಾಗಿಹೋಗುತ್ತಿರು ವುದನ್ನು ನಾನು ನೋಡುತ್ತಲೇ ಇದ್ದೇನೆ. (ಆಲಿವ್ ಒಂದನ್ನು ಕಡಿಯತೊಡಗುತ್ತಾನೆ.) ಮನುಷ್ಯ ಏನನ್ನೂ ಮಾಡದೆ ಸತ್ತುಹೋಗಿ ಬಿಡಬೇಕಾಗುತ್ತದೆ ಎನ್ನುವ ವಿಚಾರ ನಿಮ್ಮ ಎದೆಯಲ್ಲಿ ಈಗಾಗಲೇ ಉದ್ಭವಿಸಿಬಿಟ್ಟಿದೆ. (ಆಲಿವ್ ತಿನ್ನುವುದನ್ನು ನಿಲ್ಲಿಸಿ, ದೃಷ್ಟಿಯನ್ನು ತೀಕ್ಷ್ಣ ಗೊಳಿಸಿ ಎಲ್ಲರನ್ನೂ ನೋಡುತ್ತಾ) ಯೋಧರೇ, ನೀವು ಎಂದರೆ ನನಗೆ ಅಪಾರ ಹೆಮ್ಮೆ. (ಮೂರು ಅಥವಾ ನಾಲ್ಕು ಜನ ಸ್ತ್ರೀಯರು ಪ್ರವೇಶಿಸು ತ್ತಾರೆ.) ಸರಿ! –ಈಗ ನಾವೆಲ್ಲಾ ಊಟಕ್ಕೆ ಕುಳಿತುಕೊಳ್ಳೋಣ : ಇವತ್ತಿನ ಮಟ್ಟಿಗೆ ಸಾರ್ವಭೌಮ ಭೋಜನ ಸಭೆಯ ಶಿಸ್ತನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಬಿಡೋಣ. (ಎಲ್ಲರೂ ಕುಳಿತುಕೊಳ್ಳು) ಆ ಪ್ರಾಣಿ ರೂಫಿಯಸ್‌ಗೆ ಅದೃಷ್ಟ ಹೊಡೆದಿದೆ ಎನ್ನು ವುದನ್ನು ಯಾರಿಂದಲೂ ಅಲ್ಲಗಳೆಯಲು ಆಗುವುದೇ ಇಲ್ಲ. ಆದರೆ ಈ ತಾತ್ಕಾಲಿಕ ಅದೃಷ್ಟವನ್ನು ಅವನು ಮೆಚ್ಚುವನೋ ಇಲ್ಲವೋ ಎನ್ನುವ ವಿಚಾರವಾಗಿ ನನಗೆ ಆಶ್ಚರ್ಯವಾಗುತ್ತಿದೆ. ಕಾರಣ, ಸಾವಿನ ವಿರುದ್ಧವಾಗಿ ಗೆದ್ದ ಕೆಲವೇ ಕೆಲವು ಘಂಟೆಗಳ ಬೆಲೆ ಕೂಡ ಹೇಗೂ ... ಅದರ ತೂಕದಷ್ಟೇ ಬಂಗಾರಕ್ಕೆ ಸಮ !

(ಕ್ಯಾಲಿಗುಲ ತಿನ್ನಲು ಆರಂಭಿಸುತ್ತಾನೆ; ಉಳಿದವರೂ ಅವನನ್ನು

ಅನುಸರಿಸುತ್ತಾರೆ. ಕ್ಯಾಲಿಗುಲ ಊಟ ಮಾಡುವ ವೈಖರಿ ಎಲ್ಲ ಶಿಷ್ಟಾಚಾರಗಳನ್ನೂ ತಿರಸ್ಕರಿಸಿದೆ ಎನ್ನುವುದು ಎಲ್ಲರ ಅನುಭವಕ್ಕೆ ನಿಧಾನವಾಗಿ ಬರುತ್ತದೆ.ಅವನ ಅಕ್ಕ ಪಕ್ಕದವರು ತಟ್ಟೆಗಳಿಗೆ ಆಲಿವ್ ಬೀಜಗಳನ್ನು ಎಸೆಯುವ, ಅಥವಾ ಭಕ್ಷ್ಯಗಳ ಮೇಲೆಲ್ಲಾ ಎಳೆಮೂಳೆಯ ತುಂಡುಗಳನ್ನು ಉಗಿದಾಡುವ ಅಥವಾ ಹಲ್ಲುಗಳನ್ನು ಉಗುರುಗಳಿಂದ ಗೀಚಾಡುವ ಅಥವಾ ತನ್ನ ತಲೆಯನ್ನೆ ಯದ್ವಾತದ್ವಾ ಕೆರೆದುಕೊಳ್ಳುವ ಅವಶ್ಯಕತೆ ಏನೂ ಇಲ್ಲವಾದರೂ ಯಾವ ಅಳುಕೂ ಇಲ್ಲದೆ, ಊಟದ ಉದ್ದಕ್ಕೂ ಇಂತಹ ಕುಚೇಷ್ಟೆಗಳಲ್ಲೇ ತೊಡಗಿ ಬಿಡುತ್ತಾನೆ. ಕಡೆಗೊಂದು ಘಟ್ಟದಲ್ಲಿ ಆತ ತನ್ನ ಎಲ್ಲ ಚೇಷ್ಟೆಗಳನ್ನು ಗಕ್ಕನೆ ನಿಲ್ಲಿಸಿ, ಸಭಿಕರಲ್ಲಿ ಒಬ್ಬನಾದ ಲೆಪಿಡಸ್‌ನನ್ನೇ ತದೇಕವಾಗಿದಿಟ್ಟಿಸಿ ನೋಡುತ್ತಾ ನಿಲ್ಲುತ್ತಾನೆ....)

ಕ್ಯಾಲಿಗುಲ : (ವರಟೊರಟಾಗಿ) ಲೆಪಿಡಸ್, ನೀನು ರೇಗಿ ಹೋಗಿರುವ ಹಾಗೆ ಕಾಣುತ್ತಿದೆ? ನಿನ್ನ ಮಗನನ್ನು ನಾನು ಕೊಲ್ಲಿಸಿದೆ ಎಂದು ನೀನು ಹೀಗಾಗಿದ್ದೀಯೋ ಏನೋ–ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಲೆಪಿಡಸ್ : (ಗಡುಸಾಗಿ) ಖಂಡಿತ ಹಾಗೇನು ಇಲ್ಲ, ಕಾಯಸ್ ತದ್ವಿರುದ್ಧವಾಗಿ .. ....

ಕ್ಯಾಲಿಗುಲ : (ಅವನ ಮೇಲೆ ದೃಷ್ಟಿ ಚಲ್ಲಿ) 'ತದ್ವಿರುದ್ಧ....'... ವಾಗಿ ಯಾವಾಗಲೂ ಅಂತರಂಗದ ರಹಸ್ಯಗಳನ್ನು ಬಚ್ಚಿಡುವ ಮುಖ ... ನೋಡಲು ತುಂಬಾ ಚೆನ್ನಾಗಿರುತ್ತದೆ. ನಿನ್ನ ಮುಖವೇನೋ ದುಃಖಿತವಾಗಿದೆ; ಆದರೆ ನಿನ್ನ ಅಂತರಂಗ....? ನಿನ್ನ ಅಂತರಂಗವೂ ತದ್ವಿರುದ್ಧವಾಗಿದೆ–ಅಲ್ಲವೆ, ಲೆಪಿಡಸ್.

ಲೆಪಿಡಸ್ : (ಪಟ್ಟು ಬಿಡದೆ) ಅದಕ್ಕೆ ತದ್ವಿರುದ್ಧ, ಸೀಜರ್.

ಕ್ಯಾಲಗುಲ : (ಸನ್ನಿವೇಶವನ್ನು ಹೆಚ್ಚೆಚ್ಚು ಸುಖಿಸುತ್ತಾ)ನಿಜಕ್ಕೂ ಲೆಪಿಡಸ್, ನಾನು ನಿನಗಿಂತಲೂ ಹೆಚ್ಚು ಇಷ್ಟಪಡುವವರು ಇಲ್ಲವೇ ಇಲ್ಲ; ಈಗ, ನನ್ನ ಪ್ರಿಯ ಮಿತ್ರ, ನನಗೆ ತಮಾಷೆಯಾದ ಕಥೆ ಒಂದನ್ನು ಹೇಳು–ನಾವು ಇಬ್ಬರೂ ಕೂಡಿ ನಗೋಣ.

ಲೆಪಿಡಸ್ : (ತನ್ನ ಸಹನೆಯ ಇತಿಮಿತಿ ಏನು ಎಂದೇ ಅರಿಯಲು

ಆಸಕ್ತನಾಗಿ) ದಯವಿಟ್ಟು.........

ಕ್ಯಾಲಿಗುಲ : ಒಳ್ಳೆಯದು ! ಬಹಳ ಒಳ್ಳೆಯದು ! ಹಾಗಾದರೆ........ ಈಗ, ಕಥೆ ಹೇಳುವವನು ನಾನೇ : ಆದರೆ, ನೀನು....ನನ್ನ ಕಥೆಯನ್ನು ಕೇಳಿ ನೀನು ನಗುವೆ, ಅಲ್ಲವೆ ಲೆಪಿಡಸ್ ? (ಮತ್ಸರವನ್ನು ಝಳಪಿಸುತ್ತಾ) ನಿನ್ನ ಇನ್ನೊಬ್ಬ ಮಗನ ಸಲುವಾಗಿಯಾದರೂ ನೀನು ನಗಬೇಕು – ನೋಡು. (ಮತ್ತೆ ನಗುನಗುತ್ತಾ) ಹೇಗೂ, ಈಗಷ್ಟೇ ನಮಗೆ ಹೇಳಿದ ಹಾಗೆ ನೀನು ಕೆಟ್ಟ ಮಾನಸಿಕ ಸ್ಥಿತಿಯಲ್ಲಿ ಏನೂ ಇಲ್ಲವಲ್ಲ. (ಮದ್ಯವನ್ನು ಗುಟುಕಿಸಿಕೊಂಡು, ಶಿಷ್ಯನನ್ನು ಗುರು ಪ್ರಚೋದಿಸುವ ಧಾಟಿಯಲ್ಲಿ) ಅದಕ್ಕೆ ....ಅದಕ್ಕೆ....ತದ್....

ಲೆಪಿಡಸ್ : (ಆಯಾಸದಿಂದ) ಅದಕ್ಕೆ ತದ್ವಿರುದ್ಧ, ಸೀಜರ್ !

ಕ್ಯಾಲಿಗುಲ : ಭವ್ಯ, ನಿನ್ನ ಮಾತು ಅತಿ ಭವ್ಯ ಲೆಪಿಡಸ್. (ಮತ್ತೆ ಮತ್ತೆ ಕುಡಿದು) ಈಗ ಕಥೆಯನ್ನು ಕೇಳು - (ಗಂಭೀರವಾದ ನಿರ್ಲಿಪ್ತ ಧ್ವನಿಯಲ್ಲಿ) ಒಂದಾನೊಂದು ಕಾಲದಲ್ಲಿ ಯಾರೂ ಪ್ರೀತಿಸಿದ ಒಬ್ಬಾನೊಬ್ಬ ಬಡ ಹುಡುಹುಡುಗಾದ ಸಾಮ್ರಾಟನಿದ್ದ. ಅವನು ಲೆಪಿಡೆಸ್‌ನನ್ನು ಬಹಳವಾಗಿ ಪ್ರೀತಿಸಿದ ; ಅಲ್ಲದೆ, ಲೆಪಿಡಸ್ ಮೇಲೆ ತನಗೆ ಇದ್ದ ಪ್ರೀತಿಯನ್ನು ಬುಡಸಮೇತ ಕಿತ್ತು ಎಸೆಯಲೆಂದೇ ಆ ಸಾರ್ವಭೌಮ ಲೆಪಿಡಸ್‌ನ ಕೊಟ್ಟಕೊನೆಯ ಮಗನನ್ನು ಕೊಲ್ಲಿಸಿದ. (ಧ್ವನಿಯನ್ನು ವೇಗಗೊಳಿಸುತ್ತಾ) ಸತ್ಯದ ಒಂದೇ ಒಂದು ಶಬ್ದವೂ ಇದರಲ್ಲಿ ಇಲ್ಲವೆಂದು ಹೇಳುವ ಅವಶ್ಯಕತೆಯೇ ಇಲ್ಲ ; ಆದರೂ ಇದೊಂದೂ ತಮಾಷೆಯ ಕಥೆ - ಅಲ್ಲವೆ ? ಆದರೆ, ನೀನು ಇನ್ನೂ ನಗುತ್ತಲೇ ಇಲ್ಲ; ಯಾರೂ ನಗುತ್ತಿಲ್ಲ ! ಈಗ ಕೇಳಿಸಿಕೊಳ್ಳಿ ! (ಕೋಪದಿಂದ ಸಿಡಿಮಿಡಿಗೊಂಡು) ಪ್ರತಿಯೊಬ್ಬರೂ ನಗಲೇಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ನೀನು ಲೆಪಿಡಸ್, ನೀನೇ ನಗೆಮೇಳವನ್ನು ಆರಂಭಿಸಿ ನಡೆಸಿಕೊಡುತ್ತೀಯೆ: ಎಲ್ಲಿ, ನಿಮ್ಮಲ್ಲಿನ ಪ್ರತಿಯೊಬ್ಬರೂ ಎದ್ದು ನಿಂತುಕೊಳ್ಳಿ ಮತ್ತು ಹಾಗೆಯೇ ನಗಿ - ನಗುತ್ತಾ ಇರಿ. (ಮೇಜನ್ನು ಗುದ್ದುತ್ತಾ) ನೀವು ನಾನು ಹೇಳುತ್ತಿರುವುದನ್ನು ಕೇಳುತ್ತಿದ್ದೀರೇನು ? - ನೀವೆಲ್ಲಾ

ನಗುವುದನ್ನು, ನಿಮ್ಮಲ್ಲಿನ ಪ್ರತಿಯೊಬ್ಬನೂ ನಗುತ್ತಿರುವುದನ್ನು ನಾನು ನೋಡಬೇಕಾಗಿದೆ. ಎಲ್ಲಿ, ಎಲ್ಲಿ ಎದ್ದು ನಿಲ್ಲಿ ; ಹಾಗೇಯೆ ನಗಲಾರಂಭಿಸಿಬಿಡಿ........ಹೀಗೆಯೇ ನಗುತ್ತಲೇ ಇದ್ದುಬಿಡಿ !....

(ಕ್ಯಾಲಿಗುಲ ಮತ್ತು ಕೆಸೋನಿಯಾರನ್ನು ಬಿಟ್ಟು ಉಳಿದವರೆಲ್ಲಾ ಸೂತ್ರದ ಗೊಂಬೆಯಾಟದ ಗೊಂಬೆಗಳ ಹಾಗೆ ಅಭಿನಯಿಸುತ್ತಾರೆ. ಕ್ಯಾಲಿಗುಲ ತನ್ನ ಮಂಚಕ್ಕೆ ಕುಸಿದು, ಖುಷಿಯಿಂದ ಸೊಕ್ಕಿಹೋಗಿ, ಸನ್ನಿಬಂದವರು ನಗುವಂತೆ ನಗತೊಡಗುತ್ತಾನೆ.)

ಕ್ಯಾಲಿಗುಲ : ಓಹ್, ಕೆಸೋನಿಯಾ ! ಅವರೆಲ್ಲರನ್ನೂ ಸುಮ್ಮನೆ ನೋಡು ! ಆಟಕ್ಕೆ ಕಳೆ ಏರಿದೆ–ಗೌರವ, ಪೂಜ್ಯಭಾವ, ರಾಷ್ಟ್ರೀಯ ವಿವೇಕ.. ಎಲ್ಲ, ಎಲ್ಲ ಧೂಳೀಪಟವಾಗಿ ಹೋಗಿದೆ ; ಭೀತಿಯಗಾಳಿ ಈ ಎಲ್ಲರನ್ನೂ ಕೇರಿತೂರಿ ಬರಿದು ಮಾಡಿಬಿಟ್ಟಿದೆ. ಭೀತಿ, ಕೆಸೋನಿಯಾ, ಭೀತಿಯೇ ಉದಾತ್ತವಾದ, ಶುದ್ಧ ಹಾಗೂ ಸರಳ ವಾದ, ಸ್ವಪರಿಪೂರ್ಣ ಹಾಗೂ ಅನನ್ಯವಾದ ಭಾವನೆ ಎಂದು ನೀನು ಒಪ್ಪಿಕೊಳ್ಳುವುದಿಲ್ಲವೆ?—ಅದು ತನ್ನ ರಕ್ಷಕ ಗಾಂಭೀರ್ಯವನ್ನು ನೇರವಾಗಿ ನರನಾಡಿಗಳಿಂದಲೇ ಸೆಳೆದುಕೊಳ್ಳುತ್ತದೆ ! (ಹಣೆಯನ್ನು ತಟ್ಟಿಕೊಂಡು ಮತ್ತೆ ಕುಡಿಯಲಾರಂಭಿಸಿ, ಆತ್ಮೀಯವಾದ ಧ್ವನಿಯಲ್ಲಿ) ಆಯಿತು, ಆಯಿತು – ನಾವೀಗ ವಿಷಯವನ್ನೇ ಬದಲಾಯಿಸಿ ಬಿಡೋಣ : ನೀನು ಚೆರಿಯಾ, ನೀನು ಬಹಳ ಮೌನವಾಗಿಯೇ ಉಳಿದು ಬಿಟ್ಟೆ - ನಿನ್ನಲ್ಲಿ ಹೇಳುವಂತಹ ವಿಚಾರಗಳೇ ಇಲ್ಲವೆ ?

ಚೆರಿಯಾ : ನಾನು ಮಾತನಾಡಲು ಸಿದ್ಧನಾಗಿಯೇ ಇದ್ದೇನೆ, ಕಾಯಸ್—ನೀನು ಅವಕಾಶ ಕೊಡುವುದೇ ಆದರೆ ..

ಕ್ಯಾಲಿಗುಲ : ವಿಸ್ಮಯಕಾರಿಯಾದ ಶ್ರೇಷ್ಠತೆ ಎಂದರೆ ಇದೇ ! - ಹಾಗಾದ ಮೇಲೆ ನೀನು ತೆಪ್ಪಗಿರು! ನಾನು ನನ್ನ ಮಿತ್ರ ಮ್ಯೂಸಿಯಸ್ ನೊಡನೆ ಒಂದೆರಡು ಮಾತುಗಳನ್ನು ಆಡಬಯಸುತ್ತಿದ್ದೇನೆ ಎಂದು ಕಾಣುತ್ತದೆ.

ಮ್ಯೂಸಿಯಸ್ : (ನಿರುತ್ಸಾಹದಿಂದ) ನಿನ್ನ ಇಚ್ಛೆಯಂತೆಯೇ

ಆಗಲಿ, ಕಾಯಸ್.

ಕ್ಯಾಲಿಗುಲ : ಹಾಗಾದರೆ ನಮಗೆ ನಿನ್ನ ಹೆಂಡತಿಯ ವಿಚಾರವಾಗಿ ಏನಾದರೂ ಹೇಳು—ಅವಳನ್ನು ಇಲ್ಲಿಗೆ, ನನ್ನ ಬಲಸಕ್ಕಕ್ಕೆ ಕಳುಹಿಸುವುದರ ಮೂಲಕ ನಿನ್ನ ಮಾತನ್ನು ಆರಂಭಿಸು.

(ಮ್ಯೂಸಿಯಸ್‌ನ ಹೆಂಡತಿ ತಾನಾಗಿಯೇ ಹೋಗಿ ಕ್ಯಾಲಿಗುಲನ ಬಲ ಪಕ್ಕದಲ್ಲಿ ಕೂರುತ್ತಾಳೆ.)

ಆಯಿತು. ಮ್ಯೂಸಿಯಸ್, ಮಾತನ್ನು ಆರಂಭಿಸು—ನಾವೆಲ್ಲಾ ಕಾಯುತ್ತಿದ್ದೇವೆ - ನಿನ್ನ ಮಾತನ್ನು ಕೇಳಲು.

ಮ್ಯೂಸಿಯಸ್ : (ತಾನು ಏನನ್ನು ಆಡಬೇಕೆಂದೇ ತಿಳಿಯದೆ) ನನ್ನ ಹೆಂಡತಿ ...ಆದರೆ....ಅವಳೆಂದರೆ ನನಗೆ ತುಂಬಾ ತುಂಬಾ ಇಷ್ಟ.

(ಎಲ್ಲ ನಕ್ಕು ಬಿಡುತ್ತಾರೆ.)

ಕ್ಯಾಲಿಗುಲ : ಏಕೆ ಹೇಗೂ... ನನ್ನ ಮಿತ್ರ, ಹೇಗೂ....ಆದರೆ, ನೀನು ಅದೆಷ್ಟು ಸರ್ವ ಸಾಮಾನ್ಯನಾದ ಮನುಷ್ಯ ! ಅಷ್ಟೇ ಕೃತಕ ಬೇರೆ! (ಅವಳೆಡೆಗೆ ಬಾಗಿ, ಅವಳ ಭುಜವನ್ನು ತನ್ನ ನಾಲಿಗೆಯಿಂದ ಚೇಷ್ಟೆ ಮಾಡುತ್ತಾ ನೆಕ್ಕತೊಡಗುತ್ತಾನೆ.) ಅಂದ ಹಾಗೆ, ಈಗಷ್ಟೇ ನಾನು ಒಳಗೆ ಬಂದಾಗ ನೀವುಗಳೆಲ್ಲಾ ಒಳಸಂಚೊಂದರಲ್ಲಿ ತೊಡಗಿ ಬಿಟ್ಟಿದ್ದಿರಿ - ಅಲ್ಲವೆ? ಅದು ಒಂದು ಸುಂದರವಾದ, ಅಷ್ಟೇ ರಕ್ತ ಸಿಕ್ತವಾದ ಒಳಸಂಚು !

ವೃದ್ಧಆಸ್ಥಾನಿಕ : ಆಹ್ ಕಾಯಸ್,........ನೀನು...... ನಿನ್ನಥಂವನು ಹೇಗೆತಾನೆ.... ?

ಕ್ಯಾಲಿಗುಲ : ಇದೆಲ್ಲಾ ಏನೇನೂ ಮುಖ್ಯವಲ್ಲ, ಓ ನನ್ನ ಮುದ್ದೇ ! ವೃದ್ಧಾಪ್ಯಕ್ಕೆ ಸಲ್ಲಬೇಕಾದ ಸೇವೆ ಸಲ್ಲಿಯೇ ತೀರುತ್ತದೆ— ಅದನ್ನೆಲ್ಲಾ ನಾನು ಮುಖ್ಯವೆಂದು ಪರಿಗಣಿಸುವುದೇ ಇಲ್ಲ. ನಿಮ್ಮಲ್ಲಿ ಯಾರಿಗೂ ವಿರೋಚಿತವಾದ ಕಾರ್ಯಕ್ಕೆ ಇಳಿಯುವ ಕೆಚ್ಚು ಇಲ್ಲವೇ ಇಲ್ಲ...ಆಹ್, ಈಗ ನೆನೆಪಾಗುತ್ತಿದೆ—ಕೆಲವು ರಾಷ್ಟ್ರೀಯ ವಿಚಾರ ಗಳಿಗೆ ತುರ್ತುಪರಿಹಾರ ಒಂದನ್ನು ಹುಡುಕಬೇಕಾಗಿಬಿಟ್ಟಿದೆ. ಆದರೆ,

ಆದಕ್ಕೂ ಮೊದಲು, ಒಂದು ಪುಟ್ಟ ಸಹಜ ದೈಹಿಕ ತೃಷೆಯಿಂದ
ನಾನು ಮುಕ್ತನಾಗಬೇಕಾಗಿದೆ.

(ಮೇಲಿದ್ದ ಕ್ಯಾಲಿಗುಲ ಮ್ಯೂಸಿಯಸ್‌ನ ಹೆಂಡತಿಯನ್ನು ಬದಿಯ ಕೋಣೆ ಯೊಂದಕ್ಕೆ ಎಳೆದುಕೊಂಡು ಹೋಗುತ್ತಾನೆ. ಮ್ಯೂಸಿಯಸ್ ಥಟ್ಟನೆ ಮೇಲೇಳಲು ಪ್ರಯತ್ನಿಸುತ್ತಾನೆ.)

ಕೆಸೋನಿಯಾ : (ಆತ್ಮೀಯವಾಗಿ) ದಯವಿಟ್ಟು ಮ್ಯೂಸಿಯಸ್
ದಯವಿಟ್ಟು.... ಈ ಸೊಗಸಾದ ಮದ್ಯದ ಮತ್ತೊಂದು ಬಟ್ಟಲನ್ನು
ನನಗಾಗಿ ಕೊಡಬಲ್ಲೆಯಾ ?

(ಮ್ಯೂಸಿಯಸ್ ಮಂತ್ರಮುಗ್ಧನಂತಾಗಿ ಅವಳು ಹೇಳಿದ್ದನ್ನು ಮಾಡುತ್ತಾನೆ. ಅವನ ಪ್ರತಿಭಟನಾಶಕ್ತಿ ಸಂಪೂರ್ಣವಾಗಿ ಕುಗ್ಗಿಹೋಗಿದೆ. ಪ್ರತಿಯೊಬ್ಬರೂ ಕಕ್ಕಾಬಿಕ್ಕಿಯಾಗಿದ್ದಾರೆ. ಪೀಠೋಪಕರಣಗಳು ಕಿರುಗುಟ್ಟುತ್ತವೆ. ಮುಂಬರುವ ಸಂಭಾಷಣೆ ಎಲ್ಲಾ ಬಳಲಿದ ಧ್ವನಿಯಲ್ಲೇ ನಡೆಯುತ್ತದೆ.)

ಕೆಸೋನಿಯಾ : ಚೆರಿಯಾ, ನೀವು ಈಗಷ್ಟೇ ಸ್ವಲ್ಪ ಸಮಯದ ಹಿಂದೆ
ಏಕೆ ಕಾದಾಡುತ್ತಿದ್ದಿರಿ ಎಂದು ಒಂದು ಪಕ್ಷ ನೀನು ಹೇಳಬಲ್ಲೆ
ಯಾದರೆ....

ಚೆರಿಯಾ : (ಶಾಂತವಾಗಿ) ಹೇಳಬಲ್ಲೆ, ಸಂತೋಷವಾಗಿ–ನನ್ನ ಪ್ರಿಯ
ಕೆಸೋನಿಯಾ : ಕಾವ್ಯ ರಕ್ತಸಿಕ್ತವಾಗಿರಬೇಕೆ ಅಥವಾ ಬೇಡವೆ
ಎಂದು ಆರಂಭವಾದ ವಾದವಿವಾದಗಳಿಂದಾಗಿ ಜಗಳ ಉದ್ಭವಿಸಿತು.

ಕೆಸೋನಿಯಾ : ತೀರ ಕುತೂಹಲಪೂರ್ಣವಾದ ಸಮಸ್ಯೆ ! ಆದರೆ
ಅದು ಸ್ವಲ್ಪ ಹೆಚ್ಚೂಕಮ್ಮಿ ನನ್ನ ಸ್ತ್ರೀತ್ವದ ಧಾರಣಶಕ್ತಿಗೆ
ಅತೀತವಾದುದು. ಆದರೂ, ನಿಮ್ಮಗಳ ಕಾವ್ಯತೃಷೆ ಬಡಿದಾಟ
ದಲ್ಲಿ ಪರ್ಯವಸಾನವಾದುದನ್ನು ಕೇಳಿ ನನಗೆ ಆಶ್ಚರ್ಯವೇ
ಆಗುತ್ತಿದೆ.

ಚೆರಿಯಾ : (ಅವಳದೇ ಆದ, ಆದರೆ ಅಸಹಜವಾದ ಧ್ವನಿಯಲ್ಲಿ) ಅದು ನನಗೆ
ಚೆನ್ನಾಗಿಯೇ ಅರ್ಥವಾಗುತ್ತಿದೆ. ಆದರೆ, ಒಂದು ದಿನ ಕ್ಯಾಲಿಗುಲ

'ಎಲ್ಲ ನಿಜ ತೃಷೆಯೂ ಕ್ರೌರ್ಯದ ಸಾಂಬಾರ ಪದಾರ್ಥಗಳಿಂದಲೇ ತುಂಬಿಹೋಗಿದೆ' ಎಂದು ಹೇಳುತ್ತಾ ಇದ್ದುದು ನನಗೆ ಈಗ ನೆನಪಾಗುತ್ತಿದೆ.

ಕೆಸೋನಿಯಾ : (ತನ್ನ ಮುಂದಿರುವ ಭಕ್ಷ್ಯವನ್ನು ತಾನೇ ಬಡಿಸಿಕೊಳ್ಳುತ್ತಾ) ಅವನ ಮಾತಿನಲ್ಲಿ ಸತ್ಯವಿದೆ–ಎಂದು, ಸನ್ಮಾನ್ಯರೇ, ನೀವುಗಳು ಒಪ್ಪಿಕೊಳ್ಳುವುದಿಲ್ಲವೇ ?

ವೃದ್ಧ ಆಸ್ಥಾನಿಕ : ಓಹ್, ಖಂಡಿತ ಒಪ್ಪಿಕೊಳ್ಳುತ್ತೇನೆ. ಕ್ಯಾಲಿಗುಲನಿಗೆ ಹೃದಯದ ರಹಸ್ಯ ತಾಣಗಳನ್ನು ಅರಿಯಲು ಬೇಕಾದ ಅಪೂರ್ವವಾದ ಅಂತಃಚಕ್ಷುಗಳಿವೆ.

ಮೊದಲ ಆಸ್ಥಾನಿಕ : ಧೀರತ್ವದ ಬಗ್ಗೆ ಅವನು ಈಗಷ್ಟೇ ಅದೆಷ್ಟು ಸುಲಲಿತವಾಗಿ ಮಾತನಾಡಿಬಿಟ್ಟ !

ಎರಡನೆ ಆಸ್ಥಾನಿಕ : ನಿಜಕ್ಕೂ ಅವನು ತನ್ನ ಎಲ್ಲ ಅನಿಸಿಕೆಗಳನ್ನೂ ಬರವಣಿಗೆಗೆ ಇಳಿಸಿಯೇ ತೀರಬೇಕು – ಏಕೆಂದರೆ ಅವನ ಎಲ್ಲ ಅನಿಸಿಕೆಗಳಲ್ಲೂ ಬೋಧಪ್ರದವಾಗಬಲ್ಲ ಶಕ್ತಿ ಅಪಾರವಾಗಿ ಇದೆ.

ಚೆರಿಯಾ : ಅಲ್ಲದೆ, ಅವನು ಬರೆಯಲು ಆರಂಭಿಸಿದ್ದೇ ಆದರೆ ಅದರಿಂದ ಅವನು ಸದಾ ಚಟುವಟಿಕೆಯಿಂದ ಇರಲು ಸಾಧ್ಯವಾಗುತ್ತದೆ. ಹೇಗೋ, ಅವನು ತನ್ನ ವಿರಾಮ ಕಾಲವನ್ನು ಯಾವುದರಿಂದಲಾದರೂ ತುಂಬಿಯೇ ತೀರಬೇಕೆನ್ನುವುದು ಅವನ ಮಟ್ಟಿಗೆ ಬಹಳ ಬಹಳ ಅನಿವಾರ್ಯವಾಗಿ ಬಿಟ್ಟಿದೆ.

ಕೆಸೋನಿಯಾ : (ಇನ್ನೂ ತಿನ್ನುತ್ತಲೇ) ಕ್ಯಾಲಿಗುಲನಿಗೆ ಕೂಡ ನಿಮ್ಮ ಈ ಅಭಿಪ್ರಾಯಗಳೇ ಇವೆ ಎಂದು ತಿಳಿಯಲು ನಿಮಗೂ ಸಂತೋಷವಾಗಿಯೇ ತೀರುತ್ತದೆ, ಅಲ್ಲವೇ? ಅವನು ಗ್ರಂಥ ಒಂದನ್ನು ರಚಿಸುತ್ತಿದ್ದಾನೆ–ಬಹಳಷ್ಟು ದೊಡ್ಡ ಗ್ರಂಥ ಅದು ಎಂದು ನನ್ನ ನಂಬಿಕೆ.

(ಕ್ಯಾಲಿಗುಲ ಮ್ಯೂಸಿಯಸ್‌ನ ಹೆಂಡತಿಯೊಡನೆ ಪ್ರವೇಶಿಸುತ್ತಾನೆ.)

ಕ್ಯಾಲಿಗುಲ : ಮೂಸಿಯಸ್, ಅನಂತ ಅಭಿವಂದನೆಗಳೊಡನೆ ನಾನು ನಿನ್ನ ಹೆಂಡತಿಯನ್ನು ನಿನಗೆ ಹಿಂದಿರುಗಿಸುತ್ತಿದ್ದೇನೆ. ಆದರೆ, ಕ್ಷಮೆ

ಇರಲಿ– ನಾನು ಕೆಲವು ಆಜ್ಞೆಗಳನ್ನು ಈಗಿಂದೀಗಲೇ ಆಜ್ಞಾಪಿಸ ಬೇಕಾಗಿದೆ. (ಕ್ಯಾಲಿಗುಲ ಧಾವಿಸಿ ಓಡಿ ಹೊರಹೋಗುತ್ತಾನೆ. ಬಿಳಚಿ ಕೊಂಡ ಮ್ಯೂಸಿಯಸ್ ಮೆಲ್ಲನೆ ಮೇಲೇಳುತ್ತಾನೆ.)

ಕ್ಯಾಲಿಗುಲ : (ನಿಂತ ಮ್ಯೂಸಿಯಸ್‌ನಿಗೆ) ಅವನ ಈ ಗ್ರಂಥ ಲ್ಯಾಟಿನ್ ಮಹಾಕಾವ್ಯಗಳ ಎತ್ತರಕ್ಕೆ ಖಂಡಿತ ನಿಲ್ಲಬಲ್ಲಂತಹುದು? ನನ್ನ ಮಾತನ್ನು ಕೇಳಿಸಿಕೊಳ್ಳುತ್ತಿದ್ದೀಯಾ, ಮ್ಯೂಸಿಯಸ್ ?

ಮ್ಯೂಸಿಯಸ್ : (ಕ್ಯಾಲಿಗುಲ ನಿರ್ಗಮಿಸಿದ ಬಾಗಿಲನ್ನೇ ದಿಟ್ಟಿಸುತ್ತಾ) ಹೌದು – ಕೇಳಿಸಿಕೊಳ್ಳುತ್ತಿದ್ದೇನೆ – ಕೆಸೋನಿಯಾ, ಆ ಗ್ರಂಥ ಯಾವ ವಿಚಾರವನ್ನು ಕುರಿತು ಬರೆದುದು ?

ಕೆಸೋನಿಯಾ : (ನಿರ್ಲಕ್ಷದಿಂದ) ಓಹ್, ಅದು ನನ್ನ ಗ್ರಹಿಕೆಯನ್ನೆ ಮೀರಿದ್ದು - ನನ್ನ ವಿಚಾರ ಶಕ್ತಿ ಏನೆಂದೂ ನಿನಗೇ ಗೊತ್ತಲ್ಲ.

ಚೆರಿಯಾ : ಅದು ಕಾವ್ಯದ ಹಂತಕ ಶಕ್ತಿಯನ್ನು ಕುರಿತು ಬರೆದುದೆಂದು ನಾವು ಅಂದುಕೊಳ್ಳಬಹುದೆ ?

ಕೆಸೋನಿಯಾ : ಹೌದೌದು - ಎಂತಹದೋ ಆ ತರಹದ್ದು ಎಂದು ನನಗೆ ಅನ್ನಿಸುತ್ತಿದೆ.

ವೃದ್ಧ ಆಸ್ಥಾನಿಕ : (ಸಂತೋಷದಿಂದ) ಆಯಿತಾಯಿತು – ನಮ್ಮ ಮಿತ್ರ ಚೆರಿಯಾ ಹೇಳಿದಂತೆ ಹೇಗೂ ಅದು ಅವನನ್ನು ಚಟುವಟಿಕೆಯಾಗಿ ಇಡುತ್ತದೆ ಎಂದಾದರೂ ಆಯಿತಲ್ಲ!

ಕೆಸೋನಿಯಾ : ಹೌದು, ನನ್ನ ಪ್ರೇಮಿ – ಹೌದು. ಆದರೆ, ನನಗೆ ಆ ಗ್ರಂಥದ ವಿಚಾರದಲ್ಲಿ ಇರುವ ಭಯವೆಲ್ಲಾ ನೀನು ಒಂದೇ ಒಂದು ಅಂಶವನ್ನು ಆಷ್ಟಾಗಿ ಒಪ್ಪುವುದಿಲ್ಲವಲ್ಲ ಎಂದು – ಅದು ಆ ಗ್ರಂಥದ ಹೆಸರು.

ಚೆರಿಯಾ : ಆ ಗ್ರಂಥದ ಹೆಸರೇನು ?

ಕೆಸೋನಿಯಾ : 'ತಣ್ಣನೆಯ ಸ್ಟೀಲು'

(ಕ್ಯಾಲಿಗುಲ ಧಾವಿಸಿ ಒಳ ಬರುತ್ತಾನೆ.)

ಕ್ಯಾಲಿಗುಲ : ಕ್ಷಮಿಸಿ – ಆದರೆ, ನನಗೀಗ ಸಾರ್ವಜನಿಕ ತುರ್ತುಕೆಲಸ

ಒಂದು ಬಿದ್ದು ಬಿಟ್ಟಿದೆ. (ಸರದಾರನಿಗೆ) ಸರದಾರ, ನೀನು ಈಗಿಂದೀಗಲೇ ಸಾರ್ವಜನಿಕ ಕಣಜಗಳನ್ನು ಮುಚ್ಚಿಬಿಡಬೇಕು. 'ಎಲ್ಲ ಸಾರ್ವಜನಿಕ ಕಣಜಗಳನ್ನು ಮುಚ್ಚಿಬಿಡಬೇಕು' ಎಂದು ಆಜ್ಞಾಪಿಸುವ ವಿಧಿಯೊಂದಕ್ಕೆ ನಾನು ಸಹಿ ಮಾಡಿ ಅದನ್ನು ನನ್ನ ವ್ಯಾಸಂಗದ ಕೊಠಡಿಯಲ್ಲಿ ಇಟ್ಟಿದ್ದೇನೆ.

ಸರದಾರ : ಆದರೆ, ಮಹಾಪ್ರಭು........

ಕ್ಯಾಲಿಗುಲ : ನಾಳೆಯಿಂದ ಕ್ಷಾಮ ಆರಂಭವಾಗಿಬಿಡುತ್ತದೆ !

ಸರದಾರ : ಆದರೆ....ಆದರೆ ಏನಾಗುವುದೋ ಎಂದು ದೇವಲೋಕಕ್ಕೆ ಮಾತ್ರ ಗೊತ್ತು – ಪ್ರಾಯಶಃ ಕ್ರಾಂತಿಯಾಗಿಬಿಡಲೂಬಹುದು....

ಕ್ಯಾಲಿಗುಲ : (ಉದ್ದೇಶ ಪೂರ್ವಕವಾದ ಮತ್ತು ಸದೃಢನಾದ ಧ್ವನಿಯಲ್ಲಿ) ನಾನು ಮತ್ತೆ ಹೇಳುತ್ತಿದ್ದೇನೆ. – ನಾಳೆಯಿಂದಲೇ ಕ್ಷಾಮ ಆರಂಭವಾಗಿ ಬಿಡಲಿದೆ. ನಮ್ಮೆಲ್ಲರಿಗೂ ಕ್ಷಾಮ ಎಂದರೆ ಏನೆಂದು ಗೊತ್ತು - ಅದು ರಾಷ್ಟ್ರೀಯ ಪ್ರಳಯ. ಅಂದಹಾಗೆ, ನಾಳೆಯಿಂದಲೇ ಈ ದುರಂತ ಆರಂಭವಾಗಿ ಬಿಡುತ್ತಿದೆ ; ಅದಲ್ಲದೆ ನನಗೆ ಬೇಕೆನಿಸಿದಾಗ ನಾನು ಈ ಪ್ರಳಯವನ್ನು ಕೊನೆಗಾಣಿಸಿಯೂ ಬಿಡುವೆ. ಹೇಗೂ ನಾನು ಮುಕ್ತ ಮಾನವನೆಂದು ಸಾಧಿಸ್ಸಿ ತೋರಿಸಲು ಬಹಳಷ್ಟು ಮಾರ್ಗಗಳೇನೂ ಇಲ್ಲ. ಪ್ರತಿಯೊಬ್ಬನೂ ಬೇರೊಬ್ಬರ ವೆಚ್ಚದಲ್ಲಿ ಮಾತ್ರ ಸ್ವಾತಂತ್ರ್ಯದಿಂದಿರಲು ಸಾಧ್ಯ – ಪಾಯಶಃ ಜಗತ್ತು, ಇರುವ ರೀತಿಯೇ ಬಾಲಿಶ ! (ಮ್ಯೂಸಿಯಸ್ ನನ್ನು ಚುರುಕು ಕಣ್ಣುಗಳಲ್ಲಿ ನೋಡುತ್ತಾ) ಇದೇ ತತ್ವವನ್ನು ನೀನು ನಿನ ಅಸೂಯೆಗೂ ಅನ್ವಯಿಸಿ ನೋಡು—ಆಗ ನಿನಗೆ ಈ ತತ್ವ ಚೆನ್ನಾಗಿ ಅರ್ಥವಾಗುತ್ತದೆ. (ಧ್ಯಾನಾವಸ್ಥೆಯ ಧ್ವನಿಯಲ್ಲಿ) ಆದರೂ, ಅಸೂಯೆ ಅದೆಷ್ಟೊಂದು ಕುರೂಪವಾಗಿದೆ !—ಜಂಬ ಮತ್ತು ಕಲ್ಪನೆಗಳ ರೋಗ ಅದು !! ಪ್ರತಿಯೊಬ್ಬನ ಕಲ್ಪನೆಯಲ್ಲೂ ಅವನ ಹೆಂಡತಿ....

(ಮ್ಯೂಸಿಯಸ್ ತನ್ನ ಮುಷ್ಠಿಗಳನ್ನು ಬಿಗಿಗೊಳಿಸುತ್ತಾ ಮಾತನಾಡಲು ಬಾಯಿ ತೆರೆಯುತ್ತಾನೆ. ಅವನ ಬಾಯಿಂದ ಮಾತು ಹೊರಬೀಳುವ ಮೊದಲೇ

ಕ್ಯಾಲಿಗುಲ ತೆನ್ನ ಬಾಯಿ ಹಾಕುತ್ತಾನೆ.)

ಸನ್ಮಾನ್ಯರೇ, ನಾವು ಈಗ ಊಟವನ್ನು ಮುಂದುವರೆಸುತ ಇರೋಣ........ನಾವು ಹೆಲಿಕಾನ್‌ನ ಸಹಾಯದಿಂದ ಬೇಕಾದಪ ಕಾರ್ಯಗಳನ್ನು ಮಾಡುತ್ತಿರುವ ವಿಚಾರ ನಿಮ್ಮೆಲ್ಲರಿಗೆ ಗೊತ್ತೇನ ಇತ್ತೀಚೆಗೆ, ನಾವು ಮರಣದಂಡನೆಯನ್ನು ಕುರಿತಾದ ಪುಟ್ಟ ವಿಶೆ ಗ್ರಂಥ ಒಂದಕ್ಕೆ ಪರಿಸಮಾಪ್ತಿಯ ಸ್ಪರ್ಶಗಳನ್ನು ಕೊಡುತ್ತಿದ್ದೇ ಆ ಗ್ರಂಥದ ಬಗ್ಗೆ ನೀವುಗಳು ಹೇಳಬಹುದಾದುದು ಬಹಳ ಬಹಳ

ಹೆಲಿಕಾನ್ : ....ನಾವು ನಿಮ್ಮಗಳ ಅಭಿಪ್ರಾಯವನ್ನು ಕೇಳುತ್ತೇ ಎಂದುಕೊಂಡಾಗ ಮಾತ್ರ....

ಕ್ಯಾಲಿಗುಲ : ಹೆಲಿಕಾನ್, ನಾವು ಏಕೆ ಹೆಚ್ಚಿನ ಉದಾರಿಗಳಾ ನಮ್ಮ ಸಣ್ಣ ಪುಟ್ಟ ಗೋಪ್ಯಗಳನ್ನೆಲ್ಲಾ ಇವರುಗಳಿಗೆ ಪರಿಚಯಿಸಿಬ ಬಾರದು? ನೀನು ಮುಂದೆ ಬಂದು ಅವರಿಗೆ ಒಂದು ಮಾದರಿಯನ ಕೊಡು – ವಿಧಿ ಮೂರು ; ಪ್ಯಾರ ಒಂದು :

ಹೆಲಿಕಾನ್ : (ಎದ್ದು ನಿಂತು, ಓಕಪ್ರೋತವಾಗಿ ಹರಿಯುವ ಗಂಭೀರ ಧ್ವನಿಯ ವಾಚಿಸಿ ಬಿಡುತ್ತಾನೆ:)'ಮರಣದಂಡನೆ ವಿಮೋಚನೆ ಮತ್ತು ಅನಿರ್ಬ ಗಳಿಗೆ ಕಾರಣೀಭೂತವಾಗಿದೆ. ಸಿದ್ಧಾಂತ ಮತ್ತು ಅನುಷಾ ಗಳೆರಡರಲ್ಲೂ ಇದೊಂದು ಸರ್ವತೋಮುಖವಾದ ಸಿದ್ಧಾ ಮಾನವ ತಾನು ಪಾಪಿಯಾಗಿರುವ ಕಾರಣದಿಂದಲೇ ಸಾವ ಅಪ್ಪುತ್ತಾನೆ. ಕ್ಯಾಲಿಗುಲನ ಪ್ರಜೆಗಳಲ್ಲಿ ತಾನು ಒಬ್ಬನಾಗ ವುದರಿಂದಲೇ ಮನುಷ್ಯ ಪಾಪಿಯಾಗಿದ್ದಾನೆ. ಈಗ – ಸಮ ಮಾನವರೂ ಕ್ಯಾಲಿಗುಲನ ಪ್ರಜೆಗಳೇ ಎಂದೂ ತೀರ್ಮಾ ವಾಗಿಹೋಯಿತು! ತಸ್ಮಾತ್ ಮಾನವರೆಲ್ಲರೂ ಪಾಪಿಗಳೇ ಆಗ ವುದರಿಂದ ಅವರೆಲ್ಲರೂ ಸಾವನ್ನು ಅಪ್ಪಿಯೇ ತೀರುತ್ತಾರೆ. ಆದ ಈ ಸಾವು ಕೇವಲ ಕಾಲ ಮತ್ತು ಸಹನೆಯ ವಿಚಾರ ಅಷ್ಟೇ.'

ಕ್ಯಾಲಿಗುಲ : (ನಗುತ್ತಾ) ನಿಮಗಾಗಿ ಎಂದೇ ಇದರಲ್ಲಿ ತಾರ್ಕಿ ಇದೆ – ಅದನ್ನು ನೀವು ಒಪ್ಪಿಕೊಳ್ಳುತ್ತೀರಲ್ಲವೆ ? ಆ 'ಸಹನೆ'

ಬಗೆಗಿನ ತುಣುಕು ಒಂದು ರೀತಿಯಲ್ಲಿ ನಿರ್ಮಲವಾಗಿದೆ–ಅಲ್ಲವೆ? ನಾನು ಹೇಳಲು ಅವಕಾಶ ಸಿಗಬಲ್ಲುದೇ ಆದರೆ, ನಾನು ಬಹಳವಾಗಿ ಮೆಚ್ಚುವ ನಿಮ್ಮಲ್ಲಿನ ಗುಣವೆಂದರೆ....ಅದು ನಿಮ್ಮ ತಾಳ್ಮೆ. ಈಗ, ಸಭಿಕರೇ, ನೀವುಗಳೆಲ್ಲಾ ಹೋಗಬಹುದು. ಇನ್ನು ಚೆರಿಯಾನಿಗೆ ನಿಮ್ಮಗಳ ಅವಶ್ಯಕತೆ ಇಲ್ಲವೇ ಇಲ್ಲ. ಕೆಸೋನಿಯಾ, ನೀನು ಇಲ್ಲೇ ಇರಬೇಕೆಂದು ನನ್ನ ಬಯಕೆ; ನೀನೂ ಇರಬೇಕು, ಲೆಪಿಡಸ್; ನೀನೂ ಕೂಡ, ನಮ್ಮ ಹಳೆಯ ಮಿತ್ರ ಮೆರೀಯಾ, ಇರಲೇ ಬೇಕು. ನಾನು ನಿಮ್ಮಗಳೊಡನೆ ನಮ್ಮ ರಾಷ್ಟ್ರೀಯ ವೇಶ್ಯಾವಾಟಿಕೆಗಳನ್ನು ಕುರಿತು ಒಂದಿಷ್ಟು ಚರ್ಚಿಸಬೇಕಾಗಿದೆ: ಈ ನಮ್ಮ ವೇಶ್ಯಾಗಾರಗಳು ಅಷ್ಟೇನೂ ಚೆನ್ನಾಗಿ ನಡೆಯುತ್ತಿಲ್ಲ; ಸತ್ಯ ಹೇಳುವುದೇ ಆದರೆ ನನಗೆ ಈ ವೇಶ್ಯಾಗೃಹಗಳ ಬಗ್ಗೆ ಅಪಾರವಾದ ಆಸಕ್ತಿಗಳಿವೆ.

(ಉಳಿದವರೆಲ್ಲಾ ನಿಧಾನವಾಗಿ ಹೋಗತೊಡಗುತ್ತಾರೆ. ಹೋಗುತ್ತಿರುವ ಮ್ಯೂಸಿಯಸ್‌ನನ್ನೇ ಕ್ಯಾಲಿಗುಲ ನೋಡತೊಡಗುತ್ತಾನೆ.)

ಚೆರಿಯಾ: ನಿನ್ನ ಆಜ್ಞೆಗಳಿಗಾಗಿಯೇ ನಾನಿದ್ದೇನೆ, ಕಾಯಸ್. ಆದರೆ, ವೇಶ್ಯಾಗೃಹಗಳಲ್ಲಿ ಇರುವ ತೊಂದರೆಯಾದರೂ ಏನು? ಸಿಬ್ಬಂದಿ ವರ್ಗ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೇನು?

ಕ್ಯಾಲಿಗುಲ: ಹಾಗೇನೂ ಇಲ್ಲ–ಆದರೆ, ಗಳಿಕೆಯೇ ಹಿಂದಿಂದಕ್ಕೆ ಬೀಳಲಾರಂಭಿಸಿದೆ.

ಮೆರೀಯಾ: ಹಾಗಾದಮೇಲೆ ನೀವು ಪ್ರವೇಶಧನವನ್ನು ಹೆಚ್ಚಿಸಲೇ ಬೇಕು.

ಕ್ಯಾಲಿಗುಲ: ಇಲ್ಲೇ, ಮೆರೀಯಾ, ನೀನು ನಿನ್ನ ಬಾಯಿಯನ್ನು ಮುಚ್ಚಿಕೊಂಡು ಇರಬಹುದಾದಂತಹ ಸುವರ್ಣಾವಕಾಶ ಒಂದನ್ನು ಕಳೆದುಕೊಂಡದ್ದು ಇಲ್ಲೇ! ಈ ವಿಚಾರದಲ್ಲಿ ಆಸಕ್ತಿ ತಳೆಯುವ ವಯಸ್ಸಲ್ಲ ನಿನ್ನದು–ಆದ್ದರಿಂದ, ನಿನ್ನ ಅಭಿಪ್ರಾಯ ನನಗೆ ಬೇಕಾಗಿಲ್ಲ.

ಮೆರೀಯಾ: ಹಾಗಿದ್ದಮೇಲೆ ನೀನು ನನ್ನನ್ನು ಏಕೆ ಉಳಿಸಿಕೊಂಡೆ?

ಕ್ಯಾಲಿಗುಲ: ಏಕೆಂದರೆ, ತಕ್ಷಣದಲ್ಲೇ ನನಗೆ ಶೀತಲವಾದ ಹಾಗೂ

ಅನಾಸಕ್ತವಾದ ಸಲಹೆಗಳು ಬೇಕಾಗಿಬಂದುಬಿಡಬಹುದು ಎಂದು !

(ಮೆರೀಯಾ ಕ್ಯಾಲಿಗುಲನಿಂದ ದೂರದೂರ ಹೋಗಿಬಿಡುತ್ತಾನೆ.)

ಚೆರಿಯಾ : ಈ ವಿಚಾರವಾಗಿ ನನ್ನ ದೃಷ್ಟಿಗಳು ಏನೆಂದು ತಿಳಿಯುವ ಬಯಕೆಯಿದ್ದರೆ, ಕಾಯಸ್, ಶೀತಲವಾಗಿ ಅಥವಾ ಅನಾಸಕ್ತವಾಗಿ ಹೇಳುವೆ–ನೀವು ವೇಶ್ಯಾವಾಟಿಕೆಗಳ ಪ್ರವೇಶಧನವನ್ನು ಹೆಚ್ಚಿಸಿದ್ದೇ ಆದರೆ ಅದೊಂದು ದೊಡ್ಡ ಮೂರ್ಖತೆಯಾಗಿಬಿಡುತ್ತದೆ.

ಕ್ಯಾಲಿಗುಲ : ಖಡಾಖಂಡಿತವಾದ ಮೂರ್ಖತೆಯಾಗಿಬಿಡುತ್ತದೆ. ವೇಶ್ಯಾಗೃಹಗಳ ವಹಿವಾಟನ್ನು ತುಂಬಾ ದೊಡ್ಡದಾಗಿ ಬೆಳೆಸುವುದರ ಆವಶ್ಯಕತೆ ಬಹಳವಾಗಿದೆ. ನಾನು ಕೆಸೋನಿಯಾಳಿಗೆ ಈ ರಾಷ್ಟ್ರೀಯ ಆಂದೋಲನದ ವೈಖರಿಯನ್ನೆಲ್ಲಾ ವಿವರಿಸಿ ಹೇಳಿದ್ದೇನೆ; ಆಲ್ಲದೆ ಅವಳೇ ಅದನ್ನೆಲ್ಲಾ ನಿನಗೆ ಹೇಳುತ್ತಾಳೆ. ವೈಯಕ್ತಿಕವಾಗಿ ಮಾತ ನಾಡುವುದೇ ಆದರೆ, ನಾನು ಸ್ವಲ್ಪ ಹೆಚ್ಚಾಗಿಯೇ ಮದ್ಯ ಕುಡಿದಿರು ವುದರಿಂದಾಗಿ ಇರಬೇಕು–ನನಗೆ ನಿದ್ದೆ ಬರುವ ಹಾಗೆ ಕಾಣುತ್ತಿದೆ !

(ಆತ ಹಾಗೆಯೇ ಮಲಗಿ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾನೆ.)

ಕೆಸೋನಿಯಾ : ಅದೋ ತೀರ ಸರಳವಾಗಿದೆ–ಕ್ಯಾಲಿಗುಲ ಹೊಚ್ಚ ಹೊಸ ರಾಜಪದವಿ ಒಂದನ್ನು ಸೃಷ್ಟಿಸಿಬಿಡುತ್ತಿದ್ದಾನೆ.

ಚೆರಿಯಾ : ನನ್ನ ದುಃಖ ಏನೆಂದರೆ–ನನಗೆ ಇವೆರಡಕ್ಕೂ ಮಧ್ಯೆ ಏನೂ ಸಂಬಂಧವೇ ಕಾಣುತ್ತಿಲ್ಲ.

ಕೆಸೋನಿಯಾ : ಸಂಬಂಧ ಕಾಣುತ್ತಿಲ್ಲ ? ಆದರೂ ಇರಬೇಕಾದ ಸಂಬಂಧ ಇದ್ದೇ ಇದೆ : ಆ ರಾಜಪದವಿಯ ಪದಕಕ್ಕೆ 'ಶ್ರೇಷ್ಠ ಪೌರ ಪದಕ' ವೆಂದು ಕರೆಯಲಾಗುತ್ತದೆ ; ಮತ್ತು ಅವನ್ನು ಯಾರು ಕ್ಯಾಲಿಗುಲನ ರಾಷ್ಟ್ರೀಯ ವೇಶ್ಯಾವಾಟಿಕೆಗಳನ್ನು ಅತಿ ಶ್ರದ್ಧೆಯಿಂದ ಯತೇಚ್ಛ ವಾಗಿ ಪ್ರೋತ್ಸಾಹಿಸುವರೋ ಅಂಥವರಿಗೆ ಕೊಡಲಾಗುತ್ತದೆ.

ಚೆರಿಯಾ : ಎಂತಹ ಕಣ್ಣುಗಳನ್ನು ಕೋರೈಸುವ ವಿಚಾರ!

ಕೆಸೋನಿಯಾ : ಹೌದು, ಅದು ಕಣ್ಣುಗಳನ್ನು ಕೋರೈಸುವಷ್ಟು

ಪ್ರಖರವಾದ ವಿಚಾರವೇ. ಆಹ್, ಮರೆತೇಬಿಟ್ಟಿದ್ದೆ–ಪ್ರತಿ ತಿಂಗಳೂ ಪ್ರವೇಶ ಪತ್ರಗಳನ್ನು ಪರಿಶೀಲಿಸಿದನಂತರವೇ 'ಶ್ರೇಷ್ಠ ಪೌರಪದಕ' ವನ್ನು ಪ್ರಧಾನಮಾಡಲಾಗುತ್ತದೆ. ಯಾವುದೇ ಪೌರ ಹನ್ನೆರಡು ತಿಂಗಳಲ್ಲಿ ಆ ಪದಕವನ್ನು ಪಡೆಯದೇ ಹೋದಲ್ಲಿ ಆತನನ್ನು ದೇಶೋಚ್ಚಾಟನೆಗೆ ಅಥವಾ ಮರಣದಂಡನೆಗೆ ಗುರಿಪಡಿಸಲಾಗುತ್ತದೆ.

ಚೆರಿಯಾ : ಈ 'ಅಥವಾ ಮರಣದಂಡನೆ' ಏಕೆ ?

ಕೆಸೋನಿಯಾ : ಏಕೆಂದರೆ, ಕ್ಯಾಲಿಗುಲನ ಪ್ರಕಾರ ಯಾವ ಶಿಕ್ಷೆ ಆಯ್ಕೆಯಾಗುತ್ತದೆ ಎನ್ನುವುದಲ್ಲ ಮುಖ್ಯ–ಆದರೆ, ಆಯ್ಕೆ ಮಾಡಲು ಸಾಯುವಾತನಿಗೂ ಅಧಿಕಾರವಿರಬೇಕು ಎನ್ನುವುದೇ ಮುಖ್ಯ.

ಚೆರಿಯಾ : ಭಲಾ ! ಭಲಾ !! ಹೀಗೆಲ್ಲಾ ಆದುದೇ ಆದರೆ ಸಾರ್ವಜನಿಕ ಖಜಾನೆ ತನ್ನ ಖೋತಾವನ್ನು ಕ್ಷಣದಲ್ಲೇ ನೀಗಿಕೊಂಡುಬಿಟ್ಟೀತು!

(ಕ್ಯಾಲಿಗುಲ ತನ್ನ ಕಣ್ಣುಗಳನ್ನು ಅರೆಬರೆಯಾಗಿ ತೆರೆದು, ಮೂಲೆಯೊಂದರಲ್ಲಿ ನಿಂತ ಮೆರೀಯಾ ತನ್ನ ಪುಟ್ಟ ಸೀಸೆ ಒಂದನ್ನು ಹೊರ ತೆಗೆದು ಅದನ್ನು ಚೀಪುತ್ತಾ ಇರುವುದನ್ನು ನೋಡತೊಡಗುತ್ತಾನೆ.)

ಕ್ಯಾಲಿಗುಲ : (ಮಂಚದಲ್ಲಿ ಒರಗಿಕೊಂಡೇ) ಮೆರೀಯಾ, ನೀನು ಕುಡಿಯುತ್ತಿರುವುದಾದರೂ ಏನು ?

ಮೆರೀಯಾ : ಇದು ನನ್ನ ಆಸ್ತಮಾ ರೋಗಕ್ಕಾಗಿ, ಕಾಯಸ್.

(ಕ್ಯಾಲಿಗುಲ ಮೇಲೆದ್ದು, ಇತರರನ್ನು ನೂಕಿಕೊಂಡು ಮೆರೀಯಾನ ಬಳಿಗೆ ಹೋಗಿ, ಅವನ ಬಾಯನ್ನು ಮೂಸಿ ನೋಡುತ್ತಾನೆ.)

ಕ್ಯಾಲಿಗುಲ : ಇದು ಔಷಧಿಯಲ್ಲ–ಪ್ರತಿರೋಧಕ.

ಮೆರೀಯಾ : ಎಂತಹ ಭಾವನೆ, ಕಾಯಸ್ ! ಖಂಡಿತ ನೀವು ತಮಾಷೆ ಮಾಡುತ್ತಿರಬೇಕು ? ರಾತ್ರಿ ಎಲ್ಲಾ ಉಸಿರುಗಟ್ಟಿದ ದಮ್ಮು ನನ್ನನ್ನು ಸುಮ್ಮನೆ ಕಾಡುತ್ತಿರುತ್ತದೆ ; ಆದರಿಂದಾಗಿ ನಾನು ತಿಂಗಳುಗಟ್ಟಲೆಗಳಿಂದಲೂ ವೈದ್ಯರುಗಳ ಕೈಯಲ್ಲಿದ್ದೇನೆ.

ಕ್ಯಾಲಿಗುಲ : ಅಂದರೆ, ವಿಷಹಾಕಿಬಿಡುತ್ತಾರೆ ಎನ್ನುವ ಭಯ ನಿನಗೆ ?

ಮೆರೀಯಾ : ನನ್ನ ಆಸ್ತಮಾ....

ಕ್ಯಾಲಿಗುಲ : ಇಲ್ಲ-ನೀನು ವ್ಯರ್ಥವಾಗಿ ಏಕೆ ಗಾಳಿಯನ್ನು ಗುದ್ದುತ್ತಿದ್ದೀಯೇ ?-ನಾನು ವಿಷಹಾಕಿಬಿಡುತ್ತೇನೆಂದು ನಿನಗೆ ಭಯ-ನನ್ನ ಮೇಲೆ ಗುಮಾನಿ-ಆದರಿಂದಾಗಿ, ನೀನು ನನ್ನ ಮೇಲೆ ಕಣ್ಣೊಂದನ್ನು ಇಟ್ಟದ್ದೀಯೆ.

ಮೆರೀಯಾ : ಅಯ್ಯೋ ದೇವರೇ ! – ಇಲ್ಲ, ಇಲ್ಲ !

ಕ್ಯಾಲಿಗುಲ : ನಿನಗೆ ನನ್ನ ಮೇಲೆ ಗುಮಾನಿ– ನಾನು ನಂಬಿಕೆಗೆ ಯೋಗ್ಯನಲ್ಲ ಎಂದು, ಅಲ್ಲವೆ ?

ಮೆರೀಯಾ : ಕಾಯಸ್ !

ಕ್ಯಾಲಿಗುಲ : (ಒರಟಾಗಿ) ಉತ್ತರ ಕೊಡು ! (ನ್ಯಾಯಧೀಶನ ಕಣ್ಣನೆಯ ಧ್ವನಿಯಲ್ಲಿ) ನೀನು ಪ್ರತಿರೋಧಕವನ್ನು ತೆಗೆದುಕೊಳ್ಳುತ್ತಿರುವುದೇ ಆದರೆ, ಆದರ ಅರ್ಥ-ನಾನು ನಿನಗೆ ವಿಷಹಾಕುತ್ತಿದ್ದೇನೆ ಎನ್ನುವ ಆರೋಪವನ್ನು ನನ್ನ ಮೇಲೆ ನೀನು ಹೊರಿಸುತ್ತಾ ಇದ್ದೀಯೆ ಎಂದು: ಕ್ಯೂ. ಈ. ಡಿ. - ಅರ್ಥಾತ್, ಇದೇ ಯಾವುದನ್ನು ಸಾಧಿಸಿ ತೋರಿಸಬೇಕಾಗಿತ್ತೋ ಅದು.

ಮೇರಿಯಾ : ಹೌದು.... ನನ್ನ ಅರ್ಥ....ಅದಲ್ಲ! ಅದಲ್ಲ! ಅರ್ಥಾತ್....

ಕ್ಯಾಲಿಗುಲ : ನಾನು ವಿಷಹಾಕುತ್ತೇನೆ ಎಂದು ನೀನು ಭಾವಿಸಿಕೊಂಡು ನನ್ನ ಎಲ್ಲ ಉದ್ದೇಶಗಳನ್ನೂ ನೀನು ವಿಫಲಗೊಳಿಸಲು ಹೊರಟಿದ್ದೀಯೆ. (ಮೌನವಾಗಿ ಬಿಡುತ್ತಾನೆ.)

(ಈ ಮಧ್ಯೆ ಕೆಸೋನಿಯಾ ಮತ್ತು ಚೆರಿಯಾ ರಂಗದ ಒಳಅಂಚಿಗೆ ಹೋಗಿಬಿಟ್ಟಿದ್ದಾರೆ. ಲೆಪಿಡಸ್ ವ್ಯಗ್ರವಾಗಿ ಕ್ಯಾಲಿಗುಲ ಮತ್ತು ಮೆರೀಯಾರನ್ನು ನೋಡುತ್ತಿದ್ದಾನೆ.)

ಅಲ್ಲಿಗೆ ನೀನು ಎರಡು ಅಪರಾಧಗಳನ್ನು - ಮೆರೀಯಾ, ಜೊತೆ ಜೊತೆಗೇ ತಪ್ಪಿಸಿಕೊಳ್ಳಲು ಸಾಧ್ಯವೇ ಆಗದ ಒಂದು ಇಬ್ಬಂದಿತನವನ್ನೂ - ಎಸಗಿದಂತೆ ಆಯಿತು. ಈ ಅಪರಾಧ ಮೊದಲನೆಯ

ದಾಗಿ ನಿನ್ನ ಕೊಲೆಯ ಉದ್ದೇಶವೇ ನನಗೆ ಇರಲಿಲ್ಲವೆಂದಾದರೆ ನೀನು ನನ್ನ ಬಗ್ಗೆ – ಅದೂ ನಿನ್ನ ಚಕ್ರವರ್ತಿಯ ಬಗ್ಗೆ – ವಿನಾಕಾರಣ ಗುಮಾನಿ ಪಡುತ್ತಿದ್ದೀಯೆ ಎನ್ನುವಂತಹದು; ಅಥವಾ ಎರಡನೆಯ ದಾಗಿ, ನಿನ್ನ ಕೊಲೆಯೇ ನನ್ನ ಉದ್ದೇಶವಾಗಿತ್ತು ಎನ್ನುವುದೇ ಆದರೆ, ಒಂದು ಕ್ಷುದ್ರಾತಿಕ್ಷುದ್ರ ಜೀವಿಯಾದ ನೀನು ನಿನ್ನ ಸಾರ್ವಭೌಮನ ಅಭೀಪ್ಸೆಯನ್ನು ಧಿಃಕರಿಸುತ್ತಿದ್ದೀಯೆ ಎನ್ನುವಂತಹದ್ದು. (ಮತ್ತೆ ಮೌನ. ಕ್ಯಾಲಿಗುಲ ಆ ವೃದ್ಧ ಉಗುಳು ನುಂಗುತ್ತಿರುವುದನ್ನೇ ಧ್ಯಾನಿಸುತ್ತಿದ್ದು) ಸರಿ, ನನ್ನ ಈ ತಾರ್ಕಿಕತೆಗೆ ನೀನು ಏನನ್ನು ಹೇಳುತ್ತೀಯೆ, ಮೆರೀಯಾ?

ಮೆರೀಯಾ : ಅದು... ಅದು ಸಾಕಷ್ಟು ಚೆನ್ನಾಗಿದೆ, ಕಾಯಸ್. ಆದರೆ, ನನ್ನ ಈ ವಿಚಾರಕ್ಕೆ ಮಾತ್ರ ಅನ್ವಯಿಸುವುದಿಲ್ಲ, ಅಷ್ಟೇ.

ಕ್ಯಾಲಿಗುಲ : ಇದು ಮೂರನೆಯ ಅಪರಾಧ—ನೀನು ನನ್ನನ್ನು ಮೂರ್ಖನೆಂದು ಪರಿಗಣಿಸಿದ್ದೀಯೆ. ಈಗ ನೀನು ಕುಳಿತು, ನನ್ನ ಮಾತನ್ನು ಸರಿಯಾಗಿ ಆಲಿಸಿಕೋ. (ಲೆಪಿಡೆಸ್‌ನಿಗೆ) ಪ್ರತಿಯೊಬ್ಬರು ಕುಳಿತುಕೊಂಡುಬಿಡಲಿ. (ಮೇರಿಯಾನಿಗೆ) ಈ ಮೂರರಲ್ಲಿ ಒಂದು ಅಪರಾಧ ನಿನ್ನ ಗೌರವವನ್ನು ಕಾಯ್ದುಕೊಂಡಿದೆ ; ಅದು ಎಂದರೆ ನಿನ್ನ ಎರಡನೇ ಅಪರಾಧ – ನನಗೆ ಎಂತೆಂಥದೋ ಅಭಿಲಾಷೆಗಳಿವೆ ಎಂದು ನೀನು ಅಂದುಕೊಂಡು, ಅವುಗಳನ್ನು ಎದುರಿಸಲೆಂದೇ ಪೂರ್ವಸಿದ್ಧತೆಗಳಲ್ಲಿ ತೊಡಗಿದ ಕಾರಣದಿಂದಾಗಿ ನೀನು ಬೇಕುಬೇಕೆಂದೇ ನನ್ನ ವ್ಯಕ್ತಿತ್ವಕ್ಕೆ ಚ್ಯುತಿ ತಂದಿದ್ದೀಯೆ. ಅಂದಮೇಲೆ ನೀನೊಬ್ಬ ಬಂಡುಗಾರ – ಕ್ರಾಂತಿಯೊಂದರ ನಾಯಕ ಎನ್ನುವುದು, ತೀರ್ಮಾನವಾದ ಹಾಗೆ ಆಯಿತು – ಕ್ರಾಂತಿಕಾರನಾಗಲು ಧೈರ್ಯ ಬೇಕು, ನಿಜ. (ದುಃಖದಿಂದ) ಮೆರೀಯಾ, ನೀನೆಂದರೆ ನನಗೆ ತುಂಬಾ ಇಷ್ಟ: ಆದ್ದರಿಂದಲೇ ನಾನು ನಿನ್ನನ್ನು – ಉಳಿದೆರಡೂ ಅಪರಾಧಗಳನ್ನೂ ಮನ್ನಿಸಿ – ಎರಡನೇ ಅಪರಾಧಕ್ಕೆ ಮಾತ್ರ ಒಳಪಡಿಸಿ, ನಿನಗೆ ಮರಣದಂಡನೆಯನ್ನು ವಿಧಿಸಲಿದ್ದೇನೆ. ನೀನು ಈಗ ಗೌರವಪೂರ್ವಕವಾಗಿ ಕ್ರಾಂತಿವೀರನ ಸಾವನ್ನು ಅಪ್ಪಿಯೆ ತೀರಬೇಕಾಗಿಬಿಟ್ಟಿದೆ.

(ಕ್ಯಾಲಿಗುಲ ಮಾತನಾಡುತ್ತಿರುವಾಗಲೇ ಮೆರೀಯಾ ತನ್ನ ಪೀಠದ ಮೇಲೆ ಕುಸಿದು ಉರುಳುತ್ತಾನೆ.)

ಇದಕ್ಕಾಗಿ ನನ್ನನ್ನು ನೀನು ಅಭಿನಂದಿಸುವ ಅವಶ್ಯಕತೆ ಏನೂ ಇಲ್ಲ – ಇದು ತೀರ ಸಹಜವಾದ ವಿಚಾರ. ತೆಗೆದುಕೋ (ಸೀಸೆ ಒಂದನ್ನು ಮೆರೀಯಾ ಮುಂದೆ ಚಾಚಿ, ಆತ್ಮೀಯವಾದ ಧ್ವನಿಯಲ್ಲಿ) ಈ ವಿಷವನ್ನು ಕುಡಿ. (ಮೆರೀಯಾ ತಲೆಯನ್ನು ಬೇಡವೆಂದು ಅಲ್ಲಾಡಿಸುತ್ತಾ ಬಿದ್ದು ಬಿದ್ದು ಅಳುತ್ತಾನೆ. ಕ್ಯಾಲಿಗುಲ ತಾಳ್ಮೆಯನ್ನು ಕಳೆದುಕೊಂಡು) ಸುಮ್ಮನೆ ಸಮಯವನ್ನು ವ್ಯರ್ಥಮಾಡಬೇಡ, ತೆಗೆದುಕೋ.

(ಮೆರೀಯಾ ತಪ್ಪಿಸಿಕೊಳ್ಳಲು ತೀರ ವ್ಯರ್ಥವಾದ ಪ್ರಯತ್ನ ಒಂದನ್ನು ಮಾಡುತ್ತಾನೆ. ಆದರೆ, ಕ್ಯಾಲಿಗುಲ ಕ್ರೂರ ಜಿಗಿತ ಒಂದನ್ನು ಜಿಗಿದು ಅವನನ್ನು ರಂಗದ ಮಧ್ಯಕ್ಕೆ ಹಿಡಿದು ತಂದು, ಸ್ವಲ್ಪ ಕಾಲದ ಹೋರಾಟದ ನಂತರ ತಗ್ಗಾದ ಪೀಠ ಒಂದರ ಮೇಲಕ್ಕೆ ಅವನನ್ನು ಎಳೆದು ನೂಕಿ ಕುಕ್ಕರಿಸುತ್ತಾನೆ. ಅವನ ತುಟಿಗಳ ಮಧ್ಯಕ್ಕೆ ಶೀಷೆಯನ್ನು ತುರುಕಿ ಮುಷ್ಟಿಯಿಂದ ಅದನ್ನು ರಭಾಡಿಸಿ ರಭುಡಿಯುತ್ತಾನೆ. ಸ್ವಲ್ಪ ಕಾಲದ ವದ್ದಾಟದ ನಂತರ ಮೇರಿಯಾ ಸಾಯುತ್ತಾನೆ. ಅವನ ಮುಖದಿಂದ ರಕ್ತ ಮತ್ತು ಕಣ್ಣೀರು ಉಕ್ಕುತ್ತದೆ. ಮೇಲೆದ್ದ ಕ್ಯಾಲಿಗುಲ ವಿಮನಸ್ಕನಾಗಿ ಕೈಗಳನ್ನು ವರಸಿಕೊಳ್ಳುತ್ತಾ, ಮೇರಿಯಾನ ಸೀಸೆಯನ್ನು ಎತ್ತಿ ಕೆಸೋನಿಯಾಳಿಗೆ ಕೊಡುತ್ತಾ)

ಏನಿದು ? ರೋಗ ನಿರೋಧಕವೇನು ?

ಕೆಸೋನಿಯಾ : (ಶಾಂತಳಾಗಿ) ಅಲ್ಲ, ಕ್ಯಾಲಿಗುಲ ಅಲ್ಲ – ಅಸ್ತಮಾಕ್ಕೆ ಒಂದು ಶಮನಕ, ಅಷ್ಟೇ.

(ಸ್ವಲ್ಪ ಹೊತ್ತು ಎಲ್ಲ ಸ್ತಬ್ಧವಾಗಿಬಿಡುತ್ತದೆ.)

ಕ್ಯಾಲಿಗುಲ : (ಮೆರೀಯಾನನ್ನೇ ದಿಟ್ಟಿಸುತ್ತಾ) ಚಿಂತೆಯಿಲ್ಲ : ಹೇಗೂ ಅಂತ್ಯ ಕಾಲದಲ್ಲಿ ಎಲ್ಲವೂ ಒಂದೇ ಒಂದರಲ್ಲಿ ಮಾತ್ರ ಪರ್ಯವಸಾನಗೊಳ್ಳುತ್ತವೆ – ಕೆಲವು ಸ್ವಲ್ಪ ಮುಂದಾಗಬಹುದು ! ಉಳಿದವು

ಹಿಂದಾಗಬಹುದು—ಅಷ್ಟೇ.

(ಕೈಗಳನ್ನು ವರೆಸಿಕೊಳ್ಳುತ್ತಾ ಧಾವಿಸಿ ಹೊರ ಹೋಗಿ ಬಿಡುತ್ತಾನೆ.)

ಲೆಪಿಡಸ್ : (ಭೀತನಾಗಿ) ಏನು .. ಏನು ಮಾಡೋಣ ನಾವು ಈಗ?

ಕೆಸೋನಿಯಾ : (ಪ್ರಶಾಂತವಾಗಿ) ಏನನ್ನೇ ಆಗಲಿ ಮಾಡುವ ಮೊದಲಿಗೆ ಆ ಶವವನ್ನು ಅಲ್ಲಿಂದ ತೆಗೆದು ಬಿಡಿ—ಎಂದು ನಾನು ಹೇಳಲೇಬೇಕಾಗಿದೆ; ಇದೊಂದು ಅತಿ ಮೃಗೀಯವಾದ ದೃಶ್ಯ.

(ಚೆರಿಯಾ ಮತ್ತು ಲೆಪಿಡಸ್ ಶವವನ್ನು ನೇಪಥ್ಯಕ್ಕೆ ಎಳೆದು ಹಾಕುತ್ತಾರೆ.)

ಲೆಪಿಡಸ್ : (ಚೆರಿಯಾನಿಗೆ) ನಾವು ಇನ್ನಾದರೂ ತ್ವರೆಯಿಂದ ಕಾರ್ಯ ತತ್ಪರರಾಗಬೇಕಾಗಿದೆ.

ಚೆರಿಯಾ : ನಮಗೆ ಒಂದು ಇನ್ನೂರು ಜನರಾದರೂ ಬೇಕಾಗಿಯೇ ಬೇಕಾಗುತ್ತಾರೆ.

(ಕಿರಿಯನಾದ ಸಿಪಿಯೋ ಪ್ರವೇಶಿಸುತ್ತಾ ಇರುವಾಗಲೇ ಕೆಸೋನಿಯಾಳನ್ನು ಕಂಡು ಹಿಂದಕ್ಕೆ ಹೋಗಲು ತೊಡಗುತ್ತಾನೆ—ಆಗ)

ಕೆಸೋನಿಯಾ : ಬಾ ಸಿಪಿಯೋ, ಬಾ.

ಸಿಪಿಯೋ : ನಿನಗೆ ಏನು ಬೇಕು?

ಕೆಸೋನಿಯಾ : ಎಲ್ಲಿ ಹತ್ತಿರಕ್ಕೆ ಬಾ ಇಲ್ಲಿ. (ಅವನ ಗಲ್ಲವನ್ನು ಮೇಲೆತ್ತಿ ಅವನ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನು ನೆಟ್ಟು ನೋಡುತ್ತಾಳೆ. ಸ್ವಲ್ಪಕಾಲದ ಮೌನ. ಆನಂತರ, ಉದ್ವೇಗರಹಿತವಾದ ಸೌಮ್ಯ ಸ್ವರದಲ್ಲಿ)

ನಿನ್ನ ತಂದೆಯನ್ನು ಅವನು ಕೊಂದುಬಿಟ್ಟ—ಅಲ್ಲವೆ?

ಸಿಪಿಯೋ : ಹೌದು.

ಕೆಸೋನಿಯಾ : ನೀನು ಅವನನ್ನು ದ್ವೇಷಿಸುತ್ತೀಯೋ, ಅಲ್ಲವೆ?

ಸಿಪಿಯೋ : ಹೌದು.

ಕೆಸೋನಿಯಾ : ಹಾಗಾದಮೇಲೆ, ನೀನು ಅವನನ್ನು ಕೊಲ್ಲುವ ಚಪಲದಲ್ಲಿ ಇದ್ದೀಯೋ, ಅಲ್ಲವೆ?

ಸಿಪಿಯೋ : ಹೌದು.

ಕೆಸೋನಿಯಾ : (ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಂಡು) ಕೊಲ್ಲುವುದೇ

ನಿನ್ನ ಉದ್ದೇಶವಾದರೆ ಅದನ್ನು ನನಗೇಕೆ ಕೇಳುತ್ತಿದ್ದೀ ?

ಸಿಪಿಯೋ : ಏಕೆಂದರೆ, ನನಗೆ ಯಾರ ಭಯವೂ ಇಲ್ಲ: ಆದ್ದರಿಂದಲೇ ....ಅವನನ್ನು ನಾನು ಕೊಲ್ಲುವುದು ;ಅಥವಾ ಅವನಿಂದ ನಾನೇ ಸಾಯುವುದು-ಎರಡರಲ್ಲಿ ಯಾವುದಕ್ಕೇ ಆದರೂ ನಾನು ಸಿದ್ಧ. ನೀನು ಹೇಗೂ ನನ್ನನ್ನು ವಂಚಿಸುವವಳಲ್ಲ, ಅಲ್ಲವೆ ?

ಕೆಸೋನಿಯಾ :ಅದು ನಿಜ- ನಾನು ಎಂದೂ ನಿನ್ನನ್ನು ವಂಚಿಸುವವಳಲ್ಲ. ಆದರೆ, ನಿನಗೆ ಏನನ್ನೋ ನಾನು ಹೇಳಲೇಬೇಕಾಗಿದೆ-ಅಥವಾ, ಹೀಗೂ ಅನ್ನಬಹುದಾದರೆ- ನಿನ್ನಲ್ಲಿರುವ ಶ್ರೇಷ್ಠತೆಯನ್ನು ಕುರಿತು ನಾನು ಮಾತನಾಡಲೇಬೇಕಾಗಿದೆ.

ಸಿಪಿಯೋ : ನನ್ನಲ್ಲಿ ಇರುವ ಶ್ರೇಷ್ಠತೆ ಎಲ್ಲಾ ನನ್ನ ದ್ವೇಷ ಒಂದೇ !

ಕೆಸೋನಿಯಾ : ಕೃಪೆಯಿಟ್ಟು ನಾನು ಹೇಳಲಿರುವುದನ್ನೆಲ್ಲಾ ಎಚ್ಚರಿಕೆಯಿಂದಕೇಳಿಕೋ. ನಿನಗೆ ಇದು ಅರ್ಥವಾಗುವುದು ಕಷ್ಟವೋ ಏನೋ ಎಂದು ಅನ್ನಿಸಬಹುದು ; ಆದರೆ ನಾನು ಹೇಳಲಿರುವ ಮಾತು ಸತ್ಯಕ್ಕೂನಡುಹಗಲ ಸೂರ್ಯನಷ್ಟೇ ಸ್ಪಷ್ಟವಾದುದು,ಅಷ್ಟೇ ಅಲ್ಲ- ಅದನ್ನು ಜನತೆ ಸರಿಯಾದ ರೀತಿಯಲ್ಲಿ ತಮ್ಮ ತಲೆಗೆ ತಂದುಕೊಳ್ಳುವುದೇ ಆದರೆ ಅದು ನಮ್ಮ ಇಡೀ ಜಗತ್ತಿಗೇ ನಿಜಕ್ರಾಂತಿಯೊಂದನ್ನು ತಂದೇ ತೀರುವಂತಹದ್ದು ಬೇರೆ.

ಸಿಪಿಯೋ : ಹೌದೇನು ? ಏನದು ?

ಕೆಸೋನಿಯಾ : ತಾಳು ! ನಿನ್ನ ತಂದೆಯ ಸಾವಿನ ಚಿತ್ರವನ್ನು - ಅವರುಗಳು ಅವನ ನಾಲಗೆಯನ್ನು ಎಳೆದು ಹರಿಯುತ್ತಿರುವಾಗಲ ಅವನ ಮುಖದ ಮೇಲಣ ಯಾತನೆಯನ್ನು - ನಿನ್ನ ಮನಸ್ಸಿನಲ್ಲೇ ಚಿತ್ರಿಸಿಕೊಳ್ಳಲು ಆರಂಭಿಸು. ಅವನ ಬಾಯಿಂದ ಉಕ್ಕುತ್ತಿದ್ದ ರಕ್ತವನ್ನೂ ಮತ್ತು ಅವನ ಚಿತ್ರಹಿಂಸೆಗೆ ಬಲಿಯಾಗಿ ಪ್ರಾಣಿಯಂತೆ ಚೀತ್ಕರಿಸುತ್ತಿದ್ದ ಚೀತ್ಕಾರಗಳನ್ನು ನಿನ್ನಲ್ಲಿ ನೀನೇ ಕಲ್ಪಿಸಿಕೋ.

ಸಿಪಿಯೋ : ಕಲ್ಪಿಸಿಕೊಂಡೆ.

ಕೆಸೋನಿಯಾ : ಹಾಗೆಯೇ, ಈಗ ಕ್ಯಾಲಿಗುಲನನ್ನು ಕುರಿತು ಚಿಂತಿಸಲಾರಂಭಿಸಿಬಿಡು.

ಸಿಪಿಯೋ : (ದ್ವೇಷದಿಂದ ವರಟಾದ ಧ್ವನಿಯಲ್ಲಿ) ಚಿಂತಿಸಲು ಆರಂಭಿಸಿಬಿಟ್ಟೆ!

ಕೆಸೋನಿಯಾ : ಈಗ ಕೇಳು-ನೀನು ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸು.

(ಅವಳು ಹೊರಟು ಹೋಗುತ್ತಾಳೆ; ಸಿಪಿಯೋ ಹೋಗುತ್ತಿರುವ ಅವಳನ್ನೇ ನಿಬ್ಬೆರಗಾಗಿ, ಬಿಟ್ಟ ಬಾಯನ್ನು ಬಿಟ್ಟ ಹಾಗೆಯೇ ನೋಡುತ್ತಾ ನಿಂತುಬಿಡುತ್ತಾನೆ. ಆಗ ಹೆಲಿಕಾನ್ ಪ್ರವೇಶಿಸುತ್ತಾನೆ.)

ಹೆಲಿಕಾನ್ : ಇನ್ನೇನು ನಿಮಿಷ ಒಂದರಲ್ಲಿ ಕ್ಯಾಲಿಗುಲ ಬಂದು ನಿಮ್ಮನ್ನು ಕೂಡಿಕೊಳ್ಳುವವನಿದ್ದಾನೆ. ಯುವಕವಿ, ನೀನು ಈಗ ಊಟದ ಸಲುವಾಗಿ ಹೊರಟು ಹೋಗುತ್ತೀ ಎಂದು ಇಟ್ಟುಕೊ?

ಸಿಪಿಯೋ : ನನಗೆ ನೀನು ಸಹಾಯ ನೀಡು, ಹೆಲಿಕಾನ್.

ಹೆಲಿಕಾನ್ : ನಿನಗೆ ಸಹಾಯ ನೀಡುವುದು ತೀರ ತೀರ ಪ್ರಾಣಾಪಕಾರಿಯಾದ ವಿಚಾರ, ನನ್ನ ಮುದ್ದಿನ ಕುರಿಮರಿ. ಅಲ್ಲದೆ, ಕಾವ್ಯ ಎಂದರೆ ನನ್ನ ಪಾಲಿಗೆ ಏನೇನೂ ಅಲ್ಲ.

ಸಿಪಿಯೋ : ನೀನು ನನಗೆ ಸಹಾಯ ಮಾಡಬಲ್ಲೆ; ನಿನಗೆ....ಹೇಗೂ ನಿನಗೆ ಏನೇನೋ ಗೊತ್ತೇಗೊತ್ತಲ್ಲ?

ಹೆಲಿಕಾನ್ : ನನಗೆ ದಿನಗಳು ಉರುಳುತ್ತಿವೆ ಎಂದೂ, ಬೆಳೆಯುವ ಮಕ್ಕಳು ಕಾಲ ಕಾಲಕ್ಕೆ ಸರಿಯಾಗಿ ಊಟ ಮಾಡುತ್ತಿರಬೇಕು ಎಂದೂ ಗೊತ್ತು....ನನಗೆ ನೀನು ಕ್ಯಾಲಿಗುಲನನ್ನು ಕೊಲೆ ಮಾಡಬಲ್ಲೆ ಎಂದೂ, ಅವನು ಅದನ್ನು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳುವವನು ಅಲ್ಲವೇ ಅಲ್ಲವೆಂದೂ ಗೊತ್ತು—ನನಗೆ ಈ ಎಲ್ಲ ವಿಚಾರಗಳೂ ಚೆನ್ನಾಗಿ ಗೊತ್ತೇಗೊತ್ತು! (ನಿಷ್ಕ್ರಮಿಸುತ್ತಾನೆ.)

(ಕ್ಯಾಲಿಗುಲ ಪ್ರವೇಶಿಸುತ್ತಾನೆ.)

ಕ್ಯಾಲಿಗುಲ : ಆಹ್!—ನೀನಾ ಸಿಪಿಯೋ? (ಮೊದಲಿಗೆ ಕ್ಯಾಲಿ

ಗುಲ ಮೌನಗೊಳ್ಳುತ್ತಾನೆ ; ಹಾಗೆಯೇ ಕಕ್ಕಾಬಿಕ್ಕಿಯಾಗಿದ್ದಾನೆಂದು ಯಾರಿಗೇ ಆದರೂ ಅನ್ನಿಸಿಬಿಡುವ ಹಾಗಿದ್ದಾನೆ, ಅವನು.) ನಿನ್ನನ್ನು ನೋಡಿ ಅದೆಷ್ಟು ಕಾಲವಾಗಿಹೋಗಿತ್ತು–ಏನು ಕತೆ! (ನಿಧಾನವಾಗಿ ಸಿಪಿಯೋ ಬಳಿ ಬರುತ್ತಾ) ಇಷ್ಟು ಕಾಲವೂ ನೀನು ಏನು ಮಾಡುತ್ತಿದ್ದೆ ? —ಹೆಚ್ಚು ಹೆಚ್ಚಾಗಿ ಕವನಗಳನ್ನು ರಚಿಸುತ್ತಿದ್ದೆ ಎಂದು ಕಾಣುತ್ತದೆ. ನಿನ್ನ ಇತ್ತೀಚಿನ ಕವನಗಳನ್ನು ನಾನು ನೋಡಬಹುದೆ?

ಸಿಪಿಯೋ : (ಕ್ಯಾಲಿಗುಲನಂತೆಯೇ ಅಸ್ವಸ್ಥನಾಗಿ, ದ್ವೇಷ ಮತ್ತು ಇಂಥದೇ ಎಂದು ಹೇಳಲಾಗದ ಭಾವನೆಗಳ ಮಧ್ಯೆ ಸಿಕ್ಕಿಬಿದ್ದು) ಹೌದು, ಹೌದು– ಸೀಜರ್, ಇತ್ತೀಚೆಗೆ ಒಂದಿಷ್ಟು ಕವನಗಳನ್ನು ನಾನು ರಚಿಸಿದ್ದೇನೆ.

ಕ್ಯಾಲಿಗುಲ : ಯಾವ ವಸ್ತುವನ್ನು ಕುರಿತು ?

ಸಿಪಿಯೋ : ಓಹ್ – ಇಂಥದೇ ವಸ್ತು ಎಂದೇನೂ ಇಲ್ಲ : ಆದರೂ, ಒಂದು ಅರ್ಥದಲ್ಲಿ ಅವು ಪ್ರಕೃತಿಯನ್ನು ಕುರಿತು ರಚಿತವಾದ ಕವನಗಳು ಎಂದು ಹೇಳಬಹುದೋ ಏನೋ.

ಕ್ಯಾಲಿಗುಲ : ' ಪ್ರಕೃತಿ ' ಒಂದು ಬಹು ಸುಂದರವಾದ, ಅಷ್ಟೇ ಅಗಾಧ ವಾದ ವಸ್ತು. ಇಲ್ಲಿನವರೆಗೆ ಇಂತಹ ವಸ್ತು ನಿನಗೆ ಏನೆಲ್ಲವನ್ನು ಕೊಟ್ಟಿದೆ ?

ಸಿಪಿಯೋ : [ಸಾವರಿಸಿಕೊಳ್ಳುತ್ತಾ, ಒಂದು ರೀತಿಯ ಅಕ್ರಮಣಕಾರಿ ಧ್ವನಿ ಯಲ್ಲಿ)ನಾನು ಸೀಜರ್ ಅಲ್ಲವಾದ ಕಾರಣಕ್ಕೆ ಬೇಕಾದ ಸಮಾಧಾನ ನೀಡಿದೆ !

ಕ್ಯಾಲಿಗುಲ : ನಿಜವಾಗಿಯೂ ? ಹಾಗಾದರೆ ನಾನು ಸೀಜರ್ ಆಗಿ ಬಿಟ್ಟಿರುವ ಕಾರಣಗಳಿಗೂ ಬೇಕಾದ ಸಮಾಧಾನವನ್ನು ಪ್ರಕೃತಿ ನೀಡಿಯೇ ನೀಡುತ್ತದೆ ಎನ್ನುವೆ ಏನು ?

ಸಿಪಿಯೋ : (ಕ್ಯಾಲಿಗುಲನದೇ ಧಾಟಿಯಲ್ಲಿ) ಏಕೆ ತಾನೆ ನೀಡಬಾರದು–? ಪ್ರಕೃತಿ ಇದಕ್ಕೂ ಭೀಕರವಾದ ವ್ರಣಗಳನ್ನೆಲ್ಲಾ ಮಾಯಿಸಿಬಿಟ್ಟಿದೆ.

ಕ್ಯಾಲಿಗುಲ : (ಕುತೂಹಲ ಪೂರ್ಣವಾದ ರೀತಿಯಲ್ಲಿ, ಎಳೆಯದಾದ ಹಾಗೂ ನಿರ್ಲಿಪ್ತವಾದ ಧ್ವನಿಯಲ್ಲಿ) ವ್ರಣಗಳು ಎಂದೆ ನೀನು ? ನಿನ್ನ ಧ್ವನಿ ಯಲ್ಲಿ ಕೋಪತಾಪಗಳಿದ್ದವು : ಅವುಗಳಿಗೆ ಕಾರಣ ನಾನು ನಿನ್ನ

ತಂದೆಯನ್ನು ಕೊಂದಿರುವುದು?....ನೀನು ಉಪಯೋಗಿಸಿದ ಆ ಪದ – ಆ ಪದದ ಬಳಕೆಯ ಔಚಿತ್ಯಪೂರ್ಣತೆ ನಿನ್ನೊಬ್ಬನಿಗೆ ಮಾತ್ರ ಗೊತ್ತಿದೆ– ಎಂದಾಗಿಬಿಟ್ಟಿದ್ದರೆ ! ನನ್ನ ವ್ರಣಗಳು ! (ಬೇರಾದ ಧ್ವನಿಯಲ್ಲಿ) ನನ್ನ ಗಾಯಗಳು ! ಹೋಗಲಿ ಹೇಗೂ, ಬುದ್ಧಿಯನ್ನು ಬೆಳೆಸಲು ದ್ವೇಷಕ್ಕೆ ಸರಿಸಮನಾದುದು ಬೇರೊಂದಿಲ್ಲ, ನೋಡು.

ಸಿಪಿಯೋ : (ಗತ್ತಿನಿಂದ) ಪ್ರಕೃತಿಯನ್ನು ಕುರಿತಾದ ನಿನ್ನ ಪ್ರಶ್ನೆಗೆ ನಾನು ಉತ್ತರಿಸಿದೆ – ಇನ್ನೇನು ಇಲ್ಲ.

(ಕ್ಯಾಲಿಗುಲ ಕುಳಿತು ಸಿಪಿಯೋನನ್ನೇ ದೃಷ್ಟಿಸಿ ನೋಡಲಾರಂಭಿಸಿ, ಒರಟೊರಟಾಗಿ ಅವನ ಮುಂಗೈಗಳನ್ನು ಹಿಡಿದು ಮೇಲೆತ್ತಿ ಅವನನ್ನು ನಿಲ್ಲುವಂತೆ ಮಾಡುತ್ತಾನೆ. ನಂತರ ತನ್ನೆರಡೂ ಕೈಗಳ ಮಧ್ಯದಲ್ಲಿ ಅವನ ಮುಖವನ್ನು ಹಿಡಿದು)

ಕ್ಯಾಲಿಗುಲ : ದಯವಿಟ್ಟು ನನಗಾಗಿ ನಿನ್ನ ಕವನವನ್ನು ಓದು.

ಸಿಪಿಯೋ : ಸಾಧ್ಯವಿಲ್ಲ – ದಯವಿಟ್ಟು ಅದನ್ನು ಮಾತ್ರ ಕೇಳಬೇಡ.

ಕ್ಯಾಲಿಗುಲ : ಏಕೆ ಕೇಳಬಾರದು?

ಸಿಪಿಯೋ : ಅದು ನನ್ನ ಬಳಿಯಲ್ಲಿ ಇಲ್ಲವೇ ಇಲ್ಲ.

ಕ್ಯಾಲಿಗುಲ : ನೆನಪು ಮಾಡಿಕೊಳ್ಳಲೂ ಆಗುವುದಿಲ್ಲವೆ?

ಸಿಪಿಯೋ : ಆಗುವುದಿಲ್ಲ.

ಕ್ಯಾಲಿಗುಲ : ಹೋಗಲಿ–ಹೇಗೂ ಅದು ಯಾವ ವಿಷಯವನ್ನು ಕುರಿತು ರಚಿಸಿದ್ದು ಎಂದಾದರೂ ನೀನು ಹೇಳಬಹುದಲ್ಲ?

ಸಿಪಿಯೋ : (ಇನ್ನೂ ಅದೇ ಗತ್ತು ಮತ್ತು ನಿರ್ಲಕ್ಷ್ಯಗಳಿಂದಲೇ) ನಾನು ....ನಾನು ಅದರಲ್ಲಿ ....ಒಂದು ರೀತಿಯ ಸಾಮರಸ್ಯವನ್ನು ....

ಕ್ಯಾಲಿಗುಲ : (ಮಧ್ಯೆ ಬಾಯಿ ಹಾಕಿ ಕಾವ್ಯಧ್ಯಾನಾವಸ್ಥೆಯ ಧ್ವನಿಯಲ್ಲಿ) ನಮ್ಮ ... ನಮ್ಮ ಕಾಲು ಮತ್ತು ನೆಲದ ನಡುವಣ ಸಾಮರಸ್ಯ .. ಸಾಮರಸ್ಯವನ್ನು...?

ಸಿಪಿಯೋ : (ಆಶ್ಚರ್ಯಚಕಿತನಾಗಿ)ಹೌದೌದು– ಸ್ವಲ್ಪ ಹೆಚ್ಚೂಕಮ್ಮಿ ಅದೇ......ನೀನು ಹೇಳುತ್ತಿರುವುದೇ... ಆ ...ಆ ಸಾಮರಸ್ಯ! .. ... ಆ ...ರೋಮನ್‌ನ ಬೆಟ್ಟಗುಡ್ಡಗಳ ಅಲೆಯುಲೆಯಾದ ಹೊರಮೈ

ಹಾಗೂ ಆ ಹೊರಮೈಗೇ ಸಂಜೆಗೆಂಪು ಥಟ್ಟನೆ ಚುಮುಕಿಸಿ ಬಿಡುವ ನೆಮ್ಮದಿಯ ರೋಮಾಂಚನದ.... ನಡುವಣ.... ಆ.... ಸಮರಸ....

ಕ್ಯಾಲಿಗುಲ : ....ಆ ರೋಮಾಂಚಿತ ಸಮರಸಗಳ.... ಜೊತೆಜೊತೆಗೇ ....ಆ ಅಚ್ಚಹಸಿರ ಪ್ರದೋಶ ಕಾಲದ ಮಬ್ಬನ್ನೇ ಸೀಳಿಕೊಂಡು ಸಾಗುತ್ತಿರುವ ಚಿಟ್ಟೆ ಹುಳುಗಳ ಝೇಂಕಾರ....

ಸಿಪಿಯೋ : (ಕ್ಯಾಲಿಗುಲನ ಕಾವ್ಯ ಭಾವಕ್ಕೆ ಹೆಚ್ಚೆಚ್ಚು ಮಾರುಹೋಗುತ್ತಾ) ಹೌದು.... ಹೌದೇಹೌದು !.... ಆ.... ಅತ್ಯದ್ಭುತ ಕ್ಷಣಗಳು – ಕೆಂಪು ಮತ್ತು ಸುವರ್ಣ ವರ್ಣಗಳಿಂದ ಸಾಲಂಕೃತವಾಗಿ ತುಂಬಿ ತೊನೆದಾಡುತ್ತಿರುವ ಹಾಗೂ ನಕ್ಷತ್ರಗಳಿಂದ ಚಿಮುಕಿಸಲ್ಪಟ್ಟ ತನ್ನ ಇನ್ನೊಂದು ಮುಖವನ್ನು ತೋರಿಸುವ ಆ ಆಕಾಶದ ಅತ್ಯದ್ಭುತ ಕ್ಷಣಗಳು....

ಕ್ಯಾಲಿಗುಲ : ....ಅರುಣೋದಯದ ಊರ್ಧ್ವಮುಖೀ ಹಿಮದಲ್ಲಿ ಬೆರೆಬೆರೆತು ಹೋಗುತ್ತಿರುವ ಹೊಗೆ, ಮರ ಮತ್ತು ತೊರೆಗಳ ನವುನವುರಾದ ಕಂಪು...

ಸಿಪಿಯೋ : (ಅತೀವ ತನ್ಮಯಾವಸ್ಥೆಯಲ್ಲಿ) ....ಹೌದು ಕ್ರಿಕೆಟ್.... ಚಿರುಗುಟ್ಟುವ ಕ್ರಿಕೆಟ್ ಕ್ರಿಮಿಗಳು.... ಬೆಚ್ಚನೆಯ ಗಾಳಿಯನ್ನು ಸೀಳುವ ತಂಪು ..... ಶಬ್ದ ಮಾಡುವ ಗಾಡಿಗಳು, ಕೂಗಾಡುವ ರೈತರು, ಬೊಗಳಾಡುವ ನಾಯಿಗಳು....

ಕ್ಯಾಲಿಗುಲ : ಆಲಿವ್ ತೋಪುಗಳಲ್ಲಿ ತಿರುವು ಪಡೆವ ಹಾಗೂ ಮಸುಕಿನಲ್ಲಿ ಮುಳುಗಿಹೋಗಿರುವ ದಾರಿಗಳು....

ಸಿಪಿಯೋ : ಹೌದು, ಹೌದೌದು ಆ ಸಾಮರಸ್ಯ ಇದೇ; ಇದೇ ಆ ಸಮರಸತೆ. ಆದರೆ, ಇದೆಲ್ಲ ನಿನಗೆ ಹೇಗೆ ವೇದ್ಯವಾಯಿತು ! ? !

ಕ್ಯಾಲಿಗುಲ : (ಸಿಪಿಯೊನನ್ನೇ ತನ್ನ ಎದೆಯ ಕಡೆಗೆ ಎಳೆದುಕೊಳ್ಳುತ್ತಾ) ನನಗೂ ಅದೇ ಪರಮಾಶ್ಚರ್ಯ! ಪ್ರಾಯಶಃ, ಒಂದೇ ನಿತ್ಯಸತ್ಯಗಳು ನಮ್ಮಿಬ್ಬರನ್ನೂ ಕಾಡುವುದರಿಂದ ಇರಬಹುದೋ ಏನೋ... ಅಥವಾ ಭಾವನೆಗಳನ್ನು ಹಂಚಿಕೊಳುವುದು—ಆ ಭಾವನೆಗಳು ತೀರ ಅಸ್ಪಷ್ಟವಾಗಿದ್ದಲ್ಲಿ ಮಾತ್ರ – ಸುಲಭಾತಿಸುಲಭವಾಗಿರುವುದರಿಂದಲೋ

ಏನೋ .... ನಿನ್ನ ಕಾವ್ಯ ಸತ್ಯಗಳೆಲ್ಲಾ ನನಗೆ ವೇದ್ಯವಾಗಿ ಹೋಗಿ ಬಿಡುತ್ತಲಿವೆ ! !

ಸಿಪಿಯೋ : (ಉದ್ವೇಗದಿಂದಾಗಿ ಕಂಪಿಸುತ್ತಾ, ತನ್ನ ಎದೆಯನ್ನು ಕ್ಯಾಲಿಗುಲನ ಎದೆಯಲ್ಲಿ ಹುದುಗಿಸುತ್ತಾ) ಇರಲಿ, ಇದರಿಂದ ಆದುದಾದರೂ ಏನು ! ನನಗೆ ಗೊತ್ತಿರುವುದೆಲ್ಲಾ ಇಷ್ಟೆ – ನಾನು ಅನುಭವಿಸುವ ಅಥವಾ ವಿಚಾರಮಾಡುವ ಸಮಸ್ತವೂ ಅಂತಿಮವಾಗಿ ಪ್ರೇಮಕ್ಕೇ ತಿರುಗಿ ಬಿಡುತ್ತಿವೆ !

ಕ್ಯಾಲಿಗುಲ : (ಅವನ ತಲೆಗೂದಲನ್ನು ತಟ್ಟುತ್ತಾ) ಹಾಗಾಗಿ ಬಿಡುವುದು ಸಿಪಿಯೋ, ಕೇವಲ ಶ್ರೇಷ್ಠ ಹೃದಯಿಗಳ ಪಾಲಿನ ಪುಣ್ಯ ವಿಶೇಷ. ....ನಿನ್ನ ಈ ಇಷ್ಟೊಂದು ನಿರ್ಮಲವಾದ ಅಂತಃಕರಣವನ್ನು ನಾನು ಪಾಲುಗೊಳ್ಳುವುದು ಸಾಧ್ಯವೆ ಎಂದು ಏನೆಲ್ಲಾ ಚಿಂತಿಸ ತ್ತಿರುತ್ತೇನೆ –ಬಲ್ಲೆಯಾ ! ಆದರೆ...ಆದರೆ ಬಾಳಿನ ಬಗೆಗಿನ ನನ್ನ ಹಸಿವಿದೆಯಲ್ಲ – ಅದು ಉಗ್ರ – ಎಷ್ಟು ಉಗ್ರವೆಂದರೆ ಅದನ್ನು ಪ್ರಕೃತಿ ಕೂಡ ತೃಪ್ತಿಗೊಳಿಸಲಾರದಷ್ಟು ಉಗ್ರವಾಗಿಬಿಟ್ಟಿದೆ : ನೀನು ಬೇರೆಯೇ ಆದ ಒಂದು ಜಗತ್ತಿನವನಾದ್ದರಿಂದ ನಿನಗೆ ಅದು ಏನೆಂಪೇ ಅರ್ಥವಾಗುವುದಿಲ್ಲ. ಶುಭದ ಕಡೆಗೆ ನಿನ್ನ ಮನಸ್ಸು ಏಕ ಮುಖವಾಗಿರುವ ಹಾಗೆಯೇ ನನ್ನ ಮನಸ್ಸು ಅಶುಭದ ಕಡೆಗೆ ಏಕ ಮುಖವಾಗಿಬಿಟ್ಟಿದೆ.

ಸಿಪಿಯೋ : ನನಗೆ ಇದೆಲ್ಲಾ ಅರ್ಥವಾಗಿಯೇ ಅರ್ಥವಾಗುತ್ತದೆ.

ಕ್ಯಾಲಿಗುಲ : ಇಲ್ಲ, ನಿನಗೆ ಅರ್ಥವಾಗುವುದೇ ಇಲ್ಲ: ನನ್ನಲ್ಲಿ ಇನ್ನಿನ್ನೂ ಆಳ ಆಳವಾದವು ಏನೇನೋ ಇವೆ—ಒಂದು .... ಕಡು ಮೌನದ ಪ್ರಪಾತ..ನಿಂತು ನಾರುತ್ತಿರುವ ನೀರಿನ ಮಡು....ಕೊಳೆತು ಹೋಗುತ್ತಿರುವ ಜೊಂಡು....(ಥಟ್ಟನೆ ಮಾತಿನ ಧಾಟಿಯನ್ನೇ ಬದಲಿಸಿ) ನಿನ್ನ ಕವನಗಳು ನಿಜಕ್ಕೂ ಚೆನ್ನಾಗಿವೆ–ಆದರೆ, ನಿನಗೆ ನನ್ನ ಪ್ರಾಮಾಣಿಕವಾದ ಅಭಿಪ್ರಾಯ ಬೇಕೇಬೇಕು ಎನ್ನುವುದೇ ಆದರೆ..

ಸಿಪಿಯೋ : (ಕ್ಯಾಲಿಗುಲನ ಎದೆಗೆ ತನ್ನ ತಲೆಯನ್ನು ಆನಿಸಿ, ಪಿಸುಧ್ವನಿಯಲ್ಲಿ) ಬೇಕೇಬೇಕಲ್ಲ?

ಕ್ಯಾಲಿಗುಲ : ನಿನ್ನ ಎಲ್ಲ ಕವನಗಳೂ ....ಒಂದಿಷ್ಟು ರಕ್ತಹಿ
ವಾಗಿಬಿಟ್ಟವೆ.

ಸಿಪಿಯೋ: (ಹಾವು ಕಚ್ಚಿದವನಂತೆ ಥಂಗನೆ ಪುಟಿದೆದ್ದು ದಿಗ್ಭ್ರಾಂತನ
ಕ್ಯಾಲಿಗುಲನನ್ನೇ ದಿಟ್ಟಿಸುತ್ತಾ, ಗದ್ಗದಿತನಾಗಿ ಅಳುತ್ತಾ) ಓಹ್
ನೀನು....ನೀನೊಂದು ಪಶು ! ನೀಚಪಶು! ನೀನು ಮತ್ತೆ ನನ್ನ
ಮೂರ್ಖನನ್ನಾಗಿ ಮಾಡಿಬಿಟ್ಟೆ ! ನನಗೆ ಮನವರಿಕೆಯಾ
ಹೋಯಿತು ! –ಇಷ್ಟುಕಾಲವೂ ನೀನು ನನ್ನ ಮೇಲೆ ಒಂದು ತಂ
ವನ್ನು ಪ್ರಯೋಗಿಸುತ್ತಿದ್ದೆ, ಅಲ್ಲವೆ ? ಇದೆಲ್ಲಾ ಸಾಲದೆಂದು ನಿ
ವಿಜಯದ ಕೊಬ್ಬಿನಲ್ಲಿ ಮತ್ತನಾಗಿ ನೀನು ಈಗ ಬೀಗುತ್ತಿದ್ದೀಯ
ಅಲ್ಲವೆ ? – ಛೀ – ನಾಚಿಕೆಯಿಲ್ಲದ ಪಶು – ಛೀ ! ಛೀ !

ಕ್ಯಾಲಿಗುಲ : (ದುಃಖದ ಛಾಯೆ ಹೊತ್ತು) ನೀನು ಹೇಳುತ್ತಿರುವುದ
ಸತ್ಯವಿದೆ ! ನಾನು ಪಾತ್ರ ಒಂದನ್ನು ಧಾರಣೆಮಾಡಿಕೊಂಡಿದ್ದೆ

ಸಿಪಿಯೋ : (ಅದೇ ಕುಪಿತ ಧ್ವನಿಯಲ್ಲಿ) ಎಂತಹ ಕೃತ್ರಿಮ ಹಾ
ಕರಾಳ ಹೃದಯ ನಿನ್ನದು ! ನಿನ್ನ ಈ ಎಲ್ಲ ದುಷ್ಟತನ ಮ
ದ್ವೇಷಕ್ಕೆ ತಕ್ಕದಾದ ಪ್ರತಿಫಲವನ್ನು ನೀನು ಅನುಭವಿಸಿಯ
ಅನುಭವಿಸಬೇಕಾಗುತ್ತದೆ.

ಕ್ಯಾಲಿಗುಲ : (ಸೌಮ್ಯವಾಗಿ) ಸಾಕು, ಅಷ್ಟು ಸಾಕು.

ಸಿಪಿಯೋ : ನಾನು ನಿನ್ನನ್ನು ಅದೆಷ್ಟು ದ್ವೇಷಿಸುತ್ತೇನೆ!—ಹಾಗೆ
ಅದೆಷ್ಟು ಕನಿಕರಿಸುತ್ತೇನೆ !

ಕ್ಯಾಲಿಗುಲ : (ಕೋಪಾವಿಷ್ಟನಾಗಿ) ಸಾಕು, ಸಾಕುಮಾಡು – ಸಾ
ಮಾಡು ಎಂದು ನಿನಗೆ ಆಗಲೇ ಹೇಳಲಿಲ್ಲವೆ ?

ಸಿಪಿಯೋ : ನಿನ್ನ ಏಕಾಂತತೆ ಇದೆಯಲ್ಲ – ಅದು ಅತಿಅತಿ ಭೀ
ವಾಗಿ ಇದ್ದಿರಲೇಬೇಕಲ್ಲವೆ !

ಕ್ಯಾಲಿಗುಲ : (ಕೋಪದ ಭರದಲ್ಲಿ ಸಿಪಿಯೋನ ಕತ್ತಿನ ಪಟ್ಟಿಯನ್ನು ಹಿಡಿ
ಅವನನ್ನು ಅಲ್ಲಾಡಿಸುತ್ತಾ) ಏಕಾಂತತೆ ! ಅದರ ಬಗ್ಗೆ ನಿನಗೆ ಏ
ಗೊತ್ತು ? – ನಿನಗೆ ಗೊತ್ತಿರುವುದೆಲ್ಲಾ ಕವಿಗಳ ಮತ್ತು ಶಕ್ತಿಹೀ
ಏಕಾಂತತೆ ಮಾತ್ರ. ನೀನು ಏಕಾಂತತೆಯನ್ನು ಕುರಿತೇನ

ಪೇಚುತ್ತಿದ್ದೀಯೆ—ಆದರೆ ಯಾರೂ ಎಂದೂ ಏಕಾಂಗಿಗಳಲ್ಲವೇ ಅಲ್ಲವೆಂದು ನಿನಗೆ ಗೊತ್ತೇ ಆಗುವುದಿಲ್ಲ.ಒಂದೇ ಭೂತ ಮತ್ತು ಭವಿಷ್ಯದ ಹೊರೆ ಯಾವಾಗಲೂ ನಮ್ಮ ಮೇಲೆ ಸವಾರಿ ಮಾಡುತ್ತಲೇ ಇರುತ್ತದೆ.ನಾವು ಯಾರು ಯಾರನ್ನು ಕೊಂದಿದ್ದೇವೋ ಅವರೆಲ್ಲರೂ ಸದಾ ನಮ್ಮೊಡನೆಯೇ ಇದ್ದಾರೆ. ಆದರೆ, ಅವರಿಂದ ಹೆಚ್ಚಿನ ತೊಂದರೆ ಏನೂ ನಮಗೆ ಆಗಿಲ್ಲ—ನಾವು ಪ್ರೀತಿಸಿದವರು,ನಮ್ಮನ್ನು ಪ್ರೀತಿಸಿದವರು ಮತ್ತು ನಾವು ಪ್ರೀತಿಸಲಾಗದೇಹೋದವರು ಹಾಗೂ ನಮ್ಮ ನಿರಾಸೆಗಳು, ಸದಾಶಯಗಳು, ಸುಖದುಃಖಗಳು, ಹಾದರಗಿತ್ತಿಯರು, ದೇವತೆಗಳು, ಮತ್ತು ಜ್ಯೋತಿರ್ಲೋಕದ ಗುಂಪಿಗೆ ಗುಂಪೇ —ಸದಾ, ಕ್ಷಣವೂ ನಮ್ಮನ್ನು ಬೆಂಬಿಡದೇ ನಮ್ಮ ಜೊತೆ ಜೊತೆಗೇ ಇವೆ; ಹಾಗೂ ಇದ್ದಾರೆ! (ಅವನು ಸಿಪಿಯೋನನ್ನು ಬಿಟ್ಟು ತನ್ನ ಮೊದಲಿನ ಜಾಗಕ್ಕೆ ಹಿಂದಿರುಗಿ) ಏಕಾಂಗಿ! – ಏಕಾಂಗಿ ನಾನು! –ಆಹ್, ನನ್ನ ಈ ಅಪರಿಮಿತವಾದ ಏಕಾಂಗಿತನದಲ್ಲಿ ...ನನ್ನ ಈ ಬೆನ್ನುಹತ್ತಿದ ಬೇತಾಳಗಳ ನಿರ್ಜನವಾದ ಘೊಂಡಾರಣ್ಯದಲ್ಲಿ ... ಒಂದೇ ಒಂದು ಕ್ಷಣದ ಮಟ್ಟಿಗೆ, ನಿಜವಾದ ಏಕಾಂತತೆ, ನಿಜವಾದ ಮೌನ-ಎದೆಯನ್ನು ಢವಢವೆಗುಟ್ಟಿಸುವಂತಹ ವೃಕ್ಷಒಂದರ ಸ್ತಬ್ಧತೆ ನನ್ನ ಪಾಲಿಗೆ ಬೋಧಪ್ರದವಾಗಬಲ್ಲ ಪುಣ್ಯ ನನ್ನದೇ ಆಗಬಲ್ಲುದಾದರೆ!! ನನ್ನದಾಗಬಲ್ಲದೇ ಆಗಿಯೇಬಿಟ್ಟರೆ....(ಆಯಾಸದಿಂದ ಸೋತು, ಹಾಗೆಯೇ ಕುಳಿತುಕೊಂಡು) ಏಕಾಂತತೆ? – ನಿಜವಾದ ಏಕಾಂತತೆ ನನ್ನ ಪಾಲಿಗೆ ಸಾಧ್ಯವೇ ಇಲ್ಲ, ಇಲ್ಲ ಸಿಪಿಯೋ, ನನ್ನದಾಗಬಲ್ಲಂತಹ ಏಕಾಂತತೆ ಏನಾದರೂ ಇದ್ದರೆ, ಅದು ಕೇವಲ ಕಟಕಟನೆ ಕಡಿವ ಹಲ್ಲುಗಳ ಮಸೆತದಿಂದ ತುಂಬಿಹೋದ ಮತ್ತು ಅಪಸ್ವರ ಹಾಗೂ ವಿಲಕ್ಷಣ ಧ್ವನಿಗಳಿಂದ ವಿಕಾರಗೊಂಡ ಏಕಾಂತತೆ ಮಾತ್ರ! ನಾನು ಹೆಣ್ಣುಗಳ ಜೊತೆಯಲ್ಲಿ ಇದ್ದುಕೊಂಡು, ನನಗೆ ಬೇಕಾದುದನ್ನು ನಾನು ಮಾಡಿಕೊಳ್ಳುತ್ತಿರುವಾಗಲೆಲ್ಲಾ ನಮ್ಮನ್ನು ಕತ್ತಲು ಆವರಿಸಿಕೊಂಡಿರುತ್ತದೆ ಮತ್ತು ಆಗ,ನನ್ನ ಶರೀರ ತನಗೆ ಬೇಕಾದುದನ್ನೆಲ್ಲಾ ಸಂಪೂರ್ಣವಾಗಿ ಪಡೆಯಿತೆಂದು ನಾನು ಅಂದುಕೊಳ್ಳುತ್ತಿರುತ್ತೇನೆ:

ಅಲ್ಲದೆ, ಕಟ್ಟಕಡೆಗೆ, ನನ್ನ ಆತ್ಮ ಸಾವು ಮತ್ತು ಜೀವನದ ಮಧ್ಯದ ಸಮತೋಲನವನ್ನು ದಕ್ಕಿಸಿಕೊಂಡು ನನ್ನದೇ ಆಗಿ ಉಳಿದು ಕೊಂಡುಬಿಟ್ಟಿರುವುದನ್ನು ನಾನು ಕಂಡುಕೊಳ್ಳುತ್ತೇನೆ; ಆದರೂ, ಆಹ್ !-ಆ ಮುಹೂರ್ತದ ಏಕಾಂತತೆಯನ್ನೂ ನನ್ನಪಕ್ಕದಲ್ಲೇ ಅಸ್ತ ವ್ಯಸ್ತವಾಗಿ ಬಿದ್ದಿರುವ ಹೆಣ್ಣಿನೊಡನೆ ನಾನು ಕ್ರೀಡಿಸಿದ ಕ್ರೀಡೆಯ ಹಳಸಿದ ವಾಸನೆ ಮಲಿನಗೊಳಿಸಿಬಿಟ್ಟಿರುತ್ತದೆ!

(ಒಂದು ಬಹು ದೀರ್ಘವಾದ ಮೌನ. ಕ್ಯಾಲಿಗುಲ ತುಂಬಾ ಬಳಲಿ ಹೋಗಿರುವಂತೆ, ಗರಬಡಿದು ಹೋಗಿರುವಂತೆ ಕಾಣತೊಡಗುತ್ತಾನೆ. ಸಿಪಿಯೋ ಕ್ಯಾಲಿಗುಲನ ಹಿಂಬದಿಯಿಂದಲೇ ಅಳುಅಳುತ್ತಲೇ ಅವನ ಹತ್ತಿರಕ್ಕೆ ಬಂದು ನಿಧಾನಿಧಾನವಾಗಿ ಹಿಂಬದಿಯಿಂದಲೇ ಅವನ ಕಡೆಗೆ ಕೈ ಒಂದನ್ನು ಚಾಚಿ, ಅವನ ತೋಳಿನ ಮೇಲೆ ತನ್ನ ಆ ಕೈಯನ್ನು ಇಡುತ್ತಾನೆ. ಕ್ಯಾಲಿಗುಲ ಹಿಂದಿರುಗಿ ನೋಡದೆ ತನ್ನ ಆ ಕೈಯನ್ನು ಸಿಪಿಯೋನ ಕೈ ಮೇಲೆ ಇಡುತ್ತಾನೆ.)

ಸಿಪಿಯೋ: ಮನುಷ್ಯರೆಲ್ಲರಲ್ಲೂ ಒಂದಲ್ಲ ಒಂದು ಗುಪ್ತವಾದ ಶಾಂತಿ ಹಾಗೂ ಸಮಾಧಾನದ ನೆಲೆ ಇದ್ದೇ ಇರುತ್ತದೆ. ಅದು ಏನನ್ನು ಬೇಕಾದರೂ ಭರಿಸಲು ಶಕ್ತಿಯನ್ನು ಕೊಡುತ್ತದೆಯಾದ್ದರಿಂದ, ಜೀವನ ಭರಿಸಲು ಅಸಾಧ್ಯವಾಗಿ ಹೋಗಿ, ಮನುಷ್ಯ ಬಳಲಿ ಬೇಸತ್ತು ಹೋದಾಗಲೆಲ್ಲಾ, ಆತ ಆ ರಹಸ್ಯ ತಾಣದ ಕಡೆಗೆ ಮುಖ ತಿರುಗಿಸುತ್ತಾನೆ...

ಕ್ಯಾಲಿಗುಲ: ಹೌದು, ಸಿಪಿಯೋ-ಹೌದು....

ಸಿಪಿಯೋ: ನಿನ್ನ ಬದುಕಿನಲ್ಲಿ ಅಂತಹದ್ದು ಏನೂ, ಆ ಬಗೆಯ ಅಭಯ ತಾಣ, ಕಂಬನಿಗಳನ್ನು ಒರಸುವ ದಿವ್ಯಭಾವ ಹಾಗೂ ರಹಸ್ಯಮಯವಾದ ಸಮಾಧಾನ....ಯಾವುದೂ ಇಲ್ಲವೇನು?

ಕ್ಯಾಲಿಗುಲ: ಇದೆ-ಅಂತಹದ್ದು ಎಂತಹದ್ದೋ ನನ್ನಲ್ಲಿಯೂ ಇದೆ!

ಸಿಪಿಯೋ: ಏನು ಅದು?

ಕ್ಯಾಲಿಗುಲ: (ಶಾಂತನಾಗಿಯೇ) ....ಕುಹಕ....ಗೇಲಿ....ಕುಚೋದ್ಯ...

ಅಂಕ ಮೂರು

(ತೆರೆ ಮೇಲೇಳುವ ಮೊದಲಿಗೇ ರಂಗದಿಂದ ಲಯಬದ್ಧವಾದ ತಾಳ ಮತ್ತು ನಗಾರಿಯ ಬಡಿತ ಕೇಳಿಸಲಾರಂಭಿಸಿರುತ್ತದೆ ; ತೆರೆ ಮೇಲೇಳುತ್ತಿರುವಂತೆಯೇ ಪರದೆ ಮುಚ್ಚಿದ ಗುಡಾರ ಒಂದು ಕಾಣಿಸುತ್ತಿರುತ್ತದೆ : ಅದರ ಮುಂದೆ, ಅಲೆಮಾರೀ ವಾದ್ಯಗಾರರು ಹಳ್ಳಿಗಾಡಿನ ಜಾತ್ರೆಗಳಲ್ಲಿ ತಮ್ಮ ಪ್ರದರ್ಶನಗಳ ಸ್ಥಿತ್ಯಂತರದ ಸಲುವಾಗಿ ಬಳಸುವ, ಬೀಳುತೆರೆಗೂ ವಾದ್ಯ ವೇದಿಕೆಗೂ ಮಧ್ಯೆ ಇರುವ, ಒಂದು ಪುಟ್ಟ ರಂಗಸ್ಥಳ ಇರುತ್ತದೆ. ಕೆಸೋನಿಯಾ ಮತ್ತು ಹೆಲಿಕಾನ್ ವಾದ್ಯಗಾರರ ಮಧ್ಯೆ ಇರುವ ಇನ್ನೊಂದು ಕಿರಿರಂಗಸ್ಥಳದಲ್ಲಿ ಕುಳಿತಿದ್ದರೆ, ಪ್ರೇಕ್ಷಕಾಂಗಕ್ಕೆ ಬೆನ್ನುಮಾಡಿ ಬೆಂಚುಗಳ ಮೇಲೆ ಕುಳಿತ ಆಸ್ಥಾನಿಕರ ಜೊತೆಯಲ್ಲಿ ಸಿಪಿಯೋ ಕುಳಿತಿದ್ದಾನೆ.)

ಹೆಲಿಕಾನ್ : (ಜಾತ್ರೆಯಲ್ಲಿನ ಪ್ರದರ್ಶನಕಾರರ ಧಾಟಿಯಲ್ಲಿ) ಮೇಲೆ ಬನ್ನಿ ! ಮೇಲೆ ಬನ್ನಿ ! (ತಾಳಗಳ ಬಡಿತ) ಈಗೊಮ್ಮೆ ದೇವತೆಗಳು ನಮ್ಮ ಈ ಭೂಮಿಯ ಮೇಲೆಯೇ,ಅವತರಿಸಿದ್ದಾರೆ. ಈ ದೇವತೆಗಳಾದರೋ ಮನುಷ್ಯ ಮಾತ್ರರಿಗೆ ಕ್ಯಾಲಿಗುಲ ಎನ್ನುವ ಅಭಿಧಾನದಲ್ಲಿ ಮಾತ್ರ ಪರಿಚಯವಿರುವ, ಸ್ವರ್ಗದಲ್ಲೇ ಜನ್ಮ ಧರಿಸಿದ ನಮ್ಮ ಸಾಮ್ರಾಟನ ನರಾವತಾರವನ್ನು ಈಗಲೀಗ ಸ್ವೀಕರಿಸಿದ್ದಾರೆ. ಹತ್ತಿರ ಬನ್ನಿ – ಕ್ಷುದ್ರರಾದ ಮರ್ತ್ಯರೆ, ಹತ್ತತ್ತಿರ ಬನ್ನಿ ; ಪವಿತ್ರವಾದ ಪವಾಡ

ಒಂದು ನಿಮ್ಮ ಕಣ್ಣುಗಳ ಮುಂದೆಯೇ ನಡೆದು ಹೋಗುತ್ತಿದೆ. ಸಾರ್ವಭೌಮ ಕ್ಯಾಲಿಗುಲನ ಪೊಳ್ಳುಪೊಳ್ಳಾದ ಆಳ್ವಿಕೆಗೇ ಅದ್ಭುತ ವಾದ ರೀತಿಯಲ್ಲಿ, ಚೋದ್ಯವೆನಿಸುವ ಒಂದು ಪವಿತ್ರ ಪ್ರೇರಣೆ ಯಿಂದಾಗಿ ದೇವತೆಗಳ ರಹಸ್ಯಗಳನ್ನೇ ನಿಮಗೆಲ್ಲ ಗೋಚರವಾಗಿಬಿಡು ವಂತೆ ಮಾಡಲಾಗುತ್ತಿದೆ. (ನಗಾರಿಗಳ ಉದ್ಘೋಷ.)

ಕೆಸೋನಿಯಾ : ಬನ್ನಿ, ಬನ್ನಿ ಸನ್ಮಾನ್ಯರೇ : ಬಂದು ಅವನನ್ನು ಪೂಜಿಸಿ – ಅಲ್ಲದೆ, ಅವನಿಗೆ ನಿಮ್ಮ ಪರಮಪೂಜ್ಯ ಉಪಾದಾನ ಗಳನ್ನು ಅರ್ಪಿಸಲೂ ಮರೆಯಬೇಡಿ. ಇಂದು ಸ್ವರ್ಗ ಹಾಗೂ ಅದರ ರಹಸ್ಯಗಳು ಸಮಸ್ತರಿಗೂ ನಿಲುಕುವ ಬೆಲೆಯಲ್ಲಿ ಪ್ರದರ್ಶಿತ ವಾಗುತ್ತಿವೆ.

ಹೆಲಿಕಾನ್ : ಎಲ್ಲರೂ ನೋಡುವಂತೆ ಆಗಲಿ ಎಂದೇ ಒಲಂಪಸ್‌ನ ಗೋಪ್ಯಗಳು, ಪರಮ ಪೀಠದ ಕಾಲಜ್ಞಾನಗಳು, ಬೆತ್ತಲುಗೊಳಿಸಿದ ದೇವತೆಗಳ ವಿಶಿಷ್ಟರೂಪಗಳು, ಅವರ ಹೀನ ಸಂಚುಗಳು ಮತ್ತು ಹುಚ್ಚು ಹುಚ್ಚಾದ ಲೀಲೆ - ಚೇಷ್ಟೆ - ಚೆಲ್ಲಾಟಗಳು ...ಹೀಗೆ ಬನ್ನಿ —ಇಲ್ಲಿ ನಿಮ್ಮ ದೈವಗಳ ಸಮಸ್ತ ಸತ್ಯಗಳೂ ಬೆತ್ತಲೋ ಬೆತ್ತಲಾಗಿ ಪ್ರದರ್ಶಿತವಾಗುತ್ತಿವೆ! (ತಾಳ ನಗಾರಿಗಳು ಝೇಂಝೇಕಾರಗಳು.)

ಕೆಸೋನಿಯಾ : ಆರಾಧಿಸಿ ಅವನನ್ನು ಹಾಗೂ ಅವನಿಗೆ ನಿಮ್ಮ ದಾನ ಗಳನ್ನು ಸಮರ್ಪಿಸಿ....ಹತ್ತಿರ ಬನ್ನಿ, ಸನ್ಮಾನ್ಯರೇ – ಆಟ ಆರಂಭ ವಾಗಿ ಬಿಡುತ್ತಲಿದೆ....!!

(ತಾಳ ನಗಾರಿಗಳ ಶಬ್ದದ ಮಧ್ಯೆ ಗುಲಾಮರು ವಿವಿಧ ಕಾಣಿಕೆಗಳನ್ನು ತಂದು ಪೀಠದ ಮೇಲೆ ಇಡುತ್ತಿರುತ್ತಾರೆ.)

ಹೆಲಿಕಾನ್ : ಹೊಚ್ಚ ಹೊಸ ಯುಗ ಒಂದಕ್ಕೆ ಜನ್ಮ ಕೊಡುವಂತಹ, ತನ್ನೆಲ್ಲ ವಿವರಗಳಲ್ಲೂ ಅಧಿಕೃತ ಹಾಗೂ ಪ್ರಮಾಣೀಕೃತವಾದ ಸ್ವರ್ಗೀಯ ಜೀವನದ ಪುನಃಸೃಷ್ಟಿ ಒಂದನ್ನು, ಮೊಟ್ಟಮೊದಲಬಾರಿಗೆ ರೋಮನ್ ಸಾರ್ವತ್ರಿಕರ ಮುಂದೆ, ಸಮಸ್ತ ದೇವತೆಗಳ ವೈಭವ ಹಾಗೂ ಮಹೋಜ್ವಲ ಭೋಗಗಳ ಸಮಸಮೇತ ಸಾದರಪಡಿಸ

ಲಾಗುತ್ತಿದೆ : ನಮ್ಮ ಈ ನವನವೋನ್ಮೇಷಿತವಾದ ಮತ್ತು ಉಸಿರು ಗಟ್ಟಿಸುವ ಸಿದ್ಧಿ ಸಾಧನೆಗಳು, ಕೋರೈಸುವ ಮಿಂಚಿನ ಝಳಪು, (ಗ್ರೀಕ್ ಬೆಂಕಿಯನ್ನು ಗುಲಾಮರು ಧಗಧಗಿಸುತ್ತಾರೆ.) ಎದೆ ನಡುಗಿಸುವ ಗುಡುಗಿನ ಆರ್ಭಟ,(ಕಲ್ಲುಗಳಿಂದ ತುಂಬಿದ ಪೀಪಾಯಿಗಳನ್ನು ಗುಲಾಮರು ಉರುಳಿಸಿ ಉರುಳಿಸಿ ರಭಳಪಿಸುತ್ತಾರೆ.) .... ಇವೇ ಮೊದಲಾದ ದಿವ್ಯ ಪವಾಡಗಳು ತಮ್ಮ ದಿಗ್ವಿಜಯದ ಹಾದಿಯಲ್ಲಿರುವುದನ್ನು ನಾವೀಗ ಸಾದರಪಡಿಸುತ್ತಿದ್ದೇವೆ. ನೀವು ಈಗಲೇ ನಿಮ್ಮ ಸಮಸ್ತ ಕಣ್ಣುಗಳಿಂದಲೂ ನೋಡಿಕೊಂಡುಬಿಡಿ....

(ಹೆಲಿಕಾನ್ ತೆರೆಯನ್ನು ಬದಿಗೆ ಸರಿಸುತ್ತಾನೆ. ವೀನಸ್ ದೇವತೆಯಾಗಿ ವಿಕಟಾಲಂಕಾರ ಮಾಡಿಕೊಂಡು ಅದಕ್ಕೆಂದೇ ಇರುವ ವೇದಿಕೆಯ ಮೇಲೆ ನಿಂತ ಕ್ಯಾಲಿಗುಲ ಪ್ರೇಕ್ಷಣಾಂಗದತ್ತ ತನ್ನ ಕೃಪಾದೃಷ್ಟಿಯನ್ನು ಬೀರುತ್ತಾನೆ.)

ಕ್ಯಾಲಿಗುಲ : ನಾನು ಇಂದು ದೇವಿ ವೀನಸ್.

ಕೆಸೋನಿಯಾ : ಆರಾಧನೆಗೆ ಸಿದ್ಧರಾಗಿ : ತಲೆಬಾಗಿ ವಂದಿಸಿ, (ಸಿಪಿಯೋ ಒಬ್ಬನನ್ನು ಬಿಟ್ಟು ಉಳಿದವರೆಲ್ಲಾ ತಲೆ ಬಾಗಿ ವಂದಿಸುತ್ತಾರೆ) ಕ್ಯಾಲಿಗುಲ ಎಂಬ ಅಭಿದಾನದ ದೇವಿ ವೀನಸ್‌ಳ ಸ್ತೋತ್ರಮಂತ್ರಗಳನ್ನು ನಾನು ಈಗ ನಿಮಗೆ ಬೋಧಿಸುತ್ತೇನೆ – ನೀವು ಪಠಿಸುತ್ತಾ ಹೋಗಿ : 'ನಮ್ಮ ನೋವು ಮತ್ತು ನಲಿವುಗಳ ಕುಲಾಂಗನೆಯೇ'.

ಆಸ್ಥಾನಿಕರು : 'ನಮ್ಮ ನೋವು ಮತ್ತು ನಲಿವುಗಳ ಕುಲಾಂಗನೆಯೇ'.

ಕೆಸೋನಿಯಾ : 'ಸಾಗರದ ಅಲೆಗಳಲ್ಲಿ ಮೈದಳೆದವಳೇ ; ನೊರೆಗಳಲ್ಲಿ ಕಾಂತಿ ಹಾಗೂ ಕ್ರೌರ್ಯಗೊಂಡವಳೇ.'

ಆಸ್ಥಾನಿಕರು : 'ಸಾಗರದ ಅಲೆಗಳಲ್ಲಿ ಮೈದಳೆದವಳೇ ; ನೊರೆಗಳಲ್ಲಿ ಕಾಂತಿ ಹಾಗೂ ಕ್ರೌರ್ಯಗೊಂಡವಳೇ.'

ಕೆಸೋನಿಯಾ : 'ಯಾವ ರಾಣಿಯ ವರಪ್ರಸಾದಗಳು ವಿಷಾದ ಹಾಗೂ ಕೇಕೆಗಳಿಗೆ ಕಾರಣೀಭೂತವಾಗಿವೆಯೋ, ಓ ಆ ರಾಣಿಯೇ.'

ಆಸ್ಥಾನಿಕರು : 'ಯಾವ ರಾಣಿಯ ವರಪ್ರಸಾದಗಳು ವಿಷಾದ ಹಾಗೂ ಕೇಕೆಗಳಿಗೆ ಕಾರಣೀಭೂತವಾಗಿವೆಯೋ, ಓ ಆ ರಾಣಿಯೇ.'

ಕೆಸೋನಿಯಾ : 'ತುರೀಯಾನಂದ ಹಾಗೂ ಕರಾಳ ಮತ್ಸರಗಳ
ಅಧಿದೇವತೆಯೇ....'

ಆಸ್ಥಾನಿಕರು : 'ತುರೀಯಾನಂದ ಹಾಗೂ ಕರಾಳ ಮತ್ಸರಗಳ
ಅಧಿದೇವತೆಯೇ....'

ಕೆಸೋನಿಯಾ : 'ಪ್ರೇಮವನ್ನು ನಿತ್ಯನೂತನವಾಗಿ ಪ್ರಜ್ವಲಿಸಬಲ್ಲ
ಸಮಭಾವವನ್ನು ನಮ್ಮಲ್ಲಿ ಉದ್ಬೋಧಿಸು—'

ಆಸ್ಥಾನಿಕರು : 'ಪ್ರೇಮವನ್ನು ನಿತ್ಯನೂತನವಾಗಿ ಪ್ರಜ್ವಲಿಸಬಲ್ಲ
ಸಮಭಾವನ್ನು ನಮ್ಮಲ್ಲಿ ಉದ್ಬೋಧಿಸು.. ,

ಕೆಸೋನಿಯಾ : ಈ ಲೋಕದ ನಿತ್ಯಸತ್ಯವನ್ನು – ಯಾವ ನಿತ್ಯಸತ್ಯ
ಇಲ್ಲವೇ ಇಲ್ಲವೋ ಆ ಸತ್ಯನಿತ್ಯವನ್ನು – ನಮಗೆ ಅರಿವು ಮಾಡಿ
ಕೊಡು....'

ಆಸ್ಥಾನಿಕರು : 'ಈ ಲೋಕದ ಸತ್ಯನಿತ್ಯವನ್ನು – ಯಾವ ನಿತ್ಯಸತ್ಯ
ಇಲ್ಲವೇ ಇಲ್ಲವೋ ಆ ನಿತ್ಯಸತ್ಯವನ್ನು – ನಮಗೆ ಅರಿವು ಮಾಡಿ
ಕೊಡು....'

ಕೆಸೋನಿಯಾ : 'ಈ ಸಮಸ್ತ ಯಥಾರ್ಥಗಳ ಯಥಾರ್ಥತೆಯನ್ನು
ಜೀರ್ಣಿಸಿಕೊಳ್ಳಬಲ್ಲ ಶಕ್ತಿಯನ್ನು ನಮಗೆ ದಯಪಾಲಿಸು.'

ಆಸ್ಥಾನಿಕರು : 'ಈ ಸಮಸ್ತ ಯಥಾರ್ಥಗಳ ಯಥಾರ್ಥತೆಯನ್ನು
ಜೀರ್ಣಿಸಿಕೊಳ್ಳಬಲ್ಲ ಶಕ್ತಿಯನ್ನು ನಮಗೆ ದಯಪಾಲಿಸು.'

ಕೆಸೋನಿಯಾ : ಈಗ ...ಮೌನ....

ಆಸ್ಥಾನಿಕರು : ಈಗ ಮೌನ

(ಸ್ವಲ್ಪ ಕಾಲ ಮೌನ ಆವರಿಸಿರುತ್ತದೆ.)

ಕೆಸೋನಿಯಾ : 'ನಿನ್ನ ದತ್ತಿಗಳನ್ನು ನಮಗೆ ದಯಪಾಲಿಸು ; ಮತ್ತು
ನಿಷ್ಪಕ್ಷಪಾತವಾದ ಕ್ರೌರ್ಯ ಹಾಗೂ ನಿಷ್ಕಾರಣವಾದ ದ್ವೇಷಗಳ
ಬೆಳಕನ್ನು ನಮ್ಮಗಳ ಮುಖದ ಮೇಲೆ ಚೆಲ್ಲು ; ಪುಷ್ಪ ಮತ್ತು
ಕಗ್ಗೊಲೆಗಳ ಭಾರದಿಂದ ತುಂಬಿ ತೊನೆದಾಡುತ್ತಿರುವ ನಿನ್ನ ತೋಳು
ಗಳನ್ನು ನಮ್ಮ ಕಣ್ಣುಗಳ ಮೇಲೆ ತೆರೆ....'

ಆಸ್ಥಾನಿಕರು: '....ಪುಷ್ಪ ಮತ್ತು ಕಗ್ಗೊಲೆಗಳ ಭಾರದಿಂದ ತುಂಬಿ ತೊನೆದಾಡುತ್ತಿರುವ ನಿನ್ನ ತೋಳುಗಳನ್ನು ನಮ್ಮ ಕಣ್ಣುಗಳ ಮೇಲೆ ತೆರೆ....'

ಕೆಸೋನಿಯಾ: 'ನಿನ್ನ ಈ ಅಲೆಮಾರೀ ಮಕ್ಕಳನ್ನು ನಿನ್ನ ಮನೆಗೆ – ಶೂನ್ಯವಾದ ಹೃದಯದ ಮತ್ತು ಸ್ಮರಣರಹಿತ ಉಪಕಾರದ ಶೀತಲ ಪ್ರೇಮಾಲಯಕ್ಕೆ – ಸ್ವಾಗತಿಸು; ನಿನ್ನ ಅನಿರ್ಬಾಧಿತ ಮೋಹಗಳನ್ನು, ಕಾರಣರಹಿತ ಕೊರಗುಗಳನ್ನು, ಗೊತ್ತುಗುರಿ ಇಲ್ಲದ ಭಾವಪರವಶತೆಗಳನ್ನು ನಮಗೆ ದಯಪಾಲಿಸು.......'

ಆಸ್ಥಾನಿಕರು: '....ನಿನ್ನ ಗೊತ್ತುಗುರಿ ಇಲ್ಲದ ಭಾವಪರವಶತೆಗಳನ್ನು ನಮಗೆ ದಯಪಾಲಿಸು......'

ಕೆಸೋನಿಯಾ: (ಧ್ವನಿಯನ್ನು ಮೇಲೇರಿಸಿ) 'ಓ ರಾಣಿಯರ ರಾಣಿ, ನೀನು ಎಷ್ಟು ಜಾಳುಜಾಳೋ ಅಷ್ಟೇ ಉತ್ಸಾಹಿ; ಎಷ್ಟು ಅಮಾನುಷೆಯೋ ಅಷ್ಟೇ ಪ್ರಾಪಂಚಿಕಳು; ನಿನ್ನಲ್ಲಿನ ಸಮತ್ವದ ಮದ್ಯವನ್ನು ಕುಡಿಸಿ ನಮಗೆ ಮತ್ತುಬರುವಂತೆ ನೋಡಿಕೊ; ನಮ್ಮನ್ನು ನಿನ್ನ ಉಪ್ಪುಪ್ಪಾದ ಹೃದಯದ ಕಾರ್ಗತ್ತಲಲ್ಲಿ ಎಂದೆಂದಿಗೂ ಹೊಟ್ಟೆಬಾಕರುಗಳಾಗಿಯೇ ಉಳಿದುಬಿಡುವಂತೆ ಮಾಡಿಬಿಡು.'

ಆಸ್ಥಾನಿಕರು: 'ನಿನ್ನಲ್ಲಿನ ಸಮತ್ವದ ಮದ್ಯವನ್ನು ಕುಡಿಸಿ ನಮಗೆ ಮತ್ತುಬರುವಂತೆ ನೋಡಿಕೋ; ನಮ್ಮನ್ನು ನಿನ್ನ ಉಪ್ಪುಪ್ಪಾದ ಹೃದಯದ ಕಾರ್ಗತ್ತಲಲ್ಲಿ ಎಂದೆಂದಿಗೂ ಹೊಟ್ಟೆಬಾಕರುಗಳಾಗಿಯೇ ಉಳಿದುಬಿಡುವಂತೆ ಮಾಡಿಬಿಡು.'

(ಆಸ್ಥಾನಿಕರು ಕೊನೆಯ ಚರಣವನ್ನು ಹೇಳಿ ಮುಗಿಸುತ್ತಿದ್ದಂತೆಯೇ ಕ್ಯಾಲಿಗುಲ ಫೂತ್ಕರಿಸುತ್ತಾ ಮೇಲೇಳುತ್ತಾನೆ.)

ಕ್ಯಾಲಿಗುಲ: (ಬೃಹತ್ ಘಂಟಾನಾದದ ಧ್ವನಿಯಲ್ಲಿ) ಅನುಗ್ರಹಿಸಿದ್ದೇನೆ, ನನ್ನ ಮಕ್ಕಳೇ – ನಿಮ್ಮ ಪ್ರಾರ್ಥನೆಯನ್ನು ಆಲಿಸಿ ನಿಮ್ಮನ್ನೆಲ್ಲಾ ಅನುಗ್ರಹಿಸಿದ್ದೇನೆ:

(ತನ್ನ ವೇದಿಕೆಯ ಮೇಲೆ ಕ್ಯಾಲಿಗುಲ ಪದ್ಮಪಾದ ಹಾಕಿಕೊಂಡು

ಭಾವಪರವಶನಾಗಿ ಕೂರುತ್ತಾನೆ. ಆಸ್ಥಾನಿಕರು ಒಬ್ಬೊಬ್ಬರಾಗಿ ಕ್ಯಾಲಿಗುಲನ ಮುಂದೆ ಬಂದು ಪ್ರಣಾಮ ಮಾಡಿ, ಕಾಣಿಕೆಗಳನ್ನು ಸಮರ್ಪಿಸಿ, ಬಲಬದಿಯಲ್ಲಿ ಸಾಲುಗಟ್ಟಿ ನಿಲ್ಲುತ್ತಾರೆ. ಕೊನೆಯವನು ಗಾಬರಿಯಿಂದಾಗಿ ಕಾಣಿಕೆ ಸಮರ್ಪಿಸು ವುದನ್ನು ಮರೆತುಬಿಡುತ್ತಾನೆ. ಆಗ ಕ್ಯಾಲಿಗುಲ ಪುಟಿದೆದ್ದು ನಿಲ್ಲುತ್ತಾನೆ:)

ಎಚ್ಚರ! ಎಚ್ಚರ! ಬಾ, ನನ್ನ ಕಂದ – ಇಲ್ಲಿ ಬಾ. ಪೂಜೆ ಸರ್ವ ಶ್ರೇಷ್ಠ, ನಿಜ – ಆದರೆ, ಭಿಕ್ಷಾರ್ಪಣೆ ಅದಕ್ಕೂ ಶ್ರೇಷ್ಠ. ನಿಮ್ಮನ್ನು ಅಭಿವಂದಿಸುತ್ತಿದ್ದೇವೆ; ಹಾಗೆಯೇ, ನಾವೀಗ ಸಂತೃಪ್ತರಾಗಿದ್ದೇವೆ, ನಿಮ್ಮಗಳ ಕಾಣಿಕೆ ಪ್ರಣಾಮಾದಿಗಳಿಂದಾಗಿ. ನೀವು – ಆಹ್, ಮರ್ತ್ಯರು ಆ ದೇವತೆಗಳಿಗೆ ಕೊಡುವ ಪ್ರೇಮದ ಹೊರತಾಗಿ ಬೇರೆ ಐಶ್ವರ್ಯಗಳೇ ಇಲ್ಲವಾಗಿ ಹೋಗಿದ್ದರೆ—ಆ ದೇವತೆಗಳು ಕೂಡ ಕ್ಯಾಲಿಗುಲನಷ್ಟೇ ಬಡವರಾಗಿದ್ದು ಬಿಡುತ್ತಿದ್ದರು. ಈಗ, ಮಾನ್ಯರೇ, ನೀವು ಹೋಗಬಹುದು – ಹೋಗಿ, ನಿಮಗೆ ನೋಡಲು ದೊರೆಯು ವಂತಾದ ಪವಾಡದ ಸಂತೋಷ ಸಮಾಚಾರಗಳನ್ನು ಹೊರಗೆಲ್ಲಾ ಹರಡಿಹೋಗಿ; ನೀವು ದೇವಿ ವೀನಸ್‌ಳ ದರ್ಶನ ಪಡೆದಿರಿ—ನಿಮ್ಮ ರಕ್ತ ಮಾಂಸಗಳ ಕಣ್ಣುಗಳಿಂದಲೇ ಅವಳ ದೇದಿಪ್ಯಮಾನ ಮುಖ ವನ್ನು ನೋಡಿದಿರಿ—ಎಲ್ಲಕ್ಕೂ ಮಿಗಿಲಾಗಿ ವೀನಸ್‌ದೇವಿ ತಾನಾಗಿಯೇ ನಿಮ್ಮನ್ನೆಲ್ಲಾ ಮಾತನಾಡಿಸಿದ್ದಾಳೆ. ಹೋಗಿ, ಆ ದೇವತೆಯ ಅಪಾರ ಕೃಪೆಗೆ ಪಾತ್ರರಾದ ಸನ್ಮಾನ್ಯರೇ—ಹೋಗಿ ನಿಮ್ಮ ಮರ್ತ್ಯ ಚಕ್ಷುಗಳಿಂದ ನೀವು ದರ್ಶಿಸಿದ ಮಹಾ ಪವಾಡ ಗಳನ್ನು ಹೊರಗೆಲ್ಲಾ, ನೀವು ಹೋದಲ್ಲೆಲ್ಲಾ, ಹರಡಿಬಿಡಿ ಹೋಗಿ.

(ಆಸ್ಥಾನಿಕರು ಹೊರಡಲು ಸಿದ್ಧರಾಗತೊಡಗುತ್ತಾರೆ.)

ನಿಲ್ಲಿ – ಒಂದೇ ಒಂದು ಕ್ಷಣ ನಿಲ್ಲಿ. ನೀವು ಹೋಗುವುದಾದರೆ ಎಡ ದ್ವಾರದಿಂದ ಮಾತ್ರ ಹೋಗಿ—ಉಳಿದೆಲ್ಲ ದ್ವಾರಗಳಲ್ಲೂ ನಾನು ನಿಮ್ಮನ್ನೆಲ್ಲಾ ಕೊಲ್ಲಲು ಸಿಪಾಯಿಗಳನ್ನು ನಿಯಮಿಸಿದ್ದೇನೆ.

(ಆಸ್ಥಾನಿಕರೆಲ್ಲಾ ಆತುರಾತುರವಾಗಿ ಎಲ್ಲೆಲ್ಲೋ ಚೆಲ್ಲಾಪಿಲ್ಲಿಯಾಗಿ ಹೋಗಿ

ಬಿಡುತ್ತಾರೆ. ವಾದ್ಯಗಾರರು ಮತ್ತು ಗುಲಾಮರು ರಂಗದಿಂದ ಹೊರಹೊರಡ ಲಾರಂಭಿಸುತ್ತಾರೆ.)

ಹೆಲಿಕಾನ್ : (ಸಿಪಿಯೋ ದಿಕ್ಕಿನಲ್ಲಿ ತರ್ಜನೀ ಬೆರಳು ಮಾಡಿ) ಏಯ್ ಪುಂಡ ಹುಡುಗೇ, ನೀನು ಮತ್ತೆ ಬಂಡೇಳಲು ಆರಂಭಿಸಿದ್ದೀಯೆ !

ಸಿಪಿಯೋ : (ಕ್ಯಾಲಿಗುಲನಿಗೆ) ನೀನು ದೈವನಿಂದೆಯನ್ನು ಮಾಡಿದೆ, ಕಾಯಸ್ !

ಕ್ಯಾಲಿಗುಲ : ದೈವನಿಂದೆ ! ! – ಏನದು ? ?

ಸಿಪಿಯೋ : ನೀನು ಸ್ವರ್ಗವನ್ನು ಮಲಿನಗೊಳಿಸುತ್ತಾ ಇದ್ದೀಯೆ – ಭೂಮಿಯನ್ನು ರಕ್ತರಂಜಿತವಾಗಿ ಮಾಡಿದ್ದು ಸಾಲದು ಎಂದು !

ಕ್ಯಾಲಿಗುಲ : ಈ ಕಿರಿಯನಿಗೆ ದೊಡ್ಡ ದೊಡ್ಡ ಶಬ್ದಗಳೆಂದರೆ ಅದೆಷ್ಟು ಪ್ರೀತಿ ! – ಅದೇನು ಕಥೆ ! ! (ಕ್ಯಾಲಿಗುಲ ಮಂಚದ ಮೇಲೆ ತನ್ನನ್ನು ತಾನು ಚೆಲ್ಲಿಕೊಳ್ಳುತ್ತಾನೆ.)

ಕೆಸೋನಿಯಾ : (ತಾಳ್ಮೆಯಿಂದ) ನಿನ್ನ ನಾಲಗೆಯನ್ನು ನೀನು ಕಾದು ಕೊಳ್ಳಬೇಕು, ನನ್ನ ಕಂದ. ಈ ಕ್ಷಣದಲ್ಲೇ ರೋಂನಲ್ಲಿ ಇದಕ್ಕೂ ತೀರ ತೀರ ಕಮ್ಮಿ ಮಾತನಾಡಿದವರೆಲ್ಲಾ ಸಾವಿಗೆ ತಮ್ಮ ತಲೆಯನ್ನು ಒಡ್ಡುತ್ತಿದ್ದಾರೆ.

ಸಿಪಿಯೋ : ಇರಬಹುದು-ನಾನು ಕ್ಯಾಲಿಗುಲನ ಮುಂದೆ ಸತ್ಯವನ್ನು ಮಾತ್ರ ಆಡಬೇಕೆಂದು ದೀಕ್ಷೆ ಕೈಗೊಂಡಿದ್ದೇನೆ.

ಕೆಸೋನಿಯಾ : ಅವನ ಮಾತನ್ನು ಕೇಳಿಸಿಕೊಂಡೆಯಾ, ಕ್ಯಾಲಿಗುಲ ! ನಿನ್ನ ರಾಜ್ಯದಲ್ಲಿ ಕೊರತೆ ಇದ್ದುದೆಂದರೆ ಇದೊಂದೇ ಒಂದಕ್ಕೆ— ಒಬ್ಬ ಕಿರಿಯ ಕೆಚ್ಚೆದೆಯ ನೀತಿಜ್ಞನಿಗೆ.... !

ಕ್ಯಾಲಿಗುಲ : (ಕುತೂಹಲಾವಿಷ್ಟನಾಗಿ ಸಿಪಿಯೋನನ್ನೇ ನೋಡುತ್ತಾ) ನಿನಗೆ ದೇವತೆಗಳಲ್ಲಿ ನಿಜಕ್ಕೂ ನಂಬಿಕೆ ಇದಿಯೇ, ಸಿಪಿಯೋ ?

ಸಿಪಿಯೋ : ಇಲ್ಲ.

ಕ್ಯಾಲಗುಲ : ಹಾಗಾದಮೇಲೆ ನಾನು ನಿನ್ನನ್ನು ಅರ್ಥಮಾಡಿಕೊಳ್ಳು ವಲ್ಲಿ ಸೋತುಹೋಗುತ್ತಿದ್ದೇನೆ. ನಿನಗೆ ದೇವತೆಗಳಲ್ಲಿ ನಂಬಿಕೆ

ಇಲ್ಲವಾದ ಮೇಲೆ ' ದೈವನಿಂದೆ ಇದು ' ಎಂದು ಗುರ್ತಿಸಿ ದೂಷಿಸು ವಷ್ಟು ಆಸಕ್ತಿ ಏಕೆ ?

ಸಿಪಿಯೋ : ಯಾರು ಯಾವುದನ್ನು ಬೇಕಾದರೂ ಅದರ ಬಣ್ಣಗೆಡಿಸುವ ಗೊಡವೆಗೇ ಹೋಗದೆ, ಅದನ್ನು ನಿರಾಕರಿಸಿಬಿಡಬಹುದು ಅಥವಾ ಯಾರಿಂದಬೇಕಾದರೂ ಅದರಲ್ಲಿ ನಂಬಿಕೆ ತಾಳುವ ಹಕ್ಕನ್ನು ಕಸಿದು ಕೊಳ್ಳಲೂಬಹುದು.

ಕ್ಯಾಲಿಗುಲ : ಆದರೆ, ಇದು ಕೇವಲ ವಿನೀತಭಾವ—ನನ್ನನ್ನು ನೀನು ಹೆಚ್ಚು ತಪ್ಪು ತಿಳಿಯುವುದಿಲ್ಲವಾದರೆ ಇದು ನಿಜವಾದ ಗುಣವೂ ಹೌದು. ಆಹ್, ನನ್ನ ಪ್ರೀತಿಯ ಸಿಪಿಯೋ, ನೀನು ಎಂದರೆ ಸಾಕು ನನಗೆ ಅದೆಷ್ಟು ಸಂತೋಷವಾಗುತ್ತದೆ-ಎಂದು ಬಲ್ಲೆಯಾ ?-ಅಷ್ಟೇ ಅಲ್ಲ, ನಿನ್ನನ್ನು ಕಂಡರೆ ನನಗೆ ಕ್ಷುಲ್ಲಕವಾದ ಅಸೂಯೆ ಕೂಡ ! ವಿನಯ ಎಂದು ಕರೆಸಿಕೊಳ್ಳುವ ಭಾವನೆ ಇದೆಯಲ್ಲ-ಅದೊಂದನ್ನು ಮಾತ್ರ ನನ್ನಿಂದ ಎಂದೂ ಅನುಭವಿಸಲಾಗುವುದೇ ಇಲ್ಲ, ನೋಡು.

ಸಿಪಿಯೋ : ನಿನಗೆ ಅಸೂಯೆ ಇರುವುದು ನನ್ನ ಮೇಲಲ್ಲ - ದೇವತೆ ಗಳ ಮೇಲೆ.... !

ಕ್ಯಾಲಿಗುಲ : ನೀನು ಏನೂ ತಿಳಿದುಕೊಳ್ಳುವುದಿಲ್ಲವಾದರೆ, ನಿನ್ನ ಈ ಮಾತೇ ನಮ್ಮಿಬ್ಬರ ಮಧ್ಯದ ರಹಸ್ಯವಾಗಿ-ನಮ್ಮ ಆಳ್ವಿಕೆಯ ನಿಗೂಢ ವಿಧಿಯಾಗಿ-ಉಳಿದುಬಿಡುತ್ತದೆ : ನಿಜಕ್ಕೂ ನಿನಗೇ ಗೊತ್ತಿರುವ ಹಾಗೆ, ನಾನು ಮಾಡಿರುವ ಒಂದೇ ಒಂದಕ್ಕಾಗಿ - ಮುಕ್ತಿಯ ಹಾದಿಯಲ್ಲಿ ನಾನು ಇಟ್ಟ ಒಂದೇ ಒಂದು ಪುಟ್ಟಹೆಜ್ಜೆಗಾಗಿ -ನೀವೆಲ್ಲಾ ನನ್ನನ್ನು ನಿಂದಿಸುತ್ತಿರಬಹುದು. ಅಧಿಕಾರ ಮಾತ್ರ ವನ್ನೇ ಪ್ರೀತಿಸುವ ಯಾರಿಗೇ ಆಗಲಿ, ದೇವತೆಗಳ ಮೇಲೆ ಹೂಡಿದ ಪ್ರತಿ ಸ್ಪರ್ಧೆ ಎಂದರೆ ನೀನು ಏನೇ ಹೇಳು-ಇರಿಸುಮುರಿಸಾದ ತ್ರಾಸ ಮಾತ್ರ. ಹಾಳಾಗಿ ಹೋಗಲಿ-ಯಾರು ಬೇಕಾದರೂ ಯಾವ ಪೂರ್ವಭಾವೀ ಅಭ್ಯಾಸವೂ ಇಲ್ಲದೆ, ಕೇವಲ ತನ್ನ ಬುದ್ಧಿಯನ್ನು ಉಪಯೋಗಿಸುವ ಮಾತ್ರದಿಂದಲೇ ದೇವತೆಗಳ ಅಸಂಬದ್ಧ ಪಾತ್ರ ಗಳನ್ನು, ಅವುಗಳ ಪರಿಪೂರ್ಣಾಭಿನಯದ ಪರಾಕಾಷ್ಠತೆಗೆ ಒಯ್ಯ

ಬಹುದು, ಎನ್ನುವುದನ್ನು ನಾನು ನಮ್ಮ ಈ ಎಲ್ಲ ಕಾಲ್ಪನಿಕ ದೇವತೆಗಳಿಗೆ ರುಜುವಾತು ಪಡಿಸಿಕೊಟ್ಟಿದ್ದೇನೆ.

ಸಿಪಿಯೋ: ಇದನ್ನೇ ಕಾಯಸ್, ನಾನು ದೈವನಿಂದೆ ಎಂದು ಕರೆದದ್ದು.

ಕ್ಯಾಲಿಗುಲ : ಇದು, ಇದು ದೈವನಿಂದೆಯಲ್ಲ, ಸಿಪಿಯೋ—ಇದು ನಿಚ್ಚಳವಾದ ಸ್ಪಷ್ಟದೃಷ್ಟಿ, ಅಷ್ಟೆ. ನನಗೆ ಈಗ ಸಂಪೂರ್ಣವಾಗಿ ಅರಿವಾಗಿದೆ: ದೇವತೆಗಳ ಜೊತೆ ಸೇರಲು ಬೇಕಾಗಿರುವುದೆಲ್ಲಾ ಒಂದೇ ಒಂದು – ನಾನೂ ಆ ದೇವತೆಗಳಂತೆ ನಿಷ್ಕರುಣಿಯಾಗಿ ಹೋಗಿಬಿಡುವುದು........!

ಸಿಪಿಯೋ : ನಿನಗೆ ಬೇಕಾಗಿರುವುದು ಅದಲ್ಲ - ಬದಲಿಗೆ ನಿರಂಕುಶ ದಬ್ಬಾಳಿಕೆಯನ್ನು ನಡೆಸುವ ಸಾರ್ವಭೌಮನ ಪಾತ್ರವನ್ನು ಯದ್ವಾತದ್ವ ಅಭಿನಯಿಸಿಬಿಡುವುದು – ಅಷ್ಟೇ.

ಕ್ಯಾಲಿಗುಲ : ನನಗೆ ಹೇಳು, ಓ ನನ್ನ ಕಿರಿಯ ಮಿತ್ರ - ನಿರಂಕುಶ ದಬ್ಬಾಳಿಕೆ ಎಂದರೆ ಕರಾರುವಾಕ್ಕಾಗಿ **ಏನು** ಅದು ?

ಸಿಪಿಯೋ : ಒಂದು ಕುರುಡು ಕುರುಡಾದ ಆತ್ಮ ಅದು.

ಕ್ಯಾಲಿಗುಲ : ಹಾಗೆ ಹೇಳುವುದು ವಾದಗ್ರಸ್ತವಾದ ವಿಚಾರ : ನಿಜವಾದ ನಿರಂಕುಶ ದಬ್ಬಾಳಿಕೆ ನಡೆಸುವ ಸಾರ್ವಭೌಮ ಎಂದರೆ ಯಾರು ತನ್ನ ಆದರ್ಶಕ್ಕಾಗಿ ಅಥವಾ ಬಯಕೆಗಾಗಿ ತನ್ನ ಇಡೀ ರಾಷ್ಟ್ರವನ್ನೇ ತ್ಯಾಗಮಾಡಿಬಿಡುತ್ತಾನೋ ಅಂತಹ ಮಹಾನುಭಾವ –ಎಂದು ನಾನು ಹೇಳಲೇಬೇಕಾಗಿಬಿಟ್ಟಿದೆ. ಆದರೆ, ನನ್ನ ಮುಂದೆ ಯಾವ ಒಂದು ಆದರ್ಶವಾಗಲಿ, ಅಥವಾ ಧ್ಯೇಯವಾಗಲಿ ಇಲ್ಲ. ಹಾಗೂ ಅಧಿಕಾರ ಅಥವಾ ವೈಭವಗಳಿಂದ ದೋಚಿಕೊಳ್ಳಬಲ್ಲಂತಹದ್ದೇನೂ ನನ್ನ ಪಾಲಿಗೆ ಉಳಿದೂ ಇಲ್ಲ. ನಾನು ನನ್ನ ಅಧಿಕಾರವನ್ನು ಚಲಾಯಿಸುತ್ತಿರುವುದು ಒಂದೇ ಒಂದರ ಪರಿಹಾರಾರ್ಥವಾಗಿ.

ಸಿಪಿಯೋ : ಯಾವುದರ ಪರಿಹಾರಾರ್ಥವಾಗಿ ?

ಕ್ಯಾಲಿಗುಲ : ದೇವತೆಗಳ ದ್ವೇಷ ಹಾಗೂ ಮೂರ್ಖತೆಯ ಪರಿಹಾರಾರ್ಥವಾಗಿ.

ಸಿಪಿಯೋ : ಒಂದು ದ್ವೇಷದಿಂದ ಇನ್ನೊಂದು ದ್ವೇಷ ಪರಿಹಾರವಾಗ ವುದಿಲ್ಲ ; ಅಧಿಕಾರ ಎಲ್ಲದಕ್ಕೂ ಉತ್ತರವೆನಿಸಿಕೊಳ್ಳುವುದಿಲ್ಲ ವೈಯುಕ್ತಿಕವಾಗಿ ಹೇಳುವುದೇ ಆದರೆ, ಈ ಜಗತ್ತಿನ ವಿರೋಧ ಭಾಸಕ್ಕೆಲ್ಲಾ ಒಂದೇ ಒಂದು ಉತ್ತರವಿದೆ ಎಂದು ನನಗೆ ಗೊತ್ತು

ಕ್ಯಾಲಿಗುಲ : ಹೌದೇನು ? ಹಾಗಾದರೆ ಅದು ಯಾವುದು ?

ಸಿಪಿಯೋ : ಬಡತನ.

ಕ್ಯಾಲಿಗುಲ : (ಕಾಲುಗಳ ಕಡೆ ಬಾಗಿ, ಬೆರಳುಗಳನ್ನು ಪರೀಕ್ಷಿಸುತ್ತಾ ನಾನು ಅದನ್ನೂ ಪ್ರಯತ್ನಿಸಿ ನೋಡಿಯೇ ತೀರಬೇಕು !

ಸಿಪಿಯೋ : ಅಲ್ಲಿನವರೆಗೂ ನಿನ್ನ ಸುತ್ತಮುತ್ತ ಇರುವವರು ಅನೇಕಾ ನೇಕವಾಗಿ ಸಾಯುತ್ತಲೇ ಇರುತ್ತಾರೆ.

ಕ್ಯಾಲಿಗುಲ : ಓಹ್–ಏನಿಲ್ಲ, ಏನಿಲ್ಲ ! ನೀನು ಹೇಳುವ ಅಷ್ಟೊಂದು ಜನರೇನೂ ಸಾಯುಲಾರರು:ನಾನು ಪುರಸ್ಕರಿಸಿಯೇ ತೀರಬೇಕಾಗಿದ್ದ ಅದೆಷ್ಟು ಯುದ್ಧಗಳನ್ನು ತಿರಸ್ಕರಿಸಿದ್ದೇನೆ ಎಂದು ನಿನಗೆ ಏನಾದರೂ ಗೊತ್ತೊ ?

ಸಿಪಿಯೋ : ಇಲ್ಲ.

ಕ್ಯಾಲಿಗುಲ : ಮೂರು–ಮೂರು ಯುದ್ಧಗಳನ್ನು ತಿರಸ್ಕರಿಸಿದ್ದೇನೆ– ಹೋಗಲಿ, ನಾನು ಏಕಾದರೂ ಅವುಗಳನ್ನು ತಿರಸ್ಕರಿಸಿಬಿಟ್ಟಿದ್ದೇ ಎಂದಾದರೂ ಗೊತ್ತೋ ?

ಸಿಪಿಯೋ : ಗೊತ್ತು–ಏಕೆಂದರೆ ರೋಂನ ವೈಭವ ನಿನ್ನ ಪಾಲಿ ಏನೇನೂ ಅಲ್ಲವಾಗಿಹೋಗಿರುವುದರಿಂದ.

ಕ್ಯಾಲಿಗುಲ : ಅಲ್ಲ–ನಾನು ಮಾನವ ಜೀವನವನ್ನು ಅಪಾರವಾ ಗೌರವಿಸುತ್ತಿರುವುದರಿಂದ.

ಸಿಪಿಯೋ : ಕಾಯಸ್ ! – ನೀನು ತಮಾಷೆ ಮಾಡುತ್ತಾ ಇದ್ದೀಯೆ ಕಾಯಸ್....

ಕ್ಯಾಲಿಗುಲ : ಅಥವಾ, ಹಾಗೂ, ನಾನು ಸೇನೆಯ ದಿಗ್ವಿಜಯ ಕ್ಕಿಂತಲೂ ಹೆಚ್ಚಾಗಿ ಮಾನವ ಜೀವನವನ್ನು ತಿರಸ್ಕರಿಸುತ್ತೇ ಎಂದೇ ಇಟ್ಟುಕೋ ; ಆದರೆ, ಒಂದಂತೂ ಸತ್ಯ : ನಾನು ನನ್ನ

ಬದುಕನ್ನು ಗೌರವಿಸುವುದಕ್ಕೂ ಹೆಚ್ಚಾಗಿ ಮಾನವನ ಜೀವನವನ್ನೇನೂ ಗೌರವಿಸುವುದಿಲ್ಲ; ಅಲ್ಲದೆ ಕೊಲೆ ಮಾಡುವುದು ಸುಲಭ ಎಂದು ನನಗೆ ಅನ್ನಿಸಿದರೆ ಅದಕ್ಕೆ ಇರುವ ಕಾರಣವೆಲ್ಲಾ ಸಾಯುವುದು ನನಗೆ ಏನೇನೂ ಕಷ್ಟಕರವಾಗಿಲ್ಲದೇ ಹೋಗಿರುವುದೇ ಅಲ್ಲವೇ? ನಾನು ಸಾಯುವುದು ನನಗೆ ಏನೇನೂ ಕಷ್ಟಕರವಲ್ಲ ಎನ್ನುವುದನ್ನು ಕಂಡುಕೊಂಡು, ಅದನ್ನು ಕುರಿತು ನಾನು ಎಷ್ಟೆಷ್ಟು ಯೋಚಿಸುತ್ತಾ ಹೋಗುತ್ತೇನೋ ಅಷ್ಟಷ್ಟೂ ನಾನು ಯದ್ವಾತದ್ವಾ ದಬ್ಬಾಳಿಕೆ ನಡೆಸುವ ನಿರಂಕುಶಪ್ರಭು ಅಲ್ಲವೇ ಅಲ್ಲವೆನ್ನುವುದು ಖಚಿತವಾಗುತ್ತಾ ಹೋಗಿಬಿಡುತ್ತಿರುತ್ತದೆ !

ಸಿಪಿಯೋ : ಅಂತಹ ದಬ್ಬಾಳಿಕೆ ಒಂದಕ್ಕೆ ನಿನ್ನಷ್ಟೇ ಪ್ರಿಯರಾದವರೊಬ್ಬರ ಪ್ರಾಣವನ್ನೇ ತೆರಬೇಕಾಗಿದ್ದರೆ ತಾನೆ ಏನೂ ಮಹಾ, ಅಲ್ಲವೆ !

ಕ್ಯಾಲಿಗುಲ : (ಸಿಡುಕಿನ ಸೋಂಕನ್ನು ಹೊತ್ತು) ಅಂಕಿ ಅಂಶಗಳ ಬಗೆಗೆ ನಿನಗೆ ಅಲ್ಪ ಸ್ವಲ್ಪವಾದರೂ ತಿಳುವಳಿಕೆ ಇದ್ದಿದ್ದರೆ, ನಿರಂಕುಶ ದಬ್ಬಾಳಿಕೆಯ ಸಾಮ್ರಾಟನೊಬ್ಬ – ಅವನು ಎಷ್ಟೇ ಸಮಚಿತ್ತಉಳ್ಳವನಾದರೂ ಸರಿಯೇ - ತೊಡಗುವ ಅತಿ ಚಿಕ್ಕ ಯುದ್ಧದ ಬೆಲೆ ಕೂಡ ನನ್ನ ಎಲ್ಲ ಚಿತ್ತ ಭ್ರಮಣಗಳ – ಹಾಗೆ ಅವುಗಳನ್ನು ಕರೆಯಬಹುದೇ ಆದರೆ — ಒಟ್ಟು ಮೊತ್ತಕ್ಕೆ ಸಾವಿರಪಟ್ಟು ಅಧಿಕವಾಗಿಬಿಡುತ್ತಿತ್ತು.

ಸಿಪಿಯೋ : ಸಾಧ್ಯ, ಒಪ್ಪಿಕೊಳ್ಳುತ್ತೇನೆ – ಆದರೆ, ಯುದ್ಧ ಎಂದರೆ ಅದರ ಹಿನ್ನಲೆಯಾಗಿ ಏನಾದರೂ ಒಂದು ದೃಷ್ಟಿ ಇದ್ದೇ ಇರುತ್ತದೆ; ಅಲ್ಲದೆ, ಅದು ಅರ್ಥವಾಗುವಂತಹದ್ದೇ ಆಗಿರುತ್ತದೆ : ಅದು ಅರ್ಥವಾಗುವಂತಹದ್ದು ಎಂದ ಮೇಲೆ ತೀರಿತು – ಅದರಿಂದಾಗಿ ಏನೆಲ್ಲಾ ಕೂಡಿಬರುತ್ತದೆ ; ಏನು ಕತೆ ...!

ಕ್ಯಾಲಿಗುಲ : ವಿಧಿ – ಅರ್ಥವಾಗಬಲ್ಲ ವಿಧಿ ಇಲ್ಲವೇ ಇಲ್ಲ; ಆದ್ದರಿಂದಲೇ ನಾನು ವಿಧಿಯ ಪಾತ್ರಧಾರಿಯಾಗಿದ್ದೇನೆ : ಬೇಕುಬೇಕೆಂದೇ ನಾನು ವೃತ್ತಿ ದೈವ ಒಂದರ ಮೂರ್ಖ ಹಾಗೂ ಅರ್ಥಹೀನ ಮುಖವನ್ನು

ಧಾರಣಮಾಡಿಕೊಂಡೂ ಇದ್ದೇನೆ. ಅಲ್ಲದೆ, ಆ ದೈವವನ್ನೇ ಇಷ್ಟು ಹೊತ್ತೂ ನಿಮ್ಮೊಡನೆ ಇಲ್ಲಿ ಇದ್ದ ಆ ಎಲ್ಲ ಜನರೂ ಪೂಜಿಸಲು ಕಲಿತದ್ದು ಕೂಡ.

ಸಿಪಿಯೋ : ಇದೂ ಕೂಡ, ಕಾಯಸ್, ದೈವನಿಂದೆಯೇ....

ಕ್ಯಾಲಿಗುಲ : ಅಲ್ಲ ಸಿಪಿಯೋ – ಇದು ದೈವನಿಂದೆಯಲ್ಲ – ಬದಲಿಗೆ, ಇದು ಒಂದು ನಾಟಕ ಕಲೆ. ನೀವುಗಳು ಮಾಡುವ ಅತಿ ದೊಡ್ಡ ತಪ್ಪೆಂದರೆ ನಾಟಕವನ್ನು ಸಾಕಷ್ಟು ಗಂಭೀರವಾಗಿ ತೆಗೆದುಕೊಳ್ಳದೇ ಹೋಗಿರುವುದೇ ಆಗಿದೆ. ಹಾಗೊಮ್ಮೆ ನೀವು ನಾಟಕಗಳನ್ನು ಗಂಭೀರವಾಗಿ ತೆಗೆದುಕೊಂಡಿದ್ದೇ ಆದರೆ, ಆಗ ಯಾರೂ ಬೇಕಾದರೂ "ಪವಿತ್ರ ಡಿವೈನ್ ಕಾಮಿಡಿ"ಯ ಪ್ರಧಾನಪಾತ್ರವನ್ನು ನಿರ್ವಹಿಸಿ ದೇವರಾಗಿಯೇ ಬಿಡಬಹುದಾಗಿತ್ತು. ಅಷ್ಟಕ್ಕಾಗಿ ಅವನು ತನ್ನ ಹೃದಯವನ್ನು ಕಲ್ಲಾಗಿಸಿಕೊಳ್ಳುವುದು ಮಾತ್ರ ಬೇಕೇಬೇಕಾಗಿದೆ.

ಸಿಪಿಯೋ : ನೀನು ಹೇಳುತ್ತಿರುವುದೆಲ್ಲಾ ಸರಿಯಿರಬಹುದು, ಕಾಯಸ್. ನನಗೆ ಹೀಗೆ ಅನ್ನಿಸುತ್ತದೆ – ನಿನ್ನ ಒಂದೇ ಒಂದು ದಿನದ ದೈವೀ ತಲೆಯನ್ನು ರಕ್ತದಲ್ಲಿ ಅದ್ದಿ ಓಕಳಿ ಆಡಲಿರುವ, ನಿನ್ನಷ್ಟೇ ಕ್ರೂರ ವಾದ, ಒಂದು ಮಾನವ ದೇವತೆಗಳ ದಂಡಿಗೆ ದಂಡೇ ನಿನ್ನ ವಿರುದ್ಧ ಸಿಡಿದೇಳಲು ಏನೆಲ್ಲಾ ಬೇಕೋ ಅದನ್ನೆಲ್ಲಾ ನೀನು ಯಥೇಚ್ಛವಾಗಿ ಮಾಡಿದ್ದೀಯೆ ಹಾಗೂ ಮಾಡುತ್ತಲೇ ಇದ್ದೀಯೆ!

ಕೆಸೋನಿಯಾ : ನಿಜಕ್ಕೂ ಸಿಪಿಯೋ....!

ಕ್ಯಾಲಿಗುಲ : (ಅಧಿಕಾರವಾಣಿಯಲ್ಲಿ) ಬೇಡ – ಅವನು ಮಾತನಾಡು ವುದನ್ನು ನಿಲ್ಲಿಸಬೇಡ, ಕೆಸೋನಿಯಾ. ಹೌದು, ಸಿಪಿಯೋ, ನಿನ್ನ ಅರಿವಿಗೂ ಮೀರಿದ ಸತ್ಯವನ್ನೇ ನೀನು ಆಡಿದೆ ; ಮಾನವ ದೇವತೆಗಳನ್ನು ರೊಚ್ಚಿಗೇಳಿಸುವುದಕ್ಕೆ ಏನು ಏನೆಲ್ಲಾ ಬೇಕೋ ಅದನ್ನೆಲ್ಲಾ ನೀನು ಹೇಳಿದಂತೆ ನಾನು ಮಾಡಿಬಿಟ್ಟಿದ್ದೇನೆ–ನಿಜ... ಅದನ್ನು ಕುರಿತು ಚಿಂತಿಸುವುದು ಕೂಡ ನನಗೆ ತೀರ ಕಷ್ಟಕರವಾಗಿ ಕಾಣತೊಡಗಿಬಿಟ್ಟದೆ ; ಆದರೂ, ನಾನು ಆಗಾಗ ಅದನ್ನು ಕನವರಿಸಿ ಕೊಂಡೇ ತೀರುತ್ತಿದ್ದೇನೆ : ಹಾಗೆಯೇ, ಉದ್ರಿಕ್ತ ಕತ್ತಲಿಂದ ಹೊರ

ಚಾಚಿ ನುಗ್ಗುವ ಆ ಎಲ್ಲ ಮುಖಗಳಲ್ಲಿ – ಭಯ ಮತ್ತು ದ್ವೇಷಗಳಿಂದ ಚೇತರಿಸಿಕೊಳ್ಳುತ್ತಿರುವ ಆ ಎಲ್ಲ ಮುಖಗಳಲ್ಲಿ–ನಾನು ಈ ಭೂಮಿಯ ಮೇಲೆ ಪೂಜಿಸಿದ ಮನುಷ್ಯನ ಹೃದಯದಷ್ಟೇ ಆಸೆಬಡುಕ ಹಾಗೂ ವಂಚಿತವಾದ ಏಕಮಾತ್ರ ದೈವವನ್ನು ಕಾಣುತ್ತಲೇ ಇದ್ದೇನೆ; ಜೊತೆ ಜೊತೆಗೆ, ನಾನು ಏನನ್ನು ಕಾಣುತ್ತಿದ್ದೇನೆಯೋ ಅದನ್ನೇ ಸುಖಿಸುತ್ತಲೂ ಇದ್ದೇನೆ. (ರೇಗಿ) ನೀನು ಇನ್ನು ಹೋಗಿ ಬಿಡು–ನಿನ್ನ ಸಹವಾಸ ನನಗೆ ಸಾಕುಬೇಕಾದಷ್ಟಾಗಿ, ಸಾಕಾಗಿ ಹೋಗಿದೆ. (ಬೇರೊಂದು ಧ್ವನಿಯಲ್ಲಿ) ನಾನು ಈಗ ನನ್ನ ಕಾಲಿನ ಉಗುರುಗಳನ್ನು ಸ್ವಚ್ಛಗೊಳಿಸಬೇಕಾಗಿದೆ : ಅವು ಮಾಮೂಲಾಗಿ ಎಷ್ಟೆಲ್ಲಾ ಕೆಂಪಾಗಿರಬೇಕೊ ಅಷ್ಟೆಲ್ಲಾ ಕೆಂಪಾಗಿಲ್ಲವಾಗಿ, ನನಗೆ ವ್ಯರ್ಥವಾಗಿ ಕಾಲಹರಣಮಾಡುವುದು ಸಾಧ್ಯವಿಲ್ಲವಾಗಿಬಿಟ್ಟಿದೆ.

(ಹೆಲಿಕಾನ್ ಒಬ್ಬನ ಹೊರತಾಗಿ ಉಳಿದವರೆಲ್ಲಾ ಹೊರಹೋಗಿಬಿಡುತ್ತಾರೆ. ಅವನು ತನ್ನ ಕಾಲಿನ ಬೆರಳುಗಳಿಗೆ ಬಣ್ಣ ಹಚ್ಚುತ್ತಾ ಇರುವ ಕ್ಯಾಲಿಗುಲನ ಸುತ್ತ ಮುತ್ತ ಶತಪಥ ಹಾಕತೊಡಗುತ್ತಾನೆ.)

ಕ್ಯಾಲಿಗುಲ : ಹೆಲಿಕಾನ್ !

ಹೆಲಿಕಾನ್ : ಆಂ ?

ಕ್ಯಾಲಿಗುಲ : ನಿನ್ನ ಕೆಲಸ ಮುಂದುವರೆಯುತ್ತಾ ಇದೆ ತಾನೆ ?

ಹೆಲಿಕಾನ್ : ಯಾವ ಕೆಲಸ ?

ಕ್ಯಾಲಿಗುಲ : ನಿನಗೆ....ಗೊತ್ತೇ ಇದೆಯಲ್ಲ....ಆ ಚಂದ್ರ....ಆ....ೕ.... ....ಚಂದ್ರಾ ಅ ೕ....ೖ ...ೖ

ಹೆಲಿಕಾನ್ : ಆಹ್, ಹೌದು...ಹೌದೌದು...ಚಂದ್ರ....ಆ ಚಂದ್ರಾ ....ಚಂದ್ರಾ ಸಾಕಷ್ಟು ಕಾಲ ಮತ್ತು ತಾಳ್ಮೆಯ ವಿಚಾರ. ಆದರೆ, ಈಗ ನಾನು ನಿನ್ನೊಡನೆ ಒಂದೆರಡು ಮಾತನ್ನು ಆಡಬೇಕಾಗಿದೆ.

ಕ್ಯಾಲಿಗುಲ : ನನಗೆ ತಾಳ್ಮೆ ಇರಬಹುದು ; ಆದರೆ, ಕಾಲ ಮಾತ್ರ ಇಲ್ಲವೇ ಇಲ್ಲ. ಆದ್ದರಿಂದ ನೀನು ಮಾಡಬೇಕಾಗಿರುವ ಕೆಲಸವನ್ನು

ತರಾತುರಿಯಲ್ಲಿ ಮಾಡಿಮುಗಿಸಿಯೇ ಬಿಡಬೇಕು – ನೋಡು.

ಹೆಲಿಕಾನ್ : ನಾನು ನನ್ನ ಕೈಯಲ್ಲಿ ಆಗುವುದನ್ನೆಲ್ಲಾ ಮಾಡಿಯೇ ತೀರುವೆ ಎಂದು ನಿನಗೆ ಆಗಲೇ ಹೇಳಿದ್ದೇನಲ್ಲ–ಆದರೆ, ಇದೆಲ್ಲಕ್ಕೂ ಮೊದಲು, ನಾನು ನಿನ್ನೊಡನೆ ಒಂದಿಷ್ಟು ಮಾತಾಡಿಯೇ ತೀರಬೇಕಾಗಿ ಬಂದುಬಿಟ್ಟದೆ. ತೀರ ತೀರ ಗಂಭೀರವಾದ ವಿಚಾರ ಅದು.

ಕ್ಯಾಲಿಗುಲ : (ಕೇಳಿಸಿಕೊಳ್ಳದವನಂತೆ) ನಿನಗೆ ತಿಳಿದಿರಲಿ- ಈಗಾಗಲೇ ಅವಳು ನನ್ನವಳಾಗಿಯೇ ಬಿಟ್ಟಳು.

ಹೆಲಿಕಾನ್ : ಯಾರು ?

ಕ್ಯಾಲಿಗುಲ : ...... ಚಂದ್ರಾ ... ಪ್ರಿ ... ಪ್ರಿ....

ಹೆಲಿಕಾನ್ : (ತಬ್ಬಿಬ್ಬಾಗಿ) ಹೌದು ! ಹೌದೌದು ! (ಸಾವರಿಸಿಕೊಂಡು) ದಯವಿಟ್ಟು ನನ್ನ ಮಾತುಗಳನ್ನು ಕೇಳು : ಅವರೆಲ್ಲಾ ಸೇರಿ ನಿನ್ನ ಜೀವದ ವಿರುದ್ಧ ಸಂಚೊಂದನ್ನು ಹೆಣೆದಿದ್ದಾರೆಂದು ನಿನಗೆ ಗೊತ್ತೆ?

ಕ್ಯಾಲಿಗುಲ : ಹೆಚ್ಚೇನು ತಾನೆ ಬೇಕು ?—ನಾನು ಅವಳನ್ನು ಯದ್ವಾತದ್ವಾ....ಸರಿಯಾಗಿ ಹೇಳುವುದೇ ಆದರೆ, ಕೇವಲ ಎರಡೋ ಅಥವಾ ಮೂರು ಬಾರಿ ಮಾತ್ರ–ಅನುಭೋಗಿಸಿದೆ. ಆದರೂ, ಅವಳು ಹಾಯಾಗಿಯೇ ಇದ್ದಳು !

ಹೆಲಿಕಾನ್ : ಕಳೆದ ಒಂದು ಗಂಟೆಯಿಂದಲೂ ಆ ಸಂಚಿನ ಬಗ್ಗೆ ನಿನಗೆ ಹೇಳಬೇಕೆಂದು ಸುಮ್ಮನೆ ಪ್ರಯತ್ನಪಡುತ್ತಲೇ ಇದ್ದೇನೆ....

ಕ್ಯಾಲಿಗುಲ : ....ಕಳೆದ ಸಾರಿಯ ಬೇಸಿಗೆಯ ಸಮಯ ಅದು....ನಾನು ....ನಾನು ಅವಳತ್ತಲೇ ದೃಷ್ಟಿ ನೆಟ್ಟು ಅವಳನ್ನೇ ತದೇಕವಾಗಿ ಅದೆಷ್ಟು ಹೊತ್ತು ನೋಡುತ್ತಾ ಇದ್ದುಬಿಟ್ಟೆ ಎಂದರೆ....ಅವಳ ಅಂಗಾಂಗಗಳನ್ನು ಉದ್ಯಾನವನದ ಅಮೃತ ಶಿಲಾ ಕಂಬಗಳ ಮೇಲೆ ಅದೆಷ್ಟೊಂದು ಸಾರಿ ಮೃದುವಾಗಿ ತಟ್ಟುತ್ತಾ ಇದ್ದು ಬಿಟ್ಟೆ ಎಂದರೆ.... ಅವಳಿಗೇ ಲಕ್ಷಣವಾಗಿ.... .. ಎಲ್ಲಾ....ಏನೆಲ್ಲಾ ...ಅರ್ಥವಾಗಿ ಹೋಯಿತು ... !

ಹೆಲಿಕಾನ್ : ಕಾಯಸ್, ಹುಡುಗಾಟವಾಡುವುವನ್ನು ದಯವಿಟ್ಟು ನಿಲ್ಲಿಸು. ನೀನು ನಾನು ಹೇಳಲಿರುವುದನ್ನು ಕೇಳಿಸಿಕೊಳ್ಳಲು

ತಿರಸ್ಕರಿಸಿದರೂ ನಾನು ಇಷ್ಟನ್ನು ಮಾತ್ರ ನನ್ನ ಪಾಲಿನ ಕರ್ತವ್ಯ ವಾಗಿ ಹೇಳಿಬಿಡುವೆ. ನಿನಾಗಿಯೇ ಕಿವಿಗಳನ್ನು ಮುಚ್ಚಿಕೊಂಡರೆ ಮಾತ್ರ ನಾನು ಏನನ್ನೂ ಮಾಡಲು ಆಗುವುದೇ ಇಲ್ಲ.

ಕ್ಯಾಲಿಗುಲ : (ಕಾಲಿನ ಬೆರಳುಗಳಿಗೆ ವಾರ್ನಿಷ್ ಹಚ್ಚುತ್ತಾ) ಈ ವಾರ್ನಿಷ್ ಏನೇನೂ ಪ್ರಯೋಜನವಿಲ್ಲ. ಇರಲಿರಲಿ, ಚಂದ್ರಾನ ವಿಚಾರವನ್ನು ಮಾತನಾಡುವುದೇ ಆದರೆ.... ...ಆಗ.... ನಿರ್ಮ ಲಾಕಾಶದ ಒಂದು ಆಗಸ್ಟು ರಾತ್ರಿ....

(ಹೆಲಿಕಾನ್ ಬೇಸರದಿಂದ ಮುಖವನ್ನು ಬೇರೆತ್ತಲೋ ತಿರುಗಿಸಿ ಮೌನ ವಾಗಿ ಬಿಡುತ್ತಾನೆ.)

....ಅವಳು ನಾಚಿ ನೀರಾಗಿ ಹೋಗಿದ್ದಳು – ಮೊದಮೊದಲಲ್ಲಿ. ನಾನು ಈ ವೇಳೆಗಾಗಲೇ ಹಾಸಿಗೆಯಲ್ಲಿ ಇದ್ದುಬಿಟ್ಟಿದ್ದೆ ! ಆರಂಭ ಕಾಲಕ್ಕೆ ರಕ್ತರಂಜಿತವಾಗಿ ದಿಗಂತದ ಕೆಳಅಂಚಿನಲ್ಲಿದ್ದಳವಳು. ಹಾಗೆಯೇ, ಸರಸರನೆ ಮೇಲೇರತೊಡಗಿದವಳು ; ಮೇಲೆಮೇಲಕ್ಕೆ ಏರೇರಿದಂತೆಲ್ಲಾ ಹೆಚ್ಚೆಚ್ಚು ಪ್ರಜ್ವಲಿಸಲಾರಂಭಿಸಿದಳು....ಅವಳು ಮೇಲಮೇಲಕ್ಕೆ ಏರೇರಿದಂತೆಲ್ಲಾ....ಪ್ರಜ್ವಲಿಸಲಾರಂಭಿಸಿದ ಹಾಗೆ ಹಾಗೆಲ್ಲಾ ಬಿಳಿಬಿಳಿಚಿಕೊಳ್ಳತೊಡಗಿ, ನಕ್ಷತ್ರಗಳ ಕಿಲಕಿಲರವದಿಂದ ತುಂಬಿಹೋದ ಕಗ್ಗಾಡಿನ ಮಧ್ಯದ ಹಾಲಿನ ಪುಷ್ಕರಣಿಯೇ ತಾನಾಗಿ ಹೋದಳು...ಆ ನಂತರ....ಬೆಚ್ಚನೆಯ ರಾತ್ರಿ ಗಾಳಿಯನ್ನು ಸೀಳಿ ಕೊಂಡು ನಿಧನಿಧಾನವಾಗಿ, ಪುಟ್ಟ ಜೇಡನಬಲೆಯಂತೆ ಹಗುರಾತಿ ಹಗುರವಾಗಿ, ಸೌಂದರ್ಯದಲ್ಲಿ ಬೆತ್ತಲೋ ಬೆತ್ತಲಾಗಿ, ನಾಚಿಕೆ ಯಿಂದ ಮತ್ತೂ ಕೋಮಲಾತಿಕೋಮಲಳಾಗಿ ನಗುನಗುತ್ತ ಬರತೊಡಗಿದಳು....ಹಾಗೇಯೇ ನನ್ನ ಕೊಠಡಿಯ ಹೊಸಲನ್ನು ತೇಲತೇಲುತ್ತಾ ದಾಟಿ, ಮೃದುವಾಗಿ ಒಳ ಜಾರಿಜಾರಿಕೊಳ್ಳುತ್ತಾ ನನ್ನ ಹಾಸಿಗೆಯ ತುಂಬೆಲ್ಲಾ ಚೆಲ್ಲಾಪಿಲ್ಲಿಯಾಗಿ ತನ್ನನ್ನು ತಾನೇ ಚೆಲ್ಲಿಕೊಳ್ಳುತ್ತಾ, ತನ್ನ ಸಮಸ್ತ ಮುಗುಳ್ನಗೆ ಮತ್ತು ತೇಜಸ್ಸುಗಳಲ್ಲಿ ನನ್ನನ್ನು ಹಾಗೆಯೇ ಥಟ್ಟನೆ ಮುತ್ತಿ ಮೊರೆಮೊರೆದು

ಬಿಟ್ಟಳು. ನನ್ನನ್ನು ಹಾಗೆಯೇ ಥಟ್ಟನೆ ಮುತ್ತಿ ಮೊರೆಮೊರ
ಬಿಟ್ಟಳು... ಉಹ್ಞು – ನಿಜಕ್ಕೂ ಈ ಹೊಸ ವಾರ್ನಿಷ್ ಒಂದ
ಮೋಸ. ಆದ್ದರಿಂದ ನಿನಗೇ ಗೊತ್ತಾಗಿಹೋಯಿತಲ್ಲ – ಹೆಲಿಕಾ
ನಾನು ನಿಜಕ್ಕೂ ಏನೇನೂ ಜಂಬಕೊಚ್ಚಿಕೊಳ್ಳುತ್ತಿಲ್ಲ – ನ
ಅವಳು – ಆ ಅಸಾಧ್ಯಳು - ದಕ್ಕಿಯೇ ದಕ್ಕಿಬಿಟ್ಟಳು ...

ಹೆಲಿಕಾನ್ : ಈಗಲಾದರೂ ನಾನು ಹೇಳುತ್ತಿರುವುದನ್ನು ಕೇಳಿಸಿಕೊಂ
ನಿನ್ನನ್ನು ಆವರಿಸುತ್ತಿರುವ ವಿಪತ್ತು ಏನೆಂದಾದರೂ ನೀನು ತಿಳಿ
ಕೊಂಡುಬಿಡಬಾರದೆ ?

ಕ್ಯಾಲಿಗುಲ : (ಬೆರಳಿಗೆ ವಾರ್ನಿಷ್ ಹಚ್ಚುವುದನ್ನು ನಿಲ್ಲಿಸಿ, ಹೆಲಿಕಾನ್‌ನ
ದೃಷ್ಟಿಸಿ ನೋಡುತ್ತಾ) ನನಗೆ ಬೇಕಾಗಿರುವುದೆಲ್ಲಾ, ಹೆಲಿಕಾನ
ಚಂದ್ರಾ – ಚಂದ್ರಾ....ಉಳಿದೆಲ್ಲದರ ಸಲುವಾಗಿ ನನ್ನನ್ನು ಏನೆಲ
ಕೊಲ್ಲುತ್ತಲಿವೆ ಎಂದು ನನಗೆ ಚೆನ್ನಾಗಿಯೇ ಗೊತ್ತು: ಈ ಕ್ಷಣಕ
ನನ್ನನ್ನು ಜೀವಂತವಾಗಿ ಇಡಬಲ್ಲವಾದವುಗಳನ್ನೆಲ್ಲಾ ನಾನು ಇನ
ಸಂಪೂರ್ಣವಾಗಿ ಬರಿದುಮಾಡಿಕೊಂಡುಬಿಟ್ಟೆಲ್ಲ. ಈ ಕಾರಣಕ
ಗಿಯೇ ನನಗೆ ಚಂದ್ರಾ ಬೇಕಾಗಿಬಿಟ್ಟಿರುವುದು ಕೂಡ. ನೀ
ಅವಳನ್ನು ನನಗಾಗಿ ದೊರಕಿಸಿಕೊಳ್ಳುವವರೆಗೂ ಹಿಂದಿರುಗ
ಬಾರದು - ನೋಡು....

ಹೆಲಿಕಾನ್ : ಹಾಗೆಯೇ ಆಗಲಿ—ನಾನು ಈಗ ನನ್ನ ಪಾಲಿನ ಕರ್ತ
ವನ್ನು ಮಾಡುವೆ : ನನಗೆ ಗೊತ್ತಾಗಿ ಹೋಗಿರುವ – ಹೇಳ
ಬೇಕಾಗಿ ಬಂದಿರುವ - ವಿಚಾರಗಳನ್ನು ಹೇಳಿಯೇ ಬಿಡುವೆ, ಕೇಳ
ನಿನ್ನ ವಿರುದ್ಧ ಒಂದು ಒಳಸಂಚು ನಡೆಯುತ್ತಿದೆ. ಚೆರಿಯಾ
ಅದರ ಕೇಂದ್ರ ನಾಯಕ, ನೀನು ತಿಳಿದುಕೊಳ್ಳಲೇಬೇಕಾಗಿರುವ ವ
ವಿಚಾರಗಳ ಬಗ್ಗೆ ಮಾಹಿತಿ ಕೊಡುವ ಈ ಫಲಕ ನನಗೆ ಹ
ದೊರಕಿದೆ. ನೋಡು—ನಾನು ಇದನ್ನು ಇಲ್ಲಿ – ನಿನ್ನ ವೀಕ್ಷ
ಗಾಗಿ – ಇಡುತ್ತಿದ್ದೇನೆ. (ಪೀಠ ಒಂದರ ಮೇಲೆ ಮೇಣದ ಬ
ಯೊಂದನ್ನು ಇಟ್ಟು ಹೊರಡುತ್ತಾನೆ.)

ಕ್ಯಾಲಿಗುಲ : ನೀನು ಎಲ್ಲಿಗೆ ಹೊರಟೆ, ಹೆಲಿಕಾನ್ ?

ಕ್ಯಾಲಿಗುಲ

ಕೆಲಿಕಾನ್ : (ಹೊಸಲಿನಿಂದ) ನಿನಗಾಗಿ ಚಂದ್ರನನ್ನು ತರುವಲ್ಲಿಗೆ....

(ಎದುರು ಬಾಗಿಲ ಕಡೆಯಿಂದ ಇಲಿ ಕೆರೆತದ ಶಬ್ದ ಕೇಳಿ ಬರುತ್ತದೆ. ಕ್ಯಾಲಿಗುಲ ಸುತ್ತ ಮುತ್ತ ಕಣ್ಣಾಡಿಸುತ್ತಾನೆ. ಶಬ್ದ ಬಂದ ಕಡೆಯಲ್ಲಿ ವೃದ್ಧ ಆಸ್ಥಾನಿಕ ಕಾಣಿಸಿಕೊಳ್ಳುತ್ತಾನೆ.)

ವೃದ್ಧ ಆಸ್ಥಾನಿಕ : (ದೈನ್ಯದಿಂದ) ನಾನು.... ...ಕಾಯಸ್, ನಾನು ಒಳಬರಬಹುದೆ?

ಕ್ಯಾಲಿಗುಲ : (ಅಸಹನೆಯಿಂದ) ಬಾ, ಒಳಗೆ ಬಾ (ದಿಟ್ಟಿಸಿ ನೋಡುತ್ತಾ) ತತ್ಪರಿಣಾಮವಾಗಿ, ನನ್ನ ಮುದ್ದೇ, ನೀನು ಈಗೊಮ್ಮೆ ವೀನಸ್‌ಳನ್ನು ನೋಡಲು ಬಂದಿದ್ದೀಯೆ?

ವೃದ್ಧ ಆಸ್ಥಾನಿಕ : ಅಲ್ಲ....ಅಲ್ಲ – ಅದಕ್ಕಾಗಿಯೇ ಎಂದೇನೂ ಅಲ್ಲ. ಉಶ್‌ಷ್! ಓಹ್–ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿರುವೆ, ಕಾಯಸ್! ನಾನು ನಾನು ಇಷ್ಟು ಮಾತ್ರ ಹೇಳಬಯಸುವೆ: ನಿನಗೇ ತಿಳಿದಂತೆ ನಾನು ನಿನ್ನಲ್ಲಿ ಬಹಳವಾದ ಶ್ರದ್ಧಾಭಕ್ತಿ ಇಟ್ಟಿರುವವನು – ನನಗೆ ಇರುವ ಒಂದೇ ಒಂದು ಬಯಕೆ ಎಂದರೆ ನನ್ನ ಉಳಿದ ದಿನಗಳನ್ನು ನಾನು ಶಾಂತವಾಗಿ ಕಳೆಯಬೇಕಾಗಿರುವುದು ಮಾತ್ರ.

ಕ್ಯಾಲಿಗುಲ : ಬೇಗ ಬೇಗ, ಮನುಷ್ಯ ಪ್ರಾಣಿ – ಏನನ್ನೆಲ್ಲಾ ನೀನು ಒದರಬೇಕಾಗಿದೆಯೋ ಅದನ್ನೆಲ್ಲಾ ಒಂದೇ ಉಸುರಿಗೆ ಒದರಿಬಿಡು!

ವೃದ್ಧ ಆಸ್ಥಾನಿಕ : ಅಲ್ಲ, ಅದು ...ಏನು ಎಂದರೆ...(ಅವಸರವಸರವಾಗಿ) ಅದು ತೀರ ತೀರ ಗಂಭೀರವಾದ ವಿಚಾರ ಎಂದು....ಹೇಳ....

ಕ್ಯಾಲಿಗುಲ : ಅಲ್ಲ—ಅದು ಗಂಭೀರವಾದ ವಿಚಾರ ಅಲ್ಲವೇ ಅಲ್ಲ.

ವೃದ್ಧ ಆಸ್ಥಾನಿಕ : ಆದರೆ, ಯಾವುದು ಗಂಭೀರವಾದ ವಿಚಾರವಲ್ಲ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ.

ಕ್ಯಾಲಿಗುಲ : ಆದರೆ, ಹೋಗಲಿ – ನಾವು ಯಾವ ವಿಚಾರವನ್ನು ಕುರಿತು ಮಾತನಾಡುತ್ತಿದ್ದೇವೆ, ನನ್ನ ಪ್ರೇಮಿ?

ವೃದ್ಧ ಆಸ್ಥಾನಿಕ : (ಭಯದಿಂದ ಸುತ್ತಲೂ ನೋಡಿ) ನಾನು ಹೇಳಬೇಕು ಎಂದುಕೊಂಡಿರುವುದು ...(ಅದರುತ್ತಾ, ತೆವಳಿ ನಡೆದಾಡಿ

ಸಾವರಿಸಿಕೊಳ್ಳುತ್ತಾ, ಕೊನೆಗೆ ಥಟ್ಟನೆ ಒದರುತ್ತಾನೆ :) ನಿನ್ನ ವಿರು
ವಾಗಿ ಒಳಸಂಚೊಂದು ನಡೆಯುತ್ತಾ ಇದೆ, ಕಾಯಸ್.

ಕ್ಯಾಲಿಗುಲ : ಅದೋ – ನೀನೇ, ನೀನೇ ನೋಡು! —ನಾನು ಮೊದ
ಹೇಳಿದಂತೆ ಈ ವಿಚಾರ ಕೂಡ ಗಂಭೀರವಾದ ವಿಚಾರ ಅಲ್ಲವೇ ಅ

ವೃದ್ಧ ಆಸ್ಥಾನಿಕ : ಆದರೆ, ಕಾಯಸ್, ಅವರು ನಿನ್ನನ್ನು ಕೊಲ್ಲ
ಹವಣಿಸುತ್ತಿದ್ದಾರೆ.

ಕ್ಯಾಲಿಗುಲ : (ಅವನ ಬಳಿ ಬಂದು ಅವನ ತೋಳುಗಳನ್ನು ಹಿಡಿ
ನಾನು ಏಕೆ ನಿನ್ನನ್ನು ನಂಬಲು ಆಗುತ್ತಿಲ್ಲವೆಂದು ನಿನಗೆ ಗೊತ್ತೇ

ವೃದ್ಧ ಆಸ್ಥಾನಿಕ : ತೋಳೊಂದನ್ನು ಮೇಲೆತ್ತಿ, ಪ್ರಮಾಣವಚನ ಪ
ವವನಂತೆ) ದೇವತೆಗಳ ಸಾಕ್ಷಿಯಾಗಿಯೂ, ಕಾಯಸ್, ಆ...

ಕ್ಯಾಲಿಗುಲ : (ಮೃದುವಾಗಿ ಹಾಗೂ ಧೃಢವಾಗಿ ಅವನನ್ನು ಹಿಂದಿಂದ
ನೂಕುತ್ತಾ) ಆದರಲ್ಲೂ ನೀನು ಆಣೆ ಇಡುವುದು ನನಗೆ ಸ್ವಲ್ಪ
ಇಷ್ಟವಿಲ್ಲ – ಆದರೆ ನನ್ನ ಮಾತನ್ನು ಕೇಳು: ನೀನು ಹೇಳುತ್ತಿ
ವುದೇ ಒಂದು ಪಕ್ಷ ಸತ್ಯ ಎಂದು ಇಟ್ಟುಕೋ, ಆಗ ನಾ
– ನಿನ್ನ ಸ್ನೇಹಿತರುಗಳಿಗೇ ನೀನು ದ್ರೋಹ ಬಗೆಯುತ್ತಿದ್ದಿಯೇ
ಎಂದು ತಾನೇ ನಿನ್ನನ್ನು ಪರಿಗಣಿಸಬೇಕಾಗುತ್ತದೆ?

ವೃದ್ಧ ಆಸ್ಥಾನಿಕ : (ಅಮಲೇರಿದವನಂತೆ) ಅಲ್ಲ....ಅಲ್ಲ ಕಾಯಸ
ನಾನು ನಿನ್ನಲ್ಲಿ ಇಟ್ಟಿರುವ ಅಗಾಧವಾದ ವಿಶ್ವಾಸವನ್ನು ಗಣ
ತೆಗೆದುಕೊಂಡುದೇ ಆದರೆ....

ಕ್ಯಾಲಿಗುಲ : (ಮೊದಲಿನ ಧ್ವನಿಯಲ್ಲೇ) ಮತ್ತೆ, ,ನಾನು ಅದನ್ನೆಲ
ಗಣನೆಗೆ ತೆಗೆದುಕೊಳ್ಳುವ ಹಾಗೆ ಇಲ್ಲವೇ ಇಲ್ಲ. ಈ ಬಗೆ
ವಂಚಕತನವನ್ನು ನಾನೆಷ್ಟು ಭಯಂಕರವಾಗಿ ದ್ವೇಷಿಸುತ್ತೇ
ಎಂದರೆ, ಅಂತಹ ವಂಚಕನನ್ನು ಮರಣದಂಡನೆಗೆ ಗುರಿಮಾಡ
ಚಪಲದಿಂದ ನನ್ನನ್ನು ನಾನು ಎಂದೂ ಅಂಕೆಯಲ್ಲಿ ಇಟ್ಟುಕೊಳ
ವುದು ಸಾಧ್ಯವೇ ಆಗುವುದಿಲ್ಲ. ಆದರೆ, ನೀನು ಎಂತಹ ಮನು
ನೆಂದು – ನನ್ನ ಸರ್ವಶ್ರೇಷ್ಠ ಸ್ನೇಹಿ ನೀನೇ ಎಂದು ನಾನು ಬ
ನಿನಗೆ ದೇಶದ್ರೋಹಿ ಎಂದು ಕರೆಸಿಕೊಳ್ಳುವ ಇಚ್ಛೆಯಾಗಲಿ ಅಥ

ಸಾವನ್ನು ಒಪ್ಪುವ ಬಯಕೆಯಾಗಲಿ ಇಲ್ಲವೇ ಇಲ್ಲವೆಂದು ನನಗೆ ಖಚಿತವಾಗಿ ಗೊತ್ತೂ ಇದೆ.

ವೃದ್ಧ ಆಸ್ಥಾನಿಕ: ಖಂಡಿತ ಇಲ್ಲ, ಕಾಯಸ್, ಖಂಡಿತವಾಗಿಯೂ ಇಲ್ಲವೇ ಇಲ್ಲ.

ಕ್ಯಾಲಿಗುಲ: ಆದ್ದರಿಂದ, ನೀನೇ ನೋಡುತ್ತಿರುವ ಹಾಗೆ, ನಿನ್ನನ್ನು ನಂಬಲು ನಾನು ನಿರಾಕರಿಸಿದ್ದೇ ಸರಿ. ನೀನು ಹೇಗೂ ನೀಚತನಕ್ಕೆ ಇಳಿಯುವವನು ಅಲ್ಲವೇ ಅಲ್ಲ, ಅಲ್ಲವೇ ?

ವೃದ್ಧ ಆಸ್ಥಾನಿಕ: ಓಹ್, ಅಲ್ಲ – ಖಂಡಿತ ಅಲ್ಲ.

ಕ್ಯಾಲಿಗುಲ: ಅಥವಾ ನಿನ್ನ ಸ್ನೇಹಿತರನ್ನು ನೀನು ವಂಚಿಸುವವನೂ ಅಲ್ಲ – ಅಲ್ಲವೇ ?

ವೃದ್ಧ ಆಸ್ಥಾನಿಕ: ಅದರ ಬಗ್ಗೆ ನಾನು ಏನನ್ನೇ ಆಗಲಿ ಹೇಳುವ ಅವಶ್ಯಕತೆಯೇ ಇಲ್ಲ, ಕಾಯಸ್.

ಕ್ಯಾಲಿಗುಲ: ಇದರಿಂದಾಗಿ ಯಾವ ಒಳಸಂಚೂ ಇಲ್ಲವೆಂದೂ ಖಚಿತ ವಾದ ಹಾಗೆ ಆಯಿತು–ನೀನು ಈಗಷ್ಟೇ ಹೇಳಿದುದು ಒಂದು ತಮಾಷೆ, ನಮ್ಮ ನಮ್ಮಲ್ಲೇ ಸಮಾಪ್ತಿಗೊಳ್ಳಬೇಕಾಗಿಬಿಟ್ಟ ಒಂದು ಕ್ಷುಲ್ಲಕವಾದ ತಮಾಷೆ – ಅಲ್ಲವೆ ?

ವೃದ್ಧ ಆಸ್ಥಾನಿಕ: (ದೈನ್ಯವಾಗಿ) ಹೌದು, ಹೌದು–ಅದು ಒಂದು ತಮಾಷೆ- ಕೇವಲ ಒಂದು ತಮಾಷೆ ಮಾತ್ರ ! !

ಕ್ಯಾಲಿಗುಲ: ಒಳ್ಳೆಯದು – ಆದ್ದರಿಂದ ನಮಗೆ ನಾವುಗಳು ಎಲ್ಲಿ ಇದ್ದೇವೆ ಎಂದು ಗೊತ್ತಾದ ಹಾಗೂ ಮತ್ತು ಯಾರಿಗೇ ಆಗಲಿ ನನ್ನನ್ನು ಕೊಲ್ಲುವ ಬಯಕೆ ಇಲ್ಲವೇ ಇಲ್ಲ ಎಂದ ಹಾಗೂ ಆಯಿತು :

ವೃದ್ಧ ಆಸ್ಥಾನಿಕ: ಯಾರಿಗೂ ಇಲ್ಲ .... ಅದು ನಿಜ....ಯಾರಿಗೂ ಇಲ್ಲವೇ ಇಲ್ಲ !

ಕ್ಯಾಲಿಗುಲ: (ದೀರ್ಘವಾದ ಉಸಿರೊಂದನ್ನು ಎಳೆದುಕೊಂಡು ಉದ್ಧಕ್ಕೂ ಲಿಖ್ಯಾಚಾರ ಹಾಕುತ್ತಾ ಮಾತನಾಡುತ್ತಾನೆ) ಹಾಗಾದಮೇಲೆ–ನನ್ನನ್ನು ನನ್ನ ಪಾಡಿಗೆ ಬಿಡು, ಮಧು ಹೃದಯಿ. ಗೌರವಾನ್ವಿತನಾದ ಮನುಷ್ಯ ಇಂದಿನ ಜಗತ್ತಿನಲ್ಲಿ ಅದೆಷ್ಟೊಂದು ಅಪರೂಪದ ಪ್ರಾಣಿ

ಯಾಗಿದ್ದಾನೆ ಎಂದರೆ ಅಂತಹವನನ್ನು ನನ್ನ ಎದುರೆದುರಿಗೇ ಇಟ್ಟು ಕೊಂಡು ನಾನು ಬಹಳ ಕಾಲ ನೋಡುತ್ತಾ ಇದ್ದುಬಿಡಲಾರೆ – ಅಂತಹ ಅಪೂರ್ವವಾದ ಅನುಭವವನ್ನೂ ಆಸ್ವಾದಿಸಲು ನಾನು ಒಬ್ಬಂಟಿಗನಾಗಿ ಉಳಿದೇತೀರಬೇಕಾಗಿ ಬಂದುಬಿಟ್ಟಿದೆ.

(ವೃದ್ಧ ಆಸ್ಥಾನಿಕ ಹೊರಗೆ ಹೋಗಿ ಬಿಡುತ್ತಾನೆ. ಸ್ವಲ್ಪ ಕಾಲದವರೆಗೆ ಕ್ಯಾಲಿಗುಲ ಮೇಣದ ಬಿಲ್ಲೆಯನ್ನೇ ಏಕದೇಕವಾದ ದೃಷ್ಟಿಯಲ್ಲಿ ನೋಡುತ್ತಾ ಇದ್ದು ಬಿಟ್ಟು, ಆ ನಂತರ ಅದನ್ನು ಕೈಗೆ ತೆಗೆದುಕೊಂಡು ತನ್ನಲ್ಲೇ ಓದಿ ಕೊಳ್ಳುತ್ತಾ, ದೀರ್ಘವಾದ ಉಸಿರೊಂದನ್ನು ಈಗೊಮ್ಮೆ ಎಳೆದುಕೊಳ್ಳುತ್ತಾನೆ. ಆಮೇಲೆ ಅರಮನೆಯ ಕಾವಲುಗಾರನಿಗೆ ಸನ್ನೆಯಲ್ಲಿ ಕರೆದು ಆಜ್ಞಾಪಿಸುತ್ತಾನೆ :)

ಚೆರಿಯಾನನ್ನು ನನ್ನ ಬಳಿಗೆ ಕರೆದು ತಾ.

(ಕಾವಲುಗಾರ ಹೊರಡುತ್ತಾನೆ.)

ನಿಲ್ಲು !

(ಕಾವಲುಗಾರ ನಿಲ್ಲುತ್ತಾನೆ.)

ಅವನೊಡನೆ ವಿನಯವಾಗಿ ನಡೆದುಕೊಳ್ಳಬೇಕು !

(ಕಾವಲುಗಾರ ಹೊರಟು ಹೋಗುತ್ತಾನೆ. ಕ್ಯಾಲಿಗುಲ ಸ್ವಲ್ಪ ಹೊತ್ತು ಕೊಠಡಿಯ ತುಂಬಾ ಶತಪಥ ಹಾಕಿ, ನಂತರ ತನ್ನ ಕನ್ನಡಿಯ ಬಳಿ ಬರುತ್ತಾನೆ :)

ಏಯ್ ಬಡ ಬೆಪ್ಪು ತಕ್ಕಡಿಯೇ, ನೀನು ಉದ್ದಕ್ಕೂ ತರ್ಕಬದ್ಧ ವಾಗಿಯೇ ಉಳಿದುಬಿಡಲು ತೀರ್ಮಾನಿಸಿ ಬಿಟ್ಟೆ, ಅಲ್ಲವೇ ? ತರ್ಕ –ಎಂದೆಂದಿಗೂ ತಾರ್ಕಿಕತೆ ! ಈಗ, ಮುಂದಿರುವ ಪ್ರಶ್ನೆ ಎಲ್ಲಾ– ಈ ತಾರ್ಕಿಕತೆ ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತದೆ ?- ಎನ್ನುವುದು! (ವ್ಯಂಗ್ಯವಾಗಿ) ಒಂದು ಪಕ್ಷ ಚಂದ್ರಾನನ್ನು ಇಲ್ಲಿಗೆ ಕರೆದು ತಂದೇ ಬಿಟ್ಟಿದ್ದರೆ, ಆಗ ಸಮಸ್ತವೂ ಆಮೂಲಾಗ್ರವಾಗಿ ಬದಲಾವಣೆಯಾಗಿ ಹೋಗಿಬಿಡುತ್ತಿದ್ದುವು-- ಇದಿಷ್ಟೇ ಇಷ್ಟು ಮಾತ್ರ ನನ್ನ ಮೂಲ

ಉದ್ದೇಶ—ಅಲ್ಲವೆ ? ಹಾಗೆ, ಆಮೂಲಾಗ್ರ ಬದಲಾವಣೆ ಆಗಿಯೇ ಬಿಟ್ಟಾಗ, ಅಸಾಧ್ಯತೆ ಸಾಧ್ಯತೆಯಾಗಿ ಮಾರ್ಪಟ್ಟುಹೋಗಿ,ಮಿಂಚು ಮಾಯುವಾಗುವಷ್ಟರಲ್ಲಿ ಮಹಾನ್ ಪರಿವರ್ತನೆ ಒಂದು ಸಂದು ಹೋಗಿ, ಇಡೀ ಜಗತ್ತಿಗೇ ದಿವ್ಯರೂಪ ಪ್ರಾಪ್ತವಾಗಿ ಬಿಡುತ್ತಿತ್ತು. ಅಲ್ಲ–ಈಗಲೂ ಹೆಲಿಕಾನ್ ಚಂದ್ರಾಳನ್ನು ಏಕೆ ಎಳೆದು ತಂದೇಬಿಡಬಾರದು ? ಪ್ರಾಯಶಃ, ಒಂದಲ್ಲ ಒಂದು ರಾತ್ರಿ, ಯಾವುದಾದರೂ ಸರೋವರದ ತೀರದಲ್ಲಿ ಜೊಂಡು ಮತ್ತು ನೀರಿನಿಂದಾಗಿ ಬಳುಕಾಡುವ, ಆಳಾತಿಆಳಗಳಿಂದ ಹೊರಕ್ಕೆ ಎಳೆದು ತಂದ, ನಿಸ್ತೇಜವಾದ ನೀರುಮೈಯಿನ ಮೀನಿನಂತೆ ನಿದ್ರಿಸುತ್ತಾ ಇರುವ ಚಂದ್ರಾಳನ್ನು, ಥಳಥಳಿಸುತ್ತಿರುವ ಬಲೆಯೊಂದನ್ನು ಬೀಸಿ ಹಿಡಿದು,ಆ ಬಲೆಯಲ್ಲೇ ಸುತ್ತಿ ಎಳೆದು ತಂದುಬಿಡಬಾರದೇಕೆ ? – ಏಕೆ ಅವಳನ್ನು ಎಳೆದು ತರಬಾರದು ? – ಕ್ಯಾಲಗುಲ, ಅವಳನ್ನೇಕೆ ಎಳೆದು ತಂದೇಬಿಡಬಾರದು ? (ಕೊಠಡಿಯನ್ನೆಲ್ಲಾ ಒಮ್ಮೆ ನೋಡುತ್ತಾ) ನನ್ನ ಸುತ್ತಮುತ್ತಲ ಜನಸ್ತೋಮ ದಿನ ಕಳೆದಂತೆಲ್ಲಾ ಕರಕರಗಿ ಹೋಗುತ್ತಿದೆ –ಏಕೆ ಹೀಗೆ ಎಂದೂ ನನಗೆ ಆಶ್ಚರ್ಯವಾಗುತ್ತಿದೆ ! (ಕುಂದಿದ ಧ್ವನಿಯಲ್ಲಿ ಕನ್ನಡಿಯನ್ನು ಕುರಿತು) ಬಹಳ ಬಹಳ ಜನ ಇನ್ನಿಲ್ಲವಾಗಿ ಹೋಗಿದ್ದಾರೆ; ತುಂಬಾ ತುಂಬಾ ಜನ ಸತ್ತೇಹೋಗಿದ್ದಾರೆ – ಇದರಿಂದಾಗಿ ಶೂನ್ಯ ಒಂದು ಏರ್ಪಟ್ಟು ಹೋಗಿದೆ .. ಇಲ್ಲ,ಚಂದ್ರಾ ನನಗೆ ದಕ್ಕಿಯೇ ಹೋದರೂ ನಾನು ಮಾತ್ರ ಒಮ್ಮೆ ತುಳಿದ ಹಾದಿಯನ್ನೇ ಮತ್ತೆ ತುಳಿಯಲಾರೆ. ಈಗ, ಸತ್ತುಹೋಗಿರುವವರನ್ನು ಸೂರ್ಯನೇ ಮೈದಡವಿ ಮತ್ತೆ ಜೀವಕೊಟ್ಟು ರೋಮಾಂಚನಗೊಳಿಸಬಲ್ಲನಾದರೂ – ಆಗಿಯೇ ಹೋದ ಕೊಲೆಗಳು ಮಾತ್ರ ಇನ್ನೆಂದೂ ಭೂಗತವಾಗಿ, ಹೋಗಿಬಿಡಲಾರವು—ಭೂಗತವಾಗಿ, ನಿಶ್ಶೇಶವಾಗಿ, ನಿರ್ನಾಮವಾಗಿ ಹೋಗಿಬಿಡಲಾರವು ! (ಕೋಪೋದ್ರಿಕ್ತನಾಗಿ) ತರ್ಕ ಕ್ಯಾಲಿಗುಲ – ತರ್ಕ, ಎಳೆದಲ್ಲೆಲ್ಲಾ, ಅದನ್ನು ಹಿಂಬಾಲಿಸಿ ಹೋಗಿಬಿಡು ; ಪರಮಾಧಿಕಾರವನ್ನು ಅದರ ಎಲ್ಲ ಉತ್ತುಂಗದೆತ್ತೆತ್ತರಕ್ಕೆ,ಛಲವನ್ನು ಅದರ ಸೀಮಾತೀತತೆಯ ಆಚೆಗೆ

ಎಳೆದು ಹೊಯ್ದು ಬಿಡು, ಏ ತಾರ್ಕಿಕತೆಯೇ–ಚೆಲ್ಲಾಪಿಲ್ಲಿಯಾಗಿ ತೀರ ಹಂಚಿ ಹರಡಿ ಕೇರಿತೂರಿ ಹೋಗಿಬಿಡು. ಆಹ್–ಇಡೀ ಜಗತ್ತಿನಲ್ಲೇ ಯಾವುದೇ ಮನುಷ್ಯ ತನ್ನ ವಿಧಿಯ ಅಜ್ಞಾತ ಒತ್ತಡ ಒಂದಕ್ಕೆ, ಸಂಪೂರ್ಣವಾಗಿ ತನ್ನನ್ನು ತಾನು ಅರ್ಪಿಸಕೊಳ್ಳದ ಹೊರತೂ ಆ ರಹಸ್ಯಶಕ್ತಿ ಪರಿಪೂರ್ಣವಾಗುವುದಿಲ್ಲವೆನ್ನುವ ನಿಗೂಢ ವಿಧಿ–ನನ್ನೊಬ್ಬನಿಗೆ ಮಾತ್ರವೇ ಗೊತ್ತು. ಇಲ್ಲ–ನಾನು ಬಂದ ಹಾದಿಯನ್ನು ಮತ್ತೆ ತುಳಿಯುವಂತೆಯೇ ಇಲ್ಲ: ನಾನು ಮುನ್ನು ಮುಂದೆ...ಇನ್ನೂ ಮುಂದೆಮುಂದೆಹೋಗುತ್ತ ಮಾತ್ರವೇಇರಬೇಕು —ಪರಮ ಪರಿಪೂರ್ಣತೆಯ ಪರಾಕಾಷ್ಠತೆಯವರೆಗೂ—ಸಾಗುತ್ತ ಮಾತ್ರ ಇರಲೇಬೇಕು....ಸಾಗುತ್ತ ಮಾತ್ರವೇ ಇರಬೇಕು....

(ಚೆರಿಯಾ ಪ್ರವೇಶಿಸುತ್ತಾನೆ. ಕ್ಯಾಲಿಗುಲ ತನ್ನ ಮೇಲಂಗಿಯನ್ನು ತನ್ನ ಸುತ್ತ ಬಿಗಿಯಾಗಿ ಹಿಡಿದು ಎಳೆದುಕೊಂಡು ಕುರ್ಚಿಯೊಂದಕ್ಕೆ ಕುಸಿದು ಬೀಳುತ್ತಾನೆ.)

ಚೆರಿಯಾ: ನನಗೆ ಕರೆ ಕಳಿಸಿದ್ದೀಯೆ, ಕಾಯಸ್?

ಕ್ಯಾಲಿಗುಲ: (ಜಿಗುಪ್ಸೆಯಿಂದ) ಹೌದು, ಚೆರಿಯಾ!

(ಸ್ವಲ್ಪ ಕಾಲದ ಮೌನ.)

ಚೆರಿಯಾ: ನನ್ನಲ್ಲಿ ಹೇಳಲೇಬೇಕಾದ ನಿರ್ದಿಷ್ಟವಾದ ವಿಚಾರವೇನಾದರೂ ಇದೆಯೆ?

ಕ್ಯಾಲಿಗುಲ: ಇಲ್ಲ, ಚೆರಿಯಾ.

(ಮತ್ತೆ ಸ್ವಲ್ಪಕಾಲ ಸ್ತಬ್ಧ.)

ಚೆರಿಯಾ: (ಸಿಡುಕಿನ ಛಾಯೆ ಹೊತ್ತು) ನಾನು ಈಗ ಇಲ್ಲಿರುವುದರ ಆವಶ್ಯಕತೆ ನಿನಗೆ ಇದೆ ಎಂದು ನೀನು ಖಂಡಿತವಾಗಿಯೂ ಬಲ್ಲೆ ಏನು?

ಕ್ಯಾಲಿಗುಲ: ಖಡಾಖಂಡಿತನಾಗಿಯೂ ಬಲ್ಲೆ. ಚೆರಿಯಾ, (ಮತ್ತೆ

ಮೌನಗೊಳ್ಳುತ್ತಾನೆ. ನಂತರ ಏನನ್ನೋ ನೆನೆಸಿಕೊಂಡವನಂತೆ) ನಾನು ನಿನ್ನೊಡನೆ ಸರಿಯಾಗಿ ನಡೆದುಕೊಳ್ಳಲಾಗದೇ ಹೋದುದಕ್ಕೆನನಗೆ ಖೇದವಾಗುತ್ತಿದೆ, ಚೆರಿಯಾ. ಕ್ಷಮಿಸು, ನಾನು ಇಷ್ಟುಕಾಲವೂ ನನ್ನ ಚಿಂತನೆಗಳ ಬೆನ್ನನ್ನು ಹತ್ತಿ ಹೋಗಿಬಿಟ್ಟಿದ್ದೆ; ಮತ್ತೆ....ನೀನು ಈಗ ಕುಳಿತುಕೋ – ನಾವೀಗ ಒಂದಿಷ್ಟು ಸ್ನೇಹಮಯವಾದ ಹರಟೆ ಹರಟೋಣ – ನನಗೆ ಈಗ ಒಂದಿಷ್ಟು ಬೌದ್ಧಿಕವಾದ ಸಂಭಾಷಣೆಯಲ್ಲಿ ತೊಡಗಿಬಿಡೋಣ ಎನ್ನಿಸುತ್ತಿದೆ....

(ಚೆರಿಯಾ ಕುಳಿತುಕೊಳ್ಳುತ್ತಾನೆ. ಮೊಟ್ಟಮೊದಲ ಬಾರಿಗೆ—ನಾಟಕ ಆರಂಭವಾದಾಗಲಿಂದ ಇಲ್ಲಿಗೆ — ಕ್ಯಾಲಿಗುಲ ತನ್ನ ಸಹಜ ಸ್ವಭಾವಗಳಲ್ಲಿ ಕಾಣಿಸಿಕೊಳ್ಳ ತೊಡಗುತ್ತಾನೆ :)

ಚೆರಿಯಾ, ಬಹಳ ಮಟ್ಟಿಗೆ ಒಂದೇ ರೀತಿಯ ಮನಃಪ್ರವೃತ್ತಿಮತ್ತು ಸಮ ಆತ್ಮಪ್ರತಿಷ್ಠೆಗಳಿರುವ ಇಬ್ಬರು ವ್ಯಕ್ತಿಗಳು ಪರಿಪೂರ್ಣವಾದ ಮುಕ್ತಮನಸ್ಸಿನಿಂದ ಪರಸ್ಪರ ಮಾತನಾಡಿಕೊಳ್ಳುವುದು—ಕಡೆಯ ಪಕ್ಷ ಅವರಿಬ್ಬರ ಜೀವಿತದ ಅವಧಿಯಲ್ಲಿ ಒಂದೇ ಒಂದು ಬಾರಿಯಾದರೂ ಸರಿಯೆ – ಸಾಧ್ಯವೆಂದು ನಿನಗೆ ಅನ್ನಿಸುತ್ತದೆಯೆ? ಮಾತುಗಳನ್ನು ಹಾಗೆಲ್ಲಾ ಆಡಬಹುದೇ ಆದರೆ – ಅವರುಗಳು ಪರಸ್ಪರರಲ್ಲಿ ತಮ್ಮ ತಮ್ಮ ಪ್ರಲೋಬನೆಗಳನ್ನು, ವೈಯಕ್ತಿಕ ಆಸೆಆಕಾಂಕ್ಷೆಗಳನ್ನು, ಯಾವೆಯಾವ ಸುಳ್ಳುಗಳಿಂದ ಜೀವಿಸುತ್ತಿರುತ್ತಾರೋ ಆ ಎಲ್ಲ ಸುಳ್ಳುಗಳನ್ನು ಹೊರಕ್ಕೆ ಎರಚಾಡಿ,ಪರಸ್ಪರರನ್ನು ಸಂಪೂರ್ಣವಾಗಿ ವಿವಸ್ತ್ರಗೊಳಿಸಿಕೊಳ್ಳಬಲ್ಲರೆ?

ಚೆರಿಯಾ : ಹೌದು, ಕಾಯಸ್–ಇದು ಸಾಧ್ಯವೆಂದು ನನಗೆ ಅನ್ನಿಸುತ್ತದೆ. ಆದರೆ, ಅದನ್ನು ದಕ್ಕಿಸಿಕೊಳ್ಳುವುದುಮಾತ್ರ ನಿನ್ನಿಂದ ಸಾಧ್ಯವೆಂದು ನನಗೆ ಅನ್ನಿಸುವುದೇ ಇಲ್ಲ.

ಕ್ಯಾಲಿಗುಲ : ನೀನು ಹೇಳುವುದು ಸರಿ – ನನ್ನ ಅಭಿಪ್ರಾಯವನ್ನು ನೀನು ಒಪ್ಪುವೆಯೋ ಇಲ್ಲವೋ ಎಂದು ತಿಳಿಯುವ ಬಯಕೆಯಾಗಿತ್ತು, ನನಗೆ, ಅಷ್ಟೇ : ಆದ್ದರಿಂದ, ನಾವುಗಳು ನಮ್ಮ ನಮ್ಮ

ಮುಖವಾಡಗಳನ್ನು ತೊಟ್ಟೇ, ನಮ್ಮ ನಮ್ಮ ಸುಳ್ಳುಗಳನ್ನು ಜಮ ಜಮಾಯಿಸಿ ಮಸೆಯುತ್ತಲೇ ಮುಂದೆ ಮುಂದೆ ಸಾಗುತ್ತಿರೋಣ: ಮುಖ್ಯ ಅವಯುವಗಳಿಗೆಲ್ಲಾ ಮೆತ್ತಿ ಕೊಟ್ಟು ಹೋರಾಡುವ ಕತ್ತಿವರಸೆಗಾರರಂತೆ ನಾವು ಮಾತನಾಡಿಬಿಡೋಣ. ಹೇಳು ಚೆರಿಯಾ, ನನ್ನನ್ನು ಕಂಡರೆ ಏಕೆ ನಿನಗೆ ಇಷ್ಟವೇ ಆಗುವುದಿಲ್ಲ?

ಚೆರಿಯಾ : ಏಕೆಂದರೆ, ಇಷ್ಟಪಡುವಂತಹದ್ದು ಏನೂ ನಿನ್ನಲ್ಲಿ ಇಲ್ಲ; ಇನ್ನೂ ಏಕೆಂದರೆ, ಅಂತಹ ಭಾವನೆಗಳನ್ನು ಆಜ್ಞೆಗಳಿಂದ ಯಾರೂ ಹೊಂದಲಾಗುವುದೇ ಇಲ್ಲ; ಮತ್ತೂ ಏಕೆಂದರೆ, ನಿನ್ನಲ್ಲಿ ಅರ್ಥ ಮಾಡಿಕೊಳ್ಳುವಂತಹದ್ದು ಇನ್ನು ಏನೇನೂ ಉಳಿದಿಲ್ಲ. ಕಾಯಸ್—ಯಾರೇ ಆಗಲಿ, ಸದಾ ತಾನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವ ತನ್ನದೇ ಗುಣಗಳನ್ನು ಆತನೇ ಮೆಚ್ಚಿಕೊಳ್ಳುವುದು ಕೂಡ ಸಾಧ್ಯವೇ ಆಗುವುದಿಲ್ಲ.

ಕ್ಯಾಲಿಗುಲ : ಆದರೆ, ನೀನು ಏಕೆ ನನ್ನನ್ನು ದ್ವೇಷಿಸುತ್ತೀಯೆ!

ಚೆರಿಯಾ : ಇಲ್ಲೇ,ಕಾಯಸ್, ನೀನು ನನ್ನನ್ನು ತಪ್ಪಾಗಿ ತಿಳಿದಿರುವುದು ಇಲ್ಲೇ-ನಾನು ನಿನ್ನನ್ನು ಏನೇನೂ ದ್ವೇಷಿಸುತ್ತಿಲ್ಲ: ಆದರೆ, ನಾನು ನಿನ್ನನ್ನು ಕೆಡುಕ ಮತ್ತು ಕ್ರೂರಿ ಅಲ್ಲದೆ ವ್ಯರ್ಥಾಭಿಮಾನಿ ಹಾಗೂ ಸ್ವಾರ್ಥಿ ಎಂದು ಪರಿಗಣಿಸಿದ್ದೇನೆ, ಅಷ್ಟೇ. ಆದರೂ, ನೀನು ಸುಖಿಯಲ್ಲವೆಂದು ನನಗೆ ಅನ್ನಿಸುತ್ತಿರುವುದರಿಂದ ನಾನು ನಿನ್ನನ್ನು ಎಂದೂ ದ್ವೇಷಿಸಲಾರೆ: ಹಾಗೆಯೇ, ನೀನು ಹೇಡಿಯಲ್ಲವಾದ್ದರಿಂದ ನಾನು ನಿನ್ನನ್ನು ತುಚ್ಛೀಕರಿಸಲಾರೆ.

ಕ್ಯಾಲಿಗುಲ : ಹಾಗಿದ್ದಮೇಲೆ, ನೀನು ನನ್ನನ್ನು ಏಕೆತಾನೆ ಕೊಲ್ಲ ಬಯಸುವೆ?

ಚೆರಿಯಾ : ಏಕೆ ಎಂದು ನಾನು ಆಗಲೇ ನಿನಗೆ ಹೇಳಿದ್ದೇನಲ್ಲ-ಏಕೆ ಎಂದರೆ ನೀನು ಕೆಡುಕನೂ ಹಾಗೂ ನಿತ್ಯ ಕಂಟಕನೂ ಎಂದು ನನ್ನಿಂದ ಪರಿಗಣಿಸಲ್ಪಟ್ಟಿರುವುದರಿಂದ ನನ್ನ ಬದುಕಿಗೆ ಭದ್ರತೆ ಇದೆ ಎಂದು ಅನ್ನಿಸಿಕೊಳ್ಳುವುದೇ ನನ್ನ ಬಯಕೆ ಹಾಗೂ ಅವಶ್ಯಕತೆ; ನನ್ನಂತೆಯೇ ಸಮಸ್ತರೂ: ಎಲ್ಲ ಜನರೂ ವಕ್ರಾತಿವಕ್ರವಾದ

ಅಸಂಗತ ಕಲ್ಪನೆ ಒಂದು ಯಾವುದೇ ಕ್ಷಣದಲ್ಲಾದರೂ ವಾಸ್ತವಿಕತೆಯಾಗಿಬಿಡುವುದನ್ನು ಹಾಗೂ ಹೃದಯಕ್ಕೇ ತಿವಿದ ಚಾಕುವಿನಂತೆ ಸದಾ ಚುಚ್ಚುವ ಅಸಂಬದ್ಧವಾದ ಜಗತ್ತಿನಲ್ಲಿ ವಾಸಿಸುವುದನ್ನು ಸದಾ ದ್ವೇಷಿಸುತ್ತಾರೆ: ಅವರ ಅನಿಸಿಕೆಯೇ ನನ್ನದೂ ಆಗಿದೆ; ತಿರುವು ಮುರುವಾದ ಜಗತ್ತಿನಲ್ಲಿ ವಾಸಿಸುವ ಇಚ್ಛೆ ನನ್ನದಲ್ಲವೇ ಅಲ್ಲ. ನಾನು ನಿಂತಿರುವುದಾದರೂ ಎಲ್ಲಿ ಎಂದು, ನಾನು ನಿಂತನೆಲೆ ಭದ್ರವಾಗಿದೆಯೇ ಅಥವಾ ಇಲ್ಲವೇ ಎಂದು ನಾನು ಮನವರಿಕೆ ಮಾಡಿಕೊಳ್ಳಲೇಬೇಕಾಗಿ ಬಂದುಬಿಟ್ಟಿದೆ.

ಕ್ಯಾಲಿಗುಲ : ಭದ್ರತೆ ಹಾಗೂ ತರ್ಕ ಒಟ್ಟೊಟ್ಟಿಗೇ ಇರಲಾರವು!

ಚೆರಿಯಾ : ಸತ್ಯಕ್ಕೂ ಸತ್ಯ—ನನ್ನ ಬಾಳಿನ ಯೋಜನೆ ತರ್ಕಬದ್ಧವಾಗಿ ಇಲ್ಲದೇ ಹೋಗಿರಬಹುದು; ಆದರೆ ಅದು ಆರೋಗ್ಯಕರವಾಗಿಯಾದರೂ ಇದೆಯಲ್ಲ?

ಕ್ಯಾಲಿಗುಲ : ಹ್ಞ—ಹೇಳುತ್ತಾ ಹೋಗಿಬಿಡು....

ಚೆರಿಯಾ : ಹಾಗೆ ಹೇಳುತ್ತಾ ಹೋಗಲು ಏನೇನೂ ಉಳಿದಿಲ್ಲ. ನಿನ್ನ ತಾರ್ಕಿಕತೆಗೆ ನಾನು ಹೊಣೆಯಲ್ಲ. ಮನುಷ್ಯನಾಗಿ ನಾನು ನಿರ್ವಹಿಸಲೇಬೇಕಾದ ಕರ್ತವ್ಯಗಳ ಬಗ್ಗೆ ನನಗೆ ನನ್ನದೇ ಆದ ದೃಷ್ಟಿಗಳಿವೆ. ಹಾಗೆಯೇ, ನಿನ್ನ ಪ್ರಜೆಗಳಲ್ಲಿನ ಬಹುಮಂದಿ ನನ್ನ ಅಭಿಪ್ರಾಯಗಳನ್ನೇ ಒಪ್ಪುವರೆಂದೂ ನನಗೆ ತಿಳಿದಿದೆ. ಅವರೆಲ್ಲರ ಉತ್ಕಟವಾದ ಅಭಿಲಾಷೆಗಳನ್ನು ನೀನು ಧ್ವಂಸಗೊಳಿಸಿದ್ದೀಯೆ—ಆದ್ದರಿಂದ, ನೀನು ಮರೆಯಾಗಿಯೇ ತೀರಬೇಕಾದುದು... ತೀರ ತೀರ ಸಹಜವಾಗಿ ಹೋಗಿಬಿಟ್ಟಿದೆ.

ಕ್ಯಾಲಿಗುಲ : ನಿನ್ನ ಮಾತು ಏನೆಂದು ನನಗೆ ತಿಳಿದುಹೋಯಿತು—ಮತ್ತದು ನ್ಯಾಯ ಸಮ್ಮತವಾಗಿಯೂ ಇದೆ. ನಾನಾಗಿಯೇ ಒಪ್ಪಿಕೊಳ್ಳುತ್ತಿದ್ದೇನೆ–ಬಹಳ ಜನರ ಪಾಲಿಗೆ ನಿನ್ನ ಮಾತಿನ ಹಿಂದಿರುವ ಬಯಕೆ ಅನಿವಾರ್ಯವಾಗಿ ಬಿಟ್ಟಿದೆ. ಆದರೆ ನೀನು ..., ನೀನು ಇನ್ನೂ ಹೆಚ್ಚು ನಿಖರವಾಗಿ ಅರಿತುಕೊಳ್ಳಬಲ್ಲೆ ಎಂದು ನಾನು ಯೋಚಿಸಬೇಕಾಗಿತ್ತು: ನೀನು ಬುದ್ಧಿ ಜೀವಿ; ಬುದ್ಧಿಜೀವಿಯಾದ

ವನ ಪಾಲಿಗೆ ಅದಕ್ಕೆ ತೆರಲೇಬೇಕಾದ ಬೆಲೆ ತೆತ್ತೇತೀರುವೆ ಅಥವಾ ಆದನ್ನು ಸಂಪೂರ್ಣವಾಗಿ ಕೈಬಿಡುವ ಅವಕಾಶಗಳಿರುತ್ತವೆ. ನೀನು ಏಕೆ ಒಂದು ಬಗೆಯ ಡೋಲಾಯಮಾನ ಸ್ಥಿತಿಯಲ್ಲಿ-ಆದಕ್ಕೆ ತೆರಲೇಬೇಕಾದ ಬೆಲೆ ತೆರಲಾಗಲಿ ಅಥವಾ ಅದನ್ನು ಸಂಪೂರ್ಣವಾಗಿ ಕೈ ಬಿಡಲಾಗಲಿ ಸಿದ್ಧವಿರದ ಸ್ಥಿತಿಯಲ್ಲಿ— ಇದ್ದು ಬಿಟ್ಟದ್ದೀಯೆ ?

ಚೆರಿಯಾ : ಏಕೆಂದರೆ ಬದುಕಬೇಕೆಂದೂ ಮತ್ತು ಸುಖವಾಗಿರಬೇಕೆಂದೂ ನಾನು ಬಯಸುತ್ತಿದ್ದೇನೆ : ಆದರೆ, ನನ್ನ ದೃಷ್ಟಿಯಲ್ಲಿ, ಅಸಂಬದ್ಧತೆ ಯನ್ನು ಅದರ ತಾರ್ಕಿಕ ತೀರ್ಮಾನಕ್ಕೆ ದಬ್ಬಿಬಿಡುವುದೇ ಆದರೆ, ಬದುಕಿರುವುದಾಗಲಿ ಅಥವಾ ಸುಖಜೀವನ ಸಾಗಿಸುವುದಾಗಲಿ ಸಾಧ್ಯವಾಗುವುದೇ ಇಲ್ಲ. ನೀನೇ ನೋಡುತ್ತಿರುವಂತೆ ನಾನು ತೀರ ಸಾಮಾನ್ಯನಾದ ಮನುಷ್ಯ : ನಿಜ-ನಾನು ಯಾರನ್ನು ಪ್ರೀತಿಸುತ್ತಾ ಇರುತ್ತೇನೋ, ಅವರ ಮತ್ತು ನನ್ನ ನಡುವಣ ಪ್ರೇಮಬಂಧನದಿಂದ ನಾನು ಮುಕ್ತನಾಗಲು ಅವರ ಸಾವನ್ನು ಬಯಸಿದ ಹಾಗೆಯೇ, ಯಾವ ಹೆಣ್ಣುಗಳ ಬೆನ್ನನ್ನು ಹತ್ತುವುದರಿಂದ ಕುಟುಂಬದ ಅಥವಾ ಸ್ನೇಹದ ಸಂಬಂಧಗಳು ನನ್ನನ್ನು ಬಂಧಿಸಲಾರವೋ ಅಂತಹ ಹೆಣ್ಣು ಗಳ ಬೆನ್ನನ್ನು ಹತ್ತಿದ ಕ್ಷಣಗಳು ನನ್ನ ಬಾಳಿನಲ್ಲಿ ಇರುವುದೂ ನಿಜ. ನೀನು ಪದೇಪದೇಹೇಳುವಂತೆ ತರ್ಕವೇ ಸರ್ವಸ್ವವೂಆಗಿಹೋಗಿದ್ದರೆ, ಆಗ ನಾನೂ ಕೊಲೆಗಾರನೋ ಅಥವಾ ಅವಿವಾಹಿತ ಹಾದರಗಳ್ಳನೋ ಆಗಿಹೋಗಿಬಿಡುತ್ತಿದ್ದೆ. ಆದರೆ, ಈ ಬಗೆಯ ಹಾದು ಹೋಗುವ ಭಾವನೆಗಳಿಗೆಲ್ಲಾ ಹೆಚ್ಚಿನ ಮಹತ್ವವಿಲ್ಲವೆಂದು ನಾನು ಪರಿಗಣಿ ಸುತ್ತೇನೆ; ಪ್ರತಿಯೊಬ್ಬರೂ ಈ ಬಗೆಯ ಕ್ಷಣಿಕವಾದ ಭಾವನೆಗಳನ್ನು ಮಾತ್ರವೇ ತೃಪ್ತಿಪಡಿಸಲು ಹೊರಟು ಬಿಟ್ಟುದೇ ಆದರೆ, ಈ ಜಗತ್ತಿ ನಲ್ಲಿ ನಾವು ವಾಸಮಾಡುವುದು ಅಸಾಧ್ಯವಾಗಿಬಿಡುತ್ತದೆ ಮತ್ತು ಸುಖಸಂತೋಷ ಕೂಡ ನಿಲುಕಲಾರದ ವಸ್ತುಗಳಾಗಿಬಿಡುತ್ತವೆ. ಎಲ್ಲಕ್ಕೂ ಮಿಗಿಲಾಗಿ ನಾನು ಈಗೊಮ್ಮೆ ನಿನಗೆ ಹೇಳುತ್ತಿದ್ದೇನೆ, ಇವುಗಳೇ ನನ್ನ ಬಾಳಿನಲ್ಲಿ ಅತಿ ಮುಖ್ಯವಾದ ವಿಚಾರಗಳಾಗಿಬಿಟ್ಟವೆ.

ಕ್ಯಾಲಿಗುಲ : ಹಾಗಾದಮೇಲೆ, ನೀನು ಕೆಲವು ಶ್ರೇಷ್ಠ ತತ್ವಗಳಲ್ಲಿ

ನಂಬಿಕೆ ಇಟ್ಟಿರುವವನು ಎಂದು ನಾನು ಅಂದುಕೊಳ್ಳುವೆ – ಆಗಬಹುದಲ್ಲ ?

ಚೆರಿಯಾ : ಖಂಡಿತವಾಗಿಯೂ ; ಕೆಲವು ಕೃತ್ಯಗಳಂತೂ – ನಾನು ಹಾಗೆ ಹೇಳಬಹುದಾದರೆ–ಉಳಿದೆಲ್ಲ ಕೃತ್ಯಗಳಿಗಿಂತಲೂ ಹೆಚ್ಚಿನ ಮನ್ನಣೆಗೆ ಪಾತ್ರವಾಗಿರುತ್ತವೆ.

ಕ್ಯಾಲಿಗುಲ : ಮತ್ತು ಎಲ್ಲವೂ ಒಂದೇ ಒಂದು ಅಡಿಪಾಯದ ಮೇಲೆ ನಿಂತಿವೆ ಎಂದೇ ನನ್ನ ನಂಬಿಕೆ.

ಚೆರಿಯಾ : ನನಗೆ ಅದು ಗೊತ್ತು, ಕಾಯಸ್–ಆದ್ದರಿಂದಲೇ ನಾನು ನಿನ್ನನ್ನು ದ್ವೇಷಿಸುವುದಿಲ್ಲ. ನಾನು ನಿನ್ನನ್ನು ಅರ್ಥಮಾಡಿಕೊಂಡಿದ್ದೇನೆ ಮತ್ತು ಒಂದು ವಿಚಾರದ ಮಟ್ಟಿಗಂತೂ ನಿನ್ನನ್ನು ಒಪ್ಪಿಕೊಂಡೂ ಬಿಟ್ಟಿದ್ದೇನೆ-ಆದರೂ, ನೀನೊಬ್ಬ ಎಲ್ಲದರ ವಿಧ್ವಂಸಕನಾದ್ದರಿಂದ ನೀನು ಮರೆಯಾಗಿಯೇ ತೀರಬೇಕು.

ಕ್ಯಾಲಿಗುಲ : ಸಾಕಷ್ಟು ನಿಜ ನಿನ್ನ ಮಾತು-ಆದರೆ, ನನಗೆ ನೀನು ಇದನ್ನೆಲ್ಲಾ ಹೇಳಿ ನಿನ್ನ ಜೀವಕ್ಕೆ ಅಪಾಯವನ್ನೇ ಏಕೆ ತಂದುಕೊಳ್ಳುತ್ತಾ ಇದ್ದೀಯೆ ?

ಚೆರಿಯಾ : ಏಕೆ ಎಂದರೆ, ನಾನು ಸತ್ತರೆ ನನ್ನ ಸ್ಥಳವನ್ನು ತುಂಬಲೆಂದೇ ಅನ್ಯರು ಇರುವುದರಿಂದ, ನನಗೆ ಸುಳ್ಳಾಡುವ ಇಚ್ಛೆ ಇಲ್ಲವೇ ಇಲ್ಲವಾದ್ದರಿಂದ ...

(ಸ್ವಲ್ಪಕಾಲ ಮೌನ)

ಕ್ಯಾಲಿಗುಲ : ಚೆರಿಯಾ ?

ಚೆರಿಯಾ : ಏನು ಕಾಯಸ್ ?

ಕ್ಯಾಲಿಗುಲ : ಸಮಚಿತ್ತವೃತ್ತಿಯ ಹಾಗೂ ಸಮ ಆತ್ಮಪ್ರತಿಷ್ಠೆಯ ಇಬ್ಬರು ವ್ಯಕ್ತಿಗಳು ತಮ್ಮ ಜೀವಮಾನದಲ್ಲಿ ಒಂದೇ ಒಂದು ಸಲದ ಮಟ್ಟಿಗಾದರೂ ತಮ್ಮಗಳ ಹೃದಯವನ್ನು ಪರಸ್ಪರ ಮುಂದೆ ಬಿಚ್ಚಿಕೊಳ್ಳಬಲ್ಲರೆಂದು ನಿನಗೆ ಅನ್ನಿಸುತ್ತದೆಯೇ ?

ಚೆರಿಯಾ : ಅದನ್ನೇ ನಾವಿಬ್ಬರೂ ಇಷ್ಟು ಹೊತ್ತೂ ಮಾಡುತ್ತಿದ್ದು

ದೆಂದು ನನ್ನ ನಂಬಿಕೆ, ಕಾಯಸ್.

ಕ್ಯಾಲಿಗುಲ : ನಿಜ ಚೆರಿಯಾ—ಆದರೆ ಅದು ನನ್ನಿಂದ ಸಾಧ್ಯವೇ ಇಲ್ಲವೆಂದು ನೀನು ಯೋಚಿಸುತ್ತಿದ್ದೆ ?

ಚೆರಿಯಾ : ನನ್ನಿಂದ ತಪ್ಪಾಗಿದೆ, ಕಾಯಸ್—ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ; ಮತ್ತು ನಿನ್ನನ್ನು ಅದಕ್ಕಾಗಿ ಅಭಿವಂದಿಸುತ್ತೇನೆ. ಅಲ್ಲದೆ, ನಿನ್ನ ತೀರ್ಪಿಗಾಗಿ ನಾನೀಗ ಕಾಯುತ್ತಲೂ ಇದ್ದೇನೆ.

ಕ್ಯಾಲಿಗುಲ : ನನ್ನ ತೀರ್ಪು ? ಆಹ್ – ನನಗೇ ಗೊತ್ತಿರಲಿಲ್ಲ. (ಮೇಲಂಗಿಯ ಒಳಗಡೆಯಿಂದ ಮೇಣದ ಬಿಲ್ಲೆಯನ್ನು ಹೊರತೆಗೆದು) ಇದು ಏನೆಂದು ನಿನಗೆ ಗೊತ್ತೇ, ಚೆರಿಯಾ ?

ಚೆರಿಯಾ : ಅದು ನಿನ್ನ ಬಳಿ ಇದೆ ಎಂದು ನನಗೆ ಗೊತ್ತಿತ್ತು.

ಕ್ಯಾಲಿಗುಲ : (ಉದ್ವೇಗದಿಂದ) ನನ್ನ ಬಳಿ ಇದು ಇದೆ ಎಂದು ನಿನಗೆ ಈ ಮೊದಲೇ ಗೊತ್ತಿತ್ತು ! ಹಾಗಾದ ಮೇಲೆ, ನಿನ್ನ ಮುಕ್ತ ಹೃದಯದ ಮಾತೆಲ್ಲಾ ನಿನ್ನ ನಾಟಕಾಭಿನಯದ ಒಂದು ತುಣುಕು ಮಾತ್ರ.ಅಂದಮೇಲೆ,ಕೊನೆಗೂ,ಇಬ್ಬರು ಮಿತ್ರರು ತಮ್ಮ ಹೃದಯವನ್ನು ಪರಸ್ಪರರ ಮುಂದೆ ತೋಡಿಕೊಳ್ಳಲು ಆಗಲೇ ಇಲ್ಲ.ಆಯಿತಾಯಿತು—ಇದು ಅಷ್ಟೊಂದು ದೊಡ್ಡ ವಿಚಾರವೇನೂ ಅಲ್ಲ. ನಾವು ಈಗ ಪ್ರಾಮಾಣಿಕತೆಯ ಆಟ ನಿಲ್ಲಿಸಿ, ನಮ್ಮ ಜೀವನ ಸಂಬಂಧಗಳನ್ನು ಹಳೆಯ ಅಸ್ಥಿಭಾರದ ಮೇಲೆಯೇ ನಿಲ್ಲಿಸಿಬಿಡೋಣ. ಆದರೆ,ಅದಕ್ಕೂ ಮೊದಲಿಗೆ ಕೇವಲ ಒಂದೇ ಒಂದು ಪ್ರಯತ್ನವನ್ನು ನೀನು ಮಾಡು ಎಂದು ನಾನು ಕೇಳಿಕೊಳ್ಳುತ್ತಿರುವೆ–ಅದೇನೆಂದರೆ ನನ್ನ ಚಂಚಲಚಿತ್ತ ಹಾಗೂ ಚಾತುರ್ಯಹೀನತೆಯನ್ನು ಇನ್ನೂ ಸ್ವಲ್ಪಕಾಲ ಸಹಿಸಿಕೋ. ಈಗ ಸರಿಯಾಗಿ ನನ್ನ ಮಾತನ್ನು ಕೇಳು —ಚೆರಿಯಾ, ಕೇವಲ ಈ ಫಲಕ ಮಾತ್ರ ನಿನ್ನ ವಿರುದ್ಧವಾಗಿ ದೊರೆತಿರುವ ಸಾಕ್ಷಿ.

ಚೆರಿಯಾ :ಕಾಯಸ್, ನನ್ನನ್ನು ನೀನು ಹೋಗಗೊಡುವುದು ಒಳ್ಳೆಯದು ನಿನ್ನ ಈ ಎಲ್ಲ ಕಪಿಚೇಷ್ಟೆಗಳಿಂದ ನನಗೆ ಜ್ವರಬಂದಿರುವುದು ಮಾತ್ರ

ವಲ್ಲದೆ ಸುಸ್ತೂ ಆಗಿದೆ. ಇವುಗಳೆಲ್ಲಾ ಏನೆಂದು ನನಗೆ ತುಂಬಾ ಚೆನ್ನಾಗಿ ಗೊತ್ತಿದೆಯಲ್ಲದೆ ನನಗೆ ಸಾಕಾಗಿ ಬೇರೆ ಹೋಗಿದೆ. ಇನ್ನಾದರೂ ನನಗೆ ಹೋಗಲು ಅವಕಾಶ ಕೊಡು.

ಕ್ಯಾಲಿಗುಲ : (ಅದೇ ತೀವ್ರ ಹಾಗೂ ಉತ್ಕಟ ಧ್ವನಿಯಲ್ಲಿ) ನೀನು ಹೋಗುವುದು ಸಾಧ್ಯವಿಲ್ಲ, ನಿಲ್ಲು; ಇರುವುದೆಲ್ಲಾ ಕೇವಲ ಈ ಫಲಕ ಒಂದೇ ಸಾಕ್ಷಿ ಎನ್ನುವುದು ನಿನಗೆ ಖಚಿತವಾಗಿ ಮನವರಿಕೆಯಾಗಿದೆಯೇ ?

ಚೆರಿಯಾ : ಸಾಕ್ಷಿ? – ನೀನು ಮನುಷ್ಯನನ್ನು ಸಾವಿಗೆ ದಬ್ಬಲು ಸಾಕ್ಷಿಯೊಂದನ್ನು ಕೇಳವವನೆಂದು ನನಗೆ ತಿಳಿದೇ ಇರಲಿಲ್ಲ !

ಕ್ಯಾಲಿಗುಲ : ಅದೇನೋ ನಿಜ – ಆದರೂ, ಒಮ್ಮೆಯಾದರೂ ನನ್ನನ್ನು ನಾನೇ ವಿರೋಧಿಸಿಕೊಳ್ಳುವ ಆಸೆ ನನಗೆ ! ಅದಕ್ಕಾಗಿ ಯಾರದೇ ಅಭ್ಯಂತರವೂ ಇರಲಾರದು. ಯಾವಾಗಲಾದರೂ ಒಮ್ಮೊಮ್ಮೆ ತನ್ನನ್ನು ತಾನೇ ವಿರೋಧಿಸಿಕೊಳ್ಳುವುದು ಎಷ್ಟು ಹಿತಕರವಾಗಿರುತ್ತದೆಯೋ ಅಷ್ಟೇ ವಿಶ್ರಾಂತಿಮಯವೂ ಆಗಿರುತ್ತದೆ. ಅಲ್ಲದೆ, ಚೆರಿಯಾ, ನನಗೆ ಈಗ ವಿಶ್ರಾಂತಿ ಬೇಕಾಗಿಹೋಗಿದೆ.

ಚೆರಿಯಾ : ನನಗೆ ಇವುಗಳೆಲ್ಲಾ ಅರ್ಥವೇ ಆಗುವುದಿಲ್ಲ, ಅಲ್ಲದೆ, ಮುಚ್ಚುಮರೆ ಇಲ್ಲದೆ ಮಾತನ್ನು ಆಡುವುದೇ ಆದರೆ, ಇಂತಹ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮವಾದ ಭೇದಪ್ರಭೇದಗಳೆಂದರೆ ನನಗೆ ಸೇರುವುದೂ ಇಲ್ಲ.

ಕ್ಯಾಲಿಗುಲ : ನನಗೆ ಗೊತ್ತು - ಚೆರಿಯಾ, ನನಗೆ ಗೊತ್ತು—ನೀನು ನನ್ನ ಹಾಗೆ ಅಲ್ಲವೇ ಅಲ್ಲನೆಂದೂ, ನೀನು ಮನಸ್ಸು ಮತ್ತು ಮೈ ಎರಡೂ ಗಟ್ಟಿಮುಟ್ಟಾಗಿರುವ ಸರ್ವೇ ಸಾಮಾನ್ಯನಾದ ಮನುಷ್ಯನೆಂದೂ ನನಗೆ ಗೊತ್ತು. ಆದ್ದರಿಂದ ಸಹಜವಾಗಿಯೇ ಮಹತ್ ಮತ್ತು ಬೃಹತ್ ಆದವುಗಳು ನಿನ್ನನ್ನು ಎಂದೂ ಕಾಡುವುದೇ ಇಲ್ಲ. (ಗಹಗಹಿಸಿ ನಗುತ್ತಾ) ನಿನ್ನ ಸಮಸ್ತ ಬಯಕೆಯೂ ಜೀವಿಸುತ್ತಾ ಇರುವುದರಲ್ಲಿ ಮತ್ತು ನೆಮ್ಮದಿಯಿಂದ ಕಾಲ ಕಳೆಯುವುದರಲ್ಲಿ ಪರ್ಯವಸಾನಗೊಂಡುಬಿಡುತ್ತವೆ, ಅಷ್ಟೆ ?

ಚೆರಿಯಾ : ಕಾಯಸ್, ಇಲ್ಲಿಗೇ ನಮ್ಮಗಳ ಮಾತನ್ನು ಸಾಕು ಮಾಡಿ

ಬಿಡೋಣವೆಂದು ನನಗೆ ಅನ್ನಿಸುತ್ತಿದೆ .... ನಾನು, ನಾನು ಈ
ಹೋಗಬಹುದೆ ?

ಕ್ಯಾಲಿಗುಲ : ಇನ್ನೂ ಸಾಧ್ಯವಿಲ್ಲ—ಬೇಸರಿಸುವುದಿಲ್ಲವಾದರೆ ಇನ್ನೂ ಸ್ವಲ್ಪ ಕಾಲ ತಾಳ್ಮೆಯಿಂದ ಇರಬೇಕಾಗುತ್ತದೆ. ಅಲ್ಲದೆ, ನಾನ ನಿನ್ನನ್ನು ಬಹಳ ಕಾಲ ಇಟ್ಟುಕೊಳ್ಳಲು ಸಿದ್ಧನಾಗಿಯೂ ಇಲ್ಲ. ನಿನ ಇದು–ಈ ಸಾಕ್ಷಿಯ ತುಣುಕು – ಕಾಣುತ್ತಿದೆಯಲ್ಲವೇ ? ಇದ ಪುರಾವೆ ಇಲ್ಲದೇ ನಾನು ನಿನ್ನನ್ನು ಸಾವಿಗೆ ತಳ್ಳುವುದು ನನ್ನಿಂ ಸಾಧ್ಯವೇ ಆಗುವುದಿಲ್ಲವೆಂದು ನಾನು ಅಂದುಕೊಳ್ಳ ಬಯಸುತ್ತೇನೆ ಅಷ್ಟೇ ನನ್ನ ಅಭಿಪ್ರಾಯ—ಅಭಿಪ್ರಾಯ ಹಾಗೂ ಭರವಸೆ ಹೋಗಲಿ–ನೋಡು, ಚಕ್ರವರ್ತಿಯ ಕೈಯಲ್ಲಿ ಈ ಪುರಾವೆ ಏನಾ ಬಲ್ಲುದೆಂದು ನೀನೇ ನೋಡುತ್ತಾ ಇರು ...

(ಕ್ಯಾಲಿಗುಲ ಆ ಫಲಕವನ್ನು ಪಂಜಿನ ಉರಿಗೆ ಹಿಡಿಯುತ್ತಾನೆ. ಚೆರಿಯ ಪಂಜಿನ ಸಮೀಪಕ್ಕೆ ಬರುತ್ತಾನೆ. ಪಂಜು ಇಬ್ಬರ ಮಧ್ಯೆ ಇದೆ–ಮೇಣದ ಫಲ ಉರಿಯಲ್ಲಿ ಕರಕರಗಿ ಹೋಗುತ್ತಾ ಇದೆ–)

ನೀನೇ ನೋಡು–ಓ, ಸಂಚುಗಾರ ! ಈ ಫಲಕ ಕರಗುತ್ತಾ ಇ –ಹಾಗೂ ಇದು ಕರಗಿದಂತೆಲ್ಲಾ ಮುಗ್ಧತೆಯ ನೋಟ ಒಂದು ನಿನ್ ಮುಖದ ಮೇಲೆ ತನಗೆ ತಾನೇ ಮೂಡುತ್ತಲೂ ಇದೆ. ಅದೆಷ್ಟೊಂದ ಸುಂದರವಾದ ಹಣೆ ನಿನ್ನದು, ಚೆರಿಯಾ ! ಅಲ್ಲದೆ, ಮುಗ್ಧಮಾನ ಆದೆಷ್ಟು ಅಪರೂಪದ ವಸ್ತುವೋ ಅಷ್ಟೇ ಸುಂದರವಾದ ದೃಶ್ ಕೂಡ ! ನನ್ನ ಸರ್ವಾಧಿಕಾರದ ಶಕ್ತಿಯನ್ನು ಮೆಚ್ಚಿಕೋ–ಮೊದಲ ಅಪರಾಧಿಯನ್ನು ಶಿಕ್ಷಿಸದೇ ದೇವತೆಗಳು ಕೂಡ ಮುಗ್ಧತೆಯನ್ನ ಮರಳಿ ಪಡೆಯಲಾರರು ; ಆದರೆ, ನಿನ್ನನ್ನು ದೋಷಮುಕ್ತನನ್ನಾ ಮಾಡಿ, ನಿನಗೆ ಹೊಸ ಬಾಳಿನ ಭರವಸೆಯ ದಾನಕೊಡಲ ನಿನ್ನ ಸಾರ್ವಭೌಮ, ಕೇವಲ ಪಂಜಿನ ಜ್ವಾಲೆಯನ್ನು ಮಾತ್ ಆಶ್ರಯಿಸುತ್ತಾನಲ್ಲ ! ಆದ್ದರಿಂದ, ಚೆರಿಯಾ, ನೀನು ಹೀಗೆಯೆ ಮುಂದೆ ಮುಂದೆ ಸಾಗುತ್ತಾ ಹೋಗಿಬಿಡು–ನಿನ್ನ ಬಾಯಿಂ

ನಾವೆಲ್ಲಾ ಕೇಳುತ್ತಿರುವ ಉದಾತ್ತ ತತ್ವಗಳನ್ನೇ-ಅವುಗಳು ನಿನ್ನನ್ನು ಎಲ್ಲಿಗೇ ಎಳೆದು ಹೊಯ್ದರೂ ಚಿಂತೆಯಿಲ್ಲ- ಹಿಂಬಾಲಿಸಿ ಬಿಡು. ಏತನ್ಮಧ್ಯೆ ನಿನ್ನ ಚಕ್ರವರ್ತಿ ತನ್ನ ಚಿತ್ತಸಮಾಧಿಗಾಗಿ ಕಾಯುತ್ತಾ ಇರುತ್ತಾನೆ : ಅದೇ ನಿನ್ನ ಸಾರ್ವಭೌಮ ಜೀವಿಸುವ ಮತ್ತು ಸುಖಿಸುವ ರೀತಿ ಹಾಗೂ ನೀತಿ....

(ಚೆರಿಯಾ ಮೂಕನಾಗಿ ಕ್ಯಾಲಿಗುಲನನ್ನೇ ದುರುದುರು ನೋಡ ತೊಡಗುತ್ತಾ ಇದ್ದು, ನಂತರ ಅಸ್ಪಷ್ಟವಾದ ಸನ್ನೆಗಳನ್ನು ಮಾಡಿ, ಅರ್ಥವಾದವನಂತೆ ಕಾಣಿಸಿಕೊಂಡು, ಮಾತನಾಡಲು ಬಾಯಿ ತೆರೆಯಲು ಪ್ರಯತ್ನಿಸಿ, ಇದ್ದಕ್ಕಿದ್ದಂತೆಯೇ ಸುಮ್ಮನೆ ನಿಧಾನವಾಗಿ ಹೊರಗೆ ಹೊರಟು ಹೋಗುತ್ತಾನೆ. ಕರಗುತ್ತಿರುವ ಫಲಕ ವನ್ನು ಹಾಗೆಯೇ ಉರಿಯಲ್ಲೇ ಕರಗುತ್ತಿರಲು ಬಿಟ್ಟು, ಹೊರಟು ಹೋಗುತ್ತಿರುವ ವ್ಯಕ್ತಿಯನ್ನೇ ಕ್ಯಾಲಿಗುಲ ಕದೇಕವಾಗಿ ನೋಡುತ್ತಾ ಕನ್ನಲ್ಲಿ ತಾನೇ ನಗುತ್ತಾ ಇದ್ದು ಬಿಡುತ್ತಾನೆ.)

— ತೆರೆ —

ಅಂಕ ನಾಲ್ಕು

(ಮಬ್ಬುಗತ್ತಲು. ಚೆರಿಯಾ ಮತ್ತು ಸಿಪಿಯೋರ ಪ್ರವೇಶ: ಚೆರಿಯಾ ಬಲಭಾಗಕ್ಕೆ ಹಾದು ಬಂದು, ಮತ್ತೇ ಎಡಭಾಗಕ್ಕೇ—ಸಿಪಿಯೋ ಇರುವ ಕಡೆಗೇ—ಹಿಂದಿರುಗಿಬಿಡುತ್ತಾನೆ.)

ಸಿಪಿಯೋ : (ಮನಸ್ಸಿಲ್ಲದ ಮನಸ್ಸಿನಿಂದ) ನಿನಗೆ ನನ್ನಿಂದ ಏನುತಾನೆ ಆಗಬೇಕಾಗಿದೆ?

ಚೆರಿಯಾ : ವ್ಯರ್ಥವಾಗಿ ಕಳೆದು ಬಿಡಲು ಸಮಯಇಲ್ಲ: ನಮ್ಮಗಳ ಮನಸ್ಸು ಏನೆಂದು ತಿಳಿಯಬೇಕಾಗಿದೆಯಲ್ಲದೆ, ನಾವುಗಳೆಲ್ಲಾ ದೀಕ್ಷಾಬದ್ಧರಾಗಿಯೇ ತೀರಬೇಕಾಗಿಬಂದುಬಿಟ್ಟದೆ.

ಸಿಪಿಯೋ : ನಾನು ದೀಕ್ಷಬದ್ಧನಾಗಿಲ್ಲ ಎಂದು ನಿನಗೆ ಹೇಳಿದವರು ಯಾರು?

ಚೆರಿಯಾ : ನೀನು ನಮ್ಮ ನಿನ್ನೆಯ ಸಭೆಗೆ ಬರಲೇ ಇಲ್ಲವಲ್ಲ?–

ಸಿಪಿಯೋ : (ಎಲ್ಲೆಲ್ಲೋ ನೋಡುತ್ತಾ) ಅದೇನೋ ನಿಜ, ಚೆರಿಯಾ!

ಚೆರಿಯಾ : ಸಿಪಿಯೋ, ನಾನು ನಿನಗೆ ಹಿರಿಯ; ಅಲ್ಲದೆ, ನಾನು ಯಾರಲ್ಲಿಯೂ ಸಹಾಯ ಬೇಡುವ ಅಭ್ಯಾಸವೇ ಇಲ್ಲದವನು ಬೇರೆ. ಹಾಗೆಂದು, ನಿನ್ನ ಅವಶ್ಯಕತೆ ಈಗ ಇಲ್ಲವೆನ್ನಲಾರೆ – ಈ ಕೊಲೆಯು

ಧರ್ಮಷಿತರಾಗಲು ಮಾತ್ರ ಪ್ರತಿಷ್ಠಿತರೇ ಬೇಕಾಗಿಬಿಟ್ಟಿದ್ದಾರೆ. ಈ ಎಲ್ಲರ ಗಾಯಗೊಂಡ ಜಂಬ ಮತ್ತು ತೇಜೋಭಂಗಗಳಿಂದಾದ ಭಯಗಳ ಮಧ್ಯೆ ಕೇವಲ ನಮ್ಮಿಬ್ಬರ ಮೂಲೋದ್ದೇಶಗಳು ಮಾತ್ರ ಯಾರಿಗೂ ಬೇಡವಾದವುಗಳೇ ಆಗಿಬಿಟ್ಟಿವೆ. ಹೇಗೂ, ನೀನು ನಮ್ಮಿಂದ ದೂರವಾಗಿಯೇ ಉಳಿದುಬಿಟ್ಟರೂ ನಿನ್ನ ನಿಲುವನ್ನು ಮೌನದ ಆಧಾರದ ಮೇಲೆಯೇ ನಾವು ನಿರ್ಣಯಿಸಿಬಿಡಬಹುದು –ಆದರೆ, ನನಗೆ ಬೇಕಾಗಿರುವುದು ಅದೆಲ್ಲ ಅಲ್ಲವೇ ಅಲ್ಲ : ನನಗೆ ಬೇಕಾಗಿರುವುದೆಲ್ಲಾ ನೀನೂ ನಮ್ಮೊಡನೆ ಒಬ್ಬನಾಗಿ ಇರುವುದು ಮಾತ್ರ....

ಸಿಪಿಯೋ : ನನಗೆ ಅರ್ಥವಾಯಿತು. ಆದರೆ....ಅದು ನನ್ನಿಂದ ಆಗ ಲಾರದು, ಓಹ್–ಸಾಧ್ಯವಾಗಲಾರದು ; ನೀನು ಬಯಸಿದಂತೆಲ್ಲಾ ಮಾಡುವುದು ನನ್ನಿಂದ ಸಾಧ್ಯವೇ ಆಗಲಾರದು.

ಚೆರಿಯಾ : ಹಾಗಾದಮೇಲೆ, ನೀನು ಅವನ ಪರವಾಗಿಯೇ ಇದ್ದಿಯೇ –ಅಲ್ಲವೆ ?

ಸಿಪಿಯೋ : ಇಲ್ಲ, ಇಲ್ಲ—ಹಾಗೆಂದು, ಅವನಿಗೆ ವಿರುದ್ಧವಾಗಿ ಇರುವುದೂ ನನ್ನಿಂದ ಸಾಧ್ಯವಾಗುವಂತಹದಲ್ಲ ! (ಮೌನಗೊಳ್ಳುತ್ತಾನೆ : ನಂತರ, ತಗ್ಗಿದ ಧ್ವನಿಯಲ್ಲಿ) ಹಾಗೂ ಒಮ್ಮೆ ನಾನು ಅವನನ್ನು ಕೊಂದೇಬಿಟ್ಟರೂ ನನ್ನ ಹೃದಯ ಮಾತ್ರ ಅವನ ಅಂತಃಪಕ್ಷ ಹೊತ್ತೇ ಉಳಿದುಬಿಡುತ್ತದೆ !

ಚೆರಿಯಾ : ನೀನು ಅವನನ್ನು ಇಷ್ಟೆಲ್ಲಾ ಪ್ರೀತಿಸುತ್ತಿದ್ದರೂ ಅವನು ಮಾತ್ರ ನಿನ್ನ ತಂದೆಯನ್ನೇ ಕೊಂದುಬಿಟ್ಟನಲ್ಲ ! ?

ಸಿಪಿಯೋ : ಹೌದು–ಈ ಎಲ್ಲ ಎಲ್ಲಾ ಆರಂಭವಾದುದು ಅಲ್ಲಿಂದಲೇ ; ಆದರೆ, ಈ ಎಲ್ಲ ಎಲ್ಲವೂ ಅಂತ್ಯವಾಗುವುದು ಅದರಲ್ಲೇ.

ಚೆರಿಯಾ : ನೀನು ಯಾವು ಯಾವುದನ್ನು ನಂಬುತ್ತಿಯೋ ಅವನ್ನೆಲ್ಲಾ ಅವನು ತಿರಸ್ಕರಿಸುತ್ತಾನೆ ; ನೀನು ಯಾವು ಯಾವುವನ್ನು ಪವಿತ್ರವೆಂದು ಪರಿಗಣಿಸುತ್ತೀಯೋ ಅದನ್ನೆಲ್ಲಾ ಅವನು ಧಿಃಖ್ಖಾರಿಸಿಯೇ ಧಿಃಖ್ಖರಿಸಿ ಬಿಡುತ್ತಾನೆ.

ಸಿಪಿಯೋ : ನನಗೆ ಆ ವಿಚಾರ ಗೊತ್ತು, ಚೆರಿಯಾ, ಆದರೂ, ನನ್ನ ಒಳಗಿನ ಯಾವುದೋ ಒಂದು ಅವನಿಗೆ ಮಾರು ಹೋಗಿ ಬಿಟ್ಟಿದೆ: ಒಂದೇ ಜ್ವಾಲೆ ನಮ್ಮ ಇಬ್ಬರ ಹೃದಯಗಳಲ್ಲೂ ಸಮಸಮನಾಗಿ ಪ್ರಜ್ವಲಿಸುತ್ತಲೇ ಇರುತ್ತದೆ.

ಚೆರಿಯಾ : ಮನುಷ್ಯ ತೀರ್ಮಾನ ಕೈಗೊಳ್ಳಲೇ ಬೇಕಾದಸಮಯಗಳು ಬಂದೇ ತೀರುತ್ತವೆ. ವೈಯಕ್ತಿಕವಾಗಿ ಹೇಳುವುದೇ ಆದರೆ, ಕ್ಯಾಲಿಗುಲನೊಡನೆ ಸಮಾನ ಸಂಬಂಧ ಇಟ್ಟುಕೊಂಡಿದ್ದಂತಹ ನನ್ನ ಎಲ್ಲ ಒಳಗನ್ನೂ ನಾನು ಸುಮ್ಮನೆ ತೆಪ್ಪಗಾಗಿಸಿಬಿಟ್ಟಿದ್ದೇನೆ.

ಸಿಪಿಯೋ : ಆದರೆ.. ನನ್ನಿಂದ, ನನ್ನಿಂದ ತೀರ್ಮಾನ ಕೈಗೊಳ್ಳುವುದು ಸಾಧ್ಯವಾಗುವುದೇ ಇಲ್ಲ. ನನಗೆ ನನ್ನದೇ ಆದ ಪ್ರತ್ಯೇಕ ದುಃಖ ಗಳಿವೆ ; ಆದರೂ, ನಾನು ಅವನ ದುಃಖಗಳೊಡನೆ ಕೂಡ ಪಾಲು ಗೊಂಡು ಬಿಡುತ್ತಿರುತ್ತೇನೆ; ಅವನ ನೋವುಗಳನ್ನು ನಾನು ಹಂಚಿಕೊಂಡೂ ಬಿಡುತ್ತಿರುತ್ತೇನೆ: ನನಗೆ ಅವನದೆಲ್ಲಾ ಅರ್ಥ ವಾಗಿಯೇ ಬಿಡುತ್ತಿದೆ—ಇದೇ ನನ್ನಲ್ಲಿರುವ ತೊಂದರೆ ಅಥವಾ ಸಮಸ್ಯೆ !

ಚೆರಿಯಾ : ಹಾಗಾದರೆ, ಅದೆಲ್ಲದರ ಅರ್ಥ ಇಷ್ಟೇ—ನೀನು ಅವನ ಪಕ್ಷ ಸೇರಲು ತೀರ್ಮಾನಿಸಿದ್ದೀಯೆ?

ಸಿಪಿಯೋ : (ಉದ್ವೇಗಗೊಂಡು) ಇಲ್ಲ, ಚೆರಿಯಾ, ಇಲ್ಲ — ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ—ನೀನು ಹಾಗೆಲ್ಲಾ ಯೋಚಿಸಬೇಡ. ನಾನು ಎಂದೂ, ಮತ್ತೆ ಇನ್ನೊಂದೂ ಯಾರ ಪಕ್ಷವನ್ನೂ ಸೇರಲಾರೆ.

ಚೆರಿಯಾ : (ಸಿಪಿಯೋ ಬಳಿಗೆ ಹೋಗಿ ವಾತ್ಸಲ್ಯಪೂರ್ಣ, ಧ್ವನಿಯಲ್ಲಿ) ನಿನಗೆ ಗೊತ್ತೋ ಏನೋ – ನಿನ್ನನ್ನು ಈಗ ನೀನು ಹೇಗಿದ್ದೀಯೋ ಆ ಸ್ಥಿತಿಗೆ ತಂದುದಕ್ಕಾಗಿ ನಾನು ಆವನನ್ನು ಮೊದಲಿಗಿಂತಲೂ ಅಧಿಕ ವಾಗಿ ದ್ವೇಷಿಸುತ್ತಿದ್ದೇನೆ.

ಸಿಪಿಯೋ : ಹೌದು – ಅವನು ನನಗೆ ಬದುಕಿನಿಂದ ಸಮಸ್ತವನ್ನೂ ನಿರೀಕ್ಷಿಸಲು ಕಲಿಸಿಕೊಟ್ಟುಬಿಟ್ಟಿದ್ದಾನೆ!

ಚೆರಿಯಾ : ಇಲ್ಲ – ಅವನು ನಿನಗೆ ನಿರಾಶೆಯನ್ನು ಮಾತ್ರ ಕಲಿಸಿ

ಕೊಟ್ಟಿದ್ದಾನೆ. ಬೆಳೆಯುವ ಹೃದಯದಲ್ಲಿ ನಿರಾಶಾಭಾವನೆಯನ್ನು ಬಿತ್ತಿ ಬೆಳೆಸಿದ್ದು, ಅವನು ಇವತ್ತಿನವರೆಗೆ ಎಸಗಿದ ಅಪರಾಧಗಳಲ್ಲೇ ಅತ್ಯಂತ ನೀಚವಾದುದು. ನಾನು ನಿನಗೆ ಭರವಸೆ ಪೂರ್ವಕವಾಗಿ ಹೇಳುವೆ–ಇದಿಷ್ಟೇ ಇಷ್ಟು ಪುರಾವೆ ಅವನನ್ನು ನಾವು ನಮ್ಮ ಕೈಗಳಿಂದಲೇ ಕೊಂದುಬಿಡಲು, ನನಗೆ ಬೇಕಾದ ಎಲ್ಲ ನ್ಯಾಯ ಸಮ್ಮತಿಯನ್ನೂ ದೊರಕಿಸಿಕೊಡುತ್ತದೆ. (ಅವನು ಬಾಗಿಲಿನ ಕಡೆಗೆ ಹೋಗುತ್ತಾನೆ.)

(ಹೆಲಿಕಾನ್ ಪ್ರವೇಶಿಸುತ್ತಾನೆ.)

ಹೆಲಿಕಾನ್ : ನಾನು ನಿನ್ನನ್ನೇ ಹುಡುಕಿಕೊಂಡು ಬೇಟೆಯಾಡುತ್ತಿದ್ದೆ– ಹಿರಿಯನೂ ಕಿರಿಯನೂ ಆದ ಚೆರಿಯಾ. ಕ್ಯಾಲಿಗುಲ ಈ ಸ್ಥಳದಲ್ಲಿ ಪುಟ್ಟ ಮೇಳ ಒಂದನ್ನು ತನ್ನ ಖಾಸಗೀ ಸ್ನೇಹಿತರ ಸಲುವಾಗಿ ಕರೆಯುತ್ತಿದ್ದಾನೆ. ಸಹಜವಾಗಿಯೇ, ಗೋಷ್ಠಿಯಲ್ಲಿ ನೀನು ಭಾಗ ವಹಿಸಬೇಕೆಂದು ಅವನು ನಿರೀಕ್ಷಿಸುತ್ತಿದ್ದಾನೆ.(ಸಿಪಿಯೋನಿಗೆ) ನೀನು, ನನ್ನ ಕಂದ, ನೀನು ಬರಬೇಕಾದ ಆವಶ್ಯಕತೆಯೇ ಇಲ್ಲ–ನೀನು ಎತ್ತಲಾದರೂ ದೂರ ದೂರ ಹೋಗಿಬಿಡಬಾರದೆ!

ಸಿಪಿಯೋ : (ಹೊರ ಹೋಗುತ್ತಾ, ಹಿಂದಿರುಗಿ ಚೆರಿಯಾನನ್ನೇ ನೋಡುತ್ತಾ) ಚೆರಿಯಾ.

ಚೆರಿಯಾ : (ಸೌಮ್ಯ ಹಾಗೂ ಕೋಮಲವಾಗಿ) ಏನು ಸಿಪಿಯೋ?

ಸಿಪಿಯೋ : ಅವನ ಮಾತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸು.

ಚೆರಿಯಾ : (ಅದೇ ಶಾಂತ ಹಾಗೂ ಗಂಭೀರ ಭಾವದಲ್ಲಿ) ಇಲ್ಲ – ಹಾಗೆ ಪ್ರಯತ್ನಿಸುವುದು ಸಾಧ್ಯವಿಲ್ಲ, ಸಿಪಿಯೋ.

(ಸಿಪಿಯೋ ಮತ್ತು ಹೆಲಿಕಾನ್ ನಿಷ್ಕ್ರಮಿಸುತ್ತಾರೆ. ರಂಗಪಾರ್ಶ್ವಗಳಲ್ಲಿ ಆಯುಧಗಳ ಚಕಮಕಿ. ಭೀತರಾಗಿರುವ ವೃದ್ಧ ಹಾಗೂ ಮೊದಲ ಆಸ್ಥಾನಿಕರನ್ನು ಮುಂದೆ ಬಿಟ್ಟುಕೊಂಡು ಯೋಧರಿಬ್ಬರು ಬಲರಂಗದಿಂದ ಪ್ರವೇಶಿಸುತ್ತಾರೆ.)

ಮೊದಲ ಆಸ್ಥಾನಿಕ : (ಧ್ವನಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ವ್ಯರ್ಥ

ಪ್ರಯತ್ನ ಮಾಡಿ, ಯೋಧನೊಬ್ಬನನ್ನು ಕುರಿತು :) ಆದರೆ .... ಆದರೆ, ರಾತ್ರಿಯ ಈ ಅವೇಳೆಯಲ್ಲಿ ನಮ್ಮಿಂದ ಅವನಿಗೆ ಆಗಬೇಕಾದುದಾದರೂ ಏನಿದೆಯೋ ?

ಯೋಧ : (ಬಲಬದಿಯ ಕುರ್ಚಿಯತ್ತ ಕೈತೋರಿಸಿ.) ಅಲ್ಲಿ ಕೂರು ಹೋಗು.

ಮೊದಲ ಆಸ್ಥಾನಿಕ : ಇದೆಲ್ಲ ಕೇವಲ ನಮ್ಮನ್ನು ಕೊಲ್ಲುವುದಕ್ಕಾಗಿಯೇ ಆದರೆ—ಉಳಿದವರನ್ನೆಲ್ಲಾ ಕೊಂದಂತೆ—ಈ ಎಲ್ಲ ಪೂರ್ವ ಪೀಠಿಕೆಗಳಾದರೂ ಏಕೆ ?

ಯೋಧ : ಸುಮ್ಮನೆ ಕುಕ್ಕರು ಬಡಿ-ಏಯ್ ಬೆರಕೆಯ ಮುದಿ ಪ್ರಾಣಿಯೇ.

ವೃದ್ಧ ಆಸ್ಥಾನಿಕ : ಅವನು ಹೇಳಿದಂತೆ ಕೇಳಿಬಿಡುವುದೇ ಒಳ್ಳೆಯದು —ಅವನ ಮಾತಿನಿಂದ ಅವನಿಗೆ ಏನೂ ಗೊತ್ತಿಲ್ಲವೆನ್ನುವುದು ಸ್ಪಷ್ಟವಾಗಿಯೇ ಇದೆಯಲ್ಲ.

ಯೋಧ : ಹೌದು, ಪ್ರಿಯತಮೆ, ಸುಸ್ಪಷ್ಟವಾಗಿಯೇ ಇದೆ. (ಯೋಧರಿಬ್ಬರು ನಿಷ್ಕ್ರಮಿತ್ತಾರೆ.)

ಮೊದಲ ಆಸ್ಥಾನಿಕ : ನಾವು ಆ ಕೂಡಲೇ ಕಾರ್ಯೋನ್ಮುಖರಾಗಿ ಹೋಗಬೇಕಾಗಿತ್ತು–ನಾನು ಉದ್ದಕ್ಕೂ ಹೇಳುತ್ತಲೇ ಬಂದೆ : ನಾವು ಈಗ ಹಿಂಸೆಯ ಕೋಣೆಯ ಕಡೆಗೆ ಮುಖ ಮಾಡಿ ಹೊರಟ್ಟಿದ್ದೇವೆ.

(ಮತ್ತೊಬ್ಬ ಯೋಧ ಚೆರಿಯಾನೊಡನೆ ಒಳಬಂದು ಚೆರಿಯಾನನ್ನು ಬಿಟ್ಟು, ಮತ್ತೆ ಹಿಂದಕ್ಕೇ ಹೋಗಿಬಿಡುತ್ತಾನೆ.)

ಚೆರಿಯಾ : (ಯಾವ ಭೀತಿಯೂ ಇಲ್ಲದೆ ಆರಾಮವಾಗಿ ಕುರ್ಚಿಯಲ್ಲಿ ಕೂರುತ್ತಾ.) ಇಲ್ಲಿ ಏನು ನಡಿಯುತ್ತಾ ಇದೆ ಎನ್ನುವುದರ ಬಗ್ಗೆ ಏನಾದರೂ ವಿವರ ಸಿಗಬಲ್ಲದೆ ?

ವೃದ್ಧ ಹಾಗೂ ಮೊದಲ ಆಸ್ಥಾನಿಕ : ಒಳಸಂಚನ್ನು ಅವನು ಈಗಾಗಲೇ ಪತ್ತೆಹಚ್ಚಿಬಿಟ್ಟಿದ್ದಾನೆ !

ಚೆರಿಯಾ : ಹೌದೇನು ? ಹಾಗಾದರೆ ....ಮುಂದೆ ಹೇಗೆ ?

ವೃದ್ಧ ಆಸ್ಥಾನಿಕ : (ತತ್ತರಿಸುತ್ತಾ) ಹಿಂಸೆಯ ಕೋಣೆಯೊಂದೇ

ನಮ್ಮೆಲ್ಲರ ಪಾಲಿಗೆ ಉಳಿದಿರುವುದು.

ಚೆರಿಯಸಾ : (ಈಗಲೂ ಅಚಲಿತನಾಗಿಯೆ ಉಳಿದು) ಒಂದು ಸಾರಿ ಕ್ಯಾಲಿಗುಲ ತಾನು ಮಾಡಿದ ಕಳ್ಳತನ ಒಂದನ್ನು ಇನ್ನೇನು ಸತ್ತೇ ಹೋಗುತ್ತಾನೆ ಎನ್ನುವಷ್ಟು ಶಿಕ್ಷೆ ಕೊಟ್ಟರೂ ಒಪ್ಪಿಕೊಳ್ಳದ ಗುಲಾಮನೊಬ್ಬನಿಗೆ ೮೧,೦೦೦ ಸೆಸ್‌ಟರ್‌ಗಳನ್ನು ಕೊಟ್ಟುದು ನನಗೆ ಇನ್ನೂ ನೆನಪಿದೆ.

ಮೊದಲ ಆಸ್ಥಾನಿಕ : ಅದಷ್ಟೇ ಅಷ್ಟು ನಮ್ಮ ಪಾಲಿಗೆ ಬೇಕುಬೇಡಾ ಅನ್ನುವಷ್ಟು ಸಮಾಧಾನ !

ಚೆರಿಯಸಾ : ಏನೇ ಇರಲಿ, ಅದು ಅವನು ಸಾಚಾ ಎದೆಗಾರಿಕೆಯನ್ನು ಮೆಚ್ಚಿಯೇ ಮೆಚ್ಚಿಕೊಳ್ಳುತ್ತಾನೆ ಎನ್ನುವುದನ್ನು ತೋರಿಸುತ್ತದೆ. ಆ ಅಪರಾಧಿ 'ಈ ೮೧,೦೦೦ ಸೆಸ್‌ಟರ್‌ಗಳು ಏಕೆ ? ' ಎಂದು ಕೇಳಿದಕ್ಕೆ ಕ್ಯಾಲಿಗುಲ, ' ಮತ್ತೆ ಏಕೆ ಈ ೮೦,೦೦೦ ಅಥವಾ ೭೯,೦೦೦ದ ಗೊಡವೆ ? ' ಎಂದೂ ಉತ್ತರಿಸಿಬಿಟ್ಟ – ಎಂದಮೇಲೆ ಇನ್ನೇನು ತಾನೆಬೇಕು ? (ವೃದ್ಧ ಆಸ್ಥಾನಿಕನಿಗೆ) ನೀನು ನಿನ್ನ ಹಲ್ಲುಗಳನ್ನು ಕಟಕಟನೆ ಕಡಿಯುವುದನ್ನು ನಿಲ್ಲಿಸಿ ಬಿಡಬಲ್ಲೆಯಾ ? – ಈ ಶಬ್ದವೆಂದರೆ ಸಾಕು ನನಗೆ ನಿರ್ದಿಷ್ಟವಾಗಿಯೂ ಇಷ್ಟವೇ ಆಗುವುದಿಲ್ಲ.

ವೃದ್ಧ ಆಸ್ಥಾನಿಕ : ನನ್ನ ವರ್ತನೆಯಿಂದಾಗಿ ನಾನು ಪಶ್ಚಾತ್ತಾಪ ಪಡುವಂತಾಗಿದೆ. ಆದರೂ–

ಮೊದಲ ಆಸ್ಥಾನಿಕ : ನಿನ್ನ ಹುಡುಗಾಟ ಸಾಕು ಬೇಕಾದಷ್ಟು ಆಯಿತು ! – ನಮ್ಮೆಲ್ಲರ ಬದುಕೂ ಅಪಾಯದಲ್ಲಿದೆ, ಜೋಪಾನ.

ಚೆರಿಯಸಾ : (ಶಾಂತನಾಗಿಯೇ) ನಿನಗೆ ಕ್ಯಾಲಿಗುಲನ ತುಂಬಾಪ್ರಿಯವಾದ ಹೇಳಿಕೆ ಏನೆಂದು ಗೊತ್ತೇ ?

ವೃದ್ಧ ಆಸ್ಥಾನಿಕ : (ಇನ್ನೇನು ಕಣ್ಣಲ್ಲಿ ನೀರು ಬೀಳಬೇಕು ಎನ್ನುವ ಸ್ಥಿತಿಯಲ್ಲಿ) ಗೊತ್ತು-ಅವನು ಮರಣದಂಡನಾಧಿಕಾರಿಗೆ, 'ಅವನನ್ನು ನಿಧನಿಧಾನವಾಗಿ-ಸಾಯುತ್ತಾ ಇರುವುದು ಎಂದರೆ ಏನೆಂದು ಅರಿವುಮಾಡಿಕೊಳ್ಳುವಂತೆ - ಕೊಲ್ಲುತ್ತಾ ಹೋಗಿಬಿಡಿ ! ' ಎಂದು ಪದೇಪದೇ ಹೇಳುತ್ತಲೇ ಇರುತ್ತಾನೆ.

ಚೆರಿಯಾ : ಅಲ್ಲ – ಅದಲ್ಲ ; ಅದಕ್ಕೂ ಒಳ್ಳೆಯ ಮಾತೊಂದಿದೆ : ಮರಣದಂಡನೆಯ ನಂತರ ಅವನು ಆಕಳಿಸಿ, ಅತೀವವಾದ ಗಂಭೀರ ಧ್ವನಿಯಲ್ಲಿ 'ನಾನು ಬಹಳ ಬಹಳವಾಗಿ ಮೆಚ್ಚುವ ವಿಚಾರವೆಂದರೆ ನನ್ನ ನಿಶ್ಚಲತೆ' ಎಂದು ಪ್ರತಿಬಾರಿಯೂ ಹೇಳಿಕೊಳ್ಳುತ್ತಲೇ ಇರುತ್ತಾನೆ.

ಮೊದಲ ಆಸ್ಥಾನಿಕ : ಕೇಳಿಸುತ್ತಾ ಇದೆಯೆ ?

(ಈ ವೇಳೆಗಾಗಲೇ ರಂಗದ ಹೊರಗಿನಿಂದ ಆಯುಧಗಳ ಘರ್ಷಣೆ ಕೇಳಿ ಬರಲು ಆರಂಭಿಸಿರುತ್ತದೆ.)

ಚೆರಿಯಾ : ಅವನ ಈ ಹೇಳಿಕೆ ಅವನ ಮನಃಸ್ಥಿತಿಯಲ್ಲಿರುವ ದೌರ್ಬಲ್ಯ ವನ್ನೇ ಹೊರಗೆಡಹುತ್ತದೆ.

ವೃದ್ಧ ಆಸ್ಥಾನಿಕ : ಈ ತಾತ್ವೀಕರಣ ಮಾಡುವ ಕೆಲಸವನ್ನು ದಯವಿಟ್ಟು ನಿಲ್ಲಿಸಿಬಿಡಬಲ್ಲೆಯಾ ? ನಾನು ನಿರ್ದಿಷ್ಟವಾಗಿ ಇಷ್ಟಪಡು ಲಾಗದೇ ಇರುವ ವಿಚಾರ ಎಂದರೆ ಇದೇ.

(ಗುಲಾಮನೊಬ್ಬ ಒಳಗೆ ಬಂದು ಪೀಠ ಒಂದರ ಮೇಲೆ ಚೂರಿಗಳ ಕಟ್ಟೊಂದನ್ನು ಇಡುತ್ತಾನೆ.)

ಚೆರಿಯಾ : (ಗುಲಾಮನನ್ನು ಗಮನಿಸದೇ) ತಾತ್ವೀಕರಣ ಮಾಡಿಬಿಡು ವುದು ? – ಅದನ್ನು ಹಾಗೆ ಕರೆಯುವುದು ನನ್ನಿಂದ ಸಾಧ್ಯವೇ ಆಗು ವುದಿಲ್ಲ. ಆದರೂ, ಆ ಕ್ಯಾಲಿಗುಲ ಯಾರೆಲ್ಲರ ಸಂಪರ್ಕಕ್ಕೆ ಬರಲಿ, ಅವರೆಲ್ಲರ ಮೇಲೆ ಬಿದ್ದೇ ತೀರುವ ಆತನ ಪ್ರಭಾವ ಅಸಾಧಾರಣ ಎನ್ನುವ ಮಾತನ್ನು ಅಲ್ಲಗಳೆಯಲು ಸಾಧ್ಯವಾಗುವುದೇ ಇಲ್ಲ. ಯಾರನ್ನೇ ಆಗಲಿ, ಅವನು ಯೋಚಿಸಿಯೇ ತೀರುವಂತೆ ಮಾಡಿಯೇ ಮಾಡಿಬಿಡುತ್ತಾನೆ. ಮಿದುಳನ್ನು ಚುರುಕುಗೊಳಿಸಲು ಬದುಕಿನ ಅಭದ್ರತೆಗಿಂತಲೂ ಮಿಗಿಲಾದುದು ಬೇರೊಂದು ಇಲ್ಲವೇ ಇಲ್ಲ. ಹೇಳುವುದೇ ಆದರೆ, ಈ ಕಾರಣಕ್ಕಾಗಿಯೇ ಅವನನ್ನು ಎಲ್ಲರೂ ಅಷ್ಟೊಂದು ದ್ವೇಷಿಸುವುದು.

ವೃದ್ಧ ಆಸ್ಥಾನಿಕ : (ನಡುಗುತ್ತಿರುವ ಬೆರಳಲ್ಲಿ ತೋರಿಸುತ್ತಾ) ನೋಡು!

ಚೆರಿಯಾ : (ಚೂರಿಗಳನ್ನು ನೋಡಿ, ಕೊಂಚವೇ ಕೊಂಚ ಬದಲಾದ ಧ್ವನಿಯಲ್ಲಿ.) ಪ್ರಾಯಶಃ, ಆಗ ನೀನು ಹೇಳಿದುದೇ ಸರಿ.

ಮೊದಲ ಆಸ್ಥಾನಿಕ : ಹೌದು, ಕಾಯುತ್ತಾ ಕುಳಿತು ಬಿಟ್ಟುದೇ ಈಗ ಆಗಿ ಹೋಗಿರುವ ತಪ್ಪು. ಒಮ್ಮೆಲೇ ನಾವು ಮಾಡಬೇಕಾಗಿದ್ದ ಕಾರ್ಯಭಾರವನ್ನೂ ಮಾಡಿ ಮುಗಿಸಿಬಿಡಬೇಕಾಗಿತ್ತು.

ಚೆರಿಯಾ : ನಾನು ಒಪ್ಪಿಕೊಳ್ಳುತ್ತೇನೆ – ಆದರೆ, ವಿವೇಕ ನಿಧಾನವಾಗಿ ಮೂಡುತ್ತಾ ಬಂದಿದೆಯಲ್ಲ!

ವೃದ್ಧ ಆಸ್ಥಾನಿಕ : ಆದರೂ ಇದು....ಇದು ಒಂದು ಭ್ರಮೆ. ನಾನು ಸಾಯಲಂತೂ ಸಿದ್ಧನಿಲ್ಲ.

(ವೃದ್ಧ ಮೇಲೆದ್ದು ಮೆಲ್ಲನೆ ಸರಿದು ಹೋಗಿಬಿಡಲು ಪ್ರಯತ್ನಿಸುತ್ತಾ ಇರುತ್ತಾನೆ. ಆಗ, ಇಬ್ಬರು ಸೈನಿಕರು ಕಾಣಿಸಿಕೊಂಡು, ಅವನ ಕಪಾಲಕ್ಕೆ ಬಿಗಿದು, ಅವನ ಪೀಠಕ್ಕೇ ಅವನನ್ನು ಎಳೆದು ತಂದು ದಬ್ಬಿ, ತಮ್ಮ ಸ್ಥಳಕ್ಕೆ ಹಿಂದಿರುಗುತ್ತಾರೆ. ಮೊದಲ ಆಸ್ಥಾನಿಕ ಕುಳಿತ ಪೀಠದಲ್ಲೇ ಮಿಸುಕಾಡಿ ಮುಲುಗುಟ್ಟುತ್ತಾನೆ. ಚೆರಿಯಾ ಕೇಳಿಸಲಾಗದ ಕೆಲವು ಶಬ್ದಗಳನ್ನು ಉಚ್ಚರಿಸುತ್ತಾನೆ. ಇದ್ದಕ್ಕಿದ್ದಂತೆಯೇ, ರಂಗದ ಹಿಂಬದಿಯ ತೆರೆಯ ಆಚೆಯಬದಿಯಿಂದ ಚಿತ್ರವಿಚಿತ್ರವಾದ ಸಂಗೀತ ಕೇಳಬರಲಾರಂಭಿಸುತ್ತದೆ: ಜೈಥರ್ ಮತ್ತು ತಾಳಗಳನ್ನು ಯದ್ವಾತದ್ವಾ ಮೀಟಿದ ಹಾಗೂ ಬಡಿದ ಸಂಗೀತಸುಧೆ! ಆಸ್ಥಾನಿಕರು ಪರಸ್ಪರರನ್ನು ಮೌನವಾಗಿ ದಿಟ್ಟಿಸಿ ಬೆಪ್ಪುನೋಟ ನೋಡಿಕೊಳ್ಳುತ್ತಾರೆ. ಹಿಂದಿನಿಂದ ಬೆಳಕು ಬಿದ್ದ ತೆರೆಯಮೇಲೆ ಛಾಯ ದೃಶ್ಯವಾಗಿ ಕ್ಯಾಲಿಗುಲ ಕಾಣಿಸಿಕೊಂಡು, ಅಸಂಬದ್ಧವಾದ ರೀತಿಯಲ್ಲಿ ನೃತ್ಯ ಮಾಡಿ, ಮತ್ತೆ ಥಟ್ಟನೆ ಮರೆಯಾಗಿಬಿಡುತ್ತಾನೆ. ನೃತ್ಯಮಾಡುವಾಗ ಆತ ಬ್ಯಾಲೆ ನರ್ತಕರ ಸ್ಕರ್ಟ್ ತೊಟ್ಟು, ತನ್ನ ಶಿರವನ್ನು ಹೂಮಾಲೆಗಳಿಂದ ಅಲಂಕರಿಸಿಕೊಂಡಿರುತ್ತಾನೆ. ಒಂದು ಕ್ಷಣದ ನಂತರ ಯೋಧನೊಬ್ಬ ಛಾಯಾದೃಶ್ಯದ ತೆರೆಯ ಮುಂದೆ ಬಂದು, 'ಸನ್ಮಾನ್ಯರೇ, ಕಾರ್ಯಕ್ರಮದ ಪರಿಸಮಾಪ್ತಿಯಾಯಿತು– ಧನ್ಯವಾದ' ಎಂದು ಒಂದು ಬಗೆಯ ರುದ್ರಗಾಂಭೀರ್ಯ ಹೊತ್ತು ಪ್ರಕಟಿಸುತ್ತಾನೆ. ಈ ಮಧ್ಯೆ ಕೆಸೋನಿಯಾ ನಿಶ್ಶಬ್ದವಾಗಿ

ಬಂದು ಛಾಯ ದೃಶ್ಯವನ್ನೂ ವೀಕ್ಷಿಸುತ್ತಿದ್ದ ಆಸ್ಥಾನಿಕರ ಹಿಂದೆ ನಿಂತು ಬಿಟ್ಟಿರುತ್ತಾಳೆ. ಅವಳು ತೀರ ತೀರ ಸಾಧಾರಣ ಧ್ವನಿಯಲ್ಲೇ ಮಾತನಾಡಿದರೂ ಅವಳ ಧ್ವನಿಯನ್ನು ಕೇಳಿ ಅವರೆಲ್ಲಾ ಬೆಚ್ಚಿ ಸಾವರಿಸಿಕೊಳ್ಳುತ್ತಾರೆ.)

ಕೆಸೋನಿಯಾ : ಇಲ್ಲಿನವರೆಗೂ ರಾಜ್ಯದ ಆಗುಹೋಗುಗಳ ಬಗ್ಗೆ ನಿಮಗೆಲ್ಲಾ ಕೇವಲ ಕಟ್ಟಾಜ್ಞೆಗಳನ್ನು ಮಾತ್ರ ಕೊಡುತ್ತಿದ್ದ ಕ್ಯಾಲಿಗುಲ, ಈ ದಿನ ಅವನೊಡನೆ ನೀವುಗಳು ಕಲಾತ್ಮಕ ಭಾವನೆಯೊಂದನ್ನು ಹಂಚಿಕೊಳ್ಳಲು ಅವನು ನಿಮ್ಮನ್ನು ಆಹ್ವಾನಿಸಿರುವುದನ್ನು, ನಾನು ನಿಮಗೆಲ್ಲಾ ತಿಳಿಸಿ ಬಿಡಲು ನನಗೆ ಅಪ್ಪಣೆ ಕೊಟ್ಟಿದ್ದಾನೆ. (ಸ್ವಲ್ಪ ಕಾಲ ಮೌನ, ನಂತರ ಮತ್ತೆ ಮಾತನ್ನು ಮುಂದುವರೆಸುತ್ತಾಳೆ :) ನಾನು ಹೇಳಿಬಿಡಬಹುದೇ ಆದರೆ, ಅವನು ಮಾತನ್ನು ಮುಂದುವರೆಸಿ, ಅವನೊಡನೆ ಕಲಾತ್ಮಕ ಭಾವನೆಗಳನ್ನು ಹಂಚಿಕೊಳ್ಳದೇ ಹೋದವರ ತಲೆಯನ್ನು ಕಡಿಯುವುದಾಗಿಯೂ ಹೇಳಿಕೆಯನ್ನು ಕೊಟ್ಟುಬಿಟ್ಟಿದ್ದಾನೆ! (ಎಲ್ಲರೂ ಥಟ್ಟನೆ ಮೌನವಾಗಿ ಬಿಡುತ್ತಾರೆ.) ನಿಮ್ಮನ್ನು ವತ್ತಾಯಿಸುತ್ತಿರುವುದಕ್ಕಾಗಿ ಕ್ಷಮೆಯಾಚಿಸುತ್ತೇನೆ – ಕ್ಯಾಲಿಗುಲನ ಆ ನೃತ್ಯ ಸುಂದರವಾಗಿತ್ತೇ ಹೇಗೆ ಎಂದು ನಾನು ಕೇಳಿಯೇ ತೀರಬೇಕಾಗಿ ಬಂದುಬಿಟ್ಟಿದೆ.

ಮೊದಲ ಆಸ್ಥಾನಿಕ : (ಸ್ವಲ್ಪ ಕಾಲದ ಹಿಂಜರಿತದ ನಂತರ) ಹೌದು, ಹೌದು ಕೆಸೋನಿಯಾ—ಅದು ಸುಂದರವಾಗಿತ್ತು.

ವೃದ್ಧ ಆಸ್ಥಾನಿಕ : (ತಡೆಬಡೆ ಇಲ್ಲದೆ) ಮನೋಹರ! ಮನೋಹರವಾಗಿತ್ತು!

ಕೆಸೋನಿಯಾ : ಮತ್ತೆ, ಅದು ನಿನಗೆ ಹೇಗೆ ಅನ್ನಿಸಿತು, ಚೆರಿಯಾ?

ಚೆರಿಯಾ : (ಥಂಡಿ ಬಡಿದಂತಾಗಿ) ಅದು....ಅದು ಬಹಳ ಶ್ರೇಷ್ಠವಾದ ಕಲೆ.

ಕೆಸೋನಿಯಾ : ಒಳ್ಳೆಯದು—ನಾನು ಈಗ ನಿಮ್ಮ ನಿಮ್ಮ ಕಲಾತ್ಮಕ ಭಾವನೆಗಳನ್ನು ಕ್ಯಾಲಿಗುಲನಿಗೆ ವಿವರಣಾತ್ಮಕವಾಗಿ ಹೇಳಿಬಿಡಬಹುದು. (ನಿಷ್ಕ್ರಮಿಸುತ್ತಾಳೆ.)

ಚೆರಿಯಾ : ನಾವು ಅತಿ ತ್ವರೆಯಿಂದ ಕಾರ್ಯೋನ್ಮುಖರಾಗಿಯೇ ತೀರ

ಬೇಕೀಗ : ನೀವಿಬ್ಬರೂ ಇಲ್ಲೇ ನಿಲ್ಲಿ—ರಾತ್ರಿ ತೀರುವಷ್ಟರಲ್ಲಿ ನಮ್ಮ ಸಂಖ್ಯೆ ನೂರಕ್ಕೆ ಏರಿರುತ್ತದೆ. (ನಿಷ್ಕ್ರಮಿಸುತ್ತಾನೆ.)

ವೃದ್ಧ ಆಸ್ಥಾನಿಕ : ಬೇಡ, ನಾವು ನಿಲ್ಲುವುದು ಬೇಡ. ನೀನು ಇಲ್ಲೇ ನಿಲ್ಲು—ಬದಲಿಗೆ ನಾನು ಹೋಗುತ್ತೇನೆ. (ಗಾಳಿಯನ್ನು ಮೂಸಿ ನೋಡಿ) ಅಲ್ಲಿ ಸಾವಿನ ವಾಸನೆ ಬೇರೆ ಬಡಿಯುತ್ತಾ ಇದೆ.

ಮೊದಲ ಆಸ್ಥಾನಿಕ : ಸುಳ್ಳಿನ ವಾಸನೆ ಕೂಡ ಬಡಿಯುತ್ತಾ ಇದೆ. (ಖಿನ್ನಮನಸ್ಕನಾಗಿ) ನಾನು ನರ್ತನ ಸುಂದರವಾಗಿತ್ತು ಎಂದು ಬೇರೆ ಹೇಳಿಬಿಟ್ಟೆನಲ್ಲ !

ವೃದ್ಧ ಆಸ್ಥಾನಿಕ : (ಸಮಾಧಾನಮಾಡುತ್ತಾ) ಅದು ಸುಂದರವಾಗಿಯೇ ಇತ್ತಲ್ಲ—ತನ್ನದೇ ಆದ ರೀತಿಯಲ್ಲಿ ; ಬಹಳ ಸ್ವಂತಿಕೆಯದಾಗಿ ಬೇರೆ ಇತ್ತು.

(ಕೆಲವು ಆಸ್ಥಾನಿಕರು ಮತ್ತು ಪರಮ ವೀರರು ಆತುರಾತುರವಾಗಿ ಪ್ರವೇಶಿಸುತ್ತಾರೆ.)

ಎರಡನೆ ಆಸ್ಥಾನಿಕ : ಏನು ಏನೆಲ್ಲಾ ನಡೆದು ಹೋಗುತ್ತಾ ಇದೆ—ಎಂದು ಏನಾದರೂ ನಿಮಗೆ ಗೊತ್ತೆ ? ಸಾರ್ವಭೌಮ ನಮ್ಮನ್ನು ಇಲ್ಲಿಗೆ ಬಂದು ಇರಲು ಆಜ್ಞಾಪಿಸಿಬಿಟ್ಟಿದ್ದಾನೆ !

ವೃದ್ಧ ಆಸ್ಥಾನಿಕ : (ಮೈಮರೆತು) ನೃತ್ಯದ ಸಲುವಾಗಿ-ಇದ್ದರೂ ಇರಬಹುದು.

ಎರಡನೆ ಆಸ್ಥಾನಿಕ : ಯಾವ....ಎಂತಹ....ನೃತ್ಯ ?

ವೃದ್ಧ ಆಸ್ಥಾನಿಕ : ನಾನು ಅಂದದ್ದು...ಅಂದದ್ದು...... ಕಲಾತ್ಮಕ ಭಾವನೆಯ ವಿಚಾರ...

ಮೂರನೆ ಆಸ್ಥಾನಿಕ : ಕ್ಯಾಲಿಗುಲನಿಗೆ ತುಂಬಾ ಖಾಯಿಲೆಯಾಗಿದೆ ಎಂದು ನನಗೆ ಈಗ ಸುದ್ದಿ ಬಂದಿದೆ.

ಮೊದಲ ಆಸ್ಥಾನಿಕ : ನಿಜ....ಅವನು ಖಾಯಿಲೆಯ ಮನುಷ್ಯನೇ—ಅದು ನಿಜ....

ಮೂರನೆ ಆಸ್ಥಾನಿಕ : ಅವನು ನರಳುತ್ತಿರುವುದಾದರೂ ಯಾವ

ಖಾಯಿಲೆಯಿಂದಲೋ? (ಹರ್ಷದ ಭರದಲ್ಲಿ) ದೇವರಾಣೆಗೂ ಅವನು ಸತ್ತೇ ಹೋಗುವಂತೆ ಆಗಿದ್ದಾನೆ ಏನು ?

ಮೊದಲ ಆಸ್ಥಾನಿಕ: ನನಗೇನೋ ಅನುಮಾನ: ಅವನ ರೋಗ ವೇನೋ ಮರಣಾಂತಕ, ನಿಜ—ಆದರೆ, ಕೇವಲ ಅನ್ಯರಿಗೆ ಮಾತ್ರ.

ವೃದ್ಧ ಆಸ್ಥಾನಿಕ: ಆ ಮಾತನ್ನು ಹೇಳುವ ರೀತಿಗಳಲ್ಲಿ ಇದೂ ಒಂದು ಎಂದು ಹೇಳಬಹುದು.

ಎರಡನೆ ಆಸ್ಥಾನಿಕ: ಆ ಮಾತು ಏನೋ ಸಾಕಷ್ಟು ಸರಿ– ಆದರೆ, ನಮಗೇ ಹೆಚ್ಚು ಪ್ರಯೋಜನವಾಗಬಲ್ಲಂತಹ, ಅಲ್ಲದೇ, ಅಷ್ಟೇನೂ ಗಂಭೀರವಲ್ಲದ ಖಾಯಿಲೆ ಒಂದು ಅವನಿಗೆ ಬಂದಿರುವುದೇ ಆದರೆ–?

ಮೊದಲ ಆಸ್ಥಾನಿಕ: ಅಲ್ಲ—ಅವನಿಗೆ ಬಡಿದಿರುವ ರೋಗ ಇದೆ ಯಲ್ಲ ಅದು ಉಳಿದೆಲ್ಲ ರೋಗಗಳನ್ನು ಮಟ್ಟಹಾಕಿ ಬಿಡುತ್ತದೆ.

(ನಿಷ್ಕ್ರಮಿಸುತ್ತಾನೆ)

(ಕೆಸೋನಿಯಾ ಪ್ರವೇಶಿಸುತ್ತಾಳೆ. ಸ್ವಲ್ಪಕಾಲ ಎಲ್ಲ ಸ್ತಬ್ಧ.)

ಕೆಸೋನಿಯಾ: (ಮಾಮೂಲೀ ಧ್ವನಿಯಲ್ಲಿ) ನಿಮಗೆ ತಿಳಿಯುವ ಕುತೂಹಲ ಇರುವುದೇ ಆದರೆ, ಕ್ಯಾಲಿಗುಲನಿಗೆ ಉದರ ರೋಗ ಬಂದುಬಿಟ್ಟಿದೆ. ಈಗಷ್ಟೆ ಅವನು ರಕ್ತರಕ್ತವನ್ನೇ ವಾಂತಿಮಾಡಿಕೊಂಡುಬಿಟ್ಟ.

(ಆಸ್ಥಾನಿಕರೆಲ್ಲಾ ಅವಳನ್ನು ಸುತ್ತುವರಿಯುತ್ತಾರೆ.)

ಎರಡನೆ ಆಸ್ಥಾನಿಕ: ಓ ಸರ್ವಶಕ್ತ ದೇವತೆಗಳೇ, ಅವನು ಗುಣ ಮುಖನಾದುದೇ ಆದರೆ–ನಾನು ಪ್ರತಿಜ್ಞಾಪೂರ್ವಕವಾಗಿ ಹೇಳು ತ್ತಿದ್ದೇನೆ – ಬೊಕ್ಕಸಕ್ಕೆ ಇನ್ನೂರು ಸಾವಿರ ಸೆಸ್‌ಟರ್‌ಗಳನ್ನು ನನ್ನ ಸಂತೋಷದ ಕುರುಹಾಗಿ ಒಪ್ಪಿಸಿಬಿಡುವೆ.

ಮೂರನೆಯ ಆಸ್ಥಾನಿಕ: (ಅತಿಅತಿಯಾದ ಉದ್ವೇಗದಿಂದ) ಓ! ಜ್ಯೂಪಿಟರ್, ಅವನ ಜೀವದ ಬದಲಿಗೆ ನನ್ನ ಜೀವವನ್ನೇ ತೆಗೆದು ಕೊಂಡುಬಿಡಬಾರದೆ !

(ಈ ವೇಳೆಗಾಗಲೇ ಕ್ಯಾಲಿಗುಲ ಪ್ರವೇಶಿಸಿ, ಮಾತುಗಳನ್ನು ಕೇಳಿಸಿ

ಕೊಳ್ಳುತ್ತಾ ಇರುತ್ತಾನೆ.)

ಕ್ಯಾಲಿಗುಲ : (ಎರಡನೆ ಆಸ್ಥಾನಿಕನ ಬಳಿಗೆ ಹೋಗುತ್ತಾ) ಲೂಸಿಯಸ್, ನಿನ್ನ ಕಾಣಿಕೆಯನ್ನು ನಾನು ಸ್ವೀಕರಿಸಿ ಆಗಿದೆ. ಅಲ್ಲದೆ,ಅದಕ್ಕಾಗಿ ನಾನು ನಿನಗೆ ಧನ್ಯವಾದಗಳನ್ನು ಅರ್ಪಿಸಿಯೂ ಅರ್ಪಿಸಿಬಿಡುತ್ತಿದ್ದೇನೆ. ನನ್ನ ಖಜಾನಾಧಿಕಾರಿ ಹಣ ಸಂಗ್ರಹಕ್ಕಾಗಿ ನಿನ್ನ ಬಳಿಗೆ ನಾಳೆ ಬರುವವನಿದ್ದೇನೆ ! (ಮೂರನೆಯ ಆಸ್ಥಾನಿಕನ ಬಳಿಗೆ ಹೋಗಿ, ಅವನನ್ನು ಅಪ್ಪಿಕೊಳ್ಳುತ್ತಾ) ನನಗೆ ಅದೆಷ್ಟು ಸಂತೋಷವಾಗಿ ಹೋಯಿತು, ಬಲ್ಲೆಯಾ ? ಅದನ್ನು ನೀನು ಸುಮ್ಮನೆ ಕಲ್ಪಿಸಿಕೊಳ್ಳುವುದೂ ನಿನ್ನಿಂದ ಸಾಧ್ಯವಾಗಲಾರದು. (ಸ್ವಲ್ಪಕಾಲದ ಮೌನದ ನಂತರ ಆತ್ಮೀಯವಾದ ಧ್ವನಿಯಲ್ಲಿ) ಹಾಗಾದಮೇಲೆ, ನೀನು ನನ್ನನ್ನು ಅಷ್ಟೆಲ್ಲಾ ಪ್ರೀತಿಸುತ್ತೀಯೆ, ಅಲ್ಲವೆ ?

ಮೂರನೆ ಆಸ್ಥಾನಿಕ : (ಭಾವುಕನಾಗಿ) ಓಹ್ ಸೀಜರ್,ನಾನು ನಿನಗಾಗಿ ಏನನ್ನು, ಏನೇನನ್ನೂ ಬೇಕಾದರೂ ತ್ಯಾಗಮಾಡಿಬಿಡಬಲ್ಲೆ.

ಕ್ಯಾಲಿಗುಲ : (ಅವನನ್ನು ಮತ್ತೆ ಆಲಂಗಿಸಿಕೊಂಡು) ಆಹ್ ಕ್ಯಾಸಿಯಸ್, ಇದು ನಿಜಕ್ಕೂ ಅಪಾರ: ಇಷ್ಟೆಲ್ಲಾ ಪ್ರೇಮಕ್ಕೆ ನಾನು ಯೋಗ್ಯನಲ್ಲ.

(ಕ್ಯಾಸಿಯಸ್ ಆ ಮಾತನ್ನು ಧಿಃಕರಿಸುವ ಸನ್ನೆಯನ್ನು ತನ್ನ ಇಡೀ ಶರೀರದಿಂದ ಮಾಡುತ್ತಾನೆ.)

ಅಲ್ಲ–ಅಲ್ಲ–ನಿಜಕ್ಕೂ ನಾನು ಅಷ್ಟಕ್ಕೆಲ್ಲಾ ಯೋಗ್ಯನಲ್ಲವೇ ಅಲ್ಲ ! ನಾನು ಅದಕ್ಕೆಲ್ಲಾ ಖಂಡಿತವಾಗಿಯೂ ಯೋಗ್ಯನಲ್ಲವೇ ಅಲ್ಲ ಎಂದು ಬಿಟ್ಟೆನಲ್ಲ ! (ಇಬ್ಬರು ಸೈನಿಕರನ್ನು ಸನ್ನೆ ಮಾಡಿ ಕರೆದು) ಇವನನ್ನು ತೆಗೆದುಕೊಂಡುಹೋಗಿ— (ಗೌರವ ಪೂರ್ವಕ ಧ್ವನಿಯಲ್ಲಿ ಕ್ಯಾಸಿಯಸ್‌ನಿಗೆ) ಹೋಗು, ಪ್ರಿಯ ಸ್ನೇಹಿ, ಹಾಗೆಯೇ ಕ್ಯಾಲಿಗುಲ ನಿನಗಾಗಿ ತನ್ನ ಹೃದಯವನ್ನೇ ಕಳೆದುಕೊಂಡುಬಿಟ್ಟ ಎನ್ನುವುದನ್ನು ಎಂದೆಂದಿಗೂ ಮರೆಯದಿರು.

ಮೂರನೆ ಆಸ್ಥಾನಿಕ : (ಅಸ್ಪಷ್ಟವಾದ ರೀತಿಯಲ್ಲಿ ಕಸಿವಿಸಿ ವ್ಯಕ್ತಪಡಿಸುತ್ತಾ) ಆದರೆ–ಆದರೆ ಇವರು ನನ್ನನ್ನು ಎಲ್ಲಿಗೆ ಕರೆದು ಹೊಯ್ಯು

ತ್ತಿದ್ದಾರೆ ?

ಕ್ಯಾಲಿಗುಲ : ಏಕೆ– ನಿನ್ನ ಸಮಾಧಿಗೆ : ಹೇಗೂ ನಿನ್ನ ಧಾರಾಳವಾದ ಕಾಣಿಕೆ ಸ್ವೀಕೃತವಾಗಿ ಹೋಗಿದೆಯಲ್ಲ; ಅಲ್ಲದೆ, ಈಗಾಗಲೇ ನಾನು ಚೇತರಿಸಿಕೊಳ್ಳಲು ಆರಂಭಿಸಿಯೂಬಿಟ್ಟದ್ದೇನೆ. ನನ್ನ ಬಾಯಲ್ಲಿನ ಅಸಹ್ಯವಾದ ರಕ್ತದ ರುಚಿ ಕೂಡ ಮಾಯವಾಗಿ ಬಿಟ್ಟಿದೆ. ನೀನು ನನ್ನನ್ನು ಗುಣಪಡಿಸಿಯೇ ಬಿಟ್ಟೆ, ಕ್ಯಾಸಿಯಸ್ ! ಪವಾಡ ಒಂದು ನಡೆದೇಹೋಯಿತು – ನಿನ್ನ ಮಿತ್ರನೋರ್ವನ ಸಲುವಾಗಿ ನಿನ್ನ ಬದುಕನ್ನೇ ನೆಲಕ್ಕೆ ಎಸೆದ ಪವಾಡವನ್ನು ಸಾಧ್ಯವಾಗಿಸಿಯೇ ಬಿಟ್ಟ ನೀನಂತೂ ಅದೆಷ್ಟೆಲ್ಲಾ ಹೆಮ್ಮೆಪಟ್ಟುಕೊಳ್ಳಬೇಕು – ಅದರಲ್ಲೂ ಆ ಸ್ನೇಹಿ ಬೇರೆ ಯಾರೂ ಅಲ್ಲದೆ, ಕ್ಯಾಲಿಗುಲನೇ ಆಗಿರುವಾಗ! ತತ್ಪರಿಣಾಮವಾಗಿ, ನಾನು ಮೊದಲಿನಂತೆಯೇ ಆಗಿಬಿಟ್ಟಿರುವುದನ್ನು, ಮತ್ತು ಹಬ್ಬದ ರಾತ್ರಿಯ ವೈಭವ ಒಂದಕ್ಕೆ ಸಿದ್ಧವಾಗಿಹೋಗಿರುವುದನ್ನು ನೀನುನಿನ್ನಕಣ್ಣುಗಳಿಂದಲೇ ನೋಡುತ್ತಾಇದ್ದುಬಿಟ್ಟದ್ದೀಯೆ

ಮೂರನೆ ಆಸ್ಥಾನಿಕ : (ಸೈನಿಕರು ಎಳೆದು ಹೊಯ್ಯುತ್ತಿರುವಂತೆಲ್ಲಾ ಚೀತ್ಕರಿಸುತ್ತಾ) ಇಲ್ಲ ! ಸಾಧ್ಯವಿಲ್ಲ ! – ನಾನು ಸಾಯಲು ಸಿದ್ಧನಿಲ್ಲವೇ ಇಲ್ಲ–ನೀನು ಇದನ್ನೆಲ್ಲಾ ಅದೂ ಇಷ್ಟೆಲ್ಲಾ ಗಂಭೀರವಾಗಿ ತೆಗೆದುಕೊಂಡು ಬಿಡಬಾರದಾಗಿತ್ತು !

ಕ್ಯಾಲಿಗುಲ : (ಮೂರನೆ ಆಸ್ಥಾನಿಕನ ಚೀತ್ಕಾರಗಳ ಮಧ್ಯೆ ವಿವೇಚನಾಪೂರ್ಣವಾದ ಧಾಟಿಯಲ್ಲಿ) ಇನ್ನೇನು ಸಾಗರದ ದಾರಿಗಳೆಲ್ಲಾ ಮಿಮೋಸಾ ಗಿಡಗಳಿಂದ ಸುವರ್ಣಮಯವಾಗಿ ಹೋಗಿಬಿಡುವುದರಲ್ಲಿ ಇವೆ....ಸ್ತ್ರೀಯರೆಲ್ಲಾ ಎಷ್ಟು ಸಾಧ್ಯವೊ ಅಷ್ಟು ಕಮ್ಮಿ ಉಡುಪುಗಳನ್ನು ಧರಿಸತೊಡಗಿದ್ದಾರೆ....ಮತ್ತು ಆಕಾಶ ! – ಓಹ್, ಕ್ಯಾಸಿಯಸ್, ಆಕಾಶದ ತುಂಬೆಲ್ಲಾ ಎಂತಹ ಪರಿಶುದ್ಧವಾದ ಹಾಗೂ ಹಠಾತ್ತಾದ ಸೂರ್ಯಪ್ರಭೆ ತುಂಬಿ ಹೋಗಿದೆ, ಏನುಕತೆ! ಹಾಗೇಯೇ ಜೀವಂತವಾದ ಮುಗುಳ್ನಗೆಗಳು ಕೂಡ.... (ಕ್ಯಾಸಿಯಸ್ ಬಾಗಿಲ ಬಳಿಯಲ್ಲಿ ಇದ್ದಾನೆ. ಕ್ಯಾಲಿಗುಲ ಮೆಲ್ಲಗೆ ಕ್ಯಾಸಿಯಸ್‌ನನ್ನು ಬಾಗಿಲಾಚೆಗೆ ತಳ್ಳುತ್ತಿದ್ದಂತೆಯೇ ಅವನ ಧ್ವನಿ ಘನ ಗಂಭೀರವಾಗಿಬಿಡುತ್ತದೆ.)

ಜೀವನ, ನನ್ನ ಗೆಳೆಯ, ಆನಂದಿಸಲೇಬೇಕಾದ ವಸ್ತು ಅದು-ನೀನು ಅದರ ಸುಖವೇನೆಂದು ಕಂಡುಕೊಂಡುಬಿಟ್ಟಿದ್ದರೆ, ಅದನ್ನು ಇಷ್ಟೊಂದು ಬೇಕಾಬಿಟ್ಟಿಯಾಗಿ ಪಣವಾಗಿಡುವಂತಹ ಕಾರಣದ ಸಲುವಾಗಿ ಎಸೆದು ಬಿಡುತ್ತಿರಲಿಲ್ಲ. (ಕ್ಯಾಸಿಯಸ್‌ನನ್ನು ಒಳಕ್ಕೆ ಎಳೆದು ಹೊಯ್ದು ಬಿಡುತ್ತಾರೆ. ಕ್ಯಾಲಿಗುಲ ಕೇಂದ್ರದಲ್ಲಿನ ಟೇಬಲ್ ಬಳಿಗೆ ಹಿಂದಿರುಗುತ್ತಾನೆ.) ಸೋತವನು ಪಣವನ್ನು ತೆತ್ತೇ ತೀರಬೇಕಾಗುತ್ತದೆ - ಅನ್ಯಥಾ ಶರಣಂ ನಾಸ್ತಿ ! (ಸ್ವಲ್ಪ ಕಾಲದ ಮೌನ) ನೋಡು, ಕೆಸೋನಿಯಾ (ಉಳಿದವರತ್ತ ತಿರುಗಿ) ಅಂದ ಹಾಗೇ ಹೊಚ್ಚಹೊಸ ಯೋಚನೆಯೊಂದು ಈಗಷ್ಟೆ ನನಗೆ ಹೊಳೆದಿದೆ : ಅದು ಎಷ್ಟೊಂದು ಯೋಗ್ಯವಾದ ವಿಚಾರವೆಂದರೆ ಅದನ್ನು ನಾನು ನಿಮ್ಮೊಡನೆ ಪಾಲುಗೊಳ್ಳಬೇಕೆಂದುಕೊಂಡಿದ್ದೇನೆ ; ಈ ಕ್ಷಣದವರೆಗೂ ನನ್ನ ಆಳ್ವಿಕೆ ತೀರ ಸುಖಮಯವಾಗಿತ್ತು:ಯಾವುದೇ ರಾಷ್ಟ್ರಾದ್ಯಂತ ಆವರಿಸಿದ ಪ್ಲೇಗ್ ಆಗಲಿ, ಧಾರ್ಮಿಕ ಹಿಂಸೆಯಾಗಲಿ, ಕಡೆಗೆ, ಒಂದೇ ಒಂದು ಕ್ರಾಂತಿ ಆಗಲಿ-ನಮ್ಮನ್ನು ವಾಸ್ತವವಾಗಿಯೂ ಚಿರಸ್ಮರಣೀಯರನ್ನಾಗಿ ಮಾಡುವಂತಹದ್ದು ಯಾವುದೇ ಆಗಲಿ ಸಂಭವಿಸಲೇ ಇಲ್ಲ. ಇದೇ ವಿಚಾರವನ್ನೇ-ನಾನು ನಿವಾರಿಸಬೇಕೆಂದುಕೊಂಡಿರುವ ವಿಧಿಯ ಈ ಅರ್ಥಹೀನ ಜಿಪುಣತನವನ್ನೇ-ನಾನು ನಿಮ್ಮ ಗಮನಕ್ಕೆ ತರಲು ಪ್ರಯತ್ನಿಸುತ್ತಿರುವುದು : ನಾನು ಹೇಳುತ್ತಿರುವುದು ಏನೆಂದರೆ-ನನ್ನ ಮಾತು ನಿಮಗೆ ಅರ್ಥವಾಯಿತೋ ಇಲ್ಲವೋ ಹೇಳಲಾರೆ-ಆ, ಆ....ಅಂದಹಾಗೆ, (ಸಣ್ಣ ನಗು ನಗುತ್ತಾನೆ) ನಾವು ಇಷ್ಟು ಕಾಲವೂ ತಪ್ಪಿಸಿಕೊಂಡಿರುವ ಈ ಸಾಂಕ್ರಾಮಿಕ ರೋಗಗಳನ್ನೇ ನಾನು ನಿಖರವಾಗಿ ಭರ್ತಿಮಾಡಬೇಕೆಂದುಕೊಂಡಿರುವುದು ! (ಬೇರಾದ ಧ್ವನಿಯಲ್ಲಿ) ಸಧ್ಯಕ್ಕೆ ಇಷ್ಟು ಸಾಕು. ಚೆರಿಯ ಬರುತ್ತಿರುವುದು ನನಗೆ ಕಾಣಿಸುತ್ತಿದೆ. ಕೆಸೋನಿಯಾ, ಈಗ ನನ್ನ ಸರದಿ (ನಿಷ್ಕ್ರಮಿಸುತ್ತಾನೆ.)

(ಚೆರಿಯಾ ಮತ್ತು ಮೊದಲ ಆಸ್ಥಾನಿಕರ ಪ್ರವೇಶ. ಕೆಸೋನಿಯಾ ಚೆರಿಯಾನತ್ತ ಧಾವಿಸುತ್ತಾ—)

ಕೆಸೋನಿಯಾ : ಕ್ಯಾಲಿಗುಲ ಇನ್ನಿಲ್ಲವಾಗಿ ಹೋದ ! (ಅವಳು ತನ್ನ ಕಣ್ಣೀರನ್ನು ಮುಚ್ಚಿಕೊಳ್ಳುವಂತೆ ತಲೆಯನ್ನು ಬೇರೆಡೆಗೆ ತಿರುಗಿಸಿಕೊಳ್ಳುತ್ತಾಳೆ; ಅವಳ ದೃಷ್ಟಿ ಮೌನವಾಗಿಯೇ ಉಳಿದುಬಿಟ್ಟಿರುವವರ ಮೇಲೆ ಸ್ಥಿರಗೊಳ್ಳುತ್ತದೆ. ಪ್ರತಿಯೊಬ್ಬರೂ ದಿಗ್ಭ್ರಾಂತರಾಗಿದ್ದಾರೆ – ಆದರೆ ಬೇರೆ ಬೇರೆ ಕಾರಣಗಳಿಂದಾಗಿ.)

ಮೊದಲ ಆಸ್ಥಾನಿಕ : ನೀನು .... ನಿನಗೆ ಖಂಡಿತವಾಗಿಯೂ ಗೊತ್ತೆ – ಈ ಭಯಾನಕವಾದ ಘಟನೆ ನಡೆದೇ ಹೋಯಿತೆಂದು ಖಚಿತವಾಗಿಯೂ ಗೊತ್ತೆ ? – ನಂಬಲು ಸಾಧ್ಯವೇ ಇಲ್ಲದಷ್ಟು ಅಸಾಧ್ಯವಾಗಿ ಬೇರೆ ಇದೆ : ಸ್ವಲ್ಪವೇ ಸ್ವಲ್ಪ ಹೊತ್ತಿನ ಹಿಂದಷ್ಟೇ ಅವನು ನೃತ್ಯ ಮಾಡುತ್ತಿದ್ದ !

ಕೆಸೋನಿಯಾ : ಅದೇನೋ ನಿಜ – ನೃತ್ಯ ಎಸಗಿದ್ದರಿಂದಾಗಿಯೇ ದಣಿವು ಅವನ ಪಾಲಿಗೆ ಬಹಳವಾಗಿ ಆಗಿಹೋಗಿದೆ.

(ಚೆರಿಯಾ ಒಬ್ಬನಿಂದ ಇನ್ನೊಬ್ಬನ ಬಳಿಗೆ ಅವಸರವಸರವಾಗಿ ನುಗ್ಗುತ್ತಾನೆ. ಯಾರೂ ಮಾತನಾಡುವುದೇ ಇಲ್ಲ.)

ಕೆಸೋನಿಯಾ : ನೀನು ಹೇಳುವಂತಹದ್ದೇನೂ ಇಲ್ಲವೆ, ಚೆರಿಯಾ ?

ಚೆರಿಯಾ : (ತಗ್ಗಿದ ಧ್ವನಿಯಲ್ಲಿ) ನಮ್ಮೆಲ್ಲರ ಪಾಲಿನ ಅತಿ ಘೋರವಾದ ದೌರ್ಭಾಗ್ಯ ಇದು, ಕೆಸೋನಿಯಾ.

(ಕ್ಯಾಲಿಗುಲ ಅತ್ಯಾವೇಶದಿಂದ ಒಳನುಗ್ಗಿ ಚೆರಿಯಾನ ಬಳಿಗೆ ಹೋಗುತ್ತಾ –)

ಕ್ಯಾಲಿಗುಲ : ಚೆನ್ನಾಗಿತ್ತು, ಬಹಳ ಚೆನ್ನಾಗಿತ್ತು ನೀನು ಆಡಿದ ಆಟ, ಚೆರಿಯಾ. (ಸುತ್ತೆಲ್ಲಾ ತಿರುಗಿ, ಉಳಿದೆಲ್ಲರನ್ನೂ ದಿಟ್ಟಿಸಿ, ಕಡೆಗೆ ಸಿಡುಕಿ) ಆದರೆ, ತೀರ ಹೊಲಸು-ನಿನ್ನ ನಟನೆ ಸರಿಯಾಗಿ ಮೂಡಿ ಬರಲೇ ಇಲ್ಲ ! (ಕೆಸೋನಿಯಾಳಿಗೆ) ನಾನು ನಿನಗೆ ಹೇಳಿದ್ದನ್ನು ನೀನು ಮರೆಯಲೇ ಬಾರದು— ನೋಡು....

(ಕ್ಯಾಲಿಗುಲ ನಿಷ್ಕ್ರಮಿಸುತ್ತಾನೆ. ಕೆಸೋನಿಯಾ ಮೌನವಾಗಿ ಉಳಿದು

ತನ್ನ ದೃಷ್ಟಿಯಿಂದ ಮಾತ್ರ ಹೋಗುತ್ತಿರುವ ಕ್ಯಾಲಿಗುಲನನ್ನೆ ಹಿಂಬಾಲಿಸುತ್ತಾಳೆ.)

ವೃದ್ಧ ಆಸ್ಥಾನಿಕ : (ಸಲ್ಲದ ಆಸೆ ಹೊತ್ತು) ಅವನು ಆರೋಗ್ಯವಾಗಿಲ್ಲವೆ, ಕೆಸೋನಿಯಾ ?

ಕೆಸೋನಿಯಾ : (ನೇರವಾಗಿ ಅವನತ್ತ ನೋಡುತ್ತಾ) ಅಲ್ಲ, ಓ ನನ್ನ ಮುದ್ದೇ, ಅವನ ಆರೋಗ್ಯಕ್ಕೆ ಏನೂ ಆಗಿಲ್ಲ! ಆದರೆ, ನಿನಗೆ ಗೊತ್ತೇ ಇರದ ವಿಷಯವೆಂದರೆ ಆ ಮನುಷ್ಯನ ಪಾಲಿಗೆ ಎರಡುಗಂಟೆಗಳಿಗಿಂತ ಹೆಚ್ಚಿನ ನಿದ್ದೆ ಇಲ್ಲವೇ ಇಲ್ಲ; ಅಲ್ಲದೇ, ಆತ ರಾತ್ರಿಯ ಅತ್ಯುತ್ತಮ ಭಾಗವನ್ನೆಲ್ಲಾ ಅರಮನೆಯ ಮೊಗಸಾಲೆಗಳಲ್ಲಿ ಮತ್ತು ಅದರಸುತ್ತ ಮುತ್ತಲ ಪ್ರದೇಶಗಳಲ್ಲಿ ಅಲೆದಾಡುವುದರಲ್ಲೇ ಕಳೆದುಬಿಡುತ್ತಾನೆ. ನಿನಗೆ ಗೊತ್ತೇ ಇರದ, ನೀನು ಎಂದೂ ಯೋಚಿಸಲು ಪ್ರಯತ್ನಿಸಲೂ ಆಗಿರದ ಇನ್ನೊಂದು ವಿಚಾರ ಎಂದರೆ – ಅದು ಆ ಸೂರ್ಯೋದಯಕ್ಕೂ ಮತ್ತು ಮಧ್ಯರಾತ್ರಿಗೂ ನಡುವಣ ಭೀಕರ ಗಂಟೆಗಳಲ್ಲಿ ಅವನ ತಲೆಯಲ್ಲಿ ಏನು ಏನೆಲ್ಲಾ ಸುಳಿದಾಡಿಬಿಡುತ್ತಿರುತ್ತವೆ-ಎನ್ನುವುದು. ಅವನ ಆರೋಗ್ಯ ಚೆನ್ನಾಗಿಲ್ಲವೆ ? - ಚೆನ್ನಾಗಿಯೇ ಇದೆ ; ಅವನಿಗೆ ಏನೂ ಆಗಿಯೇ ಇಲ್ಲ–ಅವನ ಆತ್ಮವನ್ನು ಕೀವುಗಟ್ಟಿಸುತ್ತಿರುವ ಕರಾಳ ವ್ರಣಗಳಿಗೆ ನೀನು ಹೆಸರು ಮತ್ತು ಔಷಧಿ ಈ ಎರಡನ್ನೂ ಕಂಡು ಹಿಡಿಯುವವರೆಗೂ ಅವನಿಗೆ ಯಾವ ಖಾಯಿಲೆಯು ಬರುವುದೇ ಇಲ್ಲ !

ಚೆರಿಯಾ : (ಅವಳ ಮಾತಿನಿಂದಾಗಿ ಪ್ರಭಾವಿತನಾದವನಂತೆ ಕಾಣಿಸಿಕೊಳ್ಳುತ್ತಾ) ನೀನು ಹೇಳುತ್ತಿರುವುದು ಸರಿ, ಕೆಸೋನಿಯಾ. ನಮಗೆಲ್ಲಾ ತಿಳಿದಿರುವಂತೆ ಕಾಯಸ್‌ನಿಗೆ....

ಕೆಸೋನಿಯಾ : (ಭಾವೋತ್ಕಟಳಾಗಿ ಅವನ ಮಾತನ್ನು ಮಧ್ಯದಲ್ಲೇ ತಡೆಯುತ್ತಾಳೆ.) ಹೌದು–ನಿಮಗೆಲ್ಲ ತಿಳಿದೇ ಇದೆ-ನಿಮ್ಮ ನಿಮ್ಮದೇ ಆದ ರೀತಿಗಳಲ್ಲಿ ಮಾತ್ರ. ಆದರೆ, ಆ ಎಲ್ಲ ಹೃದಯವೇ ಇಲ್ಲದವರಂತೆಯೇ ಅತಿ ಅತಿಯಾದ ಹೃದಯ ಇರುವಾತನನ್ನೂ ಎಲ್ಲೂ ನೆಲೆಗೊಳಿಸಲಾಗುವುದೇ ಇಲ್ಲ. ಆರೋಗ್ಯವಂತರು ರೋಗಿಷ್ಟರನ್ನು ಕಂಡರೆ

ಅಸಹ್ಯಪಟ್ಟುಕೊಳ್ಳುತ್ತಾರೆ ; ಸುಖಿಗಳು ದುಃಖಿಗಳನ್ನು ಕಂಡರೆ ದ್ವೇಷಗೊಳ್ಳುತ್ತಾರೆ. ವಿಪರೀತವಾದ ಆತ್ಮವಂತಿಕೆ ! ಅದೇ – ಆತನ ಈ ಅಪಾರವಾದ ಆತ್ಮವಂತಿಕೆಯೇ – ಅಲ್ಲವೇ ನಿನ್ನನ್ನು ಕಡಿಯುತ್ತಿರುವುದು? ಇದನ್ನೇ ಒಂದು ರೋಗವೆಂದು ಕರೆದುಬಿಡುವ ಚಪಲ ನಿನಗೆ !- ಹಾಗೆ ಕರೆದು ಬಿಟ್ಟದ್ದೇ ಆದರೆ ಎಲ್ಲ ದಡ್ಡತನ ಗಳಿಗೂ ಯೋಗ್ಯವಾದ ಸಮರ್ಥನೆ ಒಂದು ಸಿಕ್ಕಿಯೇ ಬಿಡುತ್ತದೆ; ಮತ್ತು ಆ ದಡ್ಡತನಗಳು ತೃಪ್ತವೂ ಆಗಿಹೋಗಿಬಿಡುತ್ತವೆ. (ಧ್ವನಿಯನ್ನು ಬದಲಾಯಿಸಿ) ನೀನೇ ನನಗೆ ಹೇಳು, ಚೆರಿಯಾ – ಪ್ರೇಮ ಎಂದಾದರೂ ನಿನ್ನ ಪಾಲಿಗೆ ಯಾವುದಾದರೂ ಒಂದಲ್ಲ ಒಂದು ಅರ್ಥದಲ್ಲಿ ದಕ್ಕಿಹೋಗಿತ್ತೆ, ಹೇಗೆ ?

ಚೆರಿಯಾ : (ಮತ್ತೆ ತನ್ನ ತನಕ್ಕೆ ಹಿಂದಿರುಗಿ) ಕಾಮಕೇಳಿಯ ಕಲೆಯನ್ನು ಕಲಿತುಕೊಳ್ಳಲು ನಮಗೆ ಈಗ ತುಂಬಾ ವಯಸ್ಸಾಗಿ ಹೋಗಿದೆ ಎಂದು ಭಯವಾಗುತ್ತಿದೆ, ಕೆಸೋನಿಯಾ. ಅಲ್ಲದೆ, ಹೋಗಲಿ ಎಂದರೆ, ಅದನ್ನು ಕಲಿಯಲು ಬೇಕಾದ ಕಾಲವನ್ನು ಕ್ಯಾಲಿಗುಲ ನಮಗೆ ಕೊಟ್ಟೇ ಕೊಡುತ್ತಾನೆ ಎನ್ನುವುದು ಕೂಡ ಶುದ್ಧಾಂಗವಾಗಿ ಸಂದೇಹಾಸ್ಪದವಾಗಿ ಬೇರೆ ಹೋಗಿಬಿಟ್ಟಿದೆಯಲ್ಲ !

ಕೆಸೋನಿಯಾ : (ತನ್ನ ಎಂದಿನ ಮನಃಸ್ಥಿತಿಗೆ ಹಿಂದಿರುಗಿ) ನಿಜ, ಸಾಕಷ್ಟು ನಿಜ - ನಿನ್ನ ಮಾತು. (ಕುಳಿತುಕೊಂಡು) ಓಹ್, ನಾನು ಮರತೇ ಬಿಡುತ್ತಿದ್ದೆ : ಕ್ಯಾಲಿಗುಲ ನಿನಗೆ ಮುಖ್ಯ ಸಂಗತಿ ಯೊಂದನ್ನು ತಿಳಿಸಲು ಹೇಳಿದ್ದಾನೆ–ಪ್ರಾಯಶಃ, ಈ ದಿನ ಕಲೆ ಗಾಗಿಯೇ ಮೀಸಲಿಟ್ಟ ರಕ್ತಾಕ್ಷರಗಳ ದಿನವೆಂದು ನಿನಗೆ ಗೊತ್ತಿದ್ದರೂ ಗೊತ್ತಿರಬಹುದು.

ವೃದ್ಧ ಆಸ್ಥಾನಿಕ : ಪಂಚಾಗದ ಪ್ರಕಾರ ಏನು ?

ಕೆಸೋನಿಯಾ : ಅಲ್ಲ, ಕ್ಯಾಲಿಗುಲನ ಪ್ರಕಾರ, ಅವನು ಒಂದು ಕವಿ ಸಮ್ಮೇಳನದ ಸಲುವಾಗಿ ಕೆಲವು ಕವಿಗಳನ್ನು ಆಮಂತ್ರಿಸಿದ್ದಾನೆ. ನಿಗದಿಯಾದ ವಿಷಯದ ಮೇಲೆ ಆಶುಕವಿತೆಯನ್ನು ಪಠಿಸಿ ಎಂದು ಅವನು ಆ ಕವಿಗಳನ್ನು ಕೇಳಿಕೊಳ್ಳುವವನಿದ್ದಾನೆ. ಅವನು ನಿಮ್ಮಲ್ಲಿ

ಯಾರು ಯಾರು ಕವಿಗಳಿದ್ದಾರೋ ಅವರೆಲ್ಲಾ ನಿರ್ದಿಷ್ಟವಾಗಿಯೂ ಈ ಕವಿತಾ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ಬಯಸುತ್ತಿದ್ದಾನೆ. ಅಲ್ಲದೆ, ಅವನು ಇನ್ನೂ ಯುವಕರಾದ ಸಿಪಿಯೋ ಮತ್ತು ಮೆಟಲಸ್‌ರು ಹಾಜರಿದ್ದೇ ತೀರಬೇಕೆಂದು ಬಯಸಿ, ಅವರುಗಳ ಹೆಸರನ್ನು ಪ್ರತ್ಯೇಕವಾಗಿ ಬೇರೆ ಸೂಚಿಸಿಬಿಟ್ಟಿದ್ದಾನೆ.

ಮೆಟೆಲಸ್ : ಆದರೆ, ನಾವೇ ಬರಲು ಸಿದ್ಧರಿಲ್ಲವಲ್ಲ !

ಕೆಸೋನಿಯಾ : (ಅವನ ಮಾತನ್ನೇ ಕೇಳಿಸಿಕೊಳ್ಳದವಳಂತೆ ಧ್ವನಿಯನ್ನು ಸಮತಟ್ಟಾಗಿಸಿ) ಬಹುಮಾನಗಳೂ ಇವೆ ಎಂದು ಬೇರೆ ಹೇಳುವ ಅವಶ್ಯಕತೆ ಇಲ್ಲವೇ ಇಲ್ಲವೆಂದುಕೊಂಡಿದ್ದೇನೆ : ಸಾಲದಕ್ಕೆ ದಂಡಗಳೂ ಇದ್ದೇ ತೀರುತ್ತವೆ. (ಭಯದ ನೋಟ ಹೊತ್ತು) ನಮ್ಮ ನಮ್ಮಲ್ಲೇ ಮಾತನಾಡಿಕೊಳ್ಳುವುದೇ ಆದರೆ– ದಂಡಗಳು ಅಂತಹ ಭೀಕರವಾಗಿ ಏನೂ ಇರುವುದಿಲ್ಲ !

(ಯಾವಾಗಲೂ ಆಗಿರದಷ್ಟು ಮಂಕಾಗಿ ಹೋಗಿರುವ ಕ್ಯಾಲಿಗುಲ ಪ್ರವೇಶಿಸುತ್ತಾನೆ)

ಕ್ಯಾಲಿಗುಲ : ಎಲ್ಲವೂ ಸಿದ್ಧತಾನೆ ?

ಕೆಸೋನಿಯಾ : ಸಿದ್ಧ – (ಸೈನಿಕನೊಬ್ಬನಿಗೆ) ಕವಿಗಳನ್ನು ಒಳಗೆ ಕರೆದು ತಾ.

(ಇಬ್ಬಿಬ್ಬರಂತೆ ಸಮ ಹೆಜ್ಜೆಗಳನ್ನಿಡುತ್ತಾ, ಹನ್ನೆರಡು ಜನ ಕವಿಗಳು ಒಳ ಪ್ರವೇಶಿಸಿ, ರಂಗದ ಬಲಭಾಗದಲ್ಲಿ ಸಾಲುಗಟ್ಟಿ ನಿಲ್ಲುತ್ತಾರೆ.)

ಕ್ಯಾಲಿಗುಲ : ಉಳಿದವರು ಎಲ್ಲಿ ?

ಕೆಸೋನಿಯಾ : ಮೆಟಲಸ್ ! ಸಿಪಿಯೋ !

(ಮೆಟಲಸ್ ಮತ್ತು ಸಿಪಿಯೋ ರಂಗವನ್ನು ಹಾದು ಕವಿಗಳ ಬದಿಯಲ್ಲಿ ನಿಲ್ಲುತ್ತಾರೆ. ಕ್ಯಾಲಿಗುಲ ಎಡಭಾಗದ ರಂಗದ ಹಿಂಬದಿಯಲ್ಲಿ ಕೆಸೋನಿಯಾ ಮತ್ತು ಆಸ್ಥಾನಿಕರೊಡನೆ ಕೂರುತ್ತಾನೆ, ಸ್ವಲ್ಪಕಾಲ ಮೌನ.)

ಕ್ಯಾಲಿಗುಲ : ವಸ್ತು : ಸಾವು ; ಕಾಲಮಿತಿ : ಒಂದು ನಿಮಿಷ.

(ಕವಿಗಳು ಜ್ವರ ಬಂದವರಂತಾಗಿ ಫಲಕದ ಮೇಲೆ ಗೀಚತೊಡಗುತ್ತಾರೆ)

ವೃದ್ಧ ಆಸ್ಥಾನಿಕ : ತೀರ್ಪುಗಾರರೆಂದು ಕರೆಸಿಕೊಳ್ಳುವವರು ಯಾರು ?
ಕ್ಯಾಲಿಗುಲ : ನಾನು–ನಾನು ತೀರ್ಪುಗಾರನಾದರೆ ಸಾಲದೇನು ?
ವೃದ್ಧ ಆಸ್ಥಾನಿಕ : ಓಹ್, ಬೇಕಾದಷ್ಟು–ಖಂಡಿತವಾಗಿಯೂ ಸಾಕು ಬೇಕಾದಷ್ಟು.
ಚೆರಿಯಾ : ನೀನು ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲವೆ, ಕಾಯಸ್ ?
ಕ್ಯಾಲಿಗುಲ : ಅನವಶ್ಯಕ — ಇದೇ ವಸ್ತುವನ್ನು ಕುರಿತು ನಾನು ಬಹುಬಹು ಹಿಂದೆಯೇ ಕವನಗಳನ್ನು ರಚಿಸಿಬಿಟ್ಟಿದ್ದೇನೆ !
ವೃದ್ಧ ಆಸ್ಥಾನಿಕ : (ಉತ್ಸಾಹದಿಂದ) ಅದರ ಪ್ರತಿಯೊಂದು ಬೇಕಾಗಿ ಬಿಟ್ಟಲ್ಲಿ ಅದನ್ನು ಪಡೆಯಬಹುದಾದ ಸ್ಥಳ ಯಾವುದು ?
ಕ್ಯಾಲಿಗುಲ : ಅದರ ಪ್ರತಿಮೆಯನ್ನು ಪಡೆದುಕೊಳ್ಳುವ ಅವಶ್ಯಕತೆ ಬರುವುದೇ ಇಲ್ಲ : ಕಾರಣ, ಅದನ್ನೇ ನಾನು ಅನುದಿನವೂ ನನ್ನದೇ ಆದ ದಾಟಿಯಲ್ಲಿ ಹಾಡುತ್ತಲೇ ಇದ್ದುಬಿಟ್ಟಿದ್ದೇನೆ ! !

(ಕೆಸೋನಿಯಾ ಕಂಪಿತ ದೃಷ್ಟಿಯಿಂದ ಕ್ಯಾಲಿಗುಲನನ್ನು ನೋಡುತ್ತಾಳೆ. ಕ್ಯಾಲಿಗುಲ ಮೃಗೀಯವಾಗಿ ಅವಳ ಸುತ್ತಮುತ್ತ ಬಳಸಾಡತೊಡಗುತ್ತಾನೆ.)

ಕ್ಯಾಲಿಗುಲ : ನಾನು ಕಾಣಿಸುತ್ತಿರುವ ರೀತಿಯಲ್ಲಿ ನಿನಗೆ ಅಸಮಾಧಾನ ಆಗುವಂತಹದ್ದು ಏನಾದರೂ ಇದೆ ಏನು ?
ಕೆಸೋನಿಯಾ : (ಮೃದುವಾಗಿ) ಕ್ಷಮೆ ಇರಲಿ ....
ಕ್ಯಾಲಿಗುಲ : ದೈನ್ಯತೆ ಬೇಡ, ದಯವಿಟ್ಟು ; ಸ್ವರ್ಗದ ಸಲುವಾಗಿ ಯಾದರೂ ದೈನ್ಯತೆ ಬೇಡವೇ ಬೇಡ. ಈಗ ಇರುವಂತೆಯೇ ನೀನು ಹುಚ್ಚಾಪಟ್ಟೆ ಕೆರಳಿಹೋಗಿದ್ದೀಯೆ ; ಜೊತೆಗೆ, ನಿನಗೆ ದೈನ್ಯತೆಯೂ ಬಂದುಬಿಟ್ಟರೆ (ಕೆಸೋನಿಯಾ ನಿಧನಿಧಾನವಾಗಿ ಸರಿಯುತ್ತಾ ಹೋಗಿ ಬಿಡುತ್ತಾಳೆ, ಕ್ಯಾಲಿಗುಲ ಚೆರಿಯಾನ ಕಡೆ ತಿರುಗಿ-) ನನ್ನ ಮಾತನ್ನು ನಾನೀಗ ಮುಂದುವರಿಸುವೆ : ನಾನು ರಚಿಸಿದ್ದು ಅದೊಂದೇ ಒಂದು ಕವನ ; ಅಲ್ಲದೆ, ನಂಬು ನನ್ನ ಮಾತುಗಳನ್ನು : ರೋಮ್ ಸಾಮ್ರಾಜ್ಯ ಅರಿತ – ತನ್ನ ಸ್ಫೂರ್ತಿಯೊಡನೆ ತನ್ನ ಕೃತ್ಯ

ಗಳನ್ನು ಸರಿದೂಗಿಸಿಬಿಡಬಲ್ಲ – ಏಕ ಮಾತ್ರ, ಕಲಾವಿದ ಎಂದರೆ ನಾನೇ ಎಂದು ಸಾರಿ ಹೇಳಲು ಆ ಕವನ ಒಂದು ಶ್ರೇಷ್ಠ ನಿದರ್ಶನ.

ಚೆರಿಯಾ : ಈ ಮಾತು ಅಧಿಕಾರ ಇರುವುದರ ಕುರುಹು—ಅಷ್ಟೇ.

ಕ್ಯಾಲಿಗುಲ : ನಿನ್ನ ಮಾತು ಬಹಳಷ್ಟು ನಿಜ : ಉಳಿದ ಕಲಾವಿದರು ತಮ್ಮ ಕೈಗಳಲ್ಲಿ ಅಧಿಕಾರವಿಲ್ಲದ ಕೊರತೆಯನ್ನು ತಮ್ಮ ಕೃತಿ ರಚನೆಗಳಿಂದ ನೀಗಿಕೊಳ್ಳುತ್ತಾರೆ. ಆದರೆ, ಕಲಾತ್ಮಕ ರಚನೆಗಳಿಗೆ ತೊಡಗುವ ಅವಶ್ಯಕತೆ ನನಗೆ ಬರುವುದೇ ಇಲ್ಲ. ನಾನು ಅಂತಹ ಅಧಿಕಾರಯುತ ಬಾಳನ್ನು ಬದ್ಧೇ ತೀರುತ್ತೇನೆ. (ವರಟುವರಟಾಗಿ) ಹೋಗಲಿ, ಕವಿಗಳೇ, ನೀವುಗಳೆಲ್ಲಾ ಸಿದ್ಧರಾಗಿದ್ದೀರಿ ತಾನೆ?

ಮೆಟಲಸ್ : ನಾನು ಹಾಗೆ ಅಂದುಕೊಂಡಿದ್ದೇನೆ.

ಇತರರೂ : ಹೌದು—ನಾವು ಅಷ್ಟೇ...

ಕ್ಯಾಲಿಗುಲ : ಒಳ್ಳೆಯದು—ಈಗ ಎಚ್ಚರಿಕೆಯಿಂದ ಕೇಳಿ : ಸಾಲಿನಿಂದ ಹೊರಬಿದ್ದು, ಒಬ್ಬೊಬ್ಬರಾಗಿ ಮುಂದೆ ಬರತಕ್ಕದ್ದು : ನಾನು ಷೀಟಿ ಊದುತ್ತೇನೆ; ಆಗ ಒಂದನೆಯವನು ತನ್ನ ಕವನವನ್ನು ಓದಲಾರಂಭಿಸುತ್ತಾನೆ—ನಾನು ಷೀಟಿ ಊದಿದಾಗ ಒಂದನೆಯವನು ತನ್ನ ಕವನ ಓದುವುದನ್ನು ನಿಲ್ಲಿಸಿಯೇ ತೀರುವಂತೆ, ಎರಡನೆಯವನು ಆರಂಭಿಸಿಯೇ ತೀರುತ್ತಾನೆ : ಹೀಗೆ ಒಬ್ಬರಾದಮೇಲೆ ಇನ್ನೊಬ್ಬರು.... ಸಹಜವಾಗಿಯೇ ಯಾರ ಕವನ ಪಠನವನ್ನು ಷೀಟಿ ತಡೆಗಟ್ಟುವುದಿಲ್ಲವೋ ಆತನೇ ಸ್ಪರ್ಧೆಯಲ್ಲಿ ಗೆದ್ದಾತ! ಎಲ್ಲ ಸಿದ್ಧರಾಗಿ—(ಚೆರಿಯಾನತ್ತ ತಿರುಗಿ ಪಿಸುಗುಟ್ಟುತ್ತಾನೆ :) ನೀನೇ ನೋಡು –ಕಲೆಯಂತಹದ್ದಕ್ಕೆ ಕೂಡ ಒಂದು ಸಾಂಸ್ಥಿಕ ವ್ಯವಸ್ಥೆ ಬೇಕೇ ಬೇಕಾಗಿಬಿಟ್ಟಿದೆ! (ಷೀಟಿ ಊದುತ್ತಾನೆ.)

ಮೊದಲ ಕವಿ : ಮರಣವೇ, ಕತ್ತಲಾವರಿಸುತ್ತಿರುವ
ನಿನ್ನ ತೀರದ ಆಚೆ ಯಾವಾಗ....

(ಷೀಟಿಯೊಂದು ಆಸ್ಫೋಟನಗೊಳ್ಳುತ್ತದೆ. ಈ ಕವಿ ಸರಸರನೆ ರಂಗದ ಎಡದ ಕಡೆಗೆ ಹೆಜ್ಜೆಹಾಕತೊಡಗುತ್ತಾನೆ. ಉಳಿದ ಕವಿಗಳೂ ಈತನನ್ನೇ ಕ್ರಮ

ವಾಗಿ ಅನುಸರಿಸುತ್ತಾರೆ. ಈ ಚಲನೆಗಳನ್ನು ಯಾಂತ್ರಿಕ ಚಲನೆಗಳಷ್ಟೇ ನಿಖರ ಗೊಳಿಸಿಬಿಡಬೇಕು.)

ಎರಡನೆ ಕವಿ: ತಮ್ಮ ಮಬ್ಬು ಗುಹೆಯಲ್ಲಿ
ಮೂವರು ವಿಧಿಸೋದರಿಯರು....

(ಷೀಟಿ)

ಮೂರನೆ ಕವಿ: ಬಳಿಗೆ ಬಾ ಸಾವೇ,
ಓ ಪ್ರೇಯಸಿಯೇ ...

(ಷೀಟಿಯ ಕರ್ಕಶತೆ ಆಸ್ಫೋಟಗೊಳ್ಳುತ್ತದೆ. ನಾಲ್ಕನೆ ಕವಿ ಹೆಜ್ಜೆ ಮುಂದಿಟ್ಟುಕೊಂಡು ಬಂದು, ನಾಟಕೀಯವಾದ ಭಂಗಿಯೊಂದರಲ್ಲಿ ನಿಲ್ಲುತ್ತಾನೆ. ಅವನು ಬಾಯಿ ತೆರೆಯುವ ಮೊದಲೇ ಷೀಟಿ ಕಿರಚಿಕೊಳ್ಳುತ್ತದೆ.)

ಐದನೆ ಕವಿ: ಆಗ, ಸುಖೀ ಬಾಲ್ಯದಲಿ
ಇದ್ದಾಗ ನಾನು....

ಕ್ಯಾಲಿಗುಲ: (ಕಿರಿಚಿಕೊಳ್ಳುತ್ತಾ) ನಿಲ್ಲಿಸದನ್ನು! ಹೇಳು ನಾನು ಕೊಟ್ಟ ವಸ್ತುವಿಗೂ ಹಾಗೂ ನಿನ್ನ ಕರೀತಲೆಯ ಸುಖೀಬಾಲ್ಯಕ್ಕೂ ಯಾವ ಲೌಕಿಕ ಸಂಬಂಧ ತಾನೆ ಇದೆ, ಹೇಳು—ನಿಜ ಸಂಬಂಧ! —ಇರುವ ನಿಜ ಸಂಬಂಧವಾದರೂ ಏನೆಂದು ಹೇಳು!!

ಐದನೆ ಕವಿ: ಆದರೆ...ಮತ್ತೆ ನಾನು ಈಗಷ್ಟೇ ಆರಂಭಿಸುತ್ತಿದ್ದೇನೆ, ಕಾಯಸ್, ಮತ್ತು....

(ಕರ್ಕಶವಾದ ಷೀಟಿ)

ಆರನೆ ಕವಿ: (ಎತ್ತಿದ ಧ್ವನಿಯಲ್ಲಿ) ನಿಷ್ಕರುಣಿ ತಾನಾಗಿ
ತನ್ನ ಗುಪ್ತ ಮಾರ್ಗಗಳಲ್ಲಿ
ಗಮಿಸುತ್ತಲೇ ಇರುತ್ತಾನೆ ಆತ....

(ಷೀಟಿ. ಸಿಪಿಯೋ ಫಲಕವೇ ಇಲ್ಲದೆ ಮುಂದೆ ಬರುತ್ತಾನೆ.)

ಕ್ಯಾಲಿಗುಲ: ನಿನ್ನ ಬಳಿ ಫಲಕವೇ ಇಲ್ಲ?

ಸಿಪಿಯೋ: ನನಗೆ ಅದರ ಅವಶ್ಯಕತೆಯೇ ಇಲ್ಲ!

ಕ್ಯಾಲಿಗುಲ : ಹೋಗಲಿ – ಎಲ್ಲಿ, ನಿನ್ನ ಕವನವನ್ನು ನಾವು ಕೇಳಿಯೇ ಬಿಡೋಣ. (ಸೀಟಿಯನ್ನು ಅಗಿಯುತೊಡಗುತ್ತಾನೆ.)

ಸಿಪಿಯೋ : (ಕ್ಯಾಲಿಗುಲನ ಅತಿ ಸಮೀಪದಲ್ಲೇ ನಿಂತು, ಅವನನ್ನು ನೋಡದೇ ನಿರಾಸಕ್ತನಾಗಿ ಪಠಿಸುತ್ತಾನೆ :)

ಹೃದಯವನ್ನು ನಿರ್ಮಲಿಸುವ ಸುಖಾನ್ವೇಷಣೆಗಳೇ,
ಬೆಳಕಿನಿಂದ ಪುಟಪುಟನೆ ಪುಟಿವ ಆಗಸವೆ,
ಓ ಕ್ರೂರ, ಮಧುರ, ಹಬ್ಬದ ಆನಂದವೇ,
ಭರವಸೆಗಳೇ ಇಲ್ಲದ ಭ್ರಮಾಚ್ಛಾದಿತ ಉನ್ಮಾದಗಳೇ !

ಕ್ಯಾಲಿಗುಲ : (ಗಂಭೀರವಾಗಿ) ನಿಲ್ಲಿಸು, ದಯವಿಟ್ಟು ಉಳಿದವರು ಸ್ಪರ್ಧಿಸುವ ಅವಶ್ಯಕತೆ ಇಲ್ಲವೇ ಇಲ್ಲ. (ಸಿಪಿಯೋನಿಗೆ) ನಾವುಗಳೆಲ್ಲರೂ ಸಾವಿನಿಂದ ಕಲಿಯಬಹುದಾದ ಪಾಠಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನೀನು ಇನ್ನೂ ತೀರ ಚಿಕ್ಕವನು.

ಸಿಪಿಯೋ : (ಕ್ಯಾಲಿಗುಲನನ್ನ ಏಕಾಗ್ರವಾದ ದಿಟ್ಟಿಸುತ್ತಾ) ನನ್ನ ತಂದೆಯನ್ನು ಕಳೆದುಕೊಳ್ಳುವ ವಿಚಾರದಲ್ಲಿ ನಾನು ತೀರ ಚಿಕ್ಕವನೇ ಆಗಿದ್ದೆ !

ಕ್ಯಾಲಿಗುಲ : (ಸರಕ್ಕನೆ ತಿರುಗಿ) ಮುಂದೆ ಬನ್ನಿ – ಉಳಿದವರೆಲ್ಲಾ. ಅಲ್ಲ – ನಿಜಕ್ಕೂ ವೇಷಧಾರಿ ಕವಿ ಒಂದು ಅತಿ ಭಯಂಕರವಾದ ಯಾತನೆ. ಇಲ್ಲಿನವರೆಗೂ ನಾನು ನಿಮ್ಮೆಲ್ಲರನ್ನೂ ನನ್ನ ಬಂಧುಗಳನ್ನಾಗಿ ಸ್ವೀಕರಿಸಲು ಬಯಸುತ್ತಲೇ ಬಂದೆ; ಧೀರ ಕವಿಗಳ ಪಡೆಯೊಂದು ನನ್ನ ಕಟ್ಟಕಡೆಯ ಹೀನಸ್ಥಿತಿಯ ಕಂದಕದಿಂದ ನನ್ನನ್ನು ರಕ್ಷಿಸುವ ಚಿತ್ರವನ್ನು ನಾನು ಆಗಿಂದಾಗ ಚಿತ್ರಿಸಿಕೊಳ್ಳುತ್ತಲೇ ಇದ್ದೆ : ಅಲ್ಲಿಗೆ, ಮತ್ತೊಂದು ಭ್ರಮೆಯೂ ದೂರವಾದ ಹಾಗೆಯೇ ಆಗಿಹೋಯಿತು ! ನಾನು ಈಗ ನಿಮ್ಮಗಳೆಲ್ಲರನ್ನು ನನ್ನ ಶತ್ರುಗಳ ಸ್ಥಾನಕ್ಕೆ ಪದಚ್ಯುತಿಗೊಳಿಸಬೇಕಾಗಿ ಬಂದುಬಿಟ್ಟದೆ! ಅಂದಮೇಲೆ, ಕವಿಗಳೆಲ್ಲಾ ಈಗ ನನ್ನ ವಿರುದ್ಧವಾಗಿದ್ದಾರೆ ಎಂದೂ ಆಯಿತು – ಮತ್ತದು ಬಹಳ ಮಟ್ಟಿಗೆ ಎಲ್ಲದರ ಅಂತ್ಯದ ಹಾಗೆ ಕಾಣಿಸುತ್ತದೆ! ಹೋಗಲಿ, ಶಿಸ್ತಿನಿಂದಾವರೂ ಕವಿಗಳೆಲ್ಲಾ ತೊಲಗಿ

ಹೋಗಿ ಬಿಡಿ. ಹಾಗೆ ಹೋಗುತ್ತಿರುವಾಗಲೇ ನೀವುಗಳು ನಿಮ್ಮ ನಿಮ್ಮ ಫಲಕಗಳನ್ನು ನೆಕ್ಕಿ ಅವುಗಳ ಮೇಲೆ ನೀವು ಗೀಚಿರುವ ಕ್ರೂರ ಕ್ರಿಯೆಗಳನ್ನು ತೊಡೆದುಹಾಕಿಬಿಡಬೇಕು – ದಕ್ಷ! ಪ್ರಚಲ! ತೊಲಗಿ ಮುಂದೆ !

(ಈಟಿಯನ್ನು ಪುಟ್ಟ ಪುಟ್ಟ ಲಯಬದ್ಧ ಶಿಳ್ಳುಗಳಾಗಿ ಊದುತ್ತಿರುತ್ತಾನೆ. ಕವಾತು ಮಾಡುತ್ತಾ, ತಮ್ಮ ಅಮರ ಕಾವ್ಯ ಫಲಕಗಳನ್ನು ನೆಕ್ಕುತ್ತಾ, ರಂಗದ ಬಲಭಾಗದಿಂದ ಕವಿಗಳು ಆಸ್ಥಾನಿಕರೊಡನೆ ಹೊರಬೀಳಲಾರಂಭಿಸುತ್ತಾರೆ. ಆಗ, ಕ್ಯಾಲಿಗುಲ ಕ್ಷೀಣ ಧ್ವನಿಯಲ್ಲಿ ಹೇಳುತ್ತಾನೆ :)

ಈಗ ಪ್ರತಿಯೊಬ್ಬರು ನನ್ನಿಂದ ದೂರ....ದೂರ ಸರಿದು ಹೋಗಿಬಿಡಿ.

(ದ್ವಾರದ ಬಳಿಯಲ್ಲಿ, ಅವರೆಲ್ಲಾ ಹೊರ ಹೋಗುತ್ತಿರುವಾಗ, ಚೆರಿಯಾ ಮೊದಲ ಆಸ್ಥಾನಿಕನ ಭುಜವನ್ನು ಮುಟ್ಟಿ, ಅವನ ಕಿವಿಯಲ್ಲಿ ಹೇಳುತ್ತಾನೆ.)

ಚೆರಿಯಾ : ಈಗಲೀಗ ನಾವು ಕಾಯುತ್ತಿದ್ದ ಸಮಯ ಸನ್ನದ್ಧವಾಗಿದೆ.

(ಈ ಮಾತನ್ನು ಕೇಳಿಸಿಕೊಂಡ ಸಿಪಿಯೋ, ಹೊಸಿಲ ಮೇಲೆಯೇ ಸ್ವಲ್ಪ ಕಾಲ ನಿಂತಿದ್ದು, ಮತ್ತೆ ಕ್ಯಾಲಿಗುಲನತ್ತ ಬರುತ್ತಾನೆ.)

ಕ್ಯಾಲಿಗುಲ : (ಕಹಿಧ್ವನಿಯಲ್ಲಿ) ನನ್ನನ್ನು ಶಾಂತವಾಗಿರಲು ನನ್ನ ಮಟ್ಟಿಗೆ ಬಿಟ್ಟುಕೊಡಲಾರೆಯಾ – ನಿನ್ನ ತಂದೆ ನನ್ನನ್ನು ಬಿಟ್ಟು ಕೊಟ್ಟಿರುವಂತೆ ?

ಸಿಪಿಯೋ : ಇಲ್ಲ, ಕಾಯಸ್, ಈ ಬಗೆಯ ಮಾತುಕತೆಗಳಿಂದ ಯಾವ ಉದ್ದೇಶಗಳನ್ನೂ ಈಗ ತುಂಬುವುದು ಸಾಧ್ಯವೇ ಆಗಲಾರದಾಗಿ ಹೋಗಿದೆ! ಅಲ್ಲದೆ, ಈಗಲೀಗ ನನಗೆ ಗೊತ್ತಾಗಿ ಹೋಗಿದೆ – ನಿನ್ನ ಚರಮ ಆಯ್ಕೆಯನ್ನು ನೀನು ದಕ್ಕಿಸಿಕೊಂಡೇ ಬಿಟ್ಟಿದ್ದೀಯೆ– ಎಂದು ಗೊತ್ತಾಗಿಯೇ ಹೋಗಿಬಿಟ್ಟಿದೆ....

ಕ್ಯಾಲಿಗುಲ : ನನ್ನನ್ನು ನೀನು ಶಾಂತಿಯಿಂದ ಇರಲು ಬಿಟ್ಟುಕೊಡುವುದು ಸಾಧ್ಯವೇ ಇಲ್ಲ, ಅಲ್ಲವೇ ?

ಸಿಪಿಯೋ : ಆಗಲಿ – ನಿನ್ನ ಇಚ್ಛೆ ನಿನ್ನದಾಗಿಯೇ ಹೋಗಿಬಿಡಲಿ ;

ನಾನಂತೂ ನಿನ್ನನ್ನು ಬಿಟ್ಟು ಹೊರಟುಬಿಟ್ಟದ್ದೇನೆ – ಕಾರಣ, ನೀನು ಏನೆಂದು ಈಗ ನನಗೆ ಅರ್ಥವಾಗತೊಡಗಿದೆ ಎನ್ನಿಸಿದೆ. ನಮ್ಮ ಪಾಲಿಗೆ – ನಿನಗಾಗಲಿ ಅಥವಾ ನಿನ್ನನ್ನು ಹಲವಾರು ರೀತಿಯಲ್ಲಿ ಹೋಲುವ ನನಗಾಗಲಿ – ತೆರೆದ ಅನ್ಯದಾರಿ ಇಲ್ಲವೇ ಇಲ್ಲ. ನಾನು ದೂರಹೋಗಿಬಿಡುವೆ-ಮತ್ತೆಲ್ಲದರ ಅರ್ಥವೇನೆಂದು ಅನ್ವೇಷಿಸಲು ಯತ್ನಿಸುತ್ತಾ ಬಹಳ ಬಹಳ ದೂರ ಹೋಗಿಯೇ ಹೋಗಿಬಿಡುವೆ. (ಕೆಲವು ಕ್ಷಣಗಳ ಕಾಲ ಕ್ಯಾಲಿಗುಲನನ್ನೇ ತದೇಕವಾಗಿ ನೋಡುತ್ತಿದ್ದು, ಉತ್ಕಟವಾದ ಭಾವನೆಯ ವತ್ತಡಕ್ಕೆ ಸಿಕ್ಕಿ) ನಮಸ್ಕಾರ, ಪ್ರಿಯ ಕಾಯಸ್, ನಮಸ್ಕಾರ. ಎಲ್ಲವೂ ಅಂತ್ಯಗೊಂಡಾಗಲಾದರೂ ನಾನು ನಿನ್ನನ್ನು ಪ್ರೀತಿಸುತ್ತಿದ್ದೆ ಎನ್ನುವುದನ್ನೂ ಮರೆಯದೇ ನೆನೆದುಕೋ.

(ಸಿಪಿಯೋ ಬೇರೆಡೆಗೆ ನೋಡುತ್ತಾ ನಿಂತುಬಿಡುತ್ತಾನೆ. ಕ್ಯಾಲಿಗುಲ ಅಸ್ಪಷ್ಟವಾದ ಸನ್ನೆಯೊಂದನ್ನು ಮಾಡುತ್ತಾನೆ. ಆ ನಂತರ, ತುಂಬಾ ಮೃಗೀಯವಾಗಿ ತನನ್ನು ತಾನು ಸಾವರಿಸಿಕೊಂಡು ಕೆಸೋನಿಯಾ ಕಡೆಗೆ ಕೆಲವು ಹೆಜ್ಜೆಗಳನ್ನಿಡುತ್ತಾನೆ.)

ಸಿಪಿಯೋ : ಕ್ಯಾಲಿಗುಲ, ಅಂತೂ ನೀನು ಆಯ್ದುಕೊಂಡೇ ಬಿಟ್ಟೆ –

(ನಿಷ್ಕ್ರಮಿಸುತ್ತಾನೆ.)

ಕೆಸೋನಿಯಾ : ಅವನು ಹೇಳಿದ್ದಾದರೂ ಏನು ?

ಕ್ಯಾಲಿಗುಲ : ನೀನು ಅರ್ಥಮಾಡಿಕೊಳ್ಳುವಂತಹದ್ದು ಯಾವುದೂ ಅಲ್ಲ....ಹೋಗಲಿ, ನನ್ನ ಸಮೀಪಕ್ಕೆ ಬಾ.

(ಸ್ವಲ್ಪ ಕಾಲ ಮೌನ.)

ಕೆಸೋನಿಯಾ : (ಅವನನ್ನೇ ಒರಗಿಕೊಂಡು) ಏನನ್ನು ಯೋಚಿಸುತ್ತಾ ಇದ್ದೀಯೇ ?

ಕ್ಯಾಲಿಗುಲ : ನಾನು ಏಕೆ ತಾನೆ ನಿನ್ನನ್ನು ಇಷ್ಟೊಂದು ದೀರ್ಘಕಾಲ ನನ್ನೊಡನೆ ಇಟ್ಟುಕೊಂಡೇಬಿಟ್ಟೆ ಎಂದು ನನಗೆ ನಾನೆ ಆಶ್ಚರ್ಯ ಪಟ್ಟುಕೊಳ್ಳುತ್ತಾ ಇದ್ದೆ !

ಕೆಸೋನಿಯಾ : ಏಕೆ ? – ಏಕೆ ಎಂವರೆ ನಾನು ನಿನಗೆ ಇಷ್ಟ

ವಾಗಿಬಿಟ್ಟಿರುವುದರಿಂದ–ಅಲ್ಲವೆ ?

ಕ್ಯಾಲಿಗುಲ : ಇಲ್ಲ – ನಾನು ಒಂದು ಪಕ್ಷ ನಿನ್ನನ್ನು ಈ ವೇಳೆಗೆಲ್ಲಾ ಕೊಂದೇಬಿಟ್ಟಿದ್ದರೆ ಆಗ ಒಂದು ಪಕ್ಷ ನಾನು ನಿನ್ನನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತಿತ್ತೆಂದು ನನಗೆ ಅನ್ನಿಸುತ್ತಿದೆ!....

ಕೆಸೋನಿಯಾ : ಹೌಹೌದು–ಅದೂ ಒಂದು ಪರಿಹಾರವೇ ಆಗಿಬಿಡುತ್ತಿತ್ತು—ಹಾಗೊಮ್ಮೆ ಅದು ಈಗಲೂ ಪರಿಹಾರವಾಗಬಲ್ಲುದೇ ಆಗಿಬಿಟ್ಟಿದ್ದರೆ ನನ್ನನ್ನು ನೀನು ಕೊಂದೇ ಬಿಡು. ಆದರೆ, ಏಕೆ....ಓಹ್ ಏಕೆ ನೀನು ಒಂದೇ ಒಂದು ನಿಮಿಷದ ಮಟ್ಟಿಗಾದರೂ ವಿಶ್ರಮಿಶಿಕೊಳ್ಳಬಾರದು ; ಮತ್ತು ಹಾಗೆಯೇ, ಯಾವ ಪೇಚೂ ಇಲ್ಲದೆ ಹಾಯಾಗಿ ಇದ್ದುಬಿಡಬಾರದು ?

ಕ್ಯಾಲಿಗುಲ : ಇದನ್ನೇ ನಾನು ಅನೇಕಾನೇಕ ವರ್ಷಗಳಿಂದ ಮಾಡುತ್ತಲೇ ಬಂದುಬಿಟ್ಟಿದ್ದೇನೆ; ಇರುವುದನ್ನು ಇರುವ ಹಾಗೇ ಹೇಳುವುದೇ ಆದರೆ, ನನಗೆ ಅದು ಅಭ್ಯಾಸವಾಗಿ ಹೋಗಿ, ಜಡ್ಡು ಕಟ್ಟಿಹೋಗಿದೆ.

ಕೆಸೋನಿಯಾ : ಆ ರೀತಿಯಲ್ಲಿ ಹಾಯಾಗಿ ಇದ್ದುಬಿಡುವುದನ್ನು ಕುರಿತು ಅಲ್ಲ ನಾನು ಹೇಳಿದ್ದು–ಓಹ್, ಹೃದಯದ ಹೃದಯದ ಪರಿಶುದ್ಧತೆಯಲ್ಲಿ ಸರಳಾತಿಸರಳವಾಗಿ ಹಾಗೂ ಅತಿ ಸಹಜವಾಗಿ ಜೀವಿಸುವುದು ಮತ್ತು ಪ್ರೇಮಿಸುವುದು ಎಂದರೆ ಏನು ಎನ್ನುವ ಅರಿವೇ ನಿನಗೆ ಆಗುವುದಿಲ್ಲವೆ-ಎಂದು ನಾನು ಹೇಳಿದ್ದು.

ಕ್ಯಾಲಿಗುಲ : ನೀನು ಮಾತನಾಡುತ್ತಿರುವ ಹೃದಯದ ಪರಿಶುದ್ಧತೆ ಇದೆಯಲ್ಲ-ಆದನ್ನು ಪ್ರತಿಯೊಬ್ಬನೂ ತನ್ನದೇ ಆದ ರೀತಿಯಲ್ಲಿ ದಕ್ಕಿಸಿಕೊಂಡೇ ತೀರುತ್ತಾನೆ. ಆದರೆ....ಆದರೆ, ನನ್ನದು ಕೊಟ್ಟಕೊನೆಯವರೆಗೂ ಅವಶ್ಯಕವಾದ ಮೂಲಭೂತ ತತ್ವಗಳನ್ನೇ ಬೆನ್ನುಹತ್ತಿ ಹೋಗಿಬಿಡುವುದು ಏನೇ ಇರಲಿ, ಇವೆಲ್ಲಾ ನಾನು ನಿನ್ನನ್ನು ಕೊಲ್ಲುವಲ್ಲಿ ಅಡ್ಡಿ ಯಾಗುವ ಅವಶ್ಯಕತೆ ಏನೂ ಇಲ್ಲವಲ್ಲ ! (ನಗುತ್ತಾನೆ) ಅದು ನನ್ನ ಬಾಳನ್ನು ಅದೆಷ್ಟು ಸುಂದರವಾಗಿ ಪರಿಪೂರ್ಣಗೊಳಿಸಿಬಿಡುವುದೆಂದರೆ ಅದೇ ಬಾಳಿನ ಉತ್ತುಂಗದೆತ್ತರವಾಗಿಬಿಡುತ್ತದೆ ! !

(ಆತ ಮೇಲೆದ್ದು ಕನ್ನಡಿಯನ್ನು ಅದರ ಅಕ್ಷದ ಮೇಲೆ ಗಿರಿಗಿಟ್ಟಿ ಆಡಿಸಿ, ಕಡೆಗೆ

ತನ್ನತ್ತ ತಿರುಗಿಸಿಕೊಳ್ಳುತ್ತಾನೆ. ಆ ನಂತರ, ನನ್ನ ತೋಳುಗಳನ್ನು ಜೋತು ಬಿಟ್ಟು, ಬಹಳಮಟ್ಟಿಗೆ ಯಾವ ಸಂಜ್ಞೆಗಳೂ ಇಲ್ಲದೆ ಸುಮ್ಮನೆ ವರ್ತುಳ ವರ್ತುಳಾಕಾರವಾಗಿ ನಡೆದಾಡತೊಡಗುತ್ತಾನೆ ; ಅವನ ಮಾತುಗಳು ಮುಂದು ವರೆದಂತೆಲ್ಲಾ ಅವನ ನಡಿಗೆಯಲ್ಲಿ ಒಂದು ಬಗೆಯ ಭಯಾನಕತೆ ಬೆಳೆಯುತ್ತಾ ಹೋಗಿಬಿಡುತ್ತದೆ.) ಎಂತಹ ವೈಚಿತ್ರ್ಯತೆ! - ಕೊಲೆ ಮಾಡದೇ ಉಳಿದುಬಿಟ್ಟಾಗಲೆಲ್ಲಾ ನಾನು ಒಂಟಿ ಎನಿಸುತ್ತಿರುತ್ತದೆ! ಸುಮ್ಮನೆ ಉಸಿರಾಡುತ್ತಿರುವ ಈ ಜನರಿಂದ ನನ್ನ ಜಗತ್ತನ್ನು ತುಂಬಿಕೊಳ್ಳ ಲಾಗಲಿ ಅಥವಾ ನನ್ನ ಬೇಸರವನ್ನು ನೀಗಿಕೊಳ್ಳಲಾಗಲಿ ಆಗುತ್ತಲೇ ಇಲ್ಲ. ನೀನು ಮತ್ತು ನಿನ್ನನ್ನು ಬಿಟ್ಟ ಉಳಿದವರು ಇಲ್ಲಿ ಇರುವಷ್ಟು ಕಾಲವೂ ನನ್ನ ಮೇಲೆ ಅನಂತ ಶೂನ್ಯ ತನ್ನ ಒಂದು ವಿಚಿತ್ರ ಅನುಭವದ ಮುದ್ರೆಯನ್ನು ಒತ್ತಿಯೇ ಒತ್ತಿಬಿಡುತ್ತದೆ–ಮತ್ತು, ಆಗ ನನ್ನ ಕಣ್ಣು ಕೇವಲ ಖಾಲಿ ಗಾಳಿಯನ್ನು ಮಾತ್ರ ದಿಟ್ಟಿಸುತ್ತಾ ಇದ್ದುಬಿಡುತ್ತದೆ. ಇಲ್ಲ – ನಾನು ಹಾಯಾಗಿರುವುದು ಸತ್ತು ಹೋಗಿರುವವರ ಸಖ್ಯದಲ್ಲಿ ಮಾತ್ರ ಸಾಧ್ಯ! (ಪ್ರೇಕ್ಷಣಾಂಗವನ್ನೇ ತದೇಕವಾಗಿ ನೋಡುತ್ತಾ, ಕೊಂಚ ಮುಂದಕ್ಕೆ ಬಾಗಿ ನಿಂತುಬಿಡುತ್ತಾನೆ. ಅವನಿಗೆ ಕೆಸೋನಿಯಾಳ ಪರಿವೆಯೇ ಕಳೆದುಹೋಗಿಬಿಟ್ಟಿರುತ್ತದೆ.) ಸತ್ತು ಹೋಗಿರುವವರು ಮಾತ್ರವೇ ನಿಜವಾದವರು; ಅವರು ನನ್ನಂತಹ ವರು ; ಅವರು ನನ್ನವರು : ಅವರು ನನಗಾಗಿ ಕಾಯುತ್ತಿರುವುದು, ನನ್ನೆಡೆಗೆ ಧಾವಿಸಿಧಾವಿಸಿ ಬರುಬರುತ್ತಾ ದಣಿದುಹೋಗುತ್ತಿರುವುದು ನನ್ನ ದೃಷ್ಟಿಗೆ ಗೋಚರವಾಗತೊಡಗಿದೆ. ಯಾರು ನನ್ನ ಕರುಣೆಯ ಕಟಾಕ್ಷಕ್ಕಾಗಿ ಚೀರಿ ಅಂಗಲಾಚಿದರೋ ಹಾಗೂ ಯಾರ ನಾಲಗೆ ಯನ್ನು ನಾನು ಸೀಳಿ ಎಸೆದೆನೋ....ಅಂತಹ ಆ, ಈ ಜನರೊಡನೆ ನಾನು ಮಾತನಾಡಲೇಬೇಕಾಗಿರುವುದು ಬಹಳ ಬಹಳವಾಗಿ ಬಾಕಿ ಉಳಿದು ಹೋಗಿಬಿಟ್ಟಿದೆ.

ಕೆಸೋನಿಯಾ : ಬಾ–ಬಂದು ನನ್ನ ಮಗ್ಗುಲಲ್ಲಿ ಮಲಗಿ, ನನ್ನ ಮಂಡಿ ಗಳಲ್ಲಿ ನಿನ್ನ ತಲೆಯನ್ನು ಒರಗಿಸು ಬಾ.

(ಕ್ಯಾಲಿಗುಲ ಅವಳು ಹೇಳಿದಂತೆಯೇ ಮಾಡುತ್ತಾನೆ.)

ಇದು ಎಷ್ಟೋ ಎಷ್ಟೊ ಉತ್ತಮ, ಅಲ್ಲವೆ? ಈಗ ವಿಶ್ರಮಿಸಿಕೋ.... ಅದೆಷ್ಟು ಪ್ರಶಾಂತವಾಗಿದೆ ಈ ತಾಣ !

ಕ್ಯಾಲಿ[illegible]ಾಂತವಾಗಿದೆ ? – ನೀನು ಸುಮ್ಮನೆ ಉತ್ಪ್ರೇಕ್ಷೆಮಾಡುತ್ತಿದ್ದೀಯೆ - ನನ್ನ ಪ್ರಿಯೆ, ಕೇಳು!....(ದೂರದಲ್ಲಿ ಕತ್ತಿ ಮತ್ತು ಕವಚಗಳ ಶಬ್ದದಂತಹ ಲೋಹಗಳ ತಾಕಲಾಟದ ಶಬ್ದ.) ನಮ್ಮ ಸುತ್ತ ಮುತ್ತಲ ಈ ಸಹಸ್ರಾರು ಸಣ್ಣ ಪುಟ್ಟ ಸಪ್ಪಳಗಳನ್ನು ಕೇಳುತ್ತಿದ್ದೀಯೇನು? –ದ್ವೇಷ ತನ್ನ ಮಿಗವನ್ನು ಕೊಬ್ಬಿಸುತ್ತಾ ಮುಂದೆ ಮುಂದೆ ಸಾಗುತ್ತಲೇ ಇದ್ದುಬಿಟ್ಟಿದೆ....

(ಗುಸುಗುಸು ಮಾತುಗಳು, ಹೆಜ್ಜೆಯ ಸಪ್ಪಳಗಳು ಕೇಳಿ ಬರುತ್ತವೆ)

ಕೆಸೋನಿಯಾ : ಯಾರಿಗೂ ಮುನ್ನುಗ್ಗಿ ಬರುವ ಧೈರ್ಯವಿಲ್ಲ....

ಕ್ಯಾಲಿಗುಲ : ಹೌದು — ಮೂರ್ಖತೆ....

ಕೆಸೋನಿಯಾ : ಮೂರ್ಖತೆಯಿಂದ ಕೊಲೆ ಮಾಡಲಾಗುವುದಿಲ್ಲ. ಅದು ಮನುಷ್ಯರ ಚಟುವಟಿಕೆಗಳನ್ನು ಮಂದಗೊಳಿಸಿಬಿಡುತ್ತದೆ.

ಕ್ಯಾಲಿಗುಲ : ಮೂರ್ಖತೆ ಕೊಲೆಗಡುಕವೂ ಆಗಬಲ್ಲದು, ಕೆಸೋನಿಯಾ ತನ್ನ ಗೌರವಕ್ಕೆ ಧಕ್ಕೆ ಬಂದಿದೆ ಎಂದು ಮೂರ್ಖ ಅಂದು ಕೊಂಡುಬಿಟ್ಟಾಗ ಯಾರಿಗೂ ಹಾಗೂ ಯಾವುದಕ್ಕೂ ಅವನನ್ನು ತಡೆಯುವುದು ಸಾಧ್ಯವೇ ಆಗುವುದಿಲ್ಲ. ಅಲ್ಲ – ನಾನು ಯಾರ ಯಾರ ತಂದೆಯನ್ನು ಅಥವಾ ಮಕ್ಕಳನ್ನು ಕೊಂದಿದ್ದೇನೋ ಅವರುಗಳೆಲ್ಲ ನನ್ನನ್ನು ಕೊಲ್ಲಲು ಕಾದುಬಿಟ್ಟಿದ್ದಾರೆ; ಹಾಗೆಯೇ ಅವರುಗಳು ನನ್ನನ್ನು ಅರ್ಥಮಾಡಿಕೊಂಡೂ ಬಿಟ್ಟಿದ್ದಾರೆ. ಸಾಲದಕ್ಕೆ ಅವರು ನನ್ನೊಡನೆಯೇ ಇದ್ದೂ ಬಿಟ್ಟಿದ್ದಾರೆ; ನನ್ನದೇ ರುಚಿ ಅವರುಗಳ ಬಾಯಿಯಲ್ಲೂ ಇದೆ! ಆದರೆ, ಉಳಿದವರ–ಯಾರನ್ನು ನಾನು ನಗೆಯ ವಸ್ತುಗಳನ್ನಾಗಿಸಿದ್ದೆನೇನೋ ಅವರುಗಳ – ಗಾಯಗೊಂಡಿರುವ ಪ್ರತಿಷ್ಠೆಯ ವಿರುದ್ಧ ನನ್ನಲ್ಲಿ ಯಾವ ರಕ್ಷೆಯೂ ನನಗೆ ಇಲ್ಲವೇ ಇಲ್ಲವಾಗಿ ಹೋಗಿದೆ.

ಕೆಸೋನಿಯಾ : (ಆಸೆಯಿಂದ) ನಾವುಗಳು ನಿನ್ನನ್ನು ರಕ್ಷಿಸಿಕೊಳ್ಳು ತ್ತೇವೆ- ನಿನ್ನನ್ನು ಪ್ರೀತಿಸುವ ನಾವು ಬಹು ಸಂಖ್ಯೆಯಲ್ಲಿದ್ದೇವೆ.

ಕ್ಯಾಲಿಗುಲ : ಆ ಸಂಖ್ಯೆ ದಿನದಿನವೂ ಬಡವಾಗುತ್ತಲೇ ಸಾಗಿದೆ-ಇದು ಆಶ್ಚರ್ಯಪಡುವ ಮಾತೇನೂ ಅಲ್ಲ . ಹಾಗೆ ಶಕ್ತಿ ಬಳಕ್ಕೆ ಏನೇನು ಬೇಕೋ ಅದನ್ನೆಲ್ಲಾ ನಾನು ಮಾಡಿ ಮುಗಿಸಿಯೇಬಿಟ್ಟಿದ್ದೇನೆ ! ಮತ್ತು ಹೀಗೆಲ್ಲಾ ಆಗಿರುವುದರಿಂದಾಗಿ-ನಾವು ಯೋಗ್ಯರಾಗಿಯೇ ಉಳಿದು ಬಿಡೋಣ-ಮೂರ್ಖತೆ ಒಂದೇ ಅಲ್ಲ ನನ್ನ ವಿರುದ್ಧ ಎದ್ದು ನಿಂತಿರುವುದು: ಸುಖವಾಗಿ ಇರಬಯಸುವ ಜನತೆಯ ಧೈರ್ಯ ಮತ್ತು ಸರಳ ಭಕ್ತಿಯೂ ನನ್ನ ವಿರುದ್ಧ ಎದ್ದು ನಿಂತು ಬಿಟ್ಟಿವೆ !

ಕೆಸೋನಿಯಾ : (ಅವನದೇ ದಾಟಿಯಲ್ಲಿ) ಇಲ್ಲ- ಅವರುಗಳು ನನ್ನನ್ನು ಕೊಲ್ಲುವುದಿಲ್ಲ, ಅಥವಾ ಹಾಗೂ ಒಮ್ಮೆ ಅವರು ನಿನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದ್ದೇ ಆದರೆ, ಅವರುಗಳು ನಿನ್ನ ಮೇಲೆ ಕೈ ಮಾಡುವ ಮೊದಲೇ ಸ್ವರ್ಗದಿಂದ ಅಗ್ನಿ ಬಂದು ಅವರೆಲ್ಲರನ್ನೂ ಆಸ್ಫೋಟಿಸಿಯೇ ಆಸ್ಫೋಟಿಸಿಬಿಡುತ್ತದೆ.

ಕ್ಯಾಲಿಗುಲ : ಸ್ವರ್ಗದಿಂದ ಅಗ್ನಿ !-ಸ್ವರ್ಗ ಎನ್ನುವುದೇ ಇಲ್ಲ, ನನ್ನ ಬಡ ಪ್ರಿಯ ಹೆಣ್ಣೇ !(ಆಸೀನನಾಗುತ್ತಾ) ಆದರೆ, ಇದ್ದಕ್ಕಿದ್ದಂತೆ ನೀನು ಈ ಬಗೆಯಲ್ಲಿ ಭಕ್ತಿಗೆ ಮಣಿದು ಹೋಗುತ್ತಿರುವುದಾದರೂ ಏಕೆ?ನಾನು ನಾನು ಜ್ಞಾಪಿಸಿಕೊಳ್ಳುತ್ತಿರುವುದು ಸರಿಯಾಗಿ ಇರುವುದೇ ಆದರೆ, ನಮ್ಮಿಬ್ಬರ ನಡುವಣ ಒಪ್ಪಂದದಲ್ಲಿ ಭಕ್ತಿಗೆ ಮಣಿಯುವುದರ ಒಕ್ಕಣೆಯೇ ಇಲ್ಲವಲ್ಲ ! ?

ಕೆಸೋನಿಯಾ : (ಗಾದಿಯಿಂದ ಮೇಲೆದ್ದು ಶತಪಥ ಹಾಕುತ್ತಾ) ನಿನಗೆ ಅರ್ಥ ಆಗುವುದೇ ಇಲ್ಲವೇ ? ನೀನು ಅನ್ಯರನ್ನು ಕೊಲೆ ಮಾಡುತ್ತಲೇ ಇರುವುದನ್ನು-ಅದಕ್ಕೆ ಪ್ರತಿಯಾಗಿ ನಿನ್ನನ್ನು ಅವರು ಕೊಂದೇ ತೀರುತ್ತಾರೆನ್ನುವುದು ಕೂಡ, ನನಗೆ ಗೊತ್ತಾಗದೇ ಇರುವಂತೆ ಆಗಿರುವುದನ್ನು-ನೋಡುತ್ತಲೇ ಇದ್ದು ಬಿಡುವುನು ಸಾಕಾಗಲೇ ಇಲ್ಲವೆ ನನಗೆ ? ; ನಿನ್ನನ್ನು ನನ್ನ ತೋಳುಗಳಲ್ಲಿ ಅಪ್ಪಿದಾಗ, ನೀನು ಒರಟೊರಟಾಗಿ ಮತ್ತು ಕ್ರೂರಿಯಾಗಿ,ಹಾಗೆಯೇ ... ವಿಷಮತೆಯಿಂದ

ಕುದಿಕುದಿದುಹೋಗುತ್ತಿರುವುದನ್ನು ಅನುಭವಿಸುವುದಲ್ಲದೆ, ನೀನು ನನ್ನ ಮೇಲೆ ಮಲಗಿ ಕೊಲೆಯ ಕವುಟು ಉಸಿರನ್ನು ನನ್ನ ಮೇಲೆ ಬಿಡುವುದಷ್ಟೇ ಅಷ್ಟು ಸಾಕೇನು ನನ್ನ ಪಾಲಿಗೆ? ದಿನದಿನವೂ ನಿನ್ನ ಲ್ಲಿನ ಎಲ್ಲ ಮಾನವೀಯ ಗುಣಗಳೂ ಸ್ವಲ್ಪ ಸ್ವಲ್ಪವಾಗಿಯೇ ಸತ್ತು ಹೋಗುತ್ತಿರುವುದನ್ನು ನಾನು ನೋಡುತ್ತಲೇ ಇದ್ದು ಬಿಟ್ಟದ್ದೇನೆ. (ಕ್ಯಾಲಿಗುಲನ ಕಡೆ ತಿರುಗಿ) ಓಹ್–ನನಗೆ ಗೊತ್ತಾಗಿ ಹೋಗಿದೆ–ನನಗೆ ವಯಸ್ಸಾಗುತ್ತಾ ಇದೆ ಎಂದೂ, ನನ್ನ ಸೌಂದರ್ಯ ಕ್ಷೀಣಿಸುತ್ತಾ ಹೋಗುತ್ತಿದೆ ಎಂದೂ ನನಗೆ ಗೊತ್ತೇ ಗೊತ್ತಾಗಿಹೋಗಿದೆ; ಹೋಗುತ್ತಿದೆ: ಆದರೆ, ನನಗೆ ಈಗಿರುವ ಕಾಳಜಿ ಎಲ್ಲಾ ನಿನ್ನನ್ನು ಕುರಿತಾದುದು ಮಾತ್ರ; ಆ ಕಾಳಜಿ ಎಷ್ಟರ ಮಟ್ಟಿಗೆ ಇದೆ ಎಂದರೆ ನೀನು ನನ್ನನ್ನು ಪ್ರೀತಿಸುತ್ತೀಯೊ ಇಲ್ಲವೋ ಎಂದು ಕೂಡ ತಿಳಿಯುವ ಗೊಡವೆಗೇ ನಾನು ಹೋಗಲಾರದಷ್ಟು. ನನಗೆ ಬೇಕಾಗಿರುವುದೆಲ್ಲಾ ನೀನು ಗುಣಮುಖನಾಗುವುದು; ಸಂಪೂರ್ಣವಾಗಿ ಆರೋಗ್ಯವಂತನಾಗಿ ಬಿಡುವುದು ಮಾತ್ರ. ನೀನು ಇನ್ನೂ ಚಿಕ್ಕವನು–ನಿಜಕ್ಕೂ: ನಿನ್ನ ಮುಂದೆ ಇಡೀ ಬದುಕಿಗೆ ಬದುಕೇ ತನ್ನ ಪೂರ್ಣಾವಸ್ಥೆಯಲ್ಲಿ ತೆರೆದು ಬಿದ್ದಿದೆ. ಅಲ್ಲದೆ, ನನಗೆ ನೀನೇ ಹೇಳು – ಸಂಪೂರ್ಣವಾದ ಬದುಕಿಗಿಂತಲೂ ಮಿಗಿಲಾದುದು ಏನನ್ನೂ ತಾನೆ ನೀನು ಬಯಸಬಲ್ಲೆ, ಹೇಳು?

ಕ್ಯಾಲಿಗುಲ: (ಮೇಲೇಳುತ್ತಾ ಅವಳನ್ನು ನೆಟ್ಟದೃಷ್ಟಿಯಲ್ಲೇ ನೋಡುತ್ತಾ) ...ರ್ಘಕಾಲದಿಂದ ನೀನು ನನ್ನೊಡನೆಯೇ ಇದ್ದೀಯೆ–ಬಹಳ ....ಬಹಳ ದೀರ್ಘಕಾಲದಿಂದ ಇದ್ದು ಬಿಟ್ಟದ್ದೀಯೆ...

ಕೆಸೋನಿಯಾ: ಹೌದು, ಹೌದು....ಆದರೂ, ನೀನು ನನ್ನನ್ನೂ ನಿನ್ನ ಜೊತೆಯಲ್ಲೇ ಇಟ್ಟುಕೊಳ್ಳುತ್ತೀಯೆ, ಅಲ್ಲವೆ?

ಕ್ಯಾಲಿಗುಲ: ನನಗೆ ಗೊತ್ತಿಲ್ಲ: ನನಗೆ ಗೊತ್ತಿರುವುದೆಲ್ಲಾ ನಾವು ಒಟ್ಟೊಟ್ಟಿಗೇ ಕಳೆದ ಅತಿ ಉತ್ಕಟ ಹಾಗೂ ಆನಂದರಹಿತ ಕೇಳಿಗಳ ರಾತ್ರಿಗಳಿಂದಾಗಿ, ಅಲ್ಲದೇ, ನಾನು ಹೇಗೆ ಹೇಗೆಲ್ಲಾ ಇದ್ದೇನೋ ಹಾಗೆ ಹಾಗೆಲ್ಲಾ ನನ್ನನ್ನು ಅರಿತಿರುವವಳು ನೀನೊಬ್ಬಳೇ ಒಬ್ಬ

ಳಾದ್ದರಿಂದಾಗಿ, ನೀನು ಇನ್ನೂ ಈಗಲೂ ನನ್ನೊಡನೆಯೇ ಇದ್ದು ಬಿಟ್ಟಿರುವಂತಾಗಿಹೋಗಿದೆ. (ಅವನು ಅವಳನ್ನು ತನ್ನ ತೋಳುಗಳಲ್ಲಿ ಸ್ವೀಕರಿಸಿಕೊಂಡು, ಬಲಗೈಯಿಂದ ಅವಳ ತಲೆಯನ್ನು ಹಿಂದಕ್ಕೆ ಸ್ವಲ್ಪಮಟ್ಟಿಗೆ ಬಗ್ಗಿಸಿ–) ನನಗೆ ಈಗ ಇಪ್ಪತ್ತೊಂಬತ್ತು ವರ್ಷ– ನಿಜ, ನಿಜಕ್ಕೂ ಅಂತಹ ಹೆಚ್ಚಿನ ವಯಸ್ಸೇನೂ ಅಲ್ಲ. ಆದರೂ, ಸ್ವಲ್ಪ ಹೆಚ್ಚೂ ಕಮ್ಮಿ ನನ್ನ ಬದುಕು ಇಷ್ಟೊಂದು ದೀರ್ಘವಾಗಿ ಕಾಣಿಸುತ್ತಿದೆಯಾಗಿ, ಇಂದು ನನ್ನ ಗತ ಸ್ವಾರ್ಥಗಳು ಅದೆಷ್ಟು ಚಿಂದಿಪಂದಿ ಮತ್ತು ಚೂರುಪಾರುಗಳಿಂದ ಕಿಕ್ಕಿರಿದು ತುಂಬಿಹೋಗಿದೆ ಎಂದರೆ– ಸತ್ಯಕ್ಕೂ ಅದೆಷ್ಟು ಪರಿಪೂರ್ಣವಾಗಿಹೋಗಿದೆ ಎಂದರೆ– ನೀನು ಮಾತ್ರವೇ ಈ ಬಾಳ್ವೆಯ ಕಟ್ಟಕಡೆಯ ಸಾಕ್ಷಿಯಾಗಿ ಉಳಿದುಬಿಡುವಷ್ಟು! ಎಲ್ಲಕ್ಕೂ ಹೆಚ್ಚಾಗಿ, ನೀನು ಸಧ್ಯದಲ್ಲೇ ಆಗಿ ಹೋಗಲಿರುವ ವೃದ್ಧ ಸ್ತ್ರೀಯ ಬಗ್ಗೆ ನನ್ನಲ್ಲಿ ಉದ್ಭವಿಸಿಬಿಡುವ ನಾಚಿಕೆಗ್ರಸ್ತ ಕೋಮಲತೆಯಿಂದ ನನ್ನನ್ನು ನಾನು ತಪ್ಪಿಸಿಕೊಳ್ಳುವುದು ನನ್ನಿಂದ ಸಾಧ್ಯವೇ ಆಗುವುದಿಲ್ಲ.

ಕೆಸೋನಿಯಾ: ನನಗೆ ಹೇಳು– ಇದರ ಅರ್ಥ ನನ್ನನ್ನೂ ನೀನು ನಿನ್ನೊಡನೆಯೇ ಇಟ್ಟುಕೊಂಡು ಬಿಡುತ್ತೀಯೆ, ಎಂದು ತಾನೆ?

ಕ್ಯಾಲಿಗುಲ: ನನಗೆ ಗೊತ್ತಿಲ್ಲ!– ನನಗೆ ಗೊತ್ತಿರುವುದೆಲ್ಲಾ– ಅದ. ಎಲ್ಲಕಿಂತ ಭೀಕರವಾದ ಬೇರೆಯೆ ಆದ ವಿಚಾರ– ಈ ನಾಚಿಕೆಗ್ರಸ್ತ ಕೋಮಲತೆ ಇದೆಯಲ್ಲ, ಅದು ನನ್ನ ಬದುಕು ಈ ದಿನದವರೆಗೂ ಮರೆತುಬಿಟ್ಟ ಒಂದು ಪ್ರಾಮಾಣಿಕ ಭಾವನೆ–ಎನ್ನುವುದು ಮಾತ್ರ. (ಕೆಸೋನಿಯಾ ಅವನಿಂದ ತನ್ನನ್ನು ತಾನು ಬಿಡಿಸಿಕೊಂಡು ಮುಂದೆ ಮುಂದೆ ಹೋದಂತೆಲ್ಲಾ ಆತ ಅವಳನ್ನು ಹಿಂಬಾಲಿಸುತ್ತಾನೆ; ಆಗ ಅವಳು ತಾನಾಗಿಯೇ ತನ್ನ ಬೆನ್ನನ್ನು ಅವನ ಎದೆಗೆ ಒತ್ತುತ್ತಾಳೆ; ಆಗ ಆತ ಅವಳ ಸುತ್ತ ತನ್ನ ತೋಳನ್ನು ಬಳಸುತ್ತಾನೆ.) ಕಟ್ಟಕಡೆಯ ಸಾಕ್ಷಿಯೂ ಮರೆಯಾಗಿ ಹೋಗಿಬಿಡುವುದೇ ಒಳ್ಳೆಯದಲ್ಲವೆ?

ಕೆಸೋನಿಯಾ: ಆ ಸಾಕ್ಷಿಗೆ ಯಾವುದೇ ಪ್ರಾಮುಖ್ಯತೆಯೂ ಇಲ್ಲ ನನಗೆ ಗೊತ್ತಿರುವುದೆಲ್ಲಾ ಇಷ್ಟೇ– ನಾನು ಸುಖಿಯಾಗಿದ್ದೇನೆ;

ನೀನು ಈಗಷ್ಟೇ ಹೇಳಿದ್ದಂತೂ ನನ್ನನ್ನು ಮತ್ತಷ್ಟು ಸುಖಿಯನ್ನಾಗಿ ಮಾಡಿಬಿಟ್ಟಿದೆ. ಆದರೆ, ನನ್ನ ಈ ಸುಖವನ್ನು ನಾನು ನಿನ್ನೊಡನೆ ಹಂಚಿಕೊಳ್ಳಬಾರದು?

ಕ್ಯಾಲಿಗುಲ : ನಾನು ಅಸುಖಿ ಎಂದು ಯಾರು ತಾನೆ ಹೇಳುತ್ತಾರೆ?

ಕೆಸೋನಿಯಾ : ಸುಖ ದಯಾಪೂರ್ಣವಾದುದು; ರಕ್ತಪಾತದಲ್ಲಿ ಅದು ಬೆಳೆಯಲಾಗದ್ದು.

ಕ್ಯಾಲಿಗುಲ : ಹಾಗಾದರೆ, ಎರಡು ಬಗೆಯ ಸುಖಗಳು ಇದ್ದೇ ತೀರಬೇಕು ಹಾಗೂ ನಾನು ಕೊಲೆಪಾತಕವಾದ ಸುಖವನ್ನು ಆಯ್ದುಕೊಂಡುಬಿಟ್ಟಿದ್ದೇನೆ; ಆದ್ದರಿಂದಲೇ ನಾನು ಸುಖಿಯಾಗಿದ್ದೇನೆ. ನಾನು ನೋವಿನ ತುಟ್ಟತುದಿಯನ್ನು ತಲುಪಿಬಿಟ್ಟಿದ್ದೇನೆ ಎಂದುಕೊಂಡಿದ್ದ ಕಾಲವೂ ಒಂದಿತ್ತು. ಆದರೆ, ಇಲ್ಲ – ಯಾರು ಬೇಕಾದರೂ ಅದನ್ನು ಮೀರಿ ಹೋಗಿಬಿಡಲೂಬಹುದು. ನೋವಿನ ಮುಂದಾಣದ ಆಚೆ ಅತ್ಯದ್ಭುತವಾದ ಗೊಡ್ಡು ಸುಖ ಒಂದು ತೆರೆದು ಬಿದ್ದಿದೆ ನನ್ನತ್ತ ನೋಡು : (ಆಕೆ ಆತನತ್ತ ನೋಡುತ್ತಾಳೆ) ನನಗೆ ನಗು ಬರುತ್ತಿದೆ – ಕೆಸೋನಿಯಾ, ಇಡೀ ರೋಮಿಗೆ ರೋಮೇ ಡ್ರುಸಿಲ್ಲಾಳ ಹೆಸರನ್ನು ಉಚ್ಚರಿಸುವುದನ್ನು ಹೇಗೆ ಎಚ್ಚರಿಕೆಯಿಂದ ತಪ್ಪಿಸಿಬಿಟ್ಟಿದೆ ಎಂದು ನಾನು ಯೋಚಿಸಿದ ಹಾಗೆಲ್ಲಾ ನನಗೇ ನಗು ಬರುತ್ತದೆ! ಆದರೆ ಸಮಸ್ತ ರೋಮ್ ವಸ್ತುಸ್ಥಿತಿಯನ್ನು ತಪ್ಪುತಪ್ಪಾಗಿ ತಿಳಿದುಕೊಂಡು ಬಿಟ್ಟಿದೆ. ನನಗೆ ಆಗಲೇ ಅರಿವಾಗಿ ಹೋಗಿತ್ತು—ಪ್ರೇಮ ಒಂದೇ ಒಂದು ನನಗೆ ಸಾಕಾಗುವುದಿಲ್ಲ ಎಂದು : ಈಗಲೂ, ನಿನ್ನತ್ತ ನೋಡಿದಾಗಲೆಲ್ಲ ಅದೇ ಅರಿವು ಮತ್ತೆ ಮತ್ತೆ ಮೂಡಿ ಬಂದುಬಿಡುತ್ತಿರುತ್ತದೆ! ಒಬ್ಬರನ್ನು ಪ್ರೇಮಿಸುವುದು ಎಂದರೆ ಆ ವ್ಯಕ್ತಿಯ ಜೊತೆಜೊತೆಗೇ ವೃದ್ಧನಾಗುತ್ತಾ ಹೋಗಿಬಿಡುವುದು ಎಂದೇ ಅರ್ಥ; ಆ ಬಗೆಯ ಪ್ರೇಮ ಜೀವಂತವಾಗಿದೆ – ಆದರೆ, ಅದರ ಜೀವಂತತೆ ನನ್ನ ಬದುಕಿನ ಶ್ರೇಣಿಯ ಹೊರಗೆ ಮಾತ್ರ ಸಾಧ್ಯ. ಮೃತ ಡ್ರುಸಿಲ್ಲಾಳಿಗಿಂತಲೂ ವೃದ್ಧ ಡ್ರುಸಿಲ್ಲಾ ಬಹಳ ಬಹಳ ಮಟ್ಟಿಗೆ ಹೊಲಸಾಗಿ ಹೋಗಿ ಬಿಡುತ್ತಿದ್ದಳು. ತಾನು

ಪ್ರೀತಿಸುವ ಹೆಣ್ಣನ್ನು ಎಲ್ಲಿಂದಲೋ ಬರುವ ಸಾವು ಕಿತ್ತುಕೊ
ಹೋಗಿಬಿಡುವುದರಿಂದಲೇ ಮನುಷ್ಯ ದುಃಖಿ
ಎಂದು ಬಹಳಷ್ಟು ಜನರ ಕಲ್ಪನೆ. ಆದರೆ, ಅ ಏಕೆ ೀಳುಗಳಲ್ಲಿ
ಇದಕಿಂತಲೂ ತೀರ ಹಗುರವಾದುದು – ಅಲ್ಲಗೆ, ಹಗುರತೆ
ಬಹಳಕಾಲ ಉಳಿಯುವುದಿಲ್ಲ – ಎನ್ನುವುದರ ಅನ್ವೇಷಣೆಯ
ಬಂದುದು. ದುಃಖ ಒಂದು ಒಣ ಪ್ರತಿಷ್ಠೆ, ಅಷ್ಟೇ....
ನೀನೇ ನೋಡುತ್ತಿರುವಂತೆ ನನ್ನಲ್ಲಿ ಯಾವುದೇ ನೆಪಗಳಾಗ
ನಿಜವಾದ ಪ್ರೇಮದ ನೆರಳಾಗಲಿ, ಕಹಿ ಅನುಭವವಾಗಲಿ ಅಥವ
ಅಗಾಧ ವಿಷಾದಗಳಾಗಲಿ ಇಲ್ಲವೇ ಇಲ್ಲ. ನನ್ನನ್ನು ರಕ್ಷಿಸಲೆಂ
ವಾದ ಮಾಡಲು ನನ್ನಲ್ಲಿ ಏನೇನೂ ಇಲ್ಲವೂ ಇಲ್ಲ! ಆದ
ಅನೇಕಾನೇಕ ವರ್ಷಗಳಲ್ಲಿ ಇದ್ದುದಕಿಂತಲೂ ಹೆಚ್ಚು ಮುಕ್ತ
ನಾಗಿ ನಾನು ಎಂದಿಗಿಂತಲೂ ಇಂದು ಇರುವುದನ್ನು ನೀನೇ ಕಾಣುತ್ತ
ಲಿದ್ದೀಯೆ; ಸ್ಮೃತಿ-ವಿಸ್ಮೃತಿಗಳಿಂದ, ಭ್ರಮೆ-ಮಾಯೆಗಳಿಂ
ನಾನು ಹೇಗಿದ್ದೆನೋ ಹಾಗೆ ಇದ್ದುಕೊಂಡೇ ಮುಕ್ತನಾಗಿ ಹೋ
ಬಿಟ್ಟಿದ್ದೇನೆ! (ಕಹಿ ನಗೆ ನಗುತ್ತಾನೆ) ನನಗೀಗ ಯಾವುದೂ
ಏನು ಏನೊಂದೂ, ನಿತ್ಯವಲ್ಲವೆಂದು ಗೊತ್ತಾಗಿಹೋಗಿಬಿಟ್ಟಿದೆ
ಈ ಅರಿವಿನ ಅರ್ಥವೇನೆಂದು ಯೋಚಿಸು! ಇಡೀ ಇತಿಹಾಸದಲ್ಲೇ
ಬಗೆಯ ಸ್ವಾತಂತ್ರ್ಯವನ್ನು, ಈ ವಿಧದ ಭ್ರಮಾತ್ಮಕವಾದ ಸುಖವನ
ಸತ್ಯಕ್ಕೂ ದೊರಕಿಸಿಕೊಂಡವರು ನಮ್ಮ ಪೈಕಿ ಇಬ್ಬರೋ ಅಥವ
ಮೂವರೋ ಮಾತ್ರ ಇದ್ದರು. ಅಯಿತು, ಕೆಸೋನಿಯಾ, ನೀನಂತ
ಅತ್ಯಪೂರ್ವವಾದ ನಾಟಕ ಒಂದನ್ನು ನೋಡಿಯೇಬಿಟ್ಟೆ! ನಿನಗಾ
ತೆರೆ ಬೀಳುವ ಕಾಲ ಇದೋ ಇದೇ ತಾನೇ ಪ್ರಾಪ್ತವಾಗಿಬಿಟ್ಟಿದೆ!
(ಅವಳ ಹಿಂದೆ ನಿಂತು ಮುಂಗೈಗಳಿಂದ ಅವಳ ಕೊರಳನ್ನು ಬಳಸುತ್ತಾನೆ

ಕೆಸೋನಿಯಾ : (ವಿಭ್ರಾಂತಳಾಗಿ) ಇಲ್ಲ, ಇದು ಸಾಧ್ಯವಿಲ್ಲ! ಇಂತ
ಭೀಕರ ಸ್ವಾತಂತ್ರ್ಯವನ್ನು ಹೇಗೆ ತಾನೇ ನೀನು ಸುಖವೆಂದು ಕರೆದ
ಕೊಂಡುಬಿಡುತ್ತಿದ್ದೀಯೆ?

ಕ್ಯಾಲಿಗುಲ : (ಕೆಸೋನಿಯಾಳ ಕತ್ತಿನ ಮೇಲಿನ ಮುಷ್ಠಿಯನ್ನು ಸ್ವಲ್ಪ ಸ್ವಲ್ಪವಾಗಿ ಬಿಗಿಗೊಳಿಸುತ್ತಾ) ಸುಖ ಎಂದರೆ ಇದೇ, ಕೆಸೋನಿಯಾ– ನನಗೆ ಇಂತಹ ಮುಕ್ತಿಯೊಂದರ ಬಯಕೆಯೇ ಇಲ್ಲವಾಗಿ ಹೋಗಿಬಿಟ್ಟಿದ್ದರೆ ನಾನೊಬ್ಬ ಸಂತೃಪ್ತ ಮಾನವನಾಗಿಬಿಡುತ್ತಿದ್ದೆ– ಧನ್ಯವಾದಗಳು ಈ ಸ್ವಾತಂತ್ರ್ಯದ ಬಯಕೆಗೆ-ಮತ್ತು ಏಕಾಂತತೆಯ ದೈವೀ ಸದೃಶ ಜ್ಞಾನೋದಯವನ್ನು ಇದರಿಂದಾಗಿಯೇ ನಾನು ಗೆದ್ದು ಬಿಡುವಂತೆ ಆಗಿ ಹೋದುದಕ್ಕೆ. (ಆತ ಅವಳ ಕತ್ತನ್ನು ಹಿಸುಕುತ್ತಾ ಹೋದಂತೆಲ್ಲಾ ಅವನ ಭಾವಪರವಶತೆಯೂ ಅವನ ಹಿಸುಕಾಟದಷ್ಟೇ ವೇಗ ದಲ್ಲಿ ಬೆಳೆಯುತ್ತಾ ಹೋಗಿಬಿಡುತ್ತಿರುತ್ತದೆ. ಪ್ರತಿಭಟಿಸಲಾಗದ ಕೆಸೋನಿಯಾ ತನ್ನ ಅರೆತೆರೆದ ಕೈಗಳನ್ನು ಅತಿ ದೀನತೆಯಲ್ಲಿ ಬೇಡುವ ಪ್ರಾರ್ಥನಾ ಭಂಗಿಯಲ್ಲಿ ಜೋಡಿಸಿ ಹಿಡಿದಿದ್ದಾಳೆ. ತನ್ನ ತಲೆಯನ್ನು ಬಗ್ಗಿಸಿರುವ ಕ್ಯಾಲಿಗುಲ ಅವಳ ಕಿವಿಯಲ್ಲಿ ಮಾತನಾಡುತ್ತಾ ಹೋಗಿಬಿಡುತ್ತಾನೆ) ನಾನು ಜೀವಿಸುತ್ತಲೂ ಇದ್ದೇನೆ; ಹಾಗೆಯೇ ನಾನು ಕೊಲೆ ಮಾಡು ತ್ತಲೂ ಇದ್ದೇನೆ; ವಿಧ್ವಂಸಕನ ಪಾಶವೀ ಹರ್ಷಾವೇಶದ ಶಕ್ತಿಯನ್ನೇ –ಯಾವ ಶಕ್ತಿಯನ್ನು ಸೃಷ್ಟಿಕರ್ತನ ಶಕ್ತಿಯೊಡನೆ ಹೋಲಿಸಿದ್ದೇ ಆದರೆ ಅದು ಕೇವಲ ಹಸುಗೂಸಿನ ಆಟ ಮಾತ್ರವಾಗಿ ಬಿಡುತ್ತದೋ ಆ ಶಕ್ತಿಯನ್ನೇ–ನಾನು ಪ್ರಯೋಗಿಸುತ್ತಲೂ ಇದ್ದೇನೆ. ಅಲ್ಲದೆ, ಇದೇ, ಸುಖ ಎಂದರೇ ಇದೇ ಆಗಿಹೋಗಿಬಿಟ್ಟಿದೆ ! ; ಈ ಸಹ್ಯಾತೀತ ವಾದ ನಿರ್ವಾಣ, ನಾಶಗೈಯುವ ತಿರಸ್ಕಾರ, ರಕ್ತದ ಓಕುಳಿ, ನನ್ನ ಸುತ್ತಮುತ್ತಲ ದ್ವೇಷಾಗ್ನಿ ಮತ್ತು ಯಾರು ತನ್ನ ಬಾಳಿನ ಉದ್ದಕ್ಕೂ ಶಿಕ್ಷೆಗೇ ಗುರಿಯಾಗದ ಕೊಲೆಗಡುಕನ ಅವರ್ಣನೀಯವಾದ ಆನಂದ ವನ್ನೇ ಶುಶ್ರೂಷೆ ಮಾಡುತ್ತಾ ಹಾಗೂ ಆ ಆನಂದವನ್ನೇ ಮಿಕಿಮಿಕಿ ನೋಡುತ್ತಾ ನಿಂತನೋ ಆ ಮನುಷ್ಯನ ವೈಭವ ಪೂರ್ಣವಾದ ಏಕಾಂತತೆ, ಮಾನವ ಜೀವಿತಗಳನ್ನೇ ಹೊಸಕಿ ಹಾಕಿಬಿಡುವ ನಿಷ್ಕ ರುಣೆಯಾದ ತರ್ಕ (ತನಗೆ ತಾನೆ ನಗುತ್ತಾ) – ಇವುಗಳು ಮಾತ್ರವೇ ಸುಖ; ಬೇರಾವುದೂ ಅಲ್ಲವೇ ಅಲ್ಲವಾಗಿ ಹೋಗಿಬಿಟ್ಟು, ಆ ಸುಖ

ನಿನ್ನ ಬಾಳನ್ನೂ ಹೊಸಕಿಹಾಕಿಬಿಡುತ್ತಿದೆ, ಕೆಸೋನಿಯಾ, ಕಟ್ಟ ಕಡೆಗೆ, ನನ್ನ ಹೃದಯದ ಬಯಕೆಯಾದ ಬಳಿಯ ಏಕಾಕಿತನವನ್ನೇ ಪರಿಪೂರ್ಣಾವಸ್ಥೆಗೆ ಒಯ್ಯುವ ಆ ಸುಖ ನಿನ್ನ ಬಾಳನ್ನೂ ತೀಡಿ ಎಸೆದುಬಿಡುತ್ತಿದೆ !

ಕೆಸೋನಿಯಾ : (ನಿಶ್ಯಕ್ತವಾದ ಸೆಣಸಾಟದಲ್ಲಿ ಮುಳುಗಿಹೋಗಿ) ಓಹ್, ಕಾಯಸ್ ....

ಕ್ಯಾಲಿಗುಲ : (ಹೆಚ್ಚೆಚ್ಚು ಉದ್ವೇಗಗೊಳ್ಳುತ್ತ) ಬೇಡ – ಭಾವುಕತೆ ಬೇಡವೇ ಬೇಡ. ಇದನ್ನೂ ನಾನು ಈ ವೇಳೆಗಾಗಲೇ ಮಾಡಿ ಮುಗಿಸಿಯೇ ತೀರಬೇಕಾಗಿತ್ತು – ಕಾರಣ, ಉಳಿದಿರುವ ಕಾಲ ಅತ್ಯಲ್ಪ ; ನನ್ನ ಪಾಲಿಗೆ ಉಳಿದಿರುವ ಕಾಲ ತೀರ ಅತ್ಯಲ್ಪ, ಪ್ರಿಯ ಕೆಸೋನಿಯಾ. (ಕೆಸೋನಿಯಾ ಏಮುಸಿರಿನಲ್ಲಿ ಸಿಕ್ಕಿ ಸಾಯುತ್ತಾ ಇದ್ದಾಳೆ. ಅವಳನ್ನು ಕ್ಯಾಲಿಗುಲ ಎಳೆದು ಹೊಯ್ದು ಅವಳು ಕುಸಿದು ಬೀಳುವಂತೆ ಹಾಸಿಗೆಯ ಮೇಲಕ್ಕೆ ಬಿಡುತ್ತಾನೆ—ಅವಳನ್ನೇ ಮೃಗೀಯ ವಾಗಿ ದಿಟ್ಟಿಸತೊಡಗುತ್ತಾನೆ ; ಅವನ ಧ್ವನಿ ಕ್ರಮವಾಗಿ ಒರಟೊರಟಾಗುತ್ತಾ ಸಾಗಿ, ಕೊನೆಗೆ ಕರ್ಕಶವಾಗಿ ಹೋಗಿ ಬಿಡುತ್ತದೆ) ನೀನು ಕೂಡ ಅಪ ರಾಧ ಎಸಗಿಯೇ ಬಿಟ್ಟದ್ದಿಯೆ ! ; ಆದರೆ, ಕೊಲೆ ಯಾವುದಕ್ಕೂ ಪರಿ ಹಾರವೇ ಆಗುವುದಿಲ್ಲ! (ಅವನು ಸುತ್ತಾ ಗಿರಿಗಿರಿ ಸುತ್ತಿ, ಕನ್ನಡಿ ಯನ್ನೇ ತದೇಕವಾಗಿ ನೋಡತೊಡಗಿ) ಕ್ಯಾಲಿಗುಲ ! – ನೀನೂ ಕೂಡ, ನೀನೂ ಕೂಡ ಅಪರಾಧಿಯಾಗಿ ಹೋಗಿಬಿಟ್ಟದ್ದೀಯೆ – ಎಂದಮೇಲೆ ತೀರಿತಲ್ಲ – ಅಪರಾಧದ ಪ್ರಮಾಣ ಅಷ್ಟು ಇಷ್ಟು ಹೆಚ್ಚಾದರೂ ಅಷ್ಟೇ, ಕಮ್ಮಿಯಾದರೂ ಅಷ್ಟೇ....ಆದರೂ ನ್ಯಾಯ ಕೊಡುವವನೇ ಇಲ್ಲ ವಾಗಿಹೋದ, ಹಾಗೂ ಯಾರೂ ಮುಗ್ಧರೇ ಸಿಗಲಾರದಾಗಿ ಹೋದ ಈ ಜಗತ್ತಿನಲ್ಲಿ ನನ್ನನ್ನು ಯಾರು ತಾನೆ ದೂಷಿಸಬಲ್ಲರು ? (ತನ್ನ ಕಣ್ಣುಗಳನ್ನು ತನ್ನ ಪ್ರತಿಬಿಂಬಿತ ಮುಖದ ಸಮೀಪಕ್ಕೆ ತಂದು, ನಿಜಕ್ಕೂ ದುಃಖಿತನಾಗಿ ಹೋಗಿ –) ನೀನೇ ನೋಡು – ನನ್ನ ಬಡ ಸ್ನೇಹಿ: ಹೆಲಿಕಾನ್ ನಿನ್ನ ಸೋಲಿಗೆ ಕಾರಣನಾಗಿಯೇ ಬಿಟ್ಟ ! ನನ್ನ ಪಾಲಿಗೆ ಚಂದ್ರ ದಕ್ಕುವಂತೆಯೇ ಇಲ್ಲ – ಎಂದಿಗೂ, ಎಂದೆಂದಿಗೂ,

ಎಂದೆಂದೆಂದಿಗೂ ದಕ್ಕುವ ಹಾಗೆ ಇಲ್ಲವೇ ಇಲ್ಲ! ಆದರೆ, ಇದೆಲ್ಲವನ್ನೂ ಅರಿವಿಗೆ ತಂದುಕೊಂಡುಬಿಡುವುದು ಮತ್ತು ಇದೆಲ್ಲದರ ಉತ್ತುಂಗ ಶೃಂಗವನ್ನು ಏರಿ ಇಳಿದು ಬಿಡುವುದು ಎಷ್ಟೆಲ್ಲಾ ಕಹಿಯಾದ ವಿಚಾರ!! ಕೇಳಿಸಿಕೋ – ಅದು ಆಯುಧಗಳ ಚಕಮಕಿ: ಮುಗ್ಧತೆ ಹೋರಾಟಕ್ಕೆಂದೇ ಆಯುಧಗಳನ್ನು ಮೇಲೆತ್ತುತ್ತಲಿದೆ – ಅಲ್ಲದೆ, ಮುಗ್ಧತೆ ಗೆದ್ದೇ ತೀರುತ್ತದೆ. ನಾನು ಅವರುಗಳು ಇರುವ ಸ್ಥಳದಲ್ಲಿ ಅವರುಗಳ ಮಧ್ಯದಲ್ಲಿ ಏಕೆ ಇಲ್ಲವಾಗಿದ್ದೇನೆ? ಅಲ್ಲದೆ, ಭಯ ನನ್ನನ್ನು ಆವರಿಸಿಯೇ ಬಿಟ್ಟದೆ! ಉಳಿದ ಎಲ್ಲರನ್ನೂ ತುಚ್ಛವಾಗಿ ಕಂಡ ನಂತರ ಅವರೆಲ್ಲರಷ್ಟೇ ತಾನೂ ಹೇಡಿಯಾಗಿರುವುದನ್ನು ಅರಿಯುವುದು ಇದೆಯಲ್ಲ ಅದು ಎಲ್ಲದಕ್ಕಿಂತಲೂ ಕ್ರೂರಾತಿಕ್ರೂರವಾದ ವಿಚಾರ. ಆದರೂ....ಆದರೂ ಚಿಂತೆಯಿಲ್ಲ: ಭಯಕ್ಕೂ ಕೂಡ ಒಂದು ಅಂತ್ಯ ಇದ್ದೇ ಇದೆ – ಸಧ್ಯದಲ್ಲೇ ಆ ಅಂತ್ಯವನ್ನು.... ಹೃದಯಕ್ಕೆ ವಿಶ್ರಾಂತಿ ಸಿಗುವ ಎಲ್ಲ ಅರಿವಿಗೂ ಅತೀತವಾದ ಆ ಶೂನ್ಯತೆಯನ್ನು ನಾನು ಸಾಧಿಸಿಯೇ ಸಾಧಿಸಿಕೊಂಡು ಬಿಡುವವ ನಿದ್ದೇನೆ! (ಹಿಂದಕ್ಕೆ ಕೆಲವು ಹೆಜ್ಜೆಗಳನ್ನು ಇಟ್ಟು ಮತ್ತೆ ಮುಂದಕ್ಕೆ ಕನ್ನಡಿಯ ಸಮೀಪಕ್ಕೆ ಮರಳುತ್ತಾನೆ: ನೆಮ್ಮದಿಯನ್ನು ಗೆದ್ದುಕೊಂಡಂತೆ ಕಾಣತೊಡಗುತ್ತಾನೆ; ಮಾತನಾಡತೊಡಗಿದಾಗ ಅವನ ಧ್ವನಿಯಲ್ಲಿ ಮೊದಲಿನ ಕರ್ಕಶತೆ ಮಾಯವಾಗಿ, ನಿಶ್ಚಲತೆ ಮೂಡಿರುವುದು ಕಂಡುಬರುತ್ತದೆ) ಆದರೂ, ನಿಜಕ್ಕೂ ಇದು ತೀರ ಸರಳವಾದ ವಿಚಾರ – ನನ್ನ ಪಾಲಿಗೆ ಚಂದ್ರ ದಕ್ಕಿಯೇ ದಕ್ಕಿ ಹೋಗಿಬಿಟ್ಟಿದ್ದರೆ, ಪ್ರೇಮ ತೃಪ್ತಿಯಾಗು ವಷ್ಟು ದೊರೆಕಿಯೇ ದೊರಕಿ ಹೋಗಿಬಿಟ್ಟಿದ್ದರೆ, ಸಮಸ್ತವೂ ಬೇರೆ ಇನ್ನೇನೇನೋ ಆಗಿಹೋಗಿ ಬಿಡುತ್ತಿದ್ದುವು. ಆದರೆ, ನಾನು ಎಲ್ಲಿ ತಾನೆ ಈ ನನ್ನ ತೃಷೆಯನ್ನು ಇಂಗಿಸಿಕೊಳ್ಳಲಿ – ಯಾವ ಮಾನವ ಹೃದಯ ತಾನೆ, ಯಾವ ದೈವ ತಾನೆ ನನಗಾಗಿ ತನ್ನಲ್ಲಿ ಆ ಮಹಾನ್ ಸರೋವರದ ಆಳಅನಂತವನ್ನು ಹೊಂದಿರುವುದು ಸಾಧ್ಯ? (ಮಂಡಿ ಗಾಲಲ್ಲಿ ಕುಳಿತು ಅಳುತ್ತಾ –) ಈ ಜಗತ್ತಿನಲ್ಲಾಗಲೀ, ಅಥವಾ ಅನ್ಯ ಜಗತ್ತಿನಲ್ಲಾಗಲಿ ನನ್ನ ನಿಲುಮೆಗೆ ಸರಿದೊರೆಯಾಗಿ ನಿಲ್ಲ

ಬಲ್ಲಂತಹದ್ದು ಯಾವುದೂ ಇಲ್ಲವೇ ಇಲ್ಲ. ಅಲ್ಲದೆ, ಆದರೂ ನನಗೂ ಗೊತ್ತು, ಹಾಗೆಯೇ ನಿನಗೂ ಗೊತ್ತೇಗೊತ್ತು – (ಇನ್ನು ಅಳುತ್ತಲೇ, ಕೈಗಳನ್ನು ಕನ್ನಡಿಯತ್ತ ಚಾಚಿ) ನನ್ನ ಅವಶ್ಯಕತೆ ಎಲ್ಲಾ ಅಸಾಧ್ಯದ ಸಾಧ್ಯತೆ ಮಾತ್ರ. ಅಸಾಧ್ಯತೆ!—ಅಸಾಧ್ಯತೆಯನ್ನು ಜಗತ್ತಿನ ಗಡಿಗಳಲ್ಲೆಲ್ಲಾ, ಹೃದಯದ ರಹಸ್ಯ ತಾಣಗಳಲ್ಲೆಲ್ಲಾ ಹುಡುಕಾಡಿ, ತಡುಕಾಡಿಬಿಟ್ಟಿದ್ದೇನೆ. ನಾನು ನನ್ನ ಕೈಗಳನ್ನು ಹೊರ ಚಾಚಿ ಬಿಟ್ಟಿದ್ದೇನೆ: (ಅವನ ಧ್ವನಿ ತುರೀಯಾವಸ್ಥೆಗೆ ಏರುತ್ತದೆ) ನೋಡು, ನನ್ನ ಕೈಗಳನ್ನು ಮುಂದುಮುಂದಕ್ಕೆ ಚಾಚುತ್ತಿದ್ದೇನೆ– ಆದರೆ, ಯಾವಾಗಲೂ ನನಗೆ ಸಿಗುವವನು ನೀನೇ, ನನಗೆ ಮುಖಾ ಮುಖಿಯಾಗಿ ನಿಲ್ಲುವವನು ನೀನು ಮಾತ್ರವೇ ಆಗಿಹೋಗಿ, ನಾನು ನಿನ್ನನ್ನು ದ್ವೇಷಿಸುವಂತಾಗಿ ಹೋಗಿದೆ! ನಾನು ತಪ್ಪಾದ ಹಾದಿ ಯನ್ನು – ಯಾವ ಹಾದಿ ನನ್ನನ್ನು ಎಲ್ಲಿಗೂ ಕರೆದು ಹೊಯ್ಯ ಲಾರದೋ ಆ ಹಾದಿಯನ್ನು – ಆರಿಸಿಕೊಂಡುಬಿಟ್ಟಿದ್ದೇನೆ. ನನ್ನ ಸ್ವಾತಂತ್ರ್ಯ ನಿಜವಾದುದೇ ಅಲ್ಲ; ಆ ಸ್ವಾತಂತ್ರ್ಯ ನನ್ನ ಪಾಲಿಗೆ ಇನ್ನೂ ಏನೇನೋ ಅಲ್ಲವಾಗಿ ಹೋಗಿದೆ! ಆಹ್, ಈ ಕತ್ತಲು ಅದೆಂತಹ ಯಮಯಾತನೆಯಾಗಿ ಹೋಗಿದೆ! ಹೆಲಿಕಾನ್ ಇನ್ನೂ ಬರಲೇ ಇಲ್ಲ! ನಾವು ಎಂದೆಂದಿಗೂ ಅಪರಾಧಿಗಳಾಗಿಯೇ ಉಳಿದು ಬಿಡುತ್ತಿದ್ದೇವೆ! ರಾತ್ರಿಯ ಈ ಗಾಳಿ ಬೇರೆ ಮಾನವನ ಸಮಸ್ತ ಯಾತನೆಯಷ್ಟೇ ಭಾರವಾಗಿ ಹೋಗಿ ಬಿಟ್ಟಿದೆ. (ನೇಪಥ್ಯಗಳಿಂದ ಆಯುಧಗಳ ಘರ್ಷಣೆ ಮತ್ತು ಪಿಸುಧ್ವನಿ ಕೇಳಿ ಬರುತ್ತವೆ. ಮೇಲೆದ್ದ ಕ್ಯಾಲಿಗುಲ, ಸ್ಟೂಲ್ ಒಂದನ್ನು ಎತ್ತಿಕೊಂಡು ಜೋರಾಗಿ ಏದುಸಿರು ಬಿಡುತ್ತಾ, ಕನ್ನಡಿಯ ಸಮೀಪಕ್ಕೆ ಹಿಂದಿರುಗುತ್ತಾನೆ. ತನ್ನನ್ನು ತಾನೇ ತದೇಕವಾಗಿ ಹಾಗೂ ಆಮೂಲಾಗ್ರವಾಗಿ ನೋಡಿಕೊಳ್ಳುತ್ತಾ ಹೋಗಿ, ಸ್ವಲ್ಪವೇ ಸ್ವಲ್ಪ ಮುಂದಕ್ಕೆ ಬಾಗಿ, ತನ್ನ ಪ್ರತಿಬಿಂಬದ ತದ್ವತ್ತಾದ ಚಲನ ವಲನವನ್ನು ಗಮನಿಸುತ್ತಲೇ ಇದ್ದು, ಕಡೆಗೆ ಸ್ಟೂಲನ್ನು ರೊಯ್ಯನೆ ಬೀಸಿ ಕನ್ನಡಿಯತ್ತ ಎಸೆದು, ತುರೀಯದಲ್ಲಿ ಕಿರಿಚಿಕೊಳ್ಳುತ್ತಾನೆ:) ಇತಿ ಹಾಸದ ಆಳದತ್ತ, ಕ್ಯಾಲಿಗುಲ !.... ಇತಿಹಾಸದ ಆಳಆಳದತ್ತ

ಇಳಿಇಳಿದು ಹೋಗಿ ಬಿಡು ! (ಕನ್ನಡಿ ಒಡೆದು ಚಿಂದಿಚಿಂದಿಯಾಗುತ್ತಿರುವಂತೆಯೇ ಶಸ್ತ್ರಸಜ್ಜಿತರಾದ ಪಿತೂರಿಗಾರರು ಒಳಕ್ಕೆ ಸರ್ರನೆ ನುಗ್ಗಿ ಬರುತ್ತಾರೆ. ಅವರನ್ನು ಎದುರಿಸಲೆಂದೇ ಕ್ಯಾಲಿಗುಲ ಹುಚ್ಚುಹುಚ್ಚಾದ ನಗೆ ನಗುತ್ತಾ ರೊಯ್ಯನೆ ಅವರತ್ತ ತಿರಗುತ್ತಾನೆ. ಸಂಚುಗಾರರ ಮುಂಚೂಣಿಯಲ್ಲಿರುವ ಸಿಪಿಯೋ ಮತ್ತು ಚೆರಿಯಾ ಅವನತ್ತ ಧಾವಿಸಿ, ಅವನ ಮುಖವನ್ನು ತಮ್ಮ ಕತ್ತಿ ಕಠಾರಿಗಳಿಂದ ತಿವಿಯುತ್ತಾರೆ. ಕ್ಯಾಲಿಗುಲನ ನಗು ಏದುಸಿರಾಗಿ ಪರಿವರ್ತನೆಗೊಳ್ಳುತ್ತದೆ. ಎಲ್ಲರೆಲ್ಲರೂ ಗಲಿಬಿಲಿಗೊಂಡು ಆತುರಾತುರವಾಗಿ ಅವನನ್ನು ಸದೆ ಬಡಿಯತೊಡಗುತ್ತಾರೆ. ತನ್ನ ಕಟ್ಟ ಕಡೆಯ ಏದುಸಿರಿನಲ್ಲಿ ನಗುತ್ತಾ ಉಸಿರು ಸಿಕ್ಕಿಸಿಕೊಂಡ ಕ್ಯಾಲಿಗುಲ ಚೀತ್ಕರಿಸಿಬಿಡುತ್ತಾನೆ :) ನಾನು ಇನ್ನೂ ಬದುಕಿಯೇ ಇದ್ದೇನೆ!

— ಪೂರ್ಣ ತೆರೆ —